ಬುಧವಾರ, ಜನವರಿ 7, 2026| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರತಿಭಟನೆ

ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಅವರನ್ನು ಅಮೆರಿಕ ಬಂಧಿಸಿರುವುದನ್ನು ಖಂಡಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ- ಕಮ್ಯುನಿಸ್ಟ್ ಸದಸ್ಯರು ಮೈಸೂರಿನಲ್ಲಿ ಪ್ರತಿಭಟನೆ ಮಾಡಿದರು

ಮಯಂಕ್ ಶತಕ ಸಂಭ್ರಮ

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ ಶತಕ ಗಳಿಸಿದ ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್

‘ಪೂರ್ಣಾವಧಿಗೆ ಸಿ.ಎಂ ಆಗುವ ವಿಶ್ವಾಸ’

ಎಲ್ಲವೂ ಹೈಕಮಾಂಡ್‌ನ ತೀರ್ಮಾನ ಅವಲಂಬಿಸಿದೆ –ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜಕಾರಣ ತೃಪ್ತಿ ಕೊಟ್ಟಿದೆ. ಜನರಿಗಾಗಿ ಕೆಲಸ ಮಾಡುವುದೇ ಖುಷಿ. ಮುಖ್ಯಮಂತ್ರಿಯಾಗಿ ಅವಧಿ ಪೂರ್ಣಗೊಳಿಸುವ ವಿಶ್ವಾಸವಿದ್ದು, ಎಲ್ಲವೂ ಹೈಕಮಾಂಡ್‌ನ ತೀರ್ಮಾನವನ್ನು ಅವಲಂಬಿಸಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಹೇಳಿದರು.

ರಾಜ್ಯದ ದೀರ್ಘಾವಧಿ ಮುಖ್ಯಮಂತ್ರಿ ಎಂಬ ದಾಖಲೆ ಸರಿಗಟ್ಟಿದ ದಿನವಾದ ಮಂಗಳವಾರ ಅವರು ಇಲ್ಲಿನ ಟಿ.ಕೆ.ಬಡಾವಣೆಯ ತಮ್ಮ ನಿವಾಸದಲ್ಲಿ ಸಾರ್ವಜನಿಕರ ಅಹವಾಲು ಆಲಿ ಅಭಿನಂದನೆಗಳನ್ನು ಸ್ವೀಕರಿಸಿ ಸುದ್ದಿಗಾರ-ರೊಂದಿಗೆ ಮಾತನಾಡಿದರು.

‘ಬಡವರು, ದಲಿತರು, ಹಿಂದುಳಿದವರಿಗೆ ನ್ಯಾಯ ಕೊಡಿಸುವುದೇ ರಾಜಕಾರಣ. ಸುದೀರ್ಘ ಅವಧಿಯ ಸಿ.ಎಂ ದಾಖಲೆ ಮಾಡುತ್ತೇನೆಂದು ಅಂದು-ಕೊಂಡಿರಲಿಲ್ಲ. ಎಂಎಲ್‌ಎ ಆದರೆ ಸಾಕೆಂದುಕೊಂಡಿದ್ದೆ. ಅವಕಾಶ ಸಿಕ್ಕಿದ್ದರಿಂದ ಸಚಿವ, ಉಪ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ, ಸಿ.ಎಂ ಆದೆ. ನಾನು ಮತ್ತು ಡಿ.ದೇವರಾಜ ಅರಸು ಇಬ್ಬರೂ ಮೈಸೂರಿನವರಾದರೂ ನಮ್ಮ ಕಾಲಘಟ್ಟಗಳು ಬೇರೆ’ ಎಂದರು.

‘ಜನರ ಆಶೀರ್ವಾದದಿಂದ ನಾನು 2013–18, 2023ರಲ್ಲಿ ಎರಡು ಅವಧಿಗೆ ಮುಖ್ಯಮಂತ್ರಿಯಾಗಿದ್ದೇನೆ. ಮುಂದೆ ಹೈಕಮಾಂಡ್ ಏನು ತೀರ್ಮಾ-ನಿಸುತ್ತದೊ ನೋಡಬೇಕು’ ಎಂದು ಹೇಳಿದರು.

‘ಸಮಾಜದಲ್ಲಿ ಅಸಮಾನತೆ ಹೋಗುವವರೆಗೂ, ಜನರಿಗೆ ಸಾಮಾಜಿಕ ನ್ಯಾಯ ಸಿಗುವವರೆಗೂ ಹೋರಾಡುತ್ತಲೇ ಇರಬೇಕು. ಜನರ ಕೆಲಸ ಮಾಡುತ್ತಲೇ ಇರುವೆ’ ಎಂದರು.

‘ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ವಯನಾಡ್‌ನಿಂದ ಬೆಂಗಳೂರು ಮುಖಾಂತರ ದೆಹಲಿಗೆ ಹೋಗುವವರಿದ್ದರು. ಮೈಸೂರಿಗೆ ಬಂದಿದ್ದರಿಂದ, ಹಾಗೆಯೇ ಭೇಟಿ ಮಾಡಿದ್ದೇವಷ್ಟೇ, ಬೇರೇನಿಲ್ಲ. ಸಂಪುಟ ಪುನರ್‌ರಚನೆ ಬಗ್ಗೆ ಚರ್ಚಿಸಲು ಹೈಕಮಾಂಡ್ ಕರೆದಾಗ ಹೋಗುವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

> ಸಿದ್ದರಾಮಯ್ಯ ಅವರು ಐದು ವರ್ಷ ಮುಖ್ಯಮಂತ್ರಿಯಾಗಿ ಇರುವುದಾಗಿ ಸ್ವತಃ ಹೇಳಿದ್ದಾರೆ. ಮುಂದಿನ ಬಜೆಟ್ ಅವರೇ ಮಂಡಿಸುತ್ತಾರೆ. ನಾಯಕತ್ವ ಬದಲಾವಣೆ ಪ್ರಶ್ನೆಯೇ ಉದ್ಭವಿಸುವುದಿಲ್ಲ
> **ಸತೀಶ ಜಾರಕಿಹೊಳಿ,** ಸಚಿವ

> ಮುಖ್ಯಮಂತ್ರಿ ಬದಲಾವಣೆ ಮಾಡಲು ಶಾಸಕರ ಅಭಿಪ್ರಾಯ ಮುಖ್ಯ. ಬಹುತೇಕ ಶಾಸಕರು ಸಿದ್ದರಾಮಯ್ಯ ಪರ ಇದ್ದಾರೆ
> **ಬಸವರಾಜ ರಾಯರಡ್ಡಿ,** ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ

ದೇವರಾಜ ಅರಸು ದಾಖಲೆಯನ್ನು ಸರಿಗಟ್ಟಿದ ಸಿದ್ದರಾಮಯ್ಯ ಅವರಿಗೆ, ‘ಸಹಸ್ರ ಕಾಳು’ಗಳಲ್ಲಿ ರಚಿಸಿದ ಭಾವಚಿತ್ರವನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಂಗಳವಾರ ನೀಡಿದರು

‘ಜನಸೇವೆಯ ಅವಕಾಶ ಭಗವಂತ ನೀಡಲಿ’

ಶಿವಕುಮಾರ್

ಬೆಂಗಳೂರು: ‘ಸಿದ್ದರಾಮಯ್ಯ ಅವರಿಗೆ ಯಶಸ್ಸು ಸಿಗಲಿ. ಜನರ ಸೇವೆ ಮಾಡುವ ಅವಕಾಶವನ್ನು ಭಗವಂತ ಅವರಿಗೆ ನೀಡಲೆಂದು ಪ್ರಾರ್ಥಿಸುತ್ತೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ದಾಖಲೆ ನಿರ್ಮಿಸುತ್ತಿರುವ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, ಅವರು ಮೇಲಿನಂತೆ ಪ್ರತಿಕ್ರಿಯಿಸಿದರು.

‘ಅವಧಿ ಪೂರ್ಯೈಸುವ ವಿಶ್ವಾಸವಿದೆ’ ಎಂದು ಸಿದ್ದರಾಮಯ್ಯ-ನವರು ಹೇಳಿದ್ದಾರಲ್ಲ ಎಂದಾಗ, ‘ಅವರಿಗೆ ಒಳ್ಳೆಯದಾಗಲಿ. ನಾನು ಅವರಿಗೆ ಶುಭ ಹಾರೈಸುತ್ತೇನೆ’ ಎಂದರು.

‘ಈ ಹೇಳಿಕೆಯಿಂದ ಮತ್ತೆ ಗೊಂದಲ ಆಗುವುದಿಲ್ಲವೇ’ ಎಂದು ಕೇಳಿದಾಗ, ‘ನೀವು (ಮಾಧ್ಯಮಗಳು) ಗೊಂದಲ ಮಾಡಿಕೊಳ್ಳುತ್ತಿದ್ದೀರಿ. ನಮ್ಮಲ್ಲಿ ಯಾರಿಗೂ ಗೊಂದಲವಿಲ್ಲ’ ಎಂದರು.

‘ಅವರು ಇಲ್ಲದ ಸರ್ಕಾರ ಊಹಿಸಲಾಗದು’

‘ಸಿದ್ದರಾಮಯ್ಯ ಇಲ್ಲದಿರುವ ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರವನ್ನು ಊಹಿಸುವುದೂ ಕಷ್ಟ. 2028ರವರೆಗೂ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ’ ಎಂದು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ಹೇಳಿದರು.

‘ಯೋಗ್ಯರ ಕೈಯಲ್ಲೇ ಯಾವಾಗಲೂ ಅಧಿಕಾರವಿರಬೇಕು. ಜೈಕಾರವನ್ನು ನನ್ನ, ಪರಮೇಶ್ವರ ಪರವೂ ಕೂಗಬಹುದು. ಆದರೆ 2028ರವರೆಗೂ ಸಿದ್ದರಾಮಯ್ಯ ಅವಧಿ ಪೂರೈಸಲೇಬೇಕು. ಅವರು ಅಧಿಕಾರದಿಂದ ಕೆಳಗೆ ಇಳಿದರೆ ಅಹಿಂದ ಸಮುದಾಯವೇ ಮುಳುಗಲಿದೆ’ ಎಂದು ಹೇಳಿದರು.

‘ಈಚೆಗಷ್ಟೇ ‘ಮತ್ತೆ ಮುಖ್ಯಮಂತ್ರಿ’ ನಾಟಕ ನೋಡಿದೆ. ಸಿದ್ದರಾಮಯ್ಯರಿಗೂ ನಾಟಕ ನೋಡಲು ಸಲಹೆ ನೀಡಿದ್ದೇನೆ’ ಎಂದರು.

‘72 ಸಾವಿರ ಹುದ್ದೆಗಳ ಭರ್ತಿಗೆ ಸರ್ಕಾರ ಮುಂದಾಗಿದ್ದು, ಬ್ಯಾಕ್‌ಲಾಗ್ ಹಾಗೂ ಒಳಮೀಸಲಾತಿ ಅನ್ವಯ ಭರ್ತಿ ಮಾಡಲಾಗುವುದು’ ಎಂದು ಅವರು ತಿಳಿಸಿದರು.

‘ಸಿದ್ದರಾಮಯ್ಯ ಇಲ್ಲದಿದ್ದರೆ ಕಾಂಗ್ರೆಸ್ ಇಲ್ಲ’

ಕೆ.ಎನ್. ರಾಜಣ್ಣ

‘ಯಡಿಯೂರಪ್ಪ ಇಲ್ಲದೇ ಇದ್ದರೆ ಬಿಜೆಪಿ ಇಲ್ಲ. ದೇವೇಗೌಡರು ಇಲ್ಲದೇ ಇದ್ದರೆ ಜೆಡಿಎಸ್ ಇಲ್ಲ. ಅದೇ ರೀತಿ ಸಿದ್ದರಾಮಯ್ಯ ಇಲ್ಲದೇ ಇದ್ದರೆ ಕಾಂಗ್ರೆಸ್ ಪಕ್ಷ ಇಲ್ಲ’ ಎಂದು ಶಾಸಕ ಕೆ.ಎನ್. ರಾಜಣ್ಣ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸಿದ್ದರಾಮಯ್ಯ ಒಬ್ಬ ಜನನಾಯಕ. ಅವರು ಇಲ್ಲದೇ ಇದ್ದರೆ ಕಾಂಗ್ರೆಸ್‌ಗೆ ಅವಕಾಶ ಕಡಿಮೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಆದರೆ, ಅಸೂಯೆಗೆ ಯಾರು ಏನು ಬೇಕಾದರೂ ಹೇಳಬಹುದು’ ಎಂದರು. ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ರಾಜಣ್ಣ, ‘ಡಿ.ಕೆ. ಶಿವಕುಮಾರ್ ನನ್ನ ಹಳೆಯ ಸ್ನೇಹಿತ. ಸಿದ್ದರಾಮಯ್ಯಗಿಂತ ಹಳೆಯ ಸ್ನೇಹಿತ. ನನ್ನ ಮಾತಿಗೆ ನಾನು ಈಗಲೂ ಬದ್ಧ’ ಎಂದರು.

ಮೈಸೂರಿನ ಸಿದ್ದರಾಮಯ್ಯ ನಿವಾಸದ ಬಳಿ ಮಂಗಳವಾರ ‘ಅಹಿಂದ ಮೈಸೂರು’ ಸಂಘಟನೆ ಸದಸ್ಯರು ನಾಗರಿಕರಿಗೆ ನಾಟಿಕೋಳಿ ಪಲಾವ್, ಲಾಡು ವಿತರಿಸಿದರು

ದೀರ್ಘಾವಧಿ ಆಡಳಿತ– ಸಂಭ್ರಮ

ಪ್ರಜಾವಾಣಿ

ಮೈಸೂರು: ಸಿದ್ದರಾಮಯ್ಯ ಅವರು ರಾಜ್ಯದ ದೀರ್ಘಾವಧಿ ಮುಖ್ಯಮಂತ್ರಿ ಎಂಬ ದಾಖಲೆ ಸರಿಗಟ್ಟಿದ ನಿಮಿತ್ತ ಮಂಗಳವಾರ ಮೈಸೂರು, ಹಾಸನ, ಮಂಡ್ಯ ಜಿಲ್ಲೆಯ ವಿವಿಧೆಡೆ ಅಭಿಮಾನಿಗ-ಳಲ್ಲಿ ಸಂಭ್ರಮ ಮೂಡಿತ್ತು.

ಬೆಂಬಲಿಗರು, ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿದರು. ಸಿದ್ದ ರಾಮಯ್ಯ ಅವರ ಕಟೌಟ್‌ಗಳಿಗೆ ಹಾಲು ಸುರಿದು ಸಂಭ್ರಮಿಸಿದರು. ಅವರಿಷ್ಟದ ನಾಟಿ ಕೋಳಿ ಪಲಾವ್ ಜೊತೆಗೆ, ಪೇಡ, ಲಾಡು ಪಾಯಸ ಹಂಚಿ ಅಭಿಮಾನ ಮೆರೆದರು.

ನಗರದಲ್ಲಿ ಸಿದ್ದರಾಮಯ್ಯ ಅವರ ನಿವಾಸದ ಬಳಿ ಮುಖ್ಯಮಂತ್ರಿಗೆ ಶುಭ ಕೋರಲು ಅಭಿಮಾನಿಗಳು ಬೆಳಿಗ್ಗಿನಿಂದಲೇ ಜಮಾಯಿಸಿದ್ದರು. ಅಹವಾಲು ಸಲ್ಲಿಸಲು ಬಂದಿದ್ದವರೂ ಅವರಿಗೆ ಹಸ್ತಲಾಘವ ಮಾಡಿದರು. ಕೆಲವರು ದೂರದಿಂದಲೇ ಜಯಕಾರ ಹಾಕುತ್ತಿದ್ದರು. ಕಟೌಟ್‌ಗೆ ಸಿದ್ದರಾಮಯ್ಯ ಅವರಿಂದ ಹಸ್ತಾಕ್ಷರವನ್ನು ಪಡೆದು ಮನೆಗೊಯ್ದರು. ಸಿದ್ದರಾಮಯ್ಯ ಮತ್ತು ಅರಸು ಭಾವಚಿತ್ರಗಳಿದ್ದ ಬ್ಯಾನರ್‌ಗಳು ಗಮನಸೆಳೆದವು.

ನಾಟಿ ಕೋಳಿ ಪಲಾವ್ ವಿತರಣೆ: ಸಿದ್ದರಾಮಯ್ಯ ಅವರ ಇಷ್ಟದ ‘ನಾಟಿಕೋಳಿ ಪಲಾವ್’ ಅನ್ನು ಕರ್ನಾಟಕ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಅಹಿಂದ ಮೈಸೂರು’ ಸಂಘಟನೆಗಳ ಸದಸ್ಯರು ನಾಗರಿಕರಿಗೆ ಬಡಿಸಿದರು.

ರಾಮಸ್ವಾಮಿ ವೃತ್ತದಲ್ಲಿ ರಾಕೇಶ್ ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ವರು ಪಟಾಕಿ ಸಿಡಿಸಿದರು. ಅಗ್ರಹಾರದ 101 ಗಣಪತಿ ದೇಗುಲದಲ್ಲಿ ಪೂಜೆ ಸಲ್ಲಿಸಿದ ಎಂ.ಕೆ.ಸೋಮಶೇಖರ್, ಎಂ. ಲಕ್ಷ್ಮಣ, ಎಚ್.ಎ.ವೆಂಕಟೇಶ್ ನಾಗರಿಕರಿಗೆ ‘ಪೇಢಾ’ ನೀಡಿದರು.

ದಾಖಲೆಯ ದಾಪುಗಾಲು: ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ ಗ್ರಾಮ ದೇವತೆ ದೊಡ್ಡಮ್ಮ ದೇವಾಲಯದಲ್ಲಿ ಅಭಿಮಾನಿಗಳು ಪೂಜೆ ಸಲ್ಲಿಸಿದರು. ಬೆಂಬಲಿಗರು ಜಯಘೋಷದೊಂದಿಗೆ ‘ದಾಖಲೆಯ ದಾಪುಗಾಲು’ ಮೆರವಣಿಗೆ ನಡೆಸಿದರು.

ಸಿಂದಗಿಯಲ್ಲಿ ಸಂಭ್ರಮ: ಸಿಂದಗಿ (ವಿಜಯಪುರ ಜಿಲ್ಲೆ): ಇಲ್ಲಿನ ಕನಕದಾಸ ವೃತ್ತದಲ್ಲಿ ತಾಲ್ಲೂಕು ಕುರುಬರ ಸಂಘದ ನೇತೃತ್ವದಲ್ಲಿ ಅಭಿಮಾನಿಗಳು ಸಂಭ್ರಮಿಸಿದರು.

ದೀರ್ಘಾವಧಿ ಮುಖ್ಯಮಂತ್ರಿಗಳ ಪೈಕಿ ಯಾರ ಆಡಳಿತಾವಧಿ ಹೆಚ್ಚು ಜನಪರ?

1. ಸಿದ್ದರಾಮಯ್ಯ
2. ಡಿ. ದೇವರಾಜ ಅರಸು
3. ಬಿ.ಎಸ್. ಯಡಿಯೂರಪ್ಪ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಹೋರಾಟ ಮಾಡಿ ಹುದ್ದೆ ಏರಿದ್ದಲ್ಲ: ವಿಜಯೇಂದ್ರ

ಸಿದ್ದರಾಮಯ್ಯ ಅವರು ಅದೃಷ್ಟ ಮತ್ತು ಅವಕಾಶವಾದಿತನದಿಂದ ಮುಖ್ಯಮಂತ್ರಿ ಆದರು. ಹೋರಾಟ ಮಾಡಿ ಅವರು ಆ ಹುದ್ದೆ ಏರಲಿಲ್ಲ. ದೇವರಾಜ ಅರಸು ಅವರ ದಾಖಲೆ ಮುರಿದಿರುವುದಾಗಿ ಹೇಳಿಕೊಳ್ಳುವ ಅವರು ರಾಜ್ಯಕ್ಕೆ ನೀಡಿದ ಕೊಡುಗೆಗಳು ಏನು? ಭ್ರಷ್ಟಾಚಾರ, ಹಗರಣಗಳ ಸರಮಾಲೆ, ಹಳಿ ತಪ್ಪಿದ ಮತ್ತು ಕಾನೂನು ಸುವ್ಯವಸ್ಥೆ ಹದಗೆಟ್ಟ ಆಡಳಿತ; ಇವೇ ಇವರು ಸೃಷ್ಟಿಸಿರುವ ದಾಖಲೆಗಳು. ಅರಸು ಜತೆಗೆ ಹೋಲಿಕೆ ಸಾಧ್ಯವೇ ಇಲ್ಲ.

ಬಿ.ವೈ.ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

‘ಕ್ವಾಂಟಿಟಿಗಿಂತ ಕ್ವಾಲಿಟಿ’ ಚರ್ಚೆ ಆಗಲಿ

ಸಿದ್ದರಾಮಯ್ಯ ಅವರ ಅಧಿಕಾರ ಅವಧಿಯ ಕುರಿತಂತೆ ‘ಕ್ವಾಂಟಿಟಿಗಿಂತ ಕ್ವಾಲಿಟಿ’ಯ ಕುರಿತು ಚರ್ಚೆ ಆಗಬೇಕು. ಅತ್ಯಂತ ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಆಗಿ ಕೆಲಸ ಮಾಡಿದ್ದಾರೆ ಎಂದು ಕೆಲವರು ಮಾತನಾಡುತ್ತಿದ್ದಾರೆ. ಎಷ್ಟು ದಿನ ಮುಖ್ಯಮಂತ್ರಿ ಆಗಿದ್ದರು ಎನ್ನುವುದಕ್ಕಿಂತ ಆಡಳಿತ ಅವಧಿಯಲ್ಲಿ ಎಷ್ಟು ಜನ ಬಡವರು, ಹಿಂದುಳಿದವರಿಗೆ ಒಳ್ಳೆಯದಾಗಿದೆ. ಒಟ್ಟಾರೆ ರಾಜ್ಯದ ಆರ್ಥಿಕತೆಯಲ್ಲಿ ಏನೆಲ್ಲ ಸುಧಾರಣೆ ಆಗಿದೆ ಎನ್ನುವುದು ಮುಖ್ಯ.

ಬಸವರಾಜ ಬೊಮ್ಮಾಯಿ, ಸಂಸದ

ಅರಸು ದಾಖಲೆ ಸರಿಗಟ್ಟಿಲ್ಲ

ದೇವರಾಜ ಅರಸು 1972ರ ಮಾರ್ಚ್‌ನಿಂದ 1980ರ ಜನವರಿವರೆಗೆ ನಿರಂತರವಾಗಿ ಮುಖ್ಯಮಂತ್ರಿಯಾಗಿದ್ದರು. 1976ರಲ್ಲಿ ಚುನಾವಣೆ ಮುಂದೂಡಲಾಯಿತು. ಬಳಿಕ ಇಂದಿರಾಗಾಂಧಿ ತುರ್ತುಪರಿಸ್ಥಿತಿ ಹೇರಿದರು. 1978ರಲ್ಲಿ ಕರ್ನಾಟಕದಲ್ಲಿ ರಾಷ್ಟ್ರಪತಿ ಆಡಳಿತ ವಿಧಿಸಲಾಯಿತು. ಆದರೂ ಅರಸು ಸತತವಾಗಿ ಸುದೀರ್ಘ ಅವಧಿಯ ಮುಖ್ಯಮಂತ್ರಿ. ಆದರೆ, ಸಿದ್ದರಾಮಯ್ಯ 2013ರಲ್ಲಿ ಮುಖ್ಯಮಂತ್ರಿಯಾಗಿ 2018ರಲ್ಲಿ ಅಧಿಕಾರ ಕಳೆದುಕೊಂಡರು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋತರು. ಅರಸು ಮಧ್ಯೆ ಅಧಿಕಾರ ಕಳೆದುಕೊಂಡಿರಲಿಲ್ಲ

ಲಹರ್ ಸಿಂಗ್ ಸಿರೋಯಾ, ರಾಜ್ಯಸಭಾ ಸದಸ್ಯ

ನಾಟಿ ಕೋಳಿ ಊಟದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸುದೀರ್ಘ ಅವಧಿಯ ಮುಖ್ಯಮಂತ್ರಿ ಎಂಬ ಗರಿಮೆಗೆ ಸಿದ್ದರಾಮಯ್ಯ ಅವರು ಭಾಜನರಾದ ಕಾರಣ ಅವರ ಅಭಿಮಾನಿಗಳು ನಾಟಿ ಕೋಳಿ ಊಟ ವಿತರಿಸಿ ಸಂಭ್ರಮಿಸಿದರು.

ಸಿದ್ದರಾಮಯ್ಯ ಅವರಿಗೆ ಪ್ರಿಯವಾದ ನಾಟಿ ಕೋಳಿ ವಿತರಣೆಯನ್ನು ಅಹಿಂದ ಯುವ ಘಟಕವು ಭಕ್ತನಪಾಳ್ಯದಲ್ಲಿ ಏರ್ಪಡಿಸಿತ್ತು. ಮುದ್ದೆ, ನಾಟಿ ಕೋಳಿ ಸಾರು, ಅನ್ನ, ರಸಂ, ಸಿಹಿ ವಿತರಿಸಲಾಯಿತು. 2 ಸಾವಿರ ಕೆ.ಜಿ. ನಾಟಿ ಕೋಳಿ ಮಾಂಸ ಬಳಸಲಾಗಿತ್ತು. ಒಂದು ನಿಮಿಷಕ್ಕೆ 150 ಜನರಿಗೆ ಊಟ ಬಡಿಸುವ ಸುಸಜ್ಜಿತ ವ್ಯವಸ್ಥೆ ಮಾಡಲಾಗಿತ್ತು. ಯಾವುದೇ ಸಿದ್ಧ ಮಸಾಲೆಗಳನ್ನು ಬಳಸದೆ, ಸ್ಥಳದಲ್ಲೇ ಮಸಾಲೆ ರುಬ್ಬುವ ಮೂಲಕ ನಾಟಿ ಶೈಲಿಯಲ್ಲಿ ಅಡುಗೆ ಸಿದ್ಧಪಡಿಸಲಾಗಿತ್ತು. ಹೆಸರಘಟ್ಟ, ನೆಲಮಂಗಲ, ಸೊಂಡೆಕೊಪ್ಪ, ಕೆಜಿ ಲಕ್ಕೇನಹ-ಳ್ಳಿಯಿಂದ ನಾಟಿ ಕೋಳಿಗಳ ಮಾಂಸವನ್ನು ತರಲಾಗಿತ್ತು. 3 ಸಾವಿರಕ್ಕೂ ಹೆಚ್ಚು ಜನ ಊಟ ಸವಿದರು.

ಕೆ.ಆರ್.ಪುರ ಕ್ಷೇತ್ರದ ಕೆ.ಚನ್ನಸಂದ್ರದಲ್ಲಿ ಸಿದ್ದರಾಮಯ್ಯ ಅವರ ಅಭಿಮಾನಿಗಳು ಹಾಗೂ ಗ್ರಾಮಸ್ಥರು 500 ಕೆ.ಜಿ. ನಾಟಿ ಕೋಳಿ ಬಿರಿಯಾನಿ ವ್ಯವಸ್ಥೆ ಮಾಡಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದ ಜನರು ನಾಟಿ ಕೋಳಿ ಬಿರಿಯಾನಿ ತಿಂದರು.

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆಯ ಮುತ್ತುರಾಯಸ್ವಾಮಿ ದೇವಾಲಯದಲ್ಲಿ ವಿಶೇಷಪೂಜೆ ನಡೆಯಿತು. ಮೈಸೂರು ಜಿಲ್ಲೆಯ ಸಿಂಧುವಳ್ಳಿಯ ಕರುಣಾಲಯ ಮಾನಸಿಕ ಅಸ್ವಸ್ಥರ ಆಸ್ಪತ್ರೆಯಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಕಿತ್ತು ಹೋದ ಬ್ಯಾರೇಜ್ ಗೇಟ್: ನೀರು ಪೋಲು

ರಬಕವಿ ಬನಹಟ್ಟಿ (ಬಾಗಲಕೋಟೆ): ಸಮೀಪದ ಹಿಪ್ಪರಗಿಯಲ್ಲಿ ಕೃಷ್ಣಾ ನದಿಗೆ ನಿರ್ಮಿಸಲಾದ ಹಿಪ್ಪರಗಿ ಬ್ಯಾರೇಜಿನ ಗೇಟ್ ಸಂಖ್ಯೆ-22ರ ಗೇಟ್ ಒಂದು ಭಾಗ ಮಂಗಳವಾರ ಕಿತ್ತುಹೋಗಿ, ನೀರು ಹರಿಯುತ್ತಿದೆ.

ಬ್ಯಾರೇಜಿನಲ್ಲಿ ಆರು ಟಿಎಂಸಿ ಅಡಿ ನೀರಿನ ಸಂಗ್ರಹವಿದ್ದು, 0.75 ಟಿಎಂಸಿ ಅಡಿಯಷ್ಟು ನೀರು ಹರಿದು ಹೋಗಬಹುದು ಎಂದು ಅಂದಾಜಿಸಲಾಗಿದೆ.

‘ಹಳೆಯದಾದ ಗೇಟಿನಲ್ಲಿ ಸಮಸ್ಯೆಯಾಗಿದೆ. ರಾತ್ರಿ ವೇಳೆಗೆ ದುರಸ್ತಿ ಆಗಲಿದೆ. ನೀರಿನ ಸಂಗ್ರಹಕ್ಕೆ ತೊಂದರೆ ಆಗುವುದಿಲ್ಲ’ ಎಂದು ಗೇಟ್ ಪರಿಶೀಲನೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ತಿಳಿಸಿದರು.

ಮೃಣಾಲ್ ಕಾರು ಚಾಲಕನಿಗೆ ಇರಿತ

ಬೆಳಗಾವಿ: ಇಲ್ಲಿನ ಬಿ.ಶಂಕರಾನಂದ ಮಾರ್ಗದಲ್ಲಿ (ಕ್ಲಬ್ ರಸ್ತೆ) ಮಂಗಳವಾರ ಬೈಕ್‌ನಲ್ಲಿ ಬಂದ ಇಬ್ಬರು, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪುತ್ರ ಮೃಣಾಲ್ ಅವರ ಕಾರು ಚಾಲಕ ಬಸವಂತ ಕಡೋಲ್ಕರ (32) ಎಂಬುವರಿಗೆ ಚಾಕುವಿನಿಂದ ಇರಿದು ಪರಾರಿಯಾ-ಗಿದ್ದಾರೆ.

ಬಸವಂತ

‘ಬಸವಂತ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರು ನಿಲ್ಲಿಸಿ ರಸ್ತೆಯಲ್ಲಿ ನಿಂತಿದ್ದ ಬಸವಂತ ಅವರ ಜತೆಗೆ, ಬೈಕ್‌ನಲ್ಲಿ ಬಂದ ಇಬ್ಬರು ಮಾತನಾಡಿದ್ದಾರೆ. ನಂತರ ಎದೆ, ಭುಜ ಮತ್ತಿತರ ಕಡೆ ಚಾಕುವಿನಿಂದ ಇರಿದಿದ್ದಾರೆ. ಪರಿಚಿತರೇ ಈ ಕೃತ್ಯ ಎಸಗಿರುವ ಸಾಧ್ಯತೆ ಇದೆ’ ಎಂದು ಕ್ಯಾಂಪ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಾಡಗೀತೆ: ಅನಂತಸ್ವಾಮಿ ಧಾಟಿಯೇ ಸಿಂಧು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿವಂಗತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ ಧಾಟಿಯಲ್ಲಿ ‘ಜಯ ಭಾರತ ಜನನಿಯ ತನುಜಾತೆ...’ ನಾಡಗೀತೆ ಹಾಡುವ ಸಂಬಂಧ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

‘ನಾಡಗೀತೆಗೆ ಮೈಸೂರು ಅನಂತಸ್ವಾಮಿ ಅವರ ಧಾಟಿಯನ್ನು ಅಳವಡಿಸಿಕೊಂಡು ಅದರ ಪೂರ್ಣಪಾಠ ಬಳಸಬೇಕು ಹಾಗೂ ಆಲಾಪವಿಲ್ಲದೇ, ಪುನರಾವರ್ತನೆ ಇಲ್ಲದೆ 2 ನಿಮಿಷ 30 ಸೆಕೆಂಡುಗಳಲ್ಲಿ ಹಾಡಬೇಕು’ ಎಂದು ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಕಿಕ್ಕೇರಿ ಕೃಷ್ಣಮೂರ್ತಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ರಿಟ್ ಅರ್ಜಿಯನ್ನು ಸುದೀರ್ಘ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಸರ್ಕಾರ ಹೊರಡಿಸಿದ್ದ ಆದೇಶವನ್ನು ಎತ್ತಿಹಿಡಿದಿತ್ತು. ಏಕಸದಸ್ಯ ನ್ಯಾಯಪೀಠದ ಈ ಆದೇಶವನ್ನು ಪ್ರಶ್ನಿಸಿ ಕಿಕ್ಕೇರಿ ಕೃಷ್ಣಮೂರ್ತಿ ರಿಟ್ ಮೇಲ್ಮನವಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯ ನ್ಯಾಯಪೀಠ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ಕಾಯಂಗೊಳಿಸಿದೆ.

ವಿದ್ಯುತ್ ಕಂಬಕ್ಕೆ ಬೊಲೆರೊ ಡಿಕ್ಕಿ; ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕಜಾಜೂರು (ಚಿತ್ರದುರ್ಗ ಜಿಲ್ಲೆ): ಸಮೀಪದ ಅಂದನೂರು ಹಾಗೂ ಸಾಸಲುಹಳ್ಳ ಗ್ರಾಮಗಳ ಬಳಿಯ ರಸ್ತೆ ತಿರುವಿನಲ್ಲಿ ಮಂಗಳವಾರ ಸಂಜೆ ಬೊಲೆರೊ ವಾಹನ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಉರುಳಿ ಬಿದ್ದ ಪರಿಣಾಮ ಅಡಿಕೆ ಕೊಯ್ಲಿಗೆ ತೆರಳಿದ್ದ ನಾಲ್ವರು ಮೃತಪಟ್ಟಿದ್ದಾರೆ.

ಕಲ್ಲವ್ವ ನಾಗತಿಹಳ್ಳಿ ಗ್ರಾಮದ ಅಡಿಕೆ ಖೇಣಿದಾರ ಗಿರಿರಾಜ್ (46), ಕಾರ್ಮಿಕ ಕಿರಣ್ (25) ಸ್ಥಳದಲ್ಲೇ ಮತ್ತು ಕಾರ್ಮಿಕರಾದ ಅರುಣ್ (32), ಹನುಮಂತ (32) ದಾವಣಗೆರೆಯ ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದಾರೆ. ವಾಹನದಲ್ಲಿದ್ದ ಇತರ ನಾಲ್ವರು ಕಾರ್ಮಿಕರು ಗಾಯಗೊಂಡಿದ್ದಾರೆ.

ಚಿಕ್ಕಜಾಜೂರಿ ಬಳಿಯ ಅಂದನೂರು ಹಾಗೂ ಸಾಸಲುಹಳ್ಳದ ಬಳಿಯ ರಸ್ತೆ ತಿರುವಿನಲ್ಲಿ ವಿದ್ಯುತ್ ಕಂಬಕ್ಕೆ ಬೊಲೆರೊ ಡಿಕ್ಕಿ ಹೊಡೆದು ಉರುಳಿ ಬಿದ್ದಿತ್ತು

ಎಲ್ಲರೂ ಅಡಿಕೆ ಕೊಯ್ಲು ಕೆಲಸ ಮುಗಿಸಿ ಸ್ವಗ್ರಾಮಕ್ಕೆ ತೆರಳುತ್ತಿದ್ದರು. ಡಿಕ್ಕಿಯ ರಭಸಕ್ಕೆ ವಿದ್ಯುತ್ ಕಂಬ ಮುರಿದಿದೆ, ವಾಹನ ನಜ್ಜುಗುಜ್ಜಾಗಿದೆ. ಚಿಕ್ಕಜಾಜೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈರತಿ ಬಸವರಾಜಗೆ ಜಾಮೀನು: ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದ ಐದನೇ ಆರೋಪಿ, ಬಿಜೆಪಿ ಶಾಸಕ ಬೈರತಿ ಬಸವರಾಜ ಅವರಿಗೆ ರಜಾಕಾಲದ ಏಕಸದಸ್ಯ ಪೀಠವು ಪ್ರಾಸಿಕ್ಯೂಷನ್ ವಾದ ಆಲಿಸದೆಯೇ ಅಷ್ಟೊಂದು ತರಾತುರಿಯಲ್ಲಿ ನಿರೀಕ್ಷಣಾ ಜಾಮೀನು ಮಂಜೂರು ಮಾಡುವ ಅಗತ್ಯವೇನಿತ್ತು’ ಎಂದು ನಿಯಮಿತ ನ್ಯಾಯಪೀಠ ಖಾರವಾಗಿ ಪ್ರಶ್ನಿಸಿದೆ.

‘ರಜಾಕಾಲದ ಏಕಸದಸ್ಯ ನ್ಯಾಯಪೀಠ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ ಹೊರಡಿಸಿರುವ ಮಧ್ಯಂತರ ಆದೇಶ ರದ್ದುಪಡಿಸಬೇಕು’ ಎಂದು ಕೋರಿ ರಾಜ್ಯ ಸರ್ಕಾರ ಸಲ್ಲಿಸಿರುವ ಮನವಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ನಿಯಮಿತ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, ‘ಬಸವರಾಜ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಬೇಕಾಗಿದ್ದು, ಅವರಿಗೆ ಈಗಾಗಲೇ ಮಂಜೂರು ಮಾಡಿರುವ ನಿರೀಕ್ಷಣಾ ಜಾಮೀನನ್ನು ವಿಸ್ತರಣೆ ಮಾಡಬಾರದು, ರದ್ದುಪಡಿಸಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

‘ರಜಾಕಾಲದ ಪೀಠದ ಆದೇಶದಲ್ಲಿ ನಿರೀಕ್ಷಣಾ ಜಾಮೀನು ಕುರಿತ ಅರ್ಜಿಯ ಪ್ರತಿಯನ್ನು ಪ್ರಾಸಿಕ್ಯೂಟರ್‌ಗೆ ಒದಗಿಸಲಾಗಿದೆ ಎಂದು ವಿವರಿಸಲಾಗಿದೆ. ಒಂದು ವೇಳೆ ನಮಗೆ ಅರ್ಜಿಯ ಪ್ರತಿ ಲಭ್ಯವಾಗಿರುವುದು ಸಾಬೀತಾದರೆ ಎಲ್ಲ ಆರೋಪಗಳನ್ನು ಹಿಂಪಡೆಯಲಾಗುವುದು. ತಪ್ಪು ಮಾಹಿತಿ ನೀಡಿ ನಿರೀಕ್ಷಣಾ ಜಾಮೀನು ಪಡೆಯಲಾಗಿದೆ’ ಎಂದು ಪ್ರತಿಪಾದಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಅರ್ಜಿದಾರರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿ ವರದಿ ಸಲ್ಲಿಸಿಲ್ಲ ಎಂದು ರಜಾಕಾಲದ ಪೀಠ ತನ್ನ ಆದೇಶದಲ್ಲಿ ತಿಳಿಸಿದೆ. ರಾಜ್ಯ ಪ್ರಾಸಿಕ್ಯೂಟರ್ ಹಾಜರಿಲ್ಲದ ವೇಳೆ ಈ ರೀತಿ ತಿಳಿಸಲು ಸಾಧ್ಯವೇ’ ಎಂದು ಪ್ರಶ್ನಿಸಿತು.

‘ಜಾಮೀನು ನೀಡುವ ಸಂದರ್ಭದಲ್ಲಿ ಸರ್ಕಾರದ ಪರ ವಕೀಲರ ವಾದ ಕೇಳುವುದು ಬೇಡವೇ?, ಪ್ರಾಸಿಕ್ಯೂಷನ್ ಪರ ವಕೀಲರ ವಾದ ಆಲಿಸುವುದಕ್ಕಾಗಿಯೇ ವಿಚಾರಣೆಯನ್ನು ಕನಿಷ್ಠ ಮತ್ತೊಂದು ದಿನಕ್ಕಾದರೂ ನಿಗದಿ ಮಾಡಬಹುದಾಗಿತ್ತಲ್ಲವೇ’ ಎಂದು ಕಿಡಿಕಾರಿತು.

ಅರ್ಜಿದಾರ ಬಸವರಾಜ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ ವಾದ ಮಂಡಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿತು.

15ರಿಂದ ‘ವಿಬಿ–ಜಿ ರಾಮ್ ಜಿ’ ಜನ ಜಾಗೃತಿ

ರಾಜ್ಯವ್ಯಾಪಿ ಗ್ರಾಮ ಮಟ್ಟದವರೆಗೆ ಅಭಿಯಾನ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ವಿಜಯೇಂದ್ರ

ಬೆಂಗಳೂರು: 'ವಿಕಸಿತ ಭಾರತ–ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ (ವಿಬಿ–ಜಿ ರಾಮ್ ಜಿ) ಕುರಿತು ಕಾಂಗ್ರೆಸ್ ಅಪಪ್ರಚಾರ ನಡೆಸುತ್ತಿದ್ದು, ಈ ಯೋಜನೆ ಕುರಿತು ಜನಜಾಗೃತಿ ಮೂಡಿಸಲು ಇದೇ 15ರಿಂದ ಫೆಬ್ರುವರಿ 28ರವರೆಗೆ ರಾಜ್ಯವ್ಯಾಪಿ ಜಾಗೃತಿ ಅಭಿಯಾನ ನಡೆಸಲಾಗುವುದು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಈ ಯೋಜನೆಯ ವಾಸ್ತವಿಕ ಸಂಗತಿಗಳು ಮತ್ತು ಪಾರದರ್ಶಕತೆ ಕುರಿತು ಜಿಲ್ಲಾ ಮಟ್ಟದಿಂದ ಗ್ರಾಮ ಮಟ್ಟದವರೆಗೆ ಜನರಿಗೆ ಮಾಹಿತಿ ನೀಡಲಾಗುವುದು ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಹೊಸ ಯೋಜನೆಯ ಕುರಿತು ಕಾಂಗ್ರೆಸ್ ನಾಯಕರು ನಕಾರಾತ್ಮಕ ಚಿತ್ರಣ ನೀಡುತ್ತಿದ್ದಾರೆ. ವಾಸ್ತವದಲ್ಲಿ ನರೇಗಾಗಿಂತ ‘ವಿಬಿ–ಜಿ ರಾಮ್ ಜಿ’ ಒಂದು ಉತ್ತಮ ಯೋಜನೆ. ನರೇಗಾ ವ್ಯವಸ್ಥಿತವಾಗಿ ಲೂಟಿ ಮಾಡುವ ಯೋಜನೆಯಾಗಿತ್ತು. ಹೀಗಾಗಿ ಸರ್ಕಾರದ ಪ್ರತಿಯೊಂದು ಪೈಸೆಯೂ ಸದ್ಬಳಕೆಯಾ-ಗಬೇಕು ಮತ್ತು ಆಯಾ ಗ್ರಾಮಗಳಲ್ಲಿ ಶಾಶ್ವತ ಆಸ್ತಿ ನಿರ್ಮಾಣ ಆಗಬೇಕೆಂಬುದೇ ಪ್ರಧಾನಿ ಮೋದಿ ಅವರ ಉದ್ದೇಶ. ಹಿಂದುಳಿದ ವರ್ಗಕ್ಕೆ ಸೇರಿದ ನರೇಂದ್ರ ಮೋದಿ ಮೂರನೇ ಬಾರಿ ಪ್ರಧಾನಿ ಆಗಿರುವುದನ್ನು ಸಹಿಸದ ಕಾಂಗ್ರೆಸ್‌ನವರು ಕೇಂದ್ರದ ಎಲ್ಲ ಯೋಜನೆಗಳಿಗೂ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ವಿಜಯೇಂದ್ರ ದೂರಿದರು.

ಜನಜಾಗೃತಿ ಅಭಿಯಾನಕ್ಕೆ ಪಿ.ರಾಜೀವ್, ಕೋಟ ಶ್ರೀನಿವಾಸ್ ಪೂಜಾರಿ, ಈರಣ್ಣ ಕಡಾಡಿ, ಎ.ಎಸ್. ಪಾಟೀಲ ನಡಹಳ್ಳಿ, ಎಸ್.ಆರ್. ವಿಶ್ವನಾಥ್ ಅವರನ್ನು ಒಳಗೊಂಡ ತಂಡಗಳನ್ನು ರಚಿಸಲಾಗುವುದು ಎಂದರು.

ಕಾಂಗ್ರೆಸ್‌ನವರ ಸುಳ್ಳು ಹೇಳಿಕೆ: ಕಾರಜೋಳ

‘ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್‌ನ ಇತರ ನಾಯಕರು ಈ ಯೋಜನೆ ಕುರಿತು ಹಸಿ ಸುಳ್ಳುಗಳನ್ನು ಹೇಳುತ್ತಿದ್ದಾರೆ’ ಎಂದು ಬಿಜೆಪಿ ಸಂಸದ ಗೋವಿಂದ ಕಾರಜೋಳ ಟೀಕಿಸಿದರು.

ಸರ್ಕಾರದ ಆಡಳಿತಾತ್ಮಕ ಹಿತದೃಷ್ಟಿಯಿಂದ, ಕಾಲ ಕಾಲಕ್ಕೆ ಯೋಜನೆಗಳಲ್ಲಿ ಪಾರದರ್ಶಕತೆ ಮತ್ತು ದಕ್ಷತೆ ತರಲು ಕೆಲವು ಯೋಜನೆಗಳಲ್ಲಿ ಪರಿಷ್ಕರಣೆ ಅಗತ್ಯ ಎಂದು ಅವರು ಪ್ರತಿಪಾದಿಸಿದರು.

ಕಾರಜೋಳ ನೀಡಿದ ವಿವರ

- ಕೆಲಸದ ದಿನಗಳು ಹಿಂದೆ 100 ಇದ್ದವು, ಈಗ 125 ದಿನಗಳಿಗೆ ಹೆಚ್ಚಿಸಲಾಗಿದೆ. ಪ್ರತಿ ದಿನದ ಕೂಲಿ ₹370 ಇದೆ.
- ಗ್ರಾಮ ಪಂಚಾಯಿತಿ ಹಕ್ಕುಗಳನ್ನು ಮೊಟಕುಗೊಳಿ-ಸಿಲ್ಲ. ಇನ್ನು ಮುಂದೆಯೂ ಗ್ರಾಮ ಪಂಚಾಯಿತಿಗಳೇ ಕೇಂದ್ರವಾಗಿರುತ್ತವೆ. ಗ್ರಾಮ ಪಂಚಾಯಿತಿಗಳನ್ನು ವಿಕಸಿತ ಗ್ರಾಮ ಪಂಚಾಯಿತಿಗಳನ್ನಾಗಿಸಲು ಸಹಕಾರಿ.
- ಈ ಮೊದಲು ಇದ್ದ ವಿಕೇಂದ್ರೀಕೃತ ಯೋಜನೆ ಈಗ ಸಂಘಟಿತ ಪ್ರಕ್ರಿಯೆಯಾಗಿ ರೂಪುಗೊಂಡಿದೆ. ವಿಕಸಿತ ಗ್ರಾಮ ಪಂಚಾಯತ್ ಯೋಜನೆಗಳನ್ನು ಬ್ಲಾಕ್, ಜಿಲ್ಲೆ ಮತ್ತು ರಾಷ್ಟ್ರ ಮಟ್ಟದಲ್ಲಿ ಒಟ್ಟುಗೂಡಿಸಿ ಸಂಯೋಜನೆ ಮಾಡಲಾಗುತ್ತಿದೆ.

ಗೋವಿಂದ ಕಾರಜೋಳ

- ಮೋದಿಯವರು ಪ್ರಧಾನಿ ಆದ ಬಳಿಕ ಬಡತನ ಪ್ರಮಾಣ 2014ರಲ್ಲಿ ಶೇ 25.7 ಇದ್ದದ್ದು ಕೇವಲ ಶೇ 4.86ಕ್ಕೆ ಇಳಿದಿದೆ.
- 2013–14ರಲ್ಲಿ ಈ ಯೋಜನೆಗೆ ಮೀಸಲಿಟ್ಟ ಬಜೆಟ್ ₹33 ಸಾವಿರ ಕೋಟಿ, ಈಗ ₹2.86 ಲಕ್ಷ ಕೋಟಿಗೆ ಏರಿದೆ. ಒಟ್ಟು ಕೆಲಸದ ದಿನಗಳು 2014ರಲ್ಲಿ 1,660 ಕೋಟಿ ಇದ್ದವು, ಈಗ 3,210 ಕೋಟಿಗೆ ಏರಿದೆ.
- ಮೋದಿ ಪ್ರಧಾನಿ ಆದ ಬಳಿಕ ಈ ಯೋಜನೆಗೆ ಬಿಡುಗಡೆ ಮಾಡಿದ ಮೊತ್ತ ₹8.53 ಲಕ್ಷ ಕೋಟಿ.
- ಪೂರ್ಣಗೊಂಡ ಕಾಮಗಾರಿಗಳು 2014ರವರೆಗೆ 1.53 ಲಕ್ಷ ಇದ್ದರೆ, ಈಗ 8.62 ಕೋಟಿ. ಮಹಿಳೆಯರ ಭಾಗವಹಿಸುವಿಕೆ ಶೇ 48 ರಿಂದ ಶೇ 57ಕ್ಕೆ ಏರಿದೆ.
- ಕೇಂದ್ರದ ಹಣಕಾಸಿನ ಕೊಡುಗೆ ಮನಮೋಹನ್ ಸಿಂಗ್ ಅವಧಿಯಲ್ಲಿ ₹86 ಸಾವಿರ ಕೋಟಿ ಇತ್ತು, ಈಗ ₹2.95 ಲಕ್ಷ ಕೋಟಿಗೆ ಏರಿದೆ.

‘ಐಟಿ ಇಲಾಖೆ ಕುಮಾರಸ್ವಾಮಿ ಜೇಬಲ್ಲೇ ಇದೆಯಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆದಾಯ ತೆರಿಗೆ (ಐಟಿ) ಸೇರಿದಂತೆ ಎಲ್ಲ ಇಲಾಖೆಗಳು ವಿರೋಧ ಪಕ್ಷಗಳ ಹತ್ತಿರವೇ ಇದೆಯಲ್ಲವೇ? ಕುಮಾರಸ್ವಾಮಿಯವರ ಜೇಬಿನಲ್ಲೇ ಇವೆಯಲ್ಲವೇ?’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಬಳ್ಳಾರಿಯಲ್ಲಿ ನಡೆದ ಗಲಭೆಯಲ್ಲಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತನ ಕುಟುಂಬಕ್ಕೆ ನೀಡಿದ ಪರಿಹಾರ ಮೊತ್ತ ಕಾಂಗ್ರೆಸ್ ಪಕ್ಷದ್ದೊ, ಸರ್ಕಾರದಿಂದಲೊ? ಐಟಿ ಇಲಾಖೆ ಏನು ಮಾಡುತ್ತಿದೆ’ ಎಂದು ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದರು.

ಅದಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಪರಿಹಾರವಾಗಿ ನೀಡಿರುವ ಹಣದ ಬಗ್ಗೆ ಸಚಿವ ಜಮೀರ್ ಜೊತೆ ಮಾತನಾಡುತ್ತೇನೆ’ ಎಂದರು.

‘ಸ್ಮಾರಕಗಳ ಬಳಿ ಡ್ರೋನ್ ಹಾರಾಟಕ್ಕೆ ಅವಕಾಶ’

ಹೊಸಪೇಟೆ (ವಿಜಯನಗರ): ‘ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಸುಪ-ರ್ದಿಯಲ್ಲಿರುವ ಸ್ಮಾರಕಗಳ ಬಳಿ ಡ್ರೋನ್ ಹಾರಾಟಕ್ಕೆ ಇರುವ ನಿರ್ಬಂಧ ತೆರವು ಕುರಿತು ಶೀಘ್ರವೇ ಆದೇಶ ಹೊರಡಿಸಲಾಗುವುದು’ ಎಂದು ಕೇಂದ್ರದ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಹೇಳಿದರು.

ಇಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ‘ಸ್ಮಾರಕಗಳ ಬಳಿ ಕ್ಯಾಮೆರಾ-ಗಳನ್ನು ಉಚಿತವಾಗಿ ಒಯ್ಯಲು ಅವಕಾಶ ಕಲ್ಪಿಸುವ ಚಿಂತನೆಯಿದೆ’ ಎಂದರು.

ಸಚಿವರು ಮಂಗಳವಾರ ವಿಜಯವಿಠ್ಠಲ ದೇವಸ್ಥಾನಕ್ಕೆ ಭೇಟಿ ನೀಡಿ ಪ್ರವಾಸಿ ಮಾರ್ಗದರ್ಶಿಗಳ ಜೊತೆ ಚರ್ಚಿಸಿದರು. ಬಳಿಕ ಕಮಲಾಪುರದ ವಸ್ತುಸಂಗ್ರಹಾಲಯ ಭೇಟಿ ನೀಡಿದ್ದು, ಬಳಿಕ ಅಂಜನಾದ್ರಿಗೆ ತೆರಳಿದರು.

ಗವಿಮಠಕ್ಕಾಗಿ ನಿರಂತರ 17 ತಾಸು ಖಾದ್ಯ ತಯಾರಿಸಿದ ಭಕ್ತರು

500 ಜನರಿಂದ 6 ಲಕ್ಷ ಮಿರ್ಚಿ ತಯಾರಿ

• ಪ್ರಮೋದ ಕುಲಕರ್ಣಿ

ಕೊಪ್ಪಳ: ಗವಿಮಠದ ಜಾತ್ರೆಯ ಮಹಾರಥೋತ್ಸವ ನಡೆದ ಮರುದಿನ ಬರುವ ಭಕ್ತರಿಗಾಗಿ ಈ ವರ್ಷ 25 ಗ್ರಾಮಗಳ 500 ಜನ ಸ್ವಯಂಸೇವಕರು 17 ತಾಸು ಕೆಲಸ ಮಾಡಿ ಆರು ಲಕ್ಷ ಮಿರ್ಚಿಗಳನ್ನು ತಯಾರಿಸಿದ್ದಾರೆ.

ಗವಿಮಠದ ದರ್ಶನಕ್ಕೆ ಬಂದ ಭಕ್ತರಿಗೆ ಊಟದ ಜೊತೆ ಮಿರ್ಚಿಗಳನ್ನು ಉಣಬಡಿಸಲಾಯಿತು. ಹನ್ನೊಂದು ವರ್ಷಗಳ ಹಿಂದೆ ಕೊಪ್ಪಳದ ಸಮಾನ ಮನಸ್ಕ ಸ್ನೇಹಿತರು ಸೇರಿಕೊಂಡು ಸಣ್ಣ ಪ್ರಮಾಣದಲ್ಲಿ ಆರಂಭಿಸಿದ ಮಿರ್ಚಿ ತಯಾರಿಕೆ ಕಾರ್ಯ ಈಗ ದೊಡ್ಡದಾಗಿ ಬೆಳೆದಿದೆ.

ಮೊದಲು ಒಂದರಿಂದ ಒಂದೂವರೆ ಲಕ್ಷ ಮಾತ್ರ ಮಿರ್ಚಿ ತಯಾರಿಸಲಾಗುತ್ತಿತ್ತು. ವರ್ಷದಿಂದ ವರ್ಷಕ್ಕೆ ಈ ಪ್ರಮಾಣ ಹೆಚ್ಚಿಸಿದ್ದ-ರಿಂದ ಈಗ ಜಾತ್ರೆಯಲ್ಲಿ ಮಿರ್ಚಿ ತಯಾರಿಸುವುದು ‘ಬ್ರ್ಯಾಂಡ್’ ಆಗಿ ಬದಲಾಗಿದೆ.

> ವರ್ಷದಿಂದ ವರ್ಷಕ್ಕೆ ಮಿರ್ಚಿ ತಯಾರಿಕೆ ಹೆಚ್ಚಾಗುತ್ತಿದೆ. ಸ್ವಯಂಸೇವಕರೂ ಕೈ ಜೋಡಿಸುತ್ತಿದ್ದಾರೆ. ಕೆಲಸ ಸರಾಗವಾಗಿ ಸಾಗುತ್ತಿದೆ
> **ರಮೇಶ ತುಪ್ಪದ,** ಸಮಾನ ಮನಸ್ಕ ಸ್ನೇಹಿತರ ಬಳಗದ ಸದಸ್ಯ

> ಗವಿಮಠದ ಜಾತ್ರೆಯಲ್ಲಿ ಸಾಕಷ್ಟು ಜನ ಸೇರಿ ಮಿರ್ಚಿ ತಯಾರಿಸುವುದರಿಂದ ರುಚಿ ಹೆಚ್ಚಾಗಿರುತ್ತದೆ. ಭಕ್ತರಿಗೆ ಸೇವೆ ಮಾಡುವ ಅವಕಾಶವೂ ದೊರೆಯುತ್ತದೆ
> **ಜ್ಯೋತಿ ಮಟ್ಟಿ,** ಮಿರ್ಚಿ ತಯಾರಿಸಲು ಬಂದಿದ್ದ ಮಹಿಳೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಭಕ್ತರು ಮಿರ್ಚಿ ತಯಾರಿಕೆಗೆ ಅವಕಾಶ ಲಭಿಸುವುದು ಸೇವೆ ಎಂಬ ಭಾವದಿಂದ ಕೆಲಸ ಮಾಡುತ್ತಾರೆ. ಮಹಿಳಾ ಸ್ವಸಹಾಯ ಸಂಘದವರು, ಸಮಾನಮನಸ್ಕ ಸ್ನೇಹಿತರು, ಒಂದೇ ಊರಿನ ಜನರ ಗುಂಪು ಬಂದು ಮೆಣಸಿನಕಾಯಿ ಕತ್ತರಿಸುವುದು, ಹಿಟ್ಟು ಕಲಸುವುದು, ಮಿರ್ಚಿ ಜೋಡಣೆ ಸೇರಿ ವಿವಿಧ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾರೆ.

ಈ ವರ್ಷ 25 ಕ್ವಿಂಟಲ್ ಹಸಿಕಡಲೆ ಹಿಟ್ಟು, 22 ಕ್ವಿಂಟಲ್ ಹಸಿಮೆಣಸಿನ ಕಾಯಿ, 25 ಕೆ.ಜಿ. ಅಜಿವಾನ, 25 ಕೆ.ಜಿ. ಸೋಡಾಪುಡಿ, 75 ಕೆ.ಜಿ. ಉಪ್ಪು, 60 ಸಿಲಿಂಡರ್, 12 ಬ್ಯಾರಲ್ ಅಡುಗೆ ಎಣ್ಣೆ ಬಳಕೆ ಮಾಡಲಾಗಿದೆ.

ಸಂಗ್ರಹಿಸಿದ ಮಿರ್ಚಿಗಳನ್ನು ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ವೀಕ್ಷಿಸಿದರು ಚಿತ್ರ: ಭರತ್ ಕಂದಕೂರ

‘ಅನೇಕರು ಮಿರ್ಚಿ ತಯಾರಿಕೆಗೆ ಹಣ ನೀಡುತ್ತಾರೆ. ಈ ಕಾರ್ಯಕ್ಕೆ ಗವಿಮಠವೂ ನೆರವಾಗುತ್ತದೆ. ಆರು ಲಕ್ಷ ಮಿರ್ಚಿ ತಯಾರಿಸಲು ಅಂದಾಜು ₹6 ಲಕ್ಷ ಖರ್ಚಾಗುತ್ತದೆ’ ಎಂದು ಸಂಘಟಕರು ತಿಳಿಸಿದರು.

prajavani.net | prajavani
ಬುಧವಾರ, ಜನವರಿ 7, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 7 | ಪುಟ 16
www.prajavani.net

ಫೈನಲ್‌ಗೆ ಅನಾಹತ್
ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯುತ್ತಿರುವ ಬ್ರಿಟಿಷ್ ಜೂನಿಯರ್ ಓಪನ್ ಸ್ಕ್ವಾಷ್ ಟೂರ್ನಿಯಲ್ಲಿ ಭಾರತದ ಅನಾಹತ್ ಸಿಂಗ್ ಫೈನಲ್ ಪ್ರವೇಶಿಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 85,063 | ನಿಫ್ಟಿ 26,178 | $/₹ 90.18 | ಚಿನ್ನ (Std. 10g) ₹1,43,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,58,500 (ಬೆಂಗಳೂರು)

ತಾಳೆ ಆಗದ 2.51 ಕೋಟಿ ‘ಮತ’

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ರಾಜ್ಯದಲ್ಲಿ ಪೂರ್ವಸಿದ್ಧತೆ

● ಜಯಸಿಂಹ ಆರ್.

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಪೂರ್ವಭಾವಿ ಪ್ರಕ್ರಿಯೆ ಕರ್ನಾಟಕದಲ್ಲೂ ಆರಂಭವಾಗಿದ್ದು, 5.57 ಕೋಟಿ ಮತದಾರರ ಪೈಕಿ 3.05 ಕೋಟಿ ಜನರ ವಿವರಗಳಷ್ಟೇ ತಾಳೆಯಾಗಿವೆ.

ಭಾರತೀಯ ಚುನಾವಣಾ ಆಯೋಗವು ದೇಶದ ಹಲವು ರಾಜ್ಯದಲ್ಲಿ ಎಸ್‌ಐಆರ್ ನಡೆಸುತ್ತಿದೆ. ಕರ್ನಾಟಕದಲ್ಲಿ ಎಸ್‌ಐಆರ್‌ಗೆ ಪೂರ್ವಭಾವಿಯಾಗಿ 2002ರ ಮತ್ತು 2025ರ ಮತದಾರರ ಪಟ್ಟಿಯನ್ನು ಹೋಲಿಕೆ ಮಾಡಲಾಗುತ್ತಿದೆ. ಈ ಕೆಲಸ ಬಹುತೇಕ ಪೂರ್ಣಗೊಂಡಿದ್ದು, ರಾಜ್ಯದ 2.51 ಕೋಟಿ ಮತದಾರರ ವಿವರ ತಾಳೆಯಾಗಿಲ್ಲ. ಬೆಂಗಳೂರು ಒಂದರಲ್ಲೇ 85.14 ಲಕ್ಷ ಮತದಾರರ ವಿವರಗಳು ಹೊಂದಿಕೆಯಾಗಿಲ್ಲ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ 1.03 ಕೋಟಿ ಮತದಾರರಿದ್ದು, ಈವರೆಗೆ 17.86 ಲಕ್ಷ ಮಂದಿಯ ವಿವರಗಳಷ್ಟೇ ತಾಳೆಯಾಗಿವೆ. ದೇಶದ ಹಲವು ರಾಜ್ಯಗಳಲ್ಲಿ ನಡೆಸಲಾಗುತ್ತಿರುವ ಎಸ್‌ಐಆರ್ ಪ್ರಕ್ರಿಯೆಗೆ 2002ರ ಮತದಾರರ ಪಟ್ಟಿಯನ್ನು ಮೂಲ ಆಧಾರವಾಗಿ ಪರಿಗಣಿಸಲಾಗಿದೆ. ▶7

ಉತ್ತರಹಳ್ಳಿ: ವಿವರ ಲಭ್ಯವಿಲ್ಲ

2025ರ ಮತದಾರರ ಪಟ್ಟಿಯಲ್ಲಿ ಇರುವವರ ವಿವರಗಳನ್ನು ಮುಖ್ಯ ಚುನಾವಣಾಧಿಕಾರಿ ಕಚೇರಿಯ ಜಾಲತಾಣದಲ್ಲಿ, ಪ್ರತ್ಯೇಕವಾಗಿ ಹುಡುಕುವ ವ್ಯವಸ್ಥೆ ಮಾಡಲಾಗಿದೆ. ಆದರೆ, 2002ರ ಮತದಾರರ ಪಟ್ಟಿ ಮತ್ತು ಚೀಟಿಗೆ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲೆಯ, ಅಂದಿನ ಅವಿಭಜಿತ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದ ಮತದಾರರ ವಿವರಗಳು ಈ ವ್ಯವಸ್ಥೆಯಲ್ಲಿ ಲಭ್ಯವಿಲ್ಲ. ▶7

ಉತ್ತರ ಪ್ರದೇಶ ಎಸ್‌ಐಆರ್ | 2.89 ಕೋಟಿ ಜನರಿಗೆ ಕೊಕ್

ಉತ್ತರ ಪ್ರದೇಶದ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ (ಎಸ್‌ಐಆರ್) ಮೊದಲ ಹಂತ ಮುಕ್ತಾಯಗೊಂಡಿದ್ದು, ಕೇಂದ್ರ ಚುನಾವಣಾ ಆಯೋಗವು ಕರಡು ಮತದಾರರ ಪಟ್ಟಿಯನ್ನು ಮಂಗಳವಾರ ಪ್ರಕಟಿಸಿದೆ. ಹಿಂದಿನ ಮತದಾರರ ಪಟ್ಟಿಗೆ ಹೋಲಿಸಿದರೆ ಕರಡು ಪಟ್ಟಿಯಲ್ಲಿ 2.89 ಕೋಟಿ ಜನರನ್ನು ಕೈಬಿಡಲಾಗಿದೆ. ಕರಡು ಪಟ್ಟಿ ಬಿಡುಗಡೆ ಮಾಡಲಾದ ಇತರ 8 ರಾಜ್ಯಗಳ ಪೈಕಿ ಉತ್ತರ ಪ್ರದೇಶದಲ್ಲಿಯೇ ಅತಿ ಹೆಚ್ಚು ಜನರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಶಾಶ್ವತವಾಗಿ ಸ್ಥಳಾಂತರಗೊಂಡಿದ್ದಾರೆ ಅಥವಾ ಪರಿಶೀಲನೆ ವೇಳೆ ಮನೆಯಲ್ಲಿ ಇರಲಿಲ್ಲ ಎಂಬ ಕಾರಣ ಉಲ್ಲೇಖಿಸಿ 2.17 ಕೋಟಿ ಜನರ ಹೆಸರನ್ನು ಆಯೋಗವು ಪಟ್ಟಿಯಿಂದ ಕೈಬಿಟ್ಟಿದೆ.

15.44 ಕೋಟಿ ಎಸ್‌ಐಆರ್‌ಗೂ ಮೊದಲು ಇದ್ದ ಮತದಾರರ ಸಂಖ್ಯೆ

12.55 ಕೋಟಿ ಕರಡು ಪಟ್ಟಿಯಲ್ಲಿ ಇರುವ ಮತದಾರರ ಸಂಖ್ಯೆ

2.89 ಕೋಟಿ ಪಟ್ಟಿಯಿಂದ ಕೈಬಿಡಲಾದ ಮತದಾರರ ಸಂಖ್ಯೆ



> **ನಮ್ಮ ಬೆಂಬಲಿಗರ ಹೆಸರುಗಳನ್ನೇ ಕರಡು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ**
> **ವಿರೋಧ ಪಕ್ಷಗಳ ಆರೋಪ**

> **ಯಾರು ಅಕ್ರಮ ವಲಸಿಗರೋ ಅವರ ಹೆಸರಗಳನ್ನು ಮಾತ್ರವೇ ಕರಡು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ**
> **ಬಿಜೆಪಿ**

- 15,030 ಹೊಸ ಮತಗಟ್ಟೆ: ಒಂದು ಮತಗಟ್ಟೆಯಲ್ಲಿ 1,200 ಮತದಾರರು ಇರಬೇಕು ಎಂದು ಆಯೋಗವು ಮಿತಿ ಹೇರಿದೆ. ಈ ಮೊದಲು ಮತಗಟ್ಟೆಯೊಂದರಲ್ಲಿ 1,500 ಮತದಾರರು ಮತ ಚಲಾಯಿಸುತ್ತಿದ್ದರು. ಹೊಸ ಮಿತಿಯ ಕಾರಣದಿಂದ ರಾಜ್ಯದಲ್ಲಿ ಸುಮಾರು 15,030 ಹೊಸ ಮತಗಟ್ಟೆಗಳನ್ನು ಸೃಷ್ಟಿಸಲಾಗಿದೆ.
- ಲಖನೌನಲ್ಲಿ ಅತಿ ಹೆಚ್ಚು ಅಂದರೆ, 12 ಲಕ್ಷ ಜನರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಪ್ರಯಾಗ್‌ರಾಜ್ (11 ಲಕ್ಷ) ನಂತರದ ಸ್ಥಾನದಲ್ಲಿದೆ. ಕಾನ್ಪುರದಲ್ಲಿ 9 ಲಕ್ಷ ಜನರ ಹೆಸರನ್ನು ಕೈಬಿಡಲಾಗಿದೆ ▶7

‘ಬೆಟ್ಟದ ದೀಪ’ಕ್ಕೆ ಕೋರ್ಟ್ ಒಪ್ಪಿಗೆ

ಮದುರೆ(ಪಿಟಿಐ): ತಮಿಳುನಾಡಿನ ತಿರುಪರನ್‌ಕುಂದ್ರಂ ಬೆಟ್ಟದಲ್ಲಿರುವ ದೀಪ ಸ್ತಂಭದಲ್ಲಿ ದೀಪ ಹಚ್ಚಲು ಅನುಮತಿ ನೀಡಿ ಏಕಸದಸ್ಯ ಪೀಠ ನೀಡಿದ್ದ ತೀರ್ಪನ್ನು ಮದ್ರಾಸ್ ಹೈಕೋರ್ಟ್‌ನ ಮದುರೆ ಪೀಠವು ಮಂಗಳವಾರ ಎತ್ತಿ ಹಿಡಿದಿದೆ.

ಬೆಟ್ಟದಲ್ಲಿ ದೀಪಸ್ತಂಭ ಇರುವ ಜಾಗವು ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನಕ್ಕೆ ಸೇರಿದೆ ಎಂದು ನ್ಯಾಯಪೀಠ ಸ್ಪಷ್ಟವಾಗಿ ಹೇಳಿದೆ. ▶11

ಸರ್ಕಾರದ ವಾದವೇನು?

ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಕಾಶಿ ವಿಶ್ವನಾಥ ದೇವಸ್ಥಾನ, ಸಿಕಂದರ್ ಬಾದುಷಾ ದರ್ಗಾ ಇರುವ ತಿರುಪರನ್‌ಕುಂದ್ರಂ ಬೆಟ್ಟವು ಧಾರ್ಮಿಕ ಸಹಬಾಳ್ವೆಯ ತಾಣ. ದೀಪಸ್ತಂಭ ಇರುವ ಸ್ಥಳವು ದರ್ಗಾದಿಂದ 50 ಮೀಟರ್ ದೂರದಲ್ಲಿದೆ. ಹೀಗಾಗಿ ಇಲ್ಲಿ ದೀಪ ಹಚ್ಚಲು ಅವಕಾಶ ನೀಡಿದರೆ ಅದು ದರ್ಗಾಕ್ಕೆ ಹಾನಿ ಉಂಟು ಮಾಡುತ್ತದೆ, ವಿವಾದಕ್ಕೆ ಕಾರಣವಾಗುತ್ತದೆ ಎಂದು ತಮಿಳುನಾಡು ಸರ್ಕಾರ ವಾದಿಸಿತ್ತು.

‘ಈ ಬಗ್ಗೆ ಜಿಲ್ಲಾಡಳಿತ ವ್ಯಕ್ತಪಡಿಸಿದ್ದ ಆತಂಕವನ್ನು ಕೋರ್ಟ್ ಗಮನಿಸಿದೆ. ಇದು ಅವರ ಅನುಕೂಲಕ್ಕಾಗಿ ಒಂದು ಸಮುದಾಯವನ್ನು ಇನ್ನೊಂದು ಸಮುದಾಯದ ವಿರುದ್ಧ ಎತ್ತಿಕಟ್ಟಲು ಅವರೇ ಸೃಷ್ಟಿಸಿರುವ ಕಾಲ್ಪನಿಕ ಭೂತ’ ಎಂದು ಕೋರ್ಟ್ ಹೇಳಿತು.

ಬಾಂಗ್ಲಾದೇಶ ಮತ್ತೊಬ್ಬ ಹಿಂದೂ ಉದ್ಯಮಿ ಹತ್ಯೆ

ಢಾಕಾ (ಪಿಟಿಐ): ಬಾಂಗ್ಲಾದೇಶದ ನರಸಿಂಗ್ದಿ ಜಿಲ್ಲೆಯ ಪಲಾಶ್ ಉಪವಿಭಾಗದ ಚಾರ್‌ಸಿಂಧೂರ್ ಬಜಾರ್‌ನ ದಿನಸಿ ಅಂಗಡಿ ಮಾಲೀಕ, ಹಿಂದೂ ಧರ್ಮದ ಮೋನಿ ಚಕ್ರವರ್ತಿ (40) ಎಂಬವರ ಮೇಲೆ ಸೋಮವಾರ ರಾತ್ರಿ 11 ಗಂಟೆ ಸುಮಾರಿಗೆ ದುಷ್ಕರ್ಮಿಗಳು ಹರಿತವಾದ ಆಯುಧದಿಂದ ದಾಳಿ ನಡೆಸಿ, ಹತ್ಯೆ ಮಾಡಿದ್ದಾರೆ.

ಬಾಂಗ್ಲಾದೇಶದ ಜೆಸ್ಸೋರ್ ಜಿಲ್ಲೆಯಲ್ಲಿ ಪತ್ರಿಕೆಯೊಂದರ ಹಂಗಾಮಿ ಸಂಪಾದಕರೂ ಆಗಿದ್ದ ಹಿಂದೂ ಉದ್ಯಮಿ ರಾಣಾ ಪ್ರತಾಪ್ ಬೈರಾಗಿ ಎಂಬವರನ್ನು ಕೊಲೆ ಮಾಡಿದ ಕೆಲವೇ ಗಂಟೆಗಳ ನಂತರ, ಸೋಮವಾರ ರಾತ್ರಿ ಈ ಘಟನೆ ನಡೆದಿದೆ.

‘ಶಿಬ್‌ಪುರ ಉಪವಿಭಾಗದ ಸಾಧರ್‌ಚಾರ್ ಒಕ್ಕೂಟದ ಮದನ್ ಠಾಕೂರ್ ಅವರ ಪುತ್ರರಾದ ಮೋನಿ ಅವರು ಅಂಗಡಿಯಿಂದ ಹಿಂತಿರುಗುತ್ತಿದ್ದಾಗ ದುಷ್ಕರ್ಮಿಗಳು ಆಯುಧದಿಂದ ಹಲ್ಲೆ ನಡೆಸಿದ್ದರಿಂದ ಸ್ಥಳದಲ್ಲೇ ಕುಸಿದುಬಿದ್ದರು. ಸ್ಥಳೀಯರು ಅವರನ್ನು ಆರೋಗ್ಯ ಕೇಂದ್ರಕ್ಕೆ ಕರೆದೊಯ್ದರು. ಆದರೆ, ಅಷ್ಟರಲ್ಲಾಗಲೇ ಅವರು ಮೃತಪಟ್ಟಿದ್ದರು. ಆರೋಪಿಗಳ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮೋದಿ, ಶಾ ವಿರುದ್ಧ ಘೋಷಣೆ: ಆರೋಪ

ನವದೆಹಲಿ (ಪಿಟಿಐ): ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಕ್ಯಾಂಪಸ್‌ನಲ್ಲಿ ಸೋಮವಾರ ರಾತ್ರಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಗುಂಪೊಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ವಿರುದ್ಧ ಪ್ರಚೋದನಕಾರಿ ಘೋಷಣೆ ಕೂಗಿದೆ ಎಂದು ಆರೋಪಿಸಲಾಗಿದೆ.

ದೆಹಲಿ ಗಲಭೆ ಪಿತೂರಿ ಪ್ರಕರಣದಲ್ಲಿ ಬಂಧನದಲ್ಲಿರುವ ಜೆಎನ್‌ಯು ಹಳೆ ವಿದ್ಯಾರ್ಥಿ ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನಿರಾಕರಿಸಿದ ಬೆನ್ನಲ್ಲೇ ಇದು ನಡೆದಿದೆ.

ಘೋಷಣೆ ಕೂಗಿದ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳುವಂತೆ ‘ಜೆಎನ್‌ಯು’ ಆಡಳಿತ ಮಂಡಳಿ ದೆಹಲಿ ಪೊಲೀಸರಿಗೆ ಮಂಗಳವಾರ ಪತ್ರ ಬರೆದು ಒತ್ತಾಯಿಸಿದೆ.

ವಸಂತ್ ಕುಂಜ್ (ಉತ್ತರ) ಠಾಣಾಧಿಕಾರಿಗೆ ಬರೆದಿರುವ ಈ ಪತ್ರದಲ್ಲಿ, ಜೆಎನ್‌ಯು ವಿದ್ಯಾರ್ಥಿ ಸಂಘಟನೆ (ಜೆಎನ್‌ಯುಎಸ್‌ಯು) ವಿರುದ್ಧ ಆರೋಪ ಮಾಡಲಾಗಿದೆ. ▶6

ಆಂತರಿಕ ತನಿಖಾ ಸಮಿತಿ ರಚನೆ

ಜೆಎನ್‌ಯು

‘ಜೆಎನ್‌ಯು ಆಡಳಿತ ಮಂಡಳಿ ಮಂಗಳವಾರ ಸಭೆ ನಡೆಸಿದ್ದು, ತಪ್ಪಿತಸ್ಥ ವಿದ್ಯಾರ್ಥಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಮುಂದಾಗಿದೆ. ಇದಕ್ಕಾಗಿ ಆಂತರಿಕ ತನಿಖಾ ಸಮಿತಿಯೊಂದನ್ನು ರಚಿಸಲಾಗಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

> **ದೆಹಲಿಯ ಜೆಎನ್‌ಯು ಕ್ಯಾಂಪಸ್, ವಿರೋಧ ಪಕ್ಷ ಮತ್ತು ಪಾಕಿಸ್ತಾನ ಪರ ಸಂಘಟನೆಗಳ ಪೋಷಣೆಯಲ್ಲಿರುವ ತುಕ್ಡೆ, ತುಕ್ಡೆ ಗ್ಯಾಂಗ್‌ನ ಕಚೇರಿಯಾಗಿ ಬದಲಾಗಿದೆ**
> **ಗಿರಿರಾಜ್ ಸಿಂಗ್,** ಕೇಂದ್ರ ಸಚಿವ

ಅಪ್ರಾಪ್ತ ವಯಸ್ಸಿನವರ ಮದುವೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪ್ರಾಪ್ತ ವಯಸ್ಸಿನ ಮಕ್ಕಳ ಮದುವೆ ಮಾಡಿಸುವ ಮತ್ತು ಅದಕ್ಕೆ ಕುಮ್ಮಕ್ಕು ಕೊಡುವ ಪೋಷಕರಿಗೆ ಕಠಿಣ ಶಿಕ್ಷೆ ವಿಧಿಸುವ ಅಗತ್ಯ ಇದೆ. ಈ ದಿಸೆಯಲ್ಲಿ ಯಾವ್ಯಾವ ಕಾಯ್ದೆ–ಕಾನೂನುಗಳು ಜಾರಿಯಲ್ಲಿವೆಯೋ ಅವುಗಳನ್ನೆಲ್ಲಾ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಕುರಿತಂತೆ ನ್ಯಾಯಾಂಗ ಬಂಧನದಲ್ಲಿರುವ ಪಶ್ಚಿಮ ಬಂಗಾಳದ ಆರೋಪಿ ಹಬೀಬುರ್ ಅಲಿಯಾಸ್ ಹಬೀಬ್ ಸಲ್ಲಿಸಿದ್ದ (28) ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ▶6

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಕಳ್ಳತನದ ಬಳಿಕ ಹರಕೆ ತೀರಿಸಿದ್ದ ಆರೋಪಿಗಳು

ಉದ್ಯಮಿಯ ವಿಲ್ಲಾದಲ್ಲಿ ಚಿನ್ನಾಭರಣ ದೋಚಿದ್ದ ನಾಲ್ವರ ಸೆರೆ

- ಬಂಧಿತರಿಂದ ₹1.3 ಕೋಟಿ ಮೌಲ್ಯದ ವಸ್ತು ಜಪ್ತಿ

ಪ್ರಜಾವಾಣಿ ವಾರ್ತೆ

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಚಿನ್ನಾಭರಣ

ಬೆಂಗಳೂರು: ಉದ್ಯಮಿಯ ವಿಲ್ಲಾದಲ್ಲಿ ಚಿನ್ನ ಹಾಗೂ ಬೆಳ್ಳಿಯ ಆಭರಣಗಳನ್ನು ದೋಚಿ ಪರಾರಿಯಾಗಿದ್ದ ನಾಲ್ವರನ್ನು ವಿದ್ಯಾರಣ್ಯ ಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಂಜುನಾಥ, ಚಂದನ್, ನರೇಂದ್ರ ಹಾಗೂ ಮಂಜಿತ್ ಬಂಧಿತರು.

ಬಂಧಿತರಿಂದ 550 ಗ್ರಾಂ ಚಿನ್ನಾಭರಣ, ನಾಲ್ಕು ಕೆ.ಜಿ ಬೆಳ್ಳಿಯ ವಸ್ತುಗಳು, ₹ 4 ಲಕ್ಷ ನಗದು, 1 ದ್ವಿಚಕ್ರ ವಾಹನ ಸೇರಿದಂತೆ ₹1.3 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಗೋಪಾಲ್ ಶಿಂಧೆ ಎಂಬುವರಿಗೆ ಸೇರಿದ ಲಕ್ಷ್ಮೀಪುರ ಕ್ರಾಸ್ ಬಳಿಯ ಡೊನಾಟಾ ಕೌಂಟಿ ವಿಲ್ಲಾದಲ್ಲಿ ಡಿಸೆಂಬರ್ 24ರಂದು ಕಳ್ಳತನ ನಡೆದಿತ್ತು. ಅವರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಉದ್ಯಮಿ ವಿಲ್ಲಾದಲ್ಲಿ ಬಿಹಾರದ ಮಂಜಿತ್ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ. ದೊಡ್ಡಬಳ್ಳಾಪುರದ ನರೇಂದ್ರ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಅವರಿಬ್ಬರೂ ಮಂಜುನಾಥ್ ಹಾಗೂ ಚಂದನ್ ಜತೆಗೆ ಸೇರಿಕೊಂಡು ಕೃತ್ಯ ಎಸಗಿದ್ದರು' ಎಂದು ಪೊಲೀಸರು ಹೇಳಿದರು.

ಕಳ್ಳತನ ಮಾಡಿ ಶ್ರೀಮಂತರಾಗಲು ಯೋಜನೆ: ಉದ್ಯಮಿಯ ವಿಲ್ಲಾಗೆ ಕನ್ನ ಹಾಕಿ ಶ್ರೀಮಂತರಾಗಲು ಆರೋಪಿಗಳು ಯೋಜನೆ ರೂಪಿಸಿದ್ದರು. ಸಣ್ಣಪುಟ್ಟ ಕಳ್ಳತನ ಮಾಡಿಕೊಂಡಿದ್ದ ಮಂಜುನಾಥ್‌ಗೆ ಮಂಜಿತ್ ಹಾಗೂ ನರೇಂದ್ರ ವಿಷಯ ತಿಳಿಸಿದ್ದರು. ಅದರಂತೆ ಮೂರು ತಿಂಗಳಿಂದ ಕಳ್ಳತನಕ್ಕೆ ಯೋಜನೆ ರೂಪಿಸಿದ್ದರು. ಈ ನಡುವೆ ಉದ್ಯಮಿ ಮನೆಯವರು ಕ್ರಿಸ್‌ಮಸ್ ರಜೆಗೆ ಪ್ರವಾಸಕ್ಕೆ ತೆರಳಿದ್ದರು. ಆಗ ನಾಲ್ವರು ವಿಲ್ಲಾದಲ್ಲಿ ಕಳ್ಳತನ ಮಾಡಿದ್ದರು ಎಂದು ಪೊಲೀಸರು ಹೇಳಿದರು.

'ಆರೋಪಿಗಳ ಪೈಕಿ ಮಂಜುನಾಥ ಧರ್ಮಸ್ಥಳದ ಭಕ್ತನಾಗಿದ್ದ. ಕಳ್ಳತನದ ಬಳಿಕ ಹರಕೆ ತೀರಿಸಲು ಚಂದನ್ ಮತ್ತು ಮಂಜುನಾಥ್ ಧರ್ಮಸ್ಥಳಕ್ಕೆ ತೆರಳಿದ್ದರು. ನಂತರ, ಸುಮಾರು ಮೂರು ದಿನಗಳ ಕಾಲ ಕದ್ದ ದುಡ್ಡಲ್ಲಿ ಪ್ರವಾಸ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

'ಗೋಪಾಲ್ ಶಿಂಧೆ ಅವರು ಪ್ರವಾಸ ಮುಗಿಸಿ ವಿಲ್ಲಾಗೆ ವಾಪಸ್ ಆಗಿದ್ದರು. ವಿಲ್ಲಾದಲ್ಲಿ ಪರಿಶೀಲನೆ ನಡೆಸಿದಾಗ ಕಳ್ಳತನ ನಡೆದಿರುವುದು ಗೊತ್ತಾಗಿತ್ತು. ಬಳಿಕ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಬಟ್ಟೆ ಒಗೆಯುವ ಸಂದರ್ಭದಲ್ಲಿ ಜೇಬಿನಲ್ಲಿ ಹಣ ಸಿಕ್ಕಿದರೂ ಮಂಜಿತ್ ವಾಪಸ್ ಕೊಡುತ್ತಿದ್ದ. ಮನೆ ಕೆಲಸದವರ ಮೇಲೆ ಉದ್ಯಮಿಗೆ ಅನುಮಾನ ಬಂದಿರಲಿಲ್ಲ. ಆದರೆ, ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಿದಾಗ ನಾಲ್ವರು ಕೃತ್ಯ ಎಸಗಿರುವುದು ಪತ್ತೆಯಾಗಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

₹40 ಲಕ್ಷ ಮೌಲ್ಯದ 48 ಲ್ಯಾಪ್‌ಟಾಪ್ ಜಪ್ತಿ

ಬೆಂಗಳೂರು: ಪೇಯಿಂಗ್ ಗೆಸ್ಟ್, ಹಾಸ್ಟೆಲ್ ಹಾಗೂ ಕಾಲೇಜುಗಳಿಗೆ ನುಗ್ಗಿ ಲ್ಯಾಪ್‌ಟಾಪ್ ಕಳ್ಳತನ ಮಾಡುತ್ತಿದ್ದ ತಮಿಳುನಾಡಿನ ಇಬ್ಬರು ಆರೋಪಿಗಳನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಚೆನ್ನೈನ ಗೌತಮ್ (36) ಹಾಗೂ ರಾಜ ದೊರೈ (33) ಬಂಧಿತರು.

ಬಂಧಿತರಿಂದ ₹40 ಲಕ್ಷ ಮೌಲ್ಯದ ವಿವಿಧ ಕಂಪನಿಯ 48 ಲ್ಯಾಪ್‌ಟಾಪ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ದೊಡ್ಡ ತೋಗೂರಿನ ಅಲ್ಯುನ್ಸ್ ಸ್ಪ್ರೀನ್ಸ್ ಪಿ.ಜಿಯಲ್ಲಿ ನೆಲೆಸಿದ್ದ ವ್ಯಕ್ತಿಯೊಬ್ಬರ ಲ್ಯಾಪ್‌ಟಾಪ್ ಕಳ್ಳತನವಾಗಿತ್ತು. ಅವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ತಮಿಳುನಾಡಿನಿಂದ ಬಸ್‌ನಲ್ಲಿ ಬರುತ್ತಿದ್ದ ರಾಜದೊರೈ, ನಗರದ ವಿವಿಧೆಡೆ ಸಂಚರಿಸಿ ಲ್ಯಾಪ್‌ಟಾಪ್‌ಗಳನ್ನು ಕಳ್ಳತನ ಮಾಡುತ್ತಿದ್ದ. ಕದ್ದ ಲ್ಯಾಪ್‌ಟಾಪ್‌ಗಳನ್ನು ಗೌತಮ್ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಗೌತಮ್

ರಾಜ

ಆರೋಪಿಗಳಿಂದ ಜಪ್ತಿ ಮಾಡಿಕೊಂಡಿರುವ ಲ್ಯಾಪ್‌ಟಾಪ್‌ಗಳು

ದ್ವಿಚಕ್ರ ವಾಹನ ಕಳವು: ನಾಲ್ವರ ಸೆರೆ

ಬೆಂಗಳೂರು: ಮನೆಯ ಎದುರು ಹಾಗೂ ರಸ್ತೆಯ ಬದಿಯಲ್ಲಿ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಹೊರರಾಜ್ಯದ ನಾಲ್ವರು ಆರೋಪಿಗಳನ್ನು ಕೆ.ಆರ್.ಪುರ ಠಾಣೆಯ ಪೊಲೀಸರು ಬಂಧಿಸಿ, ₹50 ಲಕ್ಷ ಮೌಲ್ಯದ 60 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

ತಮಿಳುನಾಡಿನ ವೇಲೂರು ಜಿಲ್ಲೆಯ ರಂಜಿತ್‌ಕುಮಾರ್ (28), ಮುತ್ತುನಗರದ ಯುವರಾಜ್ (22), ಒಡೆಯರ ರಾಜ್ಯಪಾಳ್ಯಂದ ವಿನೋದ್‌ಕುಮಾರ್ (18) ಹಾಗೂ ಶಂಕರಪುರದ ಸಿ.ಮಣಿಕಂಠ (20) ಬಂಧಿತರು.

ಅಯ್ಯಪ್ಪನಗರದ ಆಕಾಶ್ ಅವರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಸಂಚಾರ ನಿಯಮ ಉಲ್ಲಂಘನೆ ₹251 ಕೋಟಿ ದಂಡ ಸಂಗ್ರಹ

ಬೆಂಗಳೂರು: ನಗರ ಸಂಚಾರ ವಿಭಾಗದ ಪೊಲೀಸರು, 2025ರಲ್ಲಿ ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ₹251.26 ಕೋಟಿ ದಂಡ ಸಂಗ್ರಹಿಸಿದ್ದಾರೆ. ಇದು ಕಳೆದ ಒಂದು ದಶಕದಲ್ಲಿ ಅತ್ಯಧಿಕವಾಗಿದೆ. 2024ರಲ್ಲಿ ಸಂಗ್ರಹಿಸಿದ್ದ ₹62.82 ಕೋಟಿಗಿಂತ ಶೇಕಡ 300ರಷ್ಟು ಹೆಚ್ಚಾಗಿದೆ.

ಕಳೆದ 10 ವರ್ಷಗಳಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ ಪ್ರಕರಣಗಳಲ್ಲಿ ದಂಡ ಸಂಗ್ರಹವು ಏರಿಕೆ ಕಂಡಿದೆ.

2014ರಿಂದ 2016ರ ನಡುವೆ ₹65 ಕೋಟಿಯಿಂದ ₹70 ಕೋಟಿ ದಂಡ ಸಂಗ್ರಹಿಸಲಾಗಿತ್ತು. 2017ರಲ್ಲಿ ನಗರದ ಸಿಗ್ನಲ್‌ಗಳಲ್ಲಿ ಸ್ವಯಂಚಾಲಿತ ಕ್ಯಾಮೆರಾಗಳ ಅಳವಡಿಕೆಯಿಂದ ₹112.41 ಕೋಟಿ ದಂಡ ಸಂಗ್ರಹವಾಗಿತ್ತು. 2023ರಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ ಬಾಕಿ ಇರುವ ಪ್ರಕರಣಗಳಿಗೆ ಶೇ 50 ರಿಯಾಯಿತಿ ನೀಡಿದ ಕಾರಣ ₹185.13 ಕೋಟಿ ಸಂಗ್ರಹವಾಗಿತ್ತು.

'2024ರಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಕಡೆಗೆ ಹೆಚ್ಚು ಗಮನ ಹರಿಸಿದ ಕಾರಣ ಹಳೆಯ ಪ್ರಕರಣಗಳ ಬಾಕಿ ವಸೂಲಿ ಕಡಿಮೆಯಾಗಿತ್ತು. ಇದರಿಂದ ₹62.82 ಕೋಟಿ ದಂಡ ಮಾತ್ರ ಸಂಗ್ರಹಿಸಲಾಗಿತ್ತು. 2025ರಲ್ಲಿ ಸಂಚಾರ ದಟ್ಟಣೆ, ಜಾಗೃತಿ ಹಾಗೂ ಪರಿಣಾಮಕಾರಿ ನೀತಿಗಳನ್ನು ಜಾರಿಗೊಳಿಸಿದ ಪರಿಣಾಮ ₹251.26 ಕೋಟಿ ದಂಡ ಸಂಗ್ರಹಿಸಲಾಗಿದೆ' ಎಂದು ಬೆಂಗಳೂರು ಸಂಚಾರ ವಿಭಾಗದ ಪೊಲೀಸರ ಅಂಕಿ-ಅಂಶಗಳಿಂದ ತಿಳಿದು ಬಂದಿದೆ.

2025ರ ಆಗಸ್ಟ್ 23ರಿಂದ ಸೆಪ್ಟೆಂಬರ್ 14ರವರೆಗೆ ನಿಯಮ ಉಲ್ಲಂಘಿಸಿದ ಬಾಕಿ ಇರುವ ಪ್ರಕರಣಗಳಿಗೆ ಶೇ 50 ರಿಯಾಯಿತಿ ನೀಡಿದ ಕಾರಣ ಒಟ್ಟು 3.86 ಲಕ್ಷ ಪ್ರಕರಣಗಳಲ್ಲಿ ₹106 ಕೋಟಿ ದಂಡ ಸಂಗ್ರಹಿಸಲಾಗಿತ್ತು. ನವೆಂಬರ್‌ನಲ್ಲಿ ಮತ್ತೆ ನಡೆದ ಅಭಿಯಾನದಲ್ಲಿ 2.47 ಲಕ್ಷಕ್ಕೂ ಹೆಚ್ಚು ಪ್ರಕರಣಗಳನ್ನು ವಿಲೇವಾರಿ ಮಾಡಿ, ₹7.02 ಕೋಟಿ ದಂಡ ಸಂಗ್ರಹ ಮಾಡಲಾಗಿದೆ. '2025ರ ಅಕ್ಟೋಬರ್ ವರೆಗೆ ಬೆಂಗಳೂರು ನಗರದಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ 51.8 ಲಕ್ಷ ಪ್ರಕರಣಗಳಲ್ಲಿ ₹207.35 ಕೋಟಿ ದಂಡ ಸಂಗ್ರಹಿಸಲಾಗಿದೆ' ಎಂದು ಜಂಟಿ ಪೊಲೀಸ್ ಕಮಿಷನರ್ (ಸಂಚಾರ ವಿಭಾಗ) ಕಾರ್ತಿಕ್ ರೆಡ್ಡಿ ತಿಳಿಸಿದರು.

ಪಾಸ್‌ಪೋರ್ಟ್ ಕಚೇರಿಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು: ಕೋರಮಂಗಲದ ಪಾಸ್‌ಪೋರ್ಟ್ ಕಚೇರಿಯಲ್ಲಿ ಬಾಂಬ್ ಇಟ್ಟಿರುವುದಾಗಿ ಕಿಡಿಗೇಡಿಗಳು ಇ-ಮೇಲ್ ಮೂಲಕ ಬೆದರಿಕೆಯ ಸಂದೇಶ ಕಳುಹಿಸಿದ್ದರಿಂದ ಮಂಗಳವಾರ ಆತಂಕ ಸೃಷ್ಟಿಯಾಗಿತ್ತು.

ಕಚೇರಿಯ ಅಧಿಕೃತ ಇ-ಮೇಲ್ ವಿಳಾಸಕ್ಕೆ ಕಿಡಿಗೇಡಿಗಳು ಮಂಗಳವಾರ ಬೆಳಿಗ್ಗೆ ಸಂದೇಶ ಕಳುಹಿಸಿದ್ದರು. ಕೆಲವೇ ಕ್ಷಣದಲ್ಲಿ ಬಾಂಬ್ ಸ್ಫೋಟಗೊಳ್ಳಲಿದೆ ಎಂದು ಇ-ಮೇಲ್‌ನಲ್ಲಿ ಉಲ್ಲೇಖಿಸಲಾಗಿತ್ತು. ಇ-ಮೇಲ್ ಗಮನಿಸಿದ ಕಚೇರಿಯ ಸಿಬ್ಬಂದಿ ಸ್ಥಳೀಯ ಠಾಣೆಗೆ ಮಾಹಿತಿ ನೀಡಿದರು. ತಕ್ಷಣವೇ ಎಲ್ಲ ಸಿಬ್ಬಂದಿಯೂ ಕಚೇರಿಯಿಂದ ಹೊರಕ್ಕೆ ಬಂದಿದ್ದರು.

ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳ ಸಿಬ್ಬಂದಿಯು ಪಾಸ್‌ಪೋರ್ಟ್ ಕಚೇರಿಗೆ ತೆರಳಿ ತಪಾಸಣೆ ನಡೆಸಿದರು. ಆದರೆ, ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಲಿಲ್ಲ. ಬಳಿಕ ಹುಸಿ ಬಾಂಬ್ ಸಂದೇಶ ಎಂಬುದು ಕಂಡುಬಂತು ಎಂದು ಪೊಲೀಸರು ಹೇಳಿದರು.

ಕೈ ಮುರಿದು, ಕಣ್ಣಿಗೆ ಚಾಕು ಇರಿದ ಪತ್ನಿ

ಬೆಂಗಳೂರು: ಎರಡನೇ ಪತ್ನಿಯನ್ನು ಬಿಟ್ಟು ಬರುವಂತೆ ಹೇಳಿ, ಜೆ.ಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿಶೀಟರ್ ಸೈಯದ್ ಅಸ್ಗರ್ ಅವರಿಗೆ ಅವರ ಮೊದಲ ಪತ್ನಿ ಚೂರಿಯಿಂದ ಇರಿದು ಗಾಯಗೊಳಿಸಿದ್ದಾರೆ.

ಚೂರಿ ಇರಿತದಿಂದ ಸೈಯದ್ ಅವರ ಕೈ ಮುರಿದಿದೆ. ಕಣ್ಣಿಗೂ ಚೂರಿ ಇರಿಯಲಾಗಿದೆ. ಗಾಯಗೊಂಡಿರುವ ಸೈಯದ್ ಅವರು ಮೊದಲ ಪತ್ನಿಯ ವಿರುದ್ಧ ಜೆ.ಜೆ ನಗರ ಠಾಣೆಗೆ ದೂರು ನೀಡಿದ್ದಾರೆ.

ಮೊದಲ ಪತ್ನಿ ಬೆದರಿಕೆ ಹಾಕಿ ವಿಡಿಯೊ ಮಾಡಿರುವುದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಜೈಲಿಗೆ ಹೋಗಿದ್ದ ಸೈಯದ್ ಇತ್ತೀಚೆಗೆ ಬಿಡುಗಡೆ ಆಗಿದ್ದರು. ಜೈಲಿನಿಂದ ಬಂದ ಕೆಲವೇ ದಿನಗಳಲ್ಲಿ ಕೃತ್ಯ ಎಸಗಲಾಗಿದೆ.

'ದೂರು ಸ್ವೀಕರಿಸಿ ತನಿಖೆ ನಡೆಸಲಾಗುತ್ತಿದೆ. ಎರಡನೇ ಪತ್ನಿಯನ್ನು ಬಿಟ್ಟು ಬರುವಂತೆ ಹೇಳಿ ಮೊದಲ ಪತ್ನಿ ಕೃತ್ಯ ಎಸಗಿದ್ದಾರೆ' ಎಂದು ಪೊಲೀಸರು ಹೇಳಿದರು.

ಅಡಮಾನವಿಟ್ಟಿದ್ದ ಚಿನ್ನ ಕದ್ದಿದ್ದ ಅಧಿಕಾರಿ

ಕರೂರು ವೈಶ್ಯ ಬ್ಯಾಂಕ್ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರೂರು ವೈಶ್ಯ ಬ್ಯಾಂಕ್‌ನಲ್ಲಿ ನಡೆದಿದ್ದ ಚಿನ್ನಾಭರಣ ಕಳವು ಪ್ರಕರಣದ ತನಿಖೆ ನಡೆಸಿದ್ದ ಕೆಂಗೇರಿ ಠಾಣೆಯ ಪೊಲೀಸರು, ಬ್ಯಾಂಕ್ ಸಹಾಯಕ ವ್ಯವಸ್ಥಾಪಕಿ ಹಾಗೂ ಅವರ ಪತಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ.

₹5 ಕೋಟಿ ಮೌಲ್ಯದ ಚಿನ್ನಾಭರಣ ಕಳ್ಳತನ ಪ್ರಕರಣದಲ್ಲಿ ಬ್ಯಾಂಕ್‌ನ ಸಹಾಯಕ ವ್ಯವಸ್ಥಾಪಕಿ ಅಶ್ವಿನಿ ಹಾಗೂ ಅವರ ಪತಿ, ಸಾಫ್ಟ್‌ವೇರ್ ಎಂಜಿನಿಯರ್ ರವಿ ಪಾತ್ರವಿರುವುದು ಕಂಡುಬಂದಿದೆ ಎಂದು ಪೊಲೀಸರು ಹೇಳಿದರು.

'ಅಶ್ವಿನಿ ಹಾಗೂ ರವಿ ಅವರ ವಿರುದ್ಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಅ.7ರಂದು ಪ್ರಕರಣ ದಾಖಲಾಗಿತ್ತು. ಬಳಿಕ ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

'2022ರಿಂದಲೂ ಅಶ್ವಿನಿ ಅವರು ಸಹಾಯಕ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ಚಿನ್ನದ ಮೇಲಿನ ಸಾಲ ವಸೂಲಾತಿ ವಿಭಾಗದ ಉಸ್ತುವಾರಿಯನ್ನೂ ಅವರು ನೋಡಿಕೊಳ್ಳುತ್ತಿದ್ದರು. ಗ್ರಾಹಕರು ಚಿನ್ನದ ಮೇಲೆ ಸಾಲ ಪಡೆದುಕೊಳ್ಳಲು ಆಭರಣಗಳನ್ನು ಬ್ಯಾಂಕ್‌ನಲ್ಲಿ ಇಟ್ಟಿದ್ದರು. ಆ ಚಿನ್ನವನ್ನು ಆರೋಪಿಗಳು ತೆಗೆದುಕೊಂಡು ನಕಲಿ ಚಿನ್ನವನ್ನು ಇಟ್ಟಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ. ಸಹಾಯಕ ವ್ಯವಸ್ಥಾಪಕಿ ತಮ್ಮ ಹುದ್ದೆಯನ್ನು ದುರ್ಬಳಕೆ ಮಾಡಿಕೊಂಡಿರುವುದು ತನಿಖೆಯಿಂದ ಸಾಬೀತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಶ್ವಿನಿ ಅವರಿಗೆ ಆನ್‌ಲೈನ್‌ನಲ್ಲಿ ಆಟವಾಡುವ ಚಟವಿತ್ತು. ಅದಕ್ಕೆ ಹಣ ಹೊಂದಿಸಲು ಅಶ್ವಿನಿ ಅವರು ಬ್ಯಾಂಕ್‌ನಲ್ಲಿ ಗ್ರಾಹಕರು ಇಟ್ಟಿದ್ದ ಚಿನ್ನವನ್ನು ತೆಗೆದುಕೊಂಡು ಕಡಿಮೆ ತೂಕದ ಆಭರಣವನ್ನು ಇಟ್ಟಿದ್ದರು. ಜತೆಗೆ ನಕಲಿ ಆಭರಣಗಳನ್ನೂ ಲಾಕರ್‌ನಲ್ಲಿ ಇಟ್ಟಿದ್ದರು. ಕದ್ದ ಚಿನ್ನವನ್ನು ಪತಿ ರವಿಗೆ ನೀಡಿ, ಬೇರೆ ಬ್ಯಾಂಕ್ ಹಾಗೂ ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಅಡಮಾನವಿಟ್ಟು ಸಾಲ ಪಡೆದುಕೊಂಡಿದ್ದರು. ಆರೋಪಿಗಳ ವಿಚಾರಣೆ ವೇಳೆ ಈ ಸಂಗತಿ ಗೊತ್ತಾಗಿದೆ. ಈ ಎಲ್ಲ ವಿವರವನ್ನು ದೋಷಾರೋಪ ಪಟ್ಟಿಯಲ್ಲಿ ನಮೂದಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಮಾರ್ಗಸೂಚಿ ಪ್ರಕಾರ ಚಿನ್ನದ ಸಾಲಗಳ ತ್ರೈಮಾಸಿಕ ಮರುಮೌಲ್ಯಮಾಪನ ಹಾಗೂ ಲೆಕ್ಕ ಪರಿಶೋಧನೆ ವೇಳೆ ಅಡಮಾನ ಇಡಲಾದ ಚಿನ್ನದ ತೂಕ ಕಡಿಮೆ ಆಗಿರುವುದು ಹಾಗೂ ನಕಲಿ ಚಿನ್ನವನ್ನು ಇಟ್ಟಿರುವುದು ಪತ್ತೆಯಾಗಿತ್ತು. ಬ್ಯಾಂಕ್‌ನ ವ್ಯವಸ್ಥಾಪಕ ಮಹೇಶ್ ಚಿಂತಕಾಲಯ ಅವರು ಕೆಂಗೇರಿ ಠಾಣೆಯ ಪೊಲೀಸರಿಗೆ ದೂರು ನೀಡಿದ್ದರು' ಎಂದು ಮೂಲಗಳು ಹೇಳಿವೆ.

'ದೂರು ದಾಖಲಾದ ಮೇಲೆ ಆರೋಪಿಗಳ ಮನೆಯ ಮೇಲೆ ದಾಳಿ ನಡೆಸಲಾಗಿತ್ತು. ಬ್ಯಾಂಕ್ ದಾಖಲೆ, ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗಿತ್ತು' ಎಂದು ಪೊಲೀಸರು ಹೇಳಿದರು.

ಪತ್ನಿ ಕೊಲೆ: ಪತಿ ಸೆರೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಕೇಬಲ್ ವೈರ್ ಬಳಸಿ ಪತ್ನಿಯ ಕುತ್ತಿಗೆಗೆ ಬಿಗಿದು ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ಹುಣಸೆಘಟ್ಟೆಪಾಳ್ಯದಲ್ಲಿ ನಡೆದಿದೆ.

ಕನಕಪುರದ ಅರ್ಚನಾ (24) ಕೊಲೆಯಾದವರು. ಪತಿ-ಪತ್ನಿ ಜಗಳ ಮಾಡಿಕೊಂಡಿದ್ದರು. ಜಗಳ ವಿಕೋಪಕ್ಕೆ ತಿರುಗಿ ಪತ್ನಿಯ ಕೊಲೆಯಲ್ಲಿ ಅಂತ್ಯವಾಗಿದೆ.

ಆನಂದ್

ಸ್ಥಳೀಯ ತೋಟದ ಕೆಲಸಕ್ಕೆ ದಂಪತಿ ಇತ್ತೀಚೆಗೆ ಬಂದಿದ್ದರು. ಆತ್ಮಹತ್ಯೆ ಎಂದು ಬಿಂಬಿಸಿ ತಲೆಮರಿಸಿಕೊಂಡಿದ್ದ ಪತಿ ಆನಂದನನ್ನು ನೆಲಮಂಗಲ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಸಿದ್ದರಾಮಯ್ಯನವರ ದಾಖಲೆಯ ಆಡಳಿತ ಗ್ಯಾರಂಟಿ ಯೋಜನೆಗಳ ಮೂಲಕ ಕಾಂಗ್ರೆಸ್‌ನ ಬಡತನ ನಿರ್ಮೂಲನೆಯ ಆಶಯದ ಅನುಷ್ಠಾನ

2026ರ ಜನವರಿ 6ಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೇವರಾಜ ಅರಸು ಅವರ ದಾಖಲೆಯನ್ನು ಸರಿಗಟ್ಟಿ, ಕರ್ನಾಟಕವನ್ನು ಸುದೀರ್ಘವಾಗಿ ಆಳಿದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದು ಕೇವಲ ದಾಖಲೆಯಲ್ಲ, ಕಾಂಗ್ರೆಸ್ ಸರ್ಕಾರದ ಜನಪರ ಆಡಳಿತದಲ್ಲಿ ರೂಪುಗೊಂಡಿರುವ ಮಹತ್ವದ ಮೈಲಿಗಲ್ಲಿನ ಸಾಕ್ಷಿಯಾಗಿದೆ. ಈ ಸಾಧನೆ, ಕರ್ನಾಟಕದ ಐದು ಗ್ಯಾರಂಟಿ ಯೋಜನೆಗಳು ರಾಷ್ಟ್ರ ಮಟ್ಟದಲ್ಲಿ ವ್ಯವಸ್ಥಿತ ಕಲ್ಯಾಣ ಕ್ರಮಗಳ ಮೂಲಕ ರಾಜ್ಯದ ನಿರ್ದೇಶಕ ತತ್ವಗಳಾದ ಅನುಚ್ಛೇದಗಳು 38, 39 ಮತ್ತು 46ರ ಆಶಯಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿರುವುದನ್ನು ತೋರಿಸುತ್ತದೆ. ಜೊತೆಗೆ, ಕೋಟ್ಯಂತರ ಭಾರತೀಯರನ್ನು ಬಡತನದಿಂದ ಹೊರತೆಗೆಯುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಮನರೇಗಾ ಯೋಜನೆಯಂತಹ ಐತಿಹಾಸಿಕ ಸಾಧನೆಯನ್ನು ಇದು ಪ್ರತಿಬಿಂಬಿಸುತ್ತದೆ.

ಯಾವೊಬ್ಬ ವ್ಯಕ್ತಿಯೂ ಹಸಿವಿನಿಂದ ಬಳಲಬಾರದು, ಸಮಾಜದ ಅತೀ ಅಂಚಿನಲ್ಲಿರುವ ವ್ಯಕ್ತಿಗೂ ನ್ಯಾಯ ಮತ್ತು ಸಮಾನತೆ ದೊರಕಬೇಕು ಎಂಬ ಮಹಾತ್ಮ ಗಾಂಧೀಜಿಯವರ ಮೂಲ ಆಶಯವನ್ನು, ಹಾಗೆಯೇ ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರೆಯ ಚಿಂತನೆ ಮತ್ತು 'ಜನಸಂಖ್ಯೆಗೆ ಅನುಗುಣವಾಗಿ ಹಕ್ಕು' ಎಂಬ ಆಲೋಚನೆಯನ್ನು ಆಧಾರವಾಗಿಸಿಕೊಂಡು, ಸಿದ್ದರಾಮಯ್ಯ ಅವರು ಅದನ್ನು ಕಾರ್ಯರೂಪಕ್ಕೆ ತಂದಿದ್ದಾರೆ. 2013ರಲ್ಲಿ ಸಿದ್ದರಾಮಯ್ಯ ಅವರು ಜಾರಿಗೊಳಿಸಿದ ಅನ್ನಭಾಗ್ಯ, ಕ್ಷೀರಭಾಗ್ಯ ಸೇರಿದಂತೆ ಹಲವು 'ಭಾಗ್ಯ' ಯೋಜನೆಗಳು ಮತ್ತು ಇತರೆ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳು, ಅಹಿಂದ ವರ್ಗಗಳ ಪರವಾಗಿ ಅವರಿಗಿರುವ ಆಳವಾದ ಬದ್ಧತೆ ಮತ್ತು ಸಾಮಾಜಿಕ ನ್ಯಾಯದ ಮೇಲಿನ ಸ್ಪಷ್ಟ ರಾಜಕೀಯ ನಿಲುವನ್ನು ಪ್ರತಿಬಿಂಬಿಸುತ್ತವೆ. ಮನರೇಗಾ ಯೋಜನೆ ಗ್ರಾಮೀಣ ಭಾರತಕ್ಕೆ ಉದ್ಯೋಗದ ಖಾತರಿಯನ್ನು ಒದಗಿಸಿ ಕೋಟ್ಯಂತರ ಜನರನ್ನು ಬಡತನದಿಂದ ಹೊರತೆಗೆದು ಕ್ರಾಂತಿಕಾರಕ ಬದಲಾವಣೆಯನ್ನು ತಂದಿದ್ದರೆ, ಕರ್ನಾಟಕದ ಐದು ಗ್ಯಾರಂಟಿ ಯೋಜನೆಗಳು ಜನರ ಬದುಕಿನ ದಿಕ್ಕನ್ನೇ ರೂಪಾಂತರಗೊಳಿಸಿವೆ.

ಗೃಹಲಕ್ಷ್ಮಿ ಯೋಜನೆಯಡಿ 1.4 ಕೋಟಿ ಮಹಿಳೆಯರ ಕೈಗೆ ನೇರವಾಗಿ ನಗದು ನೆರವು ತಲುಪುತ್ತಿದ್ದು, ಇದು ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಿದ್ದು ಕುಟುಂಬದ ಆರ್ಥಿಕ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರವನ್ನು ಬಲಪಡಿಸಿದೆ. ಯಾರೂ ಹಸಿವಿನಿಂದ ಮಲಗಬಾರದು ಎಂಬ ಉದ್ದೇಶದಿಂದ ಜಾರಿಗೆ ತಂದ ಅನ್ನಭಾಗ್ಯ ಯೋಜನೆಯು ರಾಜ್ಯದ 1.5 ಕೋಟಿ ಬಡ ಕುಟುಂಬಗಳ ಸದಸ್ಯರಿಗೆ ಮಾಸಿಕ ತಲಾ 5 ಕೆಜಿ ಅಕ್ಕಿಯ ಜೊತೆಗೆ ಇಂದಿರಾ ಕಿಟ್ ಅನ್ನು ಒದಗಿಸುತ್ತಿದೆ. ಗೃಹಜ್ಯೋತಿ ಯೋಜನೆಯ ಮೂಲಕ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡಿ, ರಾಜ್ಯದ ಶೇ.95 ಮನೆಗಳ ಅಂಧಕಾರವನ್ನು ನಿವಾರಿಸಿ ಪ್ರತಿ ಮನೆಯಲ್ಲೂ ನೆಮ್ಮದಿಯ ಬೆಳಕನ್ನು ಮೂಡಿಸಲಾಗಿದೆ. ಶಕ್ತಿ ಯೋಜನೆಯಿಂದ ಹೆಣ್ಣು ಮಕ್ಕಳು ಮತ್ತು ಮಹಿಳೆಯರು ಉಚಿತವಾಗಿ ಸರ್ಕಾರಿ ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸುವ ಮೂಲಕ ಹೆಚ್ಚಿನ ಸ್ವಾತಂತ್ರ್ಯ ಮತ್ತು ಅವಕಾಶಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇನ್ನೊಂದೆಡೆ, ಯುವನಿಧಿ ಯೋಜನೆ ಉದ್ಯೋಗದ ಹುಡುಕಾಟದಲ್ಲಿರುವ ಸುಮಾರು ನಾಲ್ಕು ಲಕ್ಷ ಯುವಜನರಿಗೆ ಆರ್ಥಿಕ ನೆರವು ನೀಡುವ ಮೂಲಕ ಅವರನ್ನು ನಿರುದ್ಯೋಗದ ಒತ್ತಡದಿಂದ ಹೊರತಂದು, ಮಾನವ ಸಂಪನ್ಮೂಲ ನಿರ್ಮಾಣಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿದೆ.

ಈ ಸಮಗ್ರ ದೃಷ್ಟಿಕೋನವು ರಾಜ್ಯದ ಸುಮಾರು ಶೇ.80 ಜನರ ಮನೆ ಬಾಗಿಲಿಗೆ ನೇರವಾಗಿ ತಲುಪಿದೆ. ಇದರ ಪರಿಣಾಮವಾಗಿ ಬಡತನದ ಪ್ರಮಾಣದಲ್ಲಿ ಸ್ಪಷ್ಟ ಇಳಿಕೆ ಕಂಡುಬಂದಿದೆ. ಎನ್‌ಎಸ್‌ಎಸ್‌ಒ ದತ್ತಾಂಶಗಳ ಪ್ರಕಾರ, ರಾಜ್ಯದಲ್ಲಿ ಶೇ.12 ಜನರು ಬಡತನ ರೇಖೆಯಿಂದ ಹೊರಬಂದಿದ್ದಾರೆ. ವಲಸೆ ಪ್ರಮಾಣ ಶೇ.15ರಷ್ಟು ಇಳಿಕೆಯಾಗಿದೆ ಮತ್ತು ಅಪೌಷ್ಟಿಕತೆಯ ದರ ಅರ್ಧದಷ್ಟು ಕಡಿಮೆಯಾಗಿದೆ ಎಂಬುದು ಈ ನೀತಿಗಳ ಪರಿಣಾಮಕಾರಿತ್ವವನ್ನು ಸಾಬೀತುಪಡಿಸುತ್ತದೆ. ಗ್ಯಾರಂಟಿ ಯೋಜನೆಗಳ ಮೇಲಿನ ವಾರ್ಷಿಕ ₹52,000 ಕೋಟಿ ಹೂಡಿಕೆ ಶೇ.4.5ರಷ್ಟು ಜಿಎಸ್‌ಡಿಪಿ (GSDP) ಬೆಳವಣಿಗೆಗೆ ನೇರ ಕೊಡುಗೆ ನೀಡುತ್ತಿದ್ದು, ಕಲ್ಯಾಣ ಕಾರ್ಯಕ್ರಮಗಳ ಮೇಲಿನ ಅರ್ಥಪೂರ್ಣ ಹೂಡಿಕೆಯ ಮೂಲಕ ರಾಜ್ಯ ನಿರ್ದೇಶಕ ತತ್ವಗಳ ಆಶಯವಾದ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಸಾಧಿಸಬಹುದು ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಹಾಗೂ ಶ್ರೀಮತಿ ಸೋನಿಯಾ ಗಾಂಧಿ ಅವರು ರಾಷ್ಟ್ರ ಮಟ್ಟದಲ್ಲಿ ಮನರೇಗಾ ಯೋಜನೆಯ ಮೂಲಕ ಉದ್ಯೋಗದ ಖಾತರಿಯನ್ನು ಸಂವಿಧಾನಾತ್ಮಕ ಹಕ್ಕಾಗಿಸಿದರೆ, ಸಿದ್ದರಾಮಯ್ಯ ಅವರು ರಾಜ್ಯ ಮಟ್ಟದಲ್ಲಿ ಆಹಾರ, ಇಂಧನ, ಸಂಚಾರ, ಆದಾಯ ಹಾಗೂ ಅವಕಾಶಗಳನ್ನು ಹಕ್ಕುಗಳಾಗಿ ರೂಪಿಸಿದ್ದಾರೆ. ಆರಂಭದಲ್ಲಿ ಗ್ಯಾರಂಟಿ ಮಾದರಿಯನ್ನು ತೀವ್ರವಾಗಿ ಟೀಕಿಸಿದ್ದ ಬಿಜೆಪಿ ಪಕ್ಷವೇ ಇಂದು ಬೇರೆ ರಾಜ್ಯಗಳ ಚುನಾವಣಾ ಪ್ರಣಾಳಿಕೆಗಳಲ್ಲಿ ಅದೇ ಗ್ಯಾರಂಟಿ ಮಾದರಿಯನ್ನು ಅನುಸರಿಸಲು ಮುಂದಾಗಿರುವುದು, ಈ ಯೋಜನೆಗಳ ಪರಿಣಾಮಕಾರಿತ್ವಕ್ಕೆ ದೊರೆತ ಅನೈಚ್ಛಿಕ ಒಪ್ಪಿಗೆಯಾಗಿದೆ. ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು ತಾತ್ಕಾಲಿಕ ಉಚಿತ ಕಾರ್ಯಕ್ರಮಗಳಲ್ಲ, ಬದಲಿಗೆ ಸುಸ್ಥಿರ ಸಂವಿಧಾನಾತ್ಮಕ ಹಕ್ಕುಗಳೆಂಬುದನ್ನು ಇದು ಸ್ಪಷ್ಟವಾಗಿ ಸಾಬೀತುಪಡಿಸಿದೆ. ಇದು ಗ್ಯಾರಂಟಿ ಯೋಜನೆಗಳ ಯಶಸ್ಸನ್ನು ಪ್ರತಿಬಿಂಬಿಸುವ ಕನ್ನಡಿಯಂತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದೀರ್ಘಾವಧಿಯ ಆಡಳಿತದ ದಾಖಲೆಯೇ ಕಾಂಗ್ರೆಸ್‌ನ ಸಾಮಾಜಿಕ ನ್ಯಾಯದ ದೃಷ್ಟಿಕೋನಕ್ಕೆ ದೃಢವಾದ ಆಧಾರವಾಗಿದೆ. ಮಹಾತ್ಮ ಗಾಂಧೀಜಿ ನೈತಿಕ ದಿಕ್ಸೂಚಿಯನ್ನು ನೀಡಿದರೆ, ರಾಹುಲ್ ಗಾಂಧೀಜಿ ತಾತ್ವಿಕ ಚೌಕಟ್ಟನ್ನು ಒದಗಿಸಿದರು; ಅದನ್ನು ನೆಲಮಟ್ಟದಲ್ಲಿ ಫಲಪ್ರದವಾಗಿ ಜಾರಿಗೊಳಿಸುವ ಆಡಳಿತಾತ್ಮಕ ನೈಪುಣ್ಯತೆಯನ್ನು ಮುಖ್ಯಮಂತ್ರಿಗಳು ಪ್ರದರ್ಶಿಸಿದ್ದಾರೆ. ಮನರೇಗಾ ಯೋಜನೆಯು ರಾಷ್ಟ್ರ ಮಟ್ಟದಲ್ಲಿ ಘನತೆಯುಕ್ತ ಅಭಿವೃದ್ಧಿಯ ಮೂಲಕ ಬಡತನ ನಿರ್ಮೂಲನೆಯ ಭರವಸೆಯನ್ನು ನೀಡಿದ್ದರೆ, ಕರ್ನಾಟಕ ಇಂದು ಆಹಾರ ಭದ್ರತೆಯ ಮೂಲಕ ಅಪೌಷ್ಟಿಕತೆಯ ನಿವಾರಣೆ, ಸಮಾನತೆಯ ಮೂಲಕ ಸಮಗ್ರ ಪ್ರಗತಿ ಎಂಬ ಆ ವಾಗ್ದಾನಗಳನ್ನು ಸಾಕಾರಗೊಳಿಸಿದೆ. ಸಂವಿಧಾನದ ಪುಟಗಳಲ್ಲಿ ಅಷ್ಟೊತ್ತಾಗಿ ಉಳಿದಿದ್ದ ರಾಜ್ಯ ನಿರ್ದೇಶಕ ತತ್ವಗಳು ಕಾಗದದಲ್ಲೇ ಸೀಮಿತವಾಗದೆ, ಇಂದು ಜನರ ದೈನಂದಿನ ಜೀವನದಲ್ಲಿ ಅಕ್ಷರಶಃ ಪ್ರತಿಬಿಂಬಿಸುತ್ತಿವೆ.

ಎಸ್‌ಆರ್ ಮೆಹರೋಜ್ ಖಾನ್
ಉಪಾಧ್ಯಕ್ಷರು (ರಾಜ್ಯ ಸಚಿವರ ಸ್ಥಾನಮಾನ)
ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

₹3.5 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಮಹಮ್ಮದ್ ಅರ್ಬಾಜ್

ಸೈಯದ್ ತಾರಿಕ್

ಜಪ್ತಿ ಮಾಡಿಕೊಂಡಿರುವ ಡ್ರಗ್ಸ್ ಜತೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ

ಬೆಂಗಳೂರು: ಅಶೋಕನಗರ ಠಾಣೆಯ ಪೊಲೀಸರು ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ನಡೆಸಿದ್ದು, ₹3.5 ಕೋಟಿ ಮೌಲ್ಯದ 3 ಕೆ.ಜಿ 200 ಗ್ರಾಂ ಎಂಡಿಎಂಎ ಕ್ರಿಸ್ಟಲ್ (ಡ್ರಗ್ಸ್) ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇಬ್ಬರು ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ.

ಸೈಯದ್ ತಾರಿಕ್ ಇಕ್ಬಾಲ್ (33) ಹಾಗೂ ಶೇಖ್ ಮಹಮ್ಮದ್ ಅರ್ಬಾಜ್ (29) ಬಂಧಿತರು. ಬಂಧಿತರಿಂದ ಎರಡು ಮೊಬೈಲ್ ಹಾಗೂ ಡ್ರಗ್ಸ್ ಸಾಗಣೆ ಮಾಡಲು ಬಳಸುತ್ತಿದ್ದ ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಬಾತ್ಮೀದಾರರು ನೀಡಿದ ಖಚಿತ ಮಾಹಿತಿ ಆಧರಿಸಿ, ಹೊಸೂರು ರಸ್ತೆಯ ಹಿಂದೂ ರುದ್ರಭೂಮಿಯ ಬಳಿ ಹಾಗೂ ಕಾಡುಗೋಡಿಯಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಇಬ್ಬರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಹೊಸ ವರ್ಷದ ಸಂದರ್ಭದಲ್ಲಿ ಪಬ್ ಹಾಗೂ ಕ್ಲಬ್‌ಗಳಲ್ಲಿ ನಡೆಯುವ ಪಾರ್ಟಿಗಳಿಗೆ ಪೂರೈಸಲು ಎಂಡಿಎಂಎ ಕ್ರಿಸ್ಟಲ್ ಅನ್ನು ನೈಜೀರಿಯಾ ದೇಶದ ಪ್ರಜೆಯಿಂದ ಖರೀದಿಸಿ, ದಾಸ್ತಾನು ಮಾಡಿಕೊಂಡಿದ್ದರು. ನೈಜೀರಿಯಾ ಪ್ರಜೆಗೆ ಹುಡುಕಾಟ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ಡ್ರಗ್ಸ್ ಮಾರಾಟ ಮಾಡಿ ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಎಂಡಿಎಂಎ ಕ್ರಿಸ್ಟಲ್ ದಾಸ್ತಾನು ಮಾಡಿಕೊಂಡಿದ್ದೆವು ಎಂಬುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

3 ವರ್ಷಗಳ ಬಳಿಕ ಮರಳಿ ಬಂದು ಮನೆಗಳ್ಳತನ

ಪ್ರಜಾವಾಣಿ ವಾರ್ತೆ

ಶಾಹಿರ್

ಹಾಜಿರಾ ಬೇಗಂ

ಬೆಂಗಳೂರು: ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ಚೆನ್ನೈ ಪ್ರವಾಸಕ್ಕೆ ತೆರಳಿದ್ದ ಉದ್ಯಮಿ ಮನೆಯಲ್ಲಿ ₹1.37 ಕೋಟಿ ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಿದ್ದ ದಂಪತಿಯನ್ನು ಸದಾಶಿವನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ಹಾಜಿರಾ ಬೇಗಂ ಹಾಗೂ ಪತಿ ಶಾಹಿರ್ ಬಂಧಿತರು.

ಬಂಧಿತರಿಂದ 787 ಗ್ರಾಂ ಚಿನ್ನಾಭರಣ, 291 ಗ್ರಾಂ ಬೆಳ್ಳಿಯ ವಸ್ತುಗಳು, ಏಳು ವಿದೇಶಿ ವಾಚ್‌ಗಳು ಸಹಿತ ಒಟ್ಟು ₹1.37 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಸದಾಶಿವನಗರದ ನಿವಾಸಿ ಅಭಿಷೇಕ್ ಅವರ ಮನೆಯಲ್ಲಿ ಕಳ್ಳತನ ನಡೆದಿತ್ತು. ಅವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದರು.

'ಹಲವು ವರ್ಷಗಳಿಂದ ಅಭಿಷೇಕ್ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಹಾಜಿರಾ ಬೇಗಂ ಮದುವೆಯ ಕಾರಣ ನೀಡಿ ಕಳೆದ ಮೂರು ವರ್ಷಗಳ ಹಿಂದೆ ಕೆಲಸ ಬಿಟ್ಟಿದ್ದರು. ಆದರೆ, ಈ ಬಾರಿ ಹೊಸ ವರ್ಷ ಸಮೀಪಿಸುತ್ತಿದ್ದ ಸಂದರ್ಭದಲ್ಲಿ ವಾಪಸ್ ಬಂದಿದ್ದ ಹಾಜಿರಾ, ಕೆಲಸಕ್ಕೆ ಸೇರಲು ಇಂಗಿತ ವ್ಯಕ್ತಪಡಿಸಿದ್ದರು. ಮೊದಲಿನಿಂದ ಪರಿಚಯವಿದ್ದ ಕಾರಣ ಆಕೆಯನ್ನು ನಂಬಿದ್ದ ಮಾಲೀಕರು, ಮತ್ತೆ ಕೆಲಸಕ್ಕೆ ಸೇರಿಸಿಕೊಂಡಿದ್ದರು. ಡಿ.30ರಂದು ಅಭಿಷೇಕ್ ಅವರು ಕುಟುಂಬದೊಂದಿಗೆ ಹೊಸವರ್ಷದ ಸಂಭ್ರಮಾಚರಣೆಗಾಗಿ ತಮಿಳುನಾಡಿಗೆ ತೆರಳಿದ್ದರು. ಈ ಸಂದರ್ಭವನ್ನು ಬಳಸಿಕೊಂಡಿದ್ದ ಹಾಜಿರಾ, ಪತಿಯನ್ನು ಮನೆಗೆ ಕರೆಸಿಕೊಂಡು, ಬಳಿಕ ಚಿನ್ನಾಭರಣ ದೋಚಿ ಇಬ್ಬರೂ ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ಮನೆ ಕೆಲಸ ಮಾಡುತ್ತಿದ್ದ ಹಾಜಿರಾ ಅವರ ಬಳಿ ಮನೆಯ ಒಂದು ಕೀಯನ್ನು ಕೊಟ್ಟಿದ್ದ ಅಭಿಷೇಕ್ ಅವರು, ಅದನ್ನು ತಮ್ಮ ಅತ್ತೆಗೆ ನೀಡುವಂತೆ ಸೂಚಿಸಿದ್ದರು. ಆದರೆ, ಅಂದು ಸಂಜೆಯಾದರೂ ಮನೆಯ ಕೀಯನ್ನು ಅತ್ತೆಗೆ ಹಾಜಿರಾ ನೀಡಿರಲಿಲ್ಲ. ಅನುಮಾನ ಬಂದು ಹಾಜಿರಾಗೆ ಅಭಿಷೇಕ್ ಕರೆ ಮಾಡಿದ್ದಾಗ ಅವರ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಬಳಿಕ ಕಾರು ಚಾಲಕನಿಗೆ ಕರೆ ಮಾಡಿ ಮನೆಯ ಬಳಿಗೆ ಹೋಗಿ ಪರಿಶೀಲನೆ ನಡೆಸುವಂತೆ ತಿಳಿಸಿದ್ದರು. ಅವರು ಮನೆಗೆ ತೆರಳಿ ಪರಿಶೀಲಿಸಿದಾಗ, ಮನೆಯ ಕಬೋರ್ಡ್‌ಗಳು ತೆರೆದಿರುವುದು ಕಂಡುಬಂದಿತ್ತು. ಅಭಿಷೇಕ್ ಅವರು ಪ್ರವಾಸ ಮುಗಿಸಿ ಮನೆಗೆ ಬಂದು ನೋಡಿದಾಗ ಕಳ್ಳತನ ನಡೆದಿರುವುದು ಪತ್ತೆ ಆಗಿತ್ತು' ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ತ್ಯಾಗರಾಜರ ಆರಾಧನೆ: 'ಪಂಚರತ್ನ ಕೃತಿ ಗೋಷ್ಠಿ' ಗಾಯನ: ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರ ಮಠ, ಚಾಮರಾಜಪೇಟೆ, ಬೆಳಿಗ್ಗೆ 8.30

'ಪರಿಸರ ಸುಸ್ಥಿರತೆ' ಎರಡು ದಿನಗಳ ಸಮಾವೇಶ: ಉದ್ಘಾಟನೆ: ಈಶ್ವರ ಬಿ. ಖಂಡ್ರೆ, ಅತಿಥಿಗಳು: ದರ್ಶನ್ ಪುಟ್ಟಣ್ಣಯ್ಯ, ಮಹೇಶ್ ಪಿ.ಎಸ್., ಉದಯಶಂಕರ್ ಸಿಂಗ್, ಛಾಯಾಗಾಂಧಿ, ಸುಬ್ರಮಣಿ ಪಿ., ಅಧ್ಯಕ್ಷತೆ: ಮಹೇಶ್ ಚಂದ್ರ ಗುರು, ಆಯೋಜನೆ: ಫವಾರ್ಡ್, ವಿಶ್ವ ಯುವಕ ಕೇಂದ್ರ, ಡಿಜಿಪ್ಲಿಕ್, ಸ್ಥಳ: ಗೋಲ್ಡನ್ ಮೆಟ್ರೊ ಹೋಟೆಲ್, ವಿ.ವಿ. ಗಿರಿ ಕಾಲೊನಿ, ಶೇಷಾದ್ರಿಪುರ, ಬೆಳಿಗ್ಗೆ 10.30

'ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳ ವಿರುದ್ಧ ರಾಜ್ಯಮಟ್ಟದ ಮಹಿಳೆಯರ ಸಮಾವೇಶ': ಭಾಗವಹಿಸುವವರು: ರಾಮೇಶ್ವರಿ ವರ್ಮಾ, ಕೆ. ಉಮಾ, ಹೇಮಲತಾ ಮಹಿಷಿ, ಸಬಿಹಾ ಭೂಮಿಗೌಡ, ಶ್ರೀದೇವಿ ಕುಮಾರ್, ಸುಧಾ ಕಾಮತ್, ಕವಿರಾಜ, ಆಯೋಜನೆ: ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ಗ್ರಾಮೀಣ ಅಂಗಡಿ' ಗ್ರಾಮೀಣ ಕರಕುಶಲ ಉದ್ಯಮದ ಘಟಕಕ್ಕೆ ಚಾಲನೆ: ಸುಧಾರಾಣಿ, ಉಪಸ್ಥಿತಿ: ಎಂ.ಡಿ. ಮ್ಯಾಥ್ಯೂ, ರಾಜ್‌ಕುಮಾರ್ ಪೂಜಾರಿ, ಲಿಂಗರಾಜ್ ಕಬ್ಬೇರು, ಎಸ್.ಬಿ. ಹಾಲೇಶಪ್ಪ, ಕವಿತಾ ಅರುಣ್, ಸುಲೋಚನಾ ಬಿ., ಮಿಲನ್ ಆರ್ ಚಿಪ್ಪೊಣ್ಕರ್, ಅಂಜನಾ ಅಯ್ಯಂಗಾರ್ ತ್ಯಾಗಿ, ಆಯೋಜನೆ: ಗ್ರಾಮೀಣ ಅಂಗಡಿ, ಸ್ಥಳ: ನಂ. 07, 11ನೇ ಮುಖ್ಯರಸ್ತೆ, 39ನೇ ಕ್ರಾಸ್, ನಾಲ್ಕನೇ ಟಿ ಬ್ಲಾಕ್, ಶಾಲಿನಿ ಮೈದಾನದ ಎದುರು, ಜಯನಗರ, ಬೆಳಿಗ್ಗೆ 11.30

ಸುಧಾರಾಣಿ

ಸೌಮ್ಯಜಿತ್ ಆಚಾರ್ಯ ಅವರು ವಂಗ ಭಾಷೆಗೆ ಅನುವಾದಿಸಿರುವ ಹಂ.ಪ.ನಾಗರಾಜಯ್ಯ ಅವರ 'ಚಾರುವಸಂತ' ಬಿಡುಗಡೆ: ಚನ್ನಪ್ಪ ಕಟ್ಟಿ, ಅಧ್ಯಕ್ಷತೆ: ಎಲ್. ಎನ್. ಮುಕುಂದರಾಜ್, ಪುಸ್ತಕದ ಕುರಿತು: ಶ್ಯಾಮಲ್ ಭಟ್ಟಾಚಾರ್ಯ, ಆಯೋಜನೆ: ಕಮಲಾ ಹಂಪನಾ ಸಾಹಿತ್ಯ ವೇದಿಕೆ, ಸ್ಥಳ: ಬಾಪು ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 4.30

ಬಿ.ಎಸ್. ಗೋಪಾಲನ್, ವೇದವತಿಬಾಯಿ ದತ್ತಿ ಗಮಕ ವಾಚನ ಮತ್ತು ವ್ಯಾಖ್ಯಾನ: 'ಹರಿಶ್ಚಂದ್ರ ಕಾವ್ಯದ ಮೃಗಯಾ ಪ್ರಸಂಗ' ಗಮಕ ವಾಚನ: ಗಂಗಮ್ಮ ಕೇಶವಮೂರ್ತಿ, ವ್ಯಾಖ್ಯಾನ: ಛಾಯಾ ಗುರುಮೂರ್ತಿ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಬೆಳ್ಳಿ ಮಹೋತ್ಸವ, 'ಮಾಯಾ ದ್ವೀಪ' ನಾಟಕ ಪ್ರದರ್ಶನ: ಉದ್ಘಾಟನೆ: ಬಿ. ರಮೇಶ್, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಎಚ್. ಚಂದ್ರಶೇಖರ್, ಸುರೇಶ್ ಹಾನಗಲ್ಲ್, ಎನ್. ರಘುಮೂರ್ತಿ, ಜಿ.ಪಿ. ರಾಮಣ್ಣ, ಆಯೋಜನೆ: ಕಲಾ ಕುಟೀರ ಸಾಂಸ್ಕೃತಿಕ ವೇದಿಕೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30

ಮಾರ್ಗಶೀರ್ಷೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ: ಪಾಲಕ್ಕಾಡ್ ರಾಮ್‌ಪ್ರಸಾದ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

‘ಬಿಡಿಎಗೆ ಅಂಟಿದ ಕಳಂಕ ತೊಡೆಯಲಿ’

ವ್ಯಾಪಾರ, ಬ್ರೋಕರೇಜ್ ಎಂಬ ಕಪ್ಪುಚುಕ್ಕೆ ತೆಗೆದುಹಾಕಲು ಡಿಕೆಶಿ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಐವತ್ತು ವರ್ಷ ತುಂಬಿದ್ದು, ಈ ವರ್ಷದಿಂದ ಆದರೂ ಪ್ರಾಧಿಕಾರಕ್ಕೆ ಅಂಟಿರುವ ಕಳಂಕ ತೊಡೆದುಹಾಕಿ. ಬಿಡಿಎ ಎಂದರೆ ವ್ಯಾಪಾರ, ಬ್ರೋಕರೇಜ್ ಎಂಬ ಕಪ್ಪುಚುಕ್ಕೆಯನ್ನು ಅಳಿಸಿಹಾಕಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು.

ನಗರದಲ್ಲಿ ಮಂಗಳವಾರ ಆಡಳಿತ ಸುಧಾರಣೆ ಹಾಗೂ ಸಾರ್ವಜನಿಕ ಅಹವಾಲು ನಿರ್ವಹಣೆ ಕುರಿತು ಬಿಡಿಎ ನೌಕರರಿಗೆ ಆಯೋಜಿಸಿರುವ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

‘ನನ್ನದೇ ಆದ ರೀತಿಯ ಇಂಟೆಲಿಜೆನ್ಸ್ ಮೂಲಕ ನಿಮ್ಮಲ್ಲಿ ನಡೆಯುತ್ತಿರುವ ಸಂತೆ, ದಂಧೆ, ಏಜೆಂಟ್‌ಗಳ ಪಟ್ಟಿ ಪಡೆಯಲು ಆರು ತಿಂಗಳು ಬೇಕಾಯಿತು. ಪ್ರತಿ ಹಂತದಲ್ಲಿ ಎಷ್ಟು ಕೊಳಕಿದೆ, ಎಷ್ಟು ಒಳ್ಳೆಯದಿದೆ ಎಂಬುದನ್ನು ಅರಿತಿದ್ದೇನೆ. ಹೀಗಾಗಿ ಎಲ್ಲಾ ದಾಖಲೆಗಳನ್ನು ಡಿಜಿಟಲ್ ಸ್ಕ್ಯಾನ್ ಮಾಡಲು ತೀರ್ಮಾನಿಸಲಾಗಿದೆ. ಕೆಲವರಿಗೆ ಇದರಿಂದ ಸಮಾಧಾನ ಆಗದಿರಬಹುದು.

ಶೇಕಡ 10 ರಷ್ಟು ಸಿಬ್ಬಂದಿಯಿಂದ ಇಡೀ ಬಿಡಿಎಗೆ ಕೆಟ್ಟ ಹೆಸರು ಬರುತ್ತಿದೆ. ಆತ್ಮಸಾಕ್ಷಿಗೆ ಒಪ್ಪುವಂತೆಯಾದರೂ ಬಿಡಿಎ ಘನತೆಯನ್ನು ಬದಲಿಸಿಕೊಂಡು ಹೋಗಬೇಕು. ಈ ಬಗ್ಗೆ ಮಾರ್ಗದರ್ಶನ ನೀಡಲು ತರಬೇತಿ ನೀಡಲಾಗುತ್ತಿದೆ’ ಎಂದು ತಿಳಿಸಿದರು.

‘ಬಿಡಿಎ ಹಾಗೂ ಜಿಬಿಎ ಬೆಂಗಳೂರಿನ ಮುಖವಾಣಿ. ಪ್ರತಿ ಕಡತವನ್ನು ಕೊಕ್ಕೆ ಹಾಕಿ ಓಡಾಡಿಸುವ ಬದಲು ಸಕಾರಾತ್ಮಕ ಮನೋಭಾವದಲ್ಲಿ ಪರಿಹಾರ ಹುಡುಕಿ. ತಪ್ಪು ಮಾಡಿ ನನ್ನ ಕಣ್ಣಿಗೆ ಬೀಳಬೇಡಿ. ಬಿದ್ದರೆ ಬಡಿದು ಬಿಸಾಕುತ್ತೇನೆ. ಪ್ರಕರಣ ದಾಖಲಿಸಿದ ಬಳಿಕ, ಯಾರಿಂದ ಶಿಫಾರಸ್ಸು ತಂದರೂ ಬಗ್ಗುವುದಿಲ್ಲ. ಜನವರಿ 17ಕ್ಕೆ ಬಿಡಿಎ ರಚನೆಯಾಗಿ 50 ವರ್ಷ ಪೂರ್ಣಗೊಳ್ಳಲಿದೆ. ಬಿಡಿಎನಲ್ಲಿ ಪಾರದರ್ಶಕತೆ ತರಬೇಕು’ ಎಂದು ತಿಳಿಸಿದರು.

‘ನಾಗರಿಕರು ಬಂದಾಗ ಆದಷ್ಟು ಸಕಾರಾತ್ಮಕವಾಗಿ ಆಲೋಚಿಸಬೇಕು. ಎಲ್ಲದರಲ್ಲೂ ತಪ್ಪು ಕಂಡು ಹಿಡಿಯುತ್ತಾ ಹೋದರೆ, ಆಗುವುದಿಲ್ಲ. ಉದಾರ ಮನಸ್ಸಿನಿಂದ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಬೇಕು. ಅಧಿಕಾರ ಇದ್ದಾಗ ಬೇರೆಯವರಿಗೆ ಸಹಾಯ ಮಾಡಿ, ತೊಂದರೆ ಮಾಡಬೇಡಿ’ ಎಂದು ಕಿವಿಮಾತು ಹೇಳಿದರು.

‘ನಗರ ಯೋಜನೆಗೆ ಸಿವಿಲ್ ಹಾಗೂ ಆರ್ಕಿಟೆಕ್ಚರ್ ಎಂಜಿನಿಯರ್ ಹೊರತಾಗಿ ಬೇರೆ ಎಂಜಿನಿಯರ್‌ಗಳು ಬರುತ್ತಿದ್ದಾರೆ. ಹೀಗಾಗಿ ಕೆಂಪೇಗೌಡ ಪ್ರಾಧಿಕಾರದ ಜಾಗದಲ್ಲಿ ವಿಟಿಯು ಮೂಲಕ ಬೆಂಗಳೂರಿನಲ್ಲಿ ಟೌನ್ ಪ್ಲಾನಿಂಗ್ ಕಾಲೇಜು ಆರಂಭಿಸಲಾಗುವುದು. ಮುಂದೆ ಎಲ್ಲಾ ನಗರಗಳಲ್ಲಿ ಯೋಜನೆ ರೂಪಿಸಬೇಕು. ಪ್ಲಾನಿಂಗ್ ವಿಚಾರದಲ್ಲಿ ಮೈಸೂರು ನಗರ ಬೆಂಗಳೂರಿಗಿಂತ ಉತ್ತಮವಾಗಿದೆ. ಬೆಂಗಳೂರಿನಲ್ಲಿ ಜಯನಗರ, ಮಲ್ಲೇಶ್ವರ, ಚಾಮರಾಜಪೇಟೆ ಹೊರತಾಗಿ ಬೇರೆ ಪ್ರದೇಶಗಳಲ್ಲಿ ಹೇಳಿಕೊಳ್ಳುವ ಯೋಜನೆ ರೂಪಿಸಿಲ್ಲ. ಇದಕ್ಕೆ ಅಧಿಕಾರಿಗಳು ಮಾತ್ರ ಕಾರಣವಲ್ಲ. ಆಡಳಿತ ನಡೆ ಸುವ ರಾಜಕಾರಣಿಗಳು, ಬಿಡಿಎ ಮುನ್ನಡೆಸಿರುವ ಆಯುಕ್ತರು, ಟೌನ್ ಪ್ಲಾನರ್ ಸೇರಿದಂತೆ ಎಲ್ಲರ ತಪ್ಪು ಇದೆ’ ಎಂದರು.

ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಮಾತನಾಡಿ, ಪ್ರತಿ ಗುರುವಾರ ಗ್ರಾಹಕರ ಸಭೆ ನಡೆಸಿ, ಸಮಸ್ಯೆ ಬಗೆಹರಿಸಲಾಗುತ್ತಿದೆ. ಆನ್‌ಲೈನ್‌ನಲ್ಲಿ ದೂರು ಸ್ವೀಕರಿಸಿ, ಪರಿಹಾರ ನೀಡಲಾಗುತ್ತಿದೆ. ಪ್ರಾಧಿಕಾರವನ್ನು ನಾಲ್ಕು ವಲಯಗಳಾಗಿ ವಿಂಗಡಿಸಲಾಗಿದೆ. ಈಗಾಗಲೇ 8 ಕೋಟಿ ಪೇಪರ್‌ಗಳನ್ನು ಸ್ಕ್ಯಾನ್ ಮಾಡಲಾಗಿದ್ದು, 13 ಲಕ್ಷ ಪೇಪರ್‌ಗಳು ಬಾಕಿ ಇವೆ. 12 ಸಾವಿರ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗುವುದು. ಪ್ರಾಧಿಕಾರದಲ್ಲಿ ಕಾಗದರಹಿತ ವ್ಯವಸ್ಥೆ ಜಾರಿಗೆ ತರಲಾಗುವುದು ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಆಯುಕ್ತ ಪಿ.ಮಣಿವಣ್ಣನ್, ಪ್ರಾಧಿಕಾರದ ಸದಸ್ಯರಾದ ಬಿ.ಶಿವಣ್ಣ, ಪುಟ್ಟಸ್ವಾಮಿಗೌಡ, ಎ.ಸಿ. ಶ್ರೀನಿವಾಸ, ಎಸ್.ಆನಂದ್ ಪ್ರಸಾದ್, ಮಂಜುಳಾ ನಾಯ್ಡು, ಆರ್ಥಿಕ ಸದಸ್ಯ ಲೋಕೇಶ್ ಹಾಜರಿದ್ದರು.

ರಸ್ತೆ ನಿರ್ಮಾಣಕ್ಕೆ ₹50 ಸಾವಿರ ಕೋಟಿ

‘2010ರಲ್ಲಿ ಪೆರಿಫೆರಲ್ ರಿಂಗ್ ರಸ್ತೆ–1 ಮಾಡಲು ಮುಂದಾಗಿದ್ದರು. ರಾಜಕಾರಣಿಗಳು ಹಾಗೂ ಆಯುಕ್ತರು ಸರಿಯಾಗಿ ನಿರ್ಧಾರ ಮಾಡಿದ್ದರೆ ₹26 ಸಾವಿರ ಕೋಟಿಯಲ್ಲಿ ಆಗುತ್ತಿತ್ತು. ಆದರೆ, ಈಗ ಎರಡೂ ರಸ್ತೆ ನಿರ್ಮಾಣಕ್ಕೆ ₹50 ಸಾವಿರ ಕೋಟಿ ಬೇಕಾಗುತ್ತದೆ. ಭೂಸ್ವಾಧೀನಕ್ಕೆ ಹೆಚ್ಚು ವೆಚ್ಚವಾಗುತ್ತದೆ. ಹೀಗಾಗಿ ಭೂ ಸಂತ್ರಸ್ತರಿಗೆ ಪರಿಹಾರ ನೀಡಲು ಅನೇಕ ಆಯ್ಕೆಗಳನ್ನು ನೀಡಿದ್ದೇವೆ. ಈ ಯೋಜನೆ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಲಿ, ಇದಕ್ಕಿಂತ ಉತ್ತಮ ಪರಿಹಾರದ ಆಯ್ಕೆಯನ್ನು ಇಡೀ ದೇಶದಲ್ಲೇ ಯಾರೂ ನೀಡಲು ಸಾಧ್ಯವಿಲ್ಲ. ನನ್ನ ಅವಧಿಯಲ್ಲಿ ಒಂದು ಇಂಚು ಭೂಮಿಯನ್ನು ಡಿನೋಟಿಫಿಕೇಷನ್ ಮಾಡುವುದಿಲ್ಲ’ ಎಂದು ಶಿವಕುಮಾರ್ ಸ್ಪಷ್ಟಪಡಿಸಿದರು.

ಹಾಲಿನ ಪ್ಯಾಕಿಂಗ್, ಸರಬರಾಜಿನ ಮೇಲೆ ಎಐ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಲವು (ಕೆಎಂಎಫ್) ಹಾಲಿನ ಪ್ಯಾಕಿಂಗ್ ಹಾಗೂ ಸರಬರಾಜಿನ ಮೇಲೆ ನಿಗಾ ವಹಿಸಲು ಕೃತಕ ಬುದ್ಧಿಮತ್ತೆ(ಎಐ) ಆಧಾರಿತ ಕ್ಯಾಮೆರಾಗಳ ಬಳಕೆಗೆ ಮುಂದಾಗಿದೆ.

ಪ್ಯಾಕಿಂಗ್ ಘಟಕದಲ್ಲಿ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಸಂಗ್ರಹಿಸುವ ಕ್ರೇಟ್‌ಗಳ ನಿರ್ವಹಣೆಯಲ್ಲಿ ಪಾರದರ್ಶಕತೆ ಹಾಗೂ ಕಾರ್ಯಕ್ಷಮತೆ ವೃದ್ಧಿಸಿ ಸುಧಾರಣೆ ತರುವ ಭಾಗವಾಗಿ ಮಹಾಮಂಡಲವು ಎಐ ತಂತ್ರಜ್ಞಾನಕ್ಕೆ ಮೊರೆ ಹೋಗಿದೆ.

‘ಮಹಾಮಂಡಲವು ಘಟಕಗಳಲ್ಲಿ ಎಐ ಆಧಾರಿತ ಕ್ಯಾಮೆರಾಗಳ ಅಳವಡಿಕೆಗೆ ಟೆಂಡರ್ ಆಹ್ವಾನಿಸಲಾಗಿದೆ.

ಮೊದಲ ಹಂತದಲ್ಲಿ ಬಮುಲ್ ವ್ಯಾಪ್ತಿಯ 3 ಘಟಕಗಳಲ್ಲಿ ಈ ತಂತ್ರಜ್ಞಾನ ಅಳವಡಿಸಲಾಗುತ್ತದೆ. ಬೆಂಗಳೂರಿನ ಮುಖ್ಯ ಘಟಕದಲ್ಲಿ ಎಂಟು, ಕನಕಪುರದ ರಾಷ್ಟ್ರೀಯ ಹಾಲು ಪ್ಯಾಕಿಂಗ್ ಕೇಂದ್ರ (ಎನ್‌ಎಂಪಿಸಿ) ಹಾಗೂ ಹೊಸಕೋಟೆಯ ಕೇಂದ್ರದಲ್ಲಿ ತಲಾ ಎರಡು ಎಐ ಕ್ಯಾಮೆರಾ ಅಳವಡಿಸಲಾಗುತ್ತದೆ. ಈ ವ್ಯವಸ್ಥೆಯು ಕ್ರೇಟ್‌ಗಳು ಮತ್ತು ಪ್ಯಾಕೆಟ್‌ಗಳ ನಿರಂತರ ಟ್ರ್ಯಾಕಿಂಗ್ ಮತ್ತು ಮೇಲ್ವಿಚಾರಣೆಗಾಗಿ ಲೈವ್ ವಿಡಿಯೊ ಸ್ಟ್ರೀಮ್-ಆಧಾರಿತ ವಿಶ್ಲೇಷಣೆಯನ್ನು ಒಳಗೊಂಡಿರಲಿದೆ. ಉತ್ಪನ್ನಗಳನ್ನು ಸಾಗಿಸುವ ಯಂತ್ರಗಳ ನಿಷ್ಕ್ರಿಯತೆ, ಮಾನವ ಹಸ್ತಕ್ಷೇಪ ಸನ್ನಿವೇಶಗಳನ್ನು ಗುರುತಿಸಿ ನಿಖರ ಮಾಹಿತಿ ನೀಡಲಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

(“ವಿ ಟಿ ಯು ಅಧಿನಿಯಮ 1994” ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)

“ಜ್ಞಾನ ಸಂಗಮ”, ಬೆಳಗಾವಿ – 590 018, ಕರ್ನಾಟಕ ರಾಜ್ಯ ಫೋನ್: (0831)2405468 ಫ್ಯಾಕ್ಸ್: (0831)2405467

ಉಲ್ಲೇಖ : ವಿತಾವಿ/ಆ.ಸ./2025–26/788 ದಿನಾಂಕ: 05–01–2026

ಅಧಿಸೂಚನೆ

ವಿಷಯ :ವಿ.ತಾ.ವಿ.ಯ ಇಪ್ಪತ್ತೈದನೇಯ ವಾರ್ಷಿಕ ಘಟಿಕೋತ್ಸವ (ಭಾಗ–II) ಸಮಾರಂಭ – ಸ್ನಾತಕೋತ್ತರ (PG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ

ಮೇಲ್ಕಾಣಿಸಿದ ವಿಷಯದನ್ವಯ, ಈ ಮೂಲಕ ತಿಳಿಸುವುದೇನೆಂದರೆ, ಸ್ನಾತಕೋತ್ತರ (PG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ ಮಾಡಲು ವಿ.ತಾ.ವಿ.ಯ ಇಪ್ಪತ್ತೈದನೇಯ ಘಟಿಕೋತ್ಸವ (ಭಾಗ–II) ಸಮಾರಂಭವು, ಸೋಮವಾರ, ದಿನಾಂಕ 02 ಫೆಬ್ರುವರಿ, 2026ರಂದು, ಪೂರ್ವಾಹ್ನ 11–30 ಗಂಟೆಗೆ ವಿ.ತಾವಿ.ಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಪ್ರೇಕ್ಷಾಗೃಹ, “ಜ್ಞಾನ ಸಂಗಮ”, ಬೆಳಗಾವಿಯಲ್ಲಿ ಏರ್ಪಡಿಸಲಾಗಿದೆ. ಮೇಲೆ ಉಲ್ಲೇಖಿತ ಪದವಿಗಳಿಗೆ ಅರ್ಹ ಅಭ್ಯರ್ಥಿಗಳನ್ನು ಈ ಮೂಲಕ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿದೆ.

ಈ ಘಟಿಕೋತ್ಸವ ಸಮಾರಂಭದಲ್ಲಿ 2024–25ನೇ ಸಾಲಿನ ಸ್ನಾತಕೋತ್ತರ (PG) ವಿಭಾಗದಲ್ಲಿ ಸುವರ್ಣ ಪದಕ ವಿಜೇತರಿಗೆ ಹಾಗೂ ರ್‍ಯಾಂಕ್ ವಿಜೇತರಿಗೆ ಮತ್ತು ಪಿಹೆಚ್.ಡಿ. ಪದವಿಗೆ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಗೆ ಮಾತ್ರ ಪದವಿ ಪ್ರದಾನ ಮಾಡಲಾಗುವುದು.

:ಅಭ್ಯರ್ಥಿಗಳು ಈ ಕೆಳಗಿನವುಗಳನ್ನು ಗಮನಿಸಬೇಕು:

* ವಿಶ್ವವಿದ್ಯಾಲಯದ ವೆಬ್ ಸೈಟಿನಲ್ಲಿ ತಿಳಿಸಿರುವಂತೆ ಶುಭ್ರವಾದ ಬಿಳಿಬಟ್ಟೆಗಳನ್ನು ಧರಿಸಿಕೊಂಡು ಪ್ರೇಕ್ಷಾಗೃಹದಲ್ಲಿ ಹಾಜರಿರಬೇಕು.
* ಘಟಿಕೋತ್ಸವ ಸಮಾರಂಭವು ಪ್ರಾರಂಭವಾಗುವುದಕ್ಕಿಂತ ಅರ್ಧಘಂಟೆ ಮುಂಚಿತವಾಗಿ ಪ್ರೇಕ್ಷಾಗೃಹದಲ್ಲಿ ಹಾಜರಿದ್ದು ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಬೇಕು.
* ಶೀತ, ಕೆಮ್ಮು, ಜ್ವರ ಮುಂತಾದ ಲಕ್ಷಣಗಳು ಕಂಡುಬಂದಲ್ಲಿ ಈ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳದಿರಲು ಸಲಹೆ ನೀಡಲಾಗಿದೆ.
* ಸನ್ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಮತ್ತು ಇತರ ಗಣ್ಯರು ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆ ಹಾಗೂ ಆಸೀನರಾಗುವವರೆಗೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಬೇಕು.
* ಘಟಿಕೋತ್ಸವ ಸಮಾರಂಭವು ಪೂರ್ತಿ ಮುಗಿಯುವವರೆಗೆ ಶಾಂತತೆಯನ್ನು ಮತ್ತು ಶಿಸ್ತನ್ನು ಕಾಪಾಡಿಕೊಳ್ಳಬೇಕು.
* ಸಭಾಂಗಣದಲ್ಲಿ ಮೊಬೈಲ್‌ಫೋನ್ ಚಾಲನೆಯಲ್ಲಿಡಬಾರದು.
* ಘಟಿಕೋತ್ಸವ ಮುಗಿದಮೇಲೆ ಮೆರವಣಿಗೆಯು ಸಭಾಂಗಣವನ್ನು ಬಿಟ್ಟು ತೆರಳುವವರೆಗೆ ಎಲ್ಲರೂ ತಮ್ಮ ಸ್ಥಳಗಳಲ್ಲಿಯೇ ದಯವಿಟ್ಟು ಎದ್ದು ನಿಂತಿರಬೇಕು.
* ಕುಲಸಚಿವರು (ಪರಿಕ್ಷಾಂಗ) ಇವರು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವ ಸಂಬಂಧವಾಗಿ ನೀಡುವ ನಿರ್ದೇಶನವನ್ನು ಪಾಲಿಸುವುದು.

ಪದವಿ ಪ್ರಮಾಣ ಪತ್ರಗಳನ್ನು ವೈಯಕ್ತಿಕವಾಗಿ ಪಡೆಯಬಯಸುವ ಇತರ ಅಭ್ಯರ್ಥಿಗಳು ಮಾರನೇಯ ದಿನ, ಅಂದರೆ ದಿ: 03–02–2026 ರಂದು ಕಛೇರಿ ಸಮಯದಲ್ಲಿ, ಕಾಲೇಜಿನಿಂದ ಕೊಡಲ್ಪಟ್ಟ ಗುರುತಿನ ಚೀಟಿಯನ್ನು ತೋರಿಸಿ ವಿ.ತಾ.ವಿ.ಯ ಪರೀಕ್ಷಾ ವಿಭಾಗದಿಂದ ಪಡೆದುಕೊಳ್ಳಬಹುದು. ಇನ್ನುಳಿದ ಅಭ್ಯರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ನಂತರ ಆಯಾ ಕಾಲೇಜುಗಳಿಗೆ ಕಳುಹಿಸಿಕೊಡಲಾಗುವುದು.

ಆಜ್ಞೆಯ ಮೇರೆಗೆ
(ಡಾ. ಪ್ರಸಾದ ಬಿ. ರಾಂಪುರೆ)
ಕುಲಸಚಿವರು

ನಿಯಮ ಮರುಪರಿಶೀಲನೆಗೆ ಸೂಚನೆ

ವಿಮಾನ ನಿಲ್ದಾಣ ಪಾರ್ಕಿಂಗ್ ನಿಯಮ • ಅಧಿಕಾರಿಗಳೊಂದಿಗೆ ಸಂಸದ ಸಭೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ವಿಮಾನ ನಿಲ್ದಾಣದಲ್ಲಿ ಟ್ಯಾಕ್ಸಿ ನಿಲುಗಡೆ ಸಂಬಂಧ ಜಾರಿಗೊಳಿಸಿರುವ ಹೊಸ ನಿಯಮವನ್ನು ಮತ್ತೊಮ್ಮೆ ಪರಿಶೀಲಿಸಬೇಕು ಎಂದು ಸಂಸದ ಡಾ.ಕೆ. ಸುಧಾಕರ್ ಅಧಿಕಾರಿಗಳಿಗೆ ಸೂಚಿಸಿದರು.

ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜಾರಿಗೊಂಡಿರುವ ಹೊಸ ಪಾರ್ಕಿಂಗ್ ನಿಯಮದಿಂದ ಖಾಸಗಿ ಟ್ಯಾಕ್ಸಿ ಚಾಲಕರು ಎದುರಿಸುತ್ತಿರುವ ಸಮಸ್ಯೆ, ಹಳೆಯ ವ್ಯವಸ್ಥೆಗೆ ಮರು ಜಾರಿ ಸಾಧ್ಯತೆ ಹಾಗೂ ಇನ್ನಿತರ ಪರ್ಯಾಯ ಕ್ರಮಗಳ ಬಗ್ಗೆ ಅವರು ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಮಂಗಳವಾರ ವಿಮಾನ ನಿಲ್ದಾಣದಲ್ಲಿ ಸಭೆ ನಡೆಸಿದರು.

ಖಾಸಗಿ ಟ್ಯಾಕ್ಸಿ ಚಾಲಕರ ಸಂಘದ ಮನವಿಯ ಮೇರೆಗೆ ಅವರು ಈ ಸಭೆ ನಡೆಸಿದರು. ಹೊಸ ವ್ಯವಸ್ಥೆ ಅನ್ವಯ ಖಾಸಗಿ ಟ್ಯಾಕ್ಸಿಗಳಿಗೆ ಸುಮಾರು 500 ಮೀಟರ್ ದೂರದಲ್ಲಿ ನಿಲುಗಡೆ ನಿಗದಿಪಡಿಸಿರುವುದರಿಂದ ಪ್ರಯಾಣಿಕರಿಗೆ ಸಮಸ್ಯೆ ಆಗುತ್ತಿದೆ ಎಂಬ ಅಂಶವನ್ನು ಅವರು ಪ್ರಾಧಿಕಾರದ ಗಮನಕ್ಕೆ ತಂದರು.

ಸಭೆಯಲ್ಲಿ ಸಂಸದ ಡಾ.ಕೆ.ಸುಧಾಕರ್, ಡಿಸಿಪಿ ಜಿ.ಕೆ. ಮಿಥುನ್ ಕುಮಾರ್, ಪೂರ್ವ ಜಂಟಿ ಪೊಲೀಸ್ ಆಯುಕ್ತ ಬಿ.ರಮೇಶ್ ವಿವಿಧ ಟ್ಯಾಕ್ಸಿ ಸಂಘಟನೆಯ ಮುಖಂಡರು ಭಾಗಿಯಾಗಿ ಚರ್ಚಿಸಿದರು

ವಿಮಾನದಿಂದ ಇಳಿಯುವ ಪ್ರಯಾಣಿಕರು, ಹಿರಿಯ ನಾಗರಿಕರು ಮತ್ತು ಲಗೇಜ್ ಹೊಂದಿರುವವರು ದೂರ ನಡೆದು ಟ್ಯಾಕ್ಸಿ ಹತ್ತಬೇಕಿದೆ. ಹೀಗಾಗಿ ವಿಮಾನ ನಿಲ್ದಾಣದಲ್ಲಿ ಜಾರಿಗೆ ತಂದಿರುವ ಹೊಸ ನಿಯಮವನ್ನು ಮತ್ತೊಮ್ಮೆ ಪರಿಶೀಲನೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳ 18ರಿಂದ 20 ಸಾವಿರ ಯುವಕರು ಖಾಸಗಿ ಟ್ಯಾಕ್ಸಿ ಮೇಲೆ ಅವಲಂಬಿಸಿದ್ದಾರೆ. ಇದನ್ನೇ ನಂಬಿಕೊಂಡು ಒಂದು ಲಕ್ಷಕ್ಕೂ ಹೆಚ್ಚು ಕುಟುಂಬಗಳು ಜೀವನ ನಿರ್ವಹಿಸುತ್ತಿವೆ. ಕಳೆದ 15–20 ವರ್ಷಗಳಿಂದ ಸ್ಥಳೀಯ ಖಾಸಗಿ ಟ್ಯಾಕ್ಸಿ ಚಾಲಕರು ವಿಮಾನ ನಿಲ್ದಾಣದ ಪ್ರಯಾಣಿಕರಿಗೆ ಸೇವೆ ನೀಡುತ್ತಿದ್ದು ಅವರನ್ನು ಏಕಾಏಕಿ ದೂರವಿಡುವುದು ಸಮಂಜಸವಲ್ಲ ಎಂದರು.

ಖಾಸಗಿ ಟ್ಯಾಕ್ಸಿ ಚಾಲಕರ ಸಮಸ್ಯೆಯನ್ನು ಪ್ರಾಧಿಕಾರದ ಗಮನಕ್ಕೆ ತಂದಿದ್ದೇನೆ. ಬಿಐಎಎಲ್ ಪ್ರಾಧಿಕಾರವೂ ಶೀಘ್ರದಲ್ಲಿ ತೀರ್ಮಾನ ಕೈಗೊಳ್ಳಬೇಕು. ಈ ಸಂಬಂಧ ರಾಜ್ಯ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರೊಂದಿಗೆ ಚರ್ಚೆ ನಡೆಸಲಾಗುವುದು. ಅಗತ್ಯವಿದ್ದರೆ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಅವರಿಗೂ ವಿಷಯ ತಿಳಿಸಲಾಗುವುದು ಎಂದರು.

ಜಿಲ್ಲಾಧಿಕಾರಿ ಎ.ಬಿ.ಬಸವರಾಜ, ಡಿಸಿಪಿ ಜಿ.ಕೆ. ಮಿಥುನ್ ಕುಮಾರ್, ಪೂರ್ವ ಜಂಟಿ ಪೊಲೀಸ್ ಆಯುಕ್ತ ರಮೇಶ್ ಬಿ., ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳು ಉಪಸ್ಥಿತರಿದ್ದರು.

ಸ್ಥಳೀಯರಿಗೆ ಅವಕಾಶ ನೀಡಿ

ಪಾರ್ಕಿಂಗ್ ದಟ್ಟಣೆ ನಿಯಂತ್ರಣದ ನೆಪದಲ್ಲಿ ಖಾಸಗಿ ಟ್ಯಾಕ್ಸಿಗಳಿಗೆ ನಿರ್ಬಂಧ ವಿಧಿಸುವ ಬದಲು ಕನಿಷ್ಠ ಬಳಕೆದಾರ ಶುಲ್ಕ ವಿಧಿಸಿ ನಿಯಂತ್ರಿತವಾಗಿ ಪಾರ್ಕಿಂಗ್ ಅವಕಾಶ ಕಲ್ಪಿಸುವ ಬಗ್ಗೆ ಚಿಂತನೆ ನಡೆಸಬೇಕು. ಅಗ್ರಿಗೇಟರ್‌ಗಳೊಂದಿಗೆ ಸ್ಥಳೀಯ ಚಾಲಕರಿಗೂ ಸಮಾನ ಅವಕಾಶ ಇರಬೇಕು. ಯಾವ ಸೇವೆ ಬೇಕೆಂಬುದನ್ನು ಪ್ರಯಾಣಿಕರೇ ನಿರ್ಧರಿಸಬೇಕು

ಡಾ.ಕೆ.ಸುಧಾಕರ್, ಸಂಸದ

ಕ್ಯಾಬ್ ಕೊರತೆ ಪ್ರಯಾಣಿಕರ ಬೇಸರ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಎರಡೂ ಟರ್ಮಿನಲ್‌ಗಳಲ್ಲಿ ಹೊಸ ಪಿಕ್‌ಅಪ್ ನಿಯಮ ಜಾರಿಗೊಳಿಸಲಾಗಿದ್ದರೂ ಕ್ಯಾಬ್‌ಗಳ ಕೊರತೆಯಿಂದ ಪ್ರಯಾಣಿಕರು ಬೇಸರ ಗೊಂಡಿದ್ದಾರೆ.

ಜನವರಿ 5ರಂದು ಹೆಚ್ಚಿನ ಜನರು ಬೆಂಗಳೂರಿಗೆ ವಾಪಸಾಗುತ್ತಿದ್ದ ಕಾರಣ, ಸೋಮವಾರ ಸಂಜೆ ವಿಮಾನ ನಿಲ್ದಾಣದಲ್ಲಿ ಕ್ಯಾಬ್‌ಗಳ ತೀವ್ರ ಕೊರತೆ ಕಂಡು ಬಂತು.

ಕೆಐಎಎಲ್ ವೇಗವಾಗಿ ಬೆಳೆಯುತ್ತಿರುವ ದೇಶದ ಮೂರನೇ ಅತಿದೊಡ್ಡ ವಿಮಾನ ನಿಲ್ದಾಣವಾಗಿದ್ದು, ನಿತ್ಯ ಅಂದಾಜು 1.30 ಲಕ್ಷ ಪ್ರಯಾಣಿಕರಿಗೆ ಸೇವೆ ಒದಗಿಸುತ್ತಿದೆ. ವಿಮಾನ ನಿಲ್ದಾಣ ರಸ್ತೆ ಮಾರ್ಗದಲ್ಲಿ ಸುಮಾರು ಒಂದು ಲಕ್ಷ ವಾಹನಗಳು ನಿತ್ಯ ಸಂಚರಿಸುತ್ತವೆ. ದೆಹಲಿಯಿಂದ ವಾಪಸಾದ ಶಶಿಕಾಂತ್ ಅವರು ಕ್ಯಾಬ್‌ಗಾಗಿ 40 ರಿಂದ 50 ನಿಮಿಷ ಕಾಯಬೇಕಾಯಿತು. ವಿಮಾನ ನಿಲ್ದಾಣದ ಮೂಲಗಳ ಪ್ರಕಾರ, ಸೋಮವಾರ ಕ್ಯಾಬ್‌ಗಳಿಗೆ ಸರಾಸರಿ ಕಾಯುವ ಸಮಯ 20 ನಿಮಿಷಗಳಷ್ಟಿತ್ತು. ಹಾಗಾಗಿ ಹೊಸ ನಿಯಮಗಳ ಬಗ್ಗೆ ಪ್ರಯಾಣಿಕರು ಅಸಮಾಧಾನಗೊಂಡಿದ್ದಾರೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ನಿರ್ದೇಶನಾಲಯ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

2026-27ನೇ ಶೈಕ್ಷಣಿಕ ಸಾಲಿನ ಅಲ್ಪಸಂಖ್ಯಾತರ ನಿರ್ದೇಶನಾಲಯದಡಿಯಲ್ಲಿನ ವಸತಿ ಶಾಲೆಗಳ 6ನೇ ತರಗತಿಗೆ ಪ್ರವೇಶ ಪ್ರಕ್ರಿಯೆ ಆರಂಭ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಮಾನ್ಯ ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರಾದ ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್ ಅವರು ಮಕ್ಕಳೊಂದಿಗೆ ಮಾತನಾಡುತ್ತಿರುವುದು.

ನಮ್ಮ ವಸತಿ ಶಾಲೆ... ನಮ್ಮ ಭವಿಷ್ಯದ ಭದ್ರನೆಲೆ...

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು

- ಅಭ್ಯರ್ಥಿಯು 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು / ಉತ್ತೀರ್ಣರಾಗಿಬೇಕು. ದಾಖಲೆಗಳ ಪರಿಶೀಲನೆಯ ಸಂದರ್ಭದಲ್ಲಿ ಅಂಕ ಪಟ್ಟಿಯನ್ನು ಹೊಂದಿರಬೇಕು.
- ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು
- ವಾರ್ಷಿಕ ಆದಾಯ 2.5 ಲಕ್ಷವಿರಬೇಕು

ಲಭ್ಯವಿರುವ ತಾತ್ಕಾಲಿಕ ಸೀಟುಗಳ ವಿವರ

ಕ್ರ. ಸಂ.	ವಸತಿ ಶಾಲೆಯ ಹೆಸರು ಮತ್ತು ಪಠ್ಯಕ್ರಮ ವಿಧ	ಶಾಲೆಗಳ ಸಂಖ್ಯೆ	6ನೇ ತರಗತಿಗೆ ಮಂಜೂರಾದ ಸ್ಥಾನಗಳ ಸಂಖ್ಯೆ
1.	ಮೊರಾರ್ಜಿ ದೇಸಾಯಿ ವಸತಿ ಶಾಲೆ (ರಾಜ್ಯ ಪಠ್ಯಕ್ರಮ)	140	10460
2.	ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ (ಸಿ.ಬಿ.ಎಸ್.ಇ ಪಠ್ಯಕ್ರಮ)	29	1830
3.	ಸರ್ಕಾರಿ ಮುಸ್ಲಿಂ ವಸತಿ ಶಾಲೆ (ರಾಜ್ಯ ಪಠ್ಯಕ್ರಮ)	04	260
	ಒಟ್ಟು	173	12550

ವಸತಿ ಶಾಲಾ ವೈಶಿಷ್ಟ್ಯತೆಗಳು

1. ಅಲ್ಪಸಂಖ್ಯಾತರ ಸಮುದಾಯಗಳಾದ ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ,, ಜೈನ್, ಸಿಖ್ ಮತ್ತು ಪಾರ್ಸಿ ಸಮುದಾಯದ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಶೇ. 75% ಮೀಸಲಾತಿ
2. ಪ.ಜಾತಿ, ಪ.ಪಂಗಡ ಮತ್ತು ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶೇ. 25% ಮೀಸಲಾತಿ
3. ಬಾಲಕಿಯರಿಗೆ ಶೇ. 50% ಮೀಸಲಾತಿ
4. ವಿದ್ಯಾರ್ಥಿಗಳಿಗೆ ಉಚಿತ ಮತ್ತು ಗುಣಾತ್ಮಕ ವಸತಿಯುತ ಶಿಕ್ಷಣ.
5. ಜಿಲ್ಲೆಗೊಂದರಂತೆ CBSE ಪಠ್ಯಕ್ರಮದ ಉತ್ಕೃಷ್ಟ ಶಾಲೆಗಳು.
6. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಸರಾಂತ ಸಂಸ್ಥೆಗಳಿಂದ ಶಾಲಾ ಹಂತದಲ್ಲಿಯೇ ತಯಾರಿ.
7. ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ಲೇಖನ ಸಾಮಗ್ರಿ, ಸಮವಸ್ತ್ರ, ಶೂ ಮತ್ತು ಸಾಕ್ಸ್ ಮತ್ತು ಗುಣಾತ್ಮಕ ವಸತಿ ಸೌಲಭ್ಯಗಳು.
8. ಸ್ಪೋಕನ್ ಇಂಗ್ಲೀಷ್ ತರಬೇತಿ, ನಾಯಕತ್ವ ತರಬೇತಿ, ಜೆಇಇ / ಎನ್‌ಇಇಟಿ, ಸಿಎಲ್‌ಎಟಿ ತರಬೇತಿಗಳು ವಿದ್ಯಾರ್ಥಿನಿಯರಿಗೆ ಕರಾಟೆ ತರಬೇತಿ, ಜೀವನ ಕೌಶಲ್ಯ ತರಬೇತಿಗಳು - ಇತ್ಯಾದಿಗಳನ್ನು ನೀಡಲಾಗುತ್ತದೆ.

ವಸತಿ ಶಾಲೆಗಳಿಗೆ ಪ್ರವೇಶ ಪ್ರಕ್ರಿಯೆಯ ತಾತ್ಕಾಲಿಕ ವೇಳಾಪಟ್ಟಿ

1.	ವಿದ್ಯಾರ್ಥಿಗಳಿಂದ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ	07.01.2026
2.	ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ	15.02.2026
3.	ಲಿಖಿತ ಪರೀಕ್ಷೆ ನಡೆಸುವ ಸಂಭವನೀಯ ದಿನಾಂಕ (ಭಾನುವಾರ) (ತಾತ್ಕಾಲಿಕ)	29.03.2026
4.	ಫಲಿತಾಂಶ ಪ್ರಕಟಣೆ	20.04.2026

ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಪೋರ್ಟಲ್ ವಿಳಾಸ https://sevasindhuservices.karnataka.gov.in
ಅಧಿಸೂಚನೆ, ಶಾಲೆಗಳ ವಿವರ ಮತ್ತು ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್ ಸೈಟ್ https://dom.karnataka.gov.in ಗೆ ಭೇಟಿ ನೀಡಿ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಪಿಎಫ್‌ಆರ್: ‘ಸುಪ್ರೀಂ’ ತರಾಟೆ

ರಾಜ್ಯ ಸರ್ಕಾರದ ತೀರ್ಮಾನಕ್ಕೆ ನ್ಯಾಯಾಲಯ ತೀವ್ರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಟೆಕ್-ಸಿಟಿಯಲ್ಲಿ ಸಮಸ್ಯೆ ಮತ್ತಷ್ಟು ಉಲ್ಬಣ
- ನಾಗರಿಕರ ಹಿತದೃಷ್ಟಿ ಗಮನಿಸಿ ತೀರ್ಮಾನ ತೆಗೆದುಕೊಳ್ಳಲು ಸಲಹೆ

ನವದೆಹಲಿ: ಬೆಂಗಳೂರಿನಲ್ಲಿ ಹೆಚ್ಚುವರಿ ಶುಲ್ಕ ಪಾವತಿಸುವ ಮೂಲಕ 10ರ ಬದಲು 16 ಅಂತಸ್ತು ನಿರ್ಮಿಸಿಕೊಳ್ಳುವ ಪ್ರೀಮಿಯಂ ಎಫ್‌ಎಆರ್‌ಗೆ (ಫ್ಲೋರ್ ಏರಿಯಾ ರೇಷಿಯೊ) ಅನುಮತಿಸುವ ಕರ್ನಾಟಕ ಸರ್ಕಾರದ ತೀರ್ಮಾನಕ್ಕೆ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಲ್ಯ ಬಾಗ್ಚಿ ಅವರ ಪೀಠವು, ‘ರಾಜ್ಯ ಸರ್ಕಾರದ ನಿರ್ಧಾರವು ಬೆಂಗಳೂರಿನ ಅನೇಕ ಕಿರಿದಾದ 9 ಮೀಟರ್ ಅಗಲದ ರಸ್ತೆಗಳಲ್ಲಿ ಬಹುಮಹಡಿ ಕಟ್ಟಡಗಳ ನಿರ್ಮಾಣಕ್ಕೆ ಕಾರಣವಾಗಬಹುದು. ಇದು ಬೆಳೆಯುತ್ತಿರುವ ಟೆಕ್-ಸಿಟಿಯಲ್ಲಿ ಸಮಸ್ಯೆ ಮತ್ತಷ್ಟು ಹೆಚ್ಚಿಸಲಿದೆ’ ಎಂದು ಕಳವಳ ವ್ಯಕ್ತಪಡಿಸಿದೆ.

‘ಪಿಎಫ್‌ಎಆರ್‌ಗೆ ಅವಕಾಶ ನೀಡುವುದರಿಂದ ಇಕ್ಕಟ್ಟಾದ ರಸ್ತೆಗಳಲ್ಲಿ ಇನ್ನಷ್ಟು ಬಹುಮಹಡಿ ಕಟ್ಟಡಗಳು ನಿರ್ಮಾಣವಾಗಲಿವೆ. ಬಿಲ್ಡರ್‌ಗಳು ಫ್ಲ್ಯಾಟ್‌ಗಳನ್ನು ಜನರಿಗೆ ಮಾರಿ ಕೈ ತೊಳೆದುಕೊಳ್ಳುತ್ತಾರೆ. ಹೊಸದಾಗಿ ಅಭಿವೃದ್ಧಿ ಹೊಂದಿರುವ ಪ್ರದೇಶಗಳಲ್ಲಿ ಪಿಎಫ್‌ಎಆರ್‌ಗೆ ಅನುಮತಿ ನೀಡುವುದನ್ನು ಒಪ್ಪಬಹುದು. ಬೆಂಗಳೂರಿನ ಕೇಂದ್ರ ಭಾಗದಲ್ಲಿರುವ ಹಳೆಯ ವಸತಿ ಪ್ರದೇಶದಲ್ಲಿ ಮತ್ತಷ್ಟು ಬಹುಮಹಡಿ ಕಟ್ಟಡಗಳ ನಿರ್ಮಾಣವಾದರೆ ಸಮಸ್ಯೆ ಇನ್ನಷ್ಟು ಉಲ್ಬಣವಾಗಲಿದೆ’ ಎಂದು ಪೀಠ ಎಚ್ಚರಿಸಿತು.

‘ನಾಗರಿಕರ ಹಿತದೃಷ್ಟಿ ಗಮನಿಸಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕೇ ಹೊರತು ಬಿಲ್ಡರ್‌ಗಳ ಅನುಕೂಲಕ್ಕಾಗಿ ಅಲ್ಲ. ತಮ್ಮ ಹಕ್ಕುಗಳ ಸಂರಕ್ಷಣೆಗಾಗಿ ನಾಗರಿಕರು ಪ್ರತಿ ಸಲ ಬೀದಿಗಿಳಿದು ಪ್ರತಿಭಟಿಸಬೇಕೇ’ ಎಂದು ಪೀಠ ಪ್ರಶ್ನಿಸಿತು.

ಭೂ ಮಾಲೀಕರು, ಅಭಿವೃದ್ಧಿದಾರರು ಮತ್ತು ನಿರ್ಮಾಣದಾರರು ಪಿಎಫ್‌ಎಆರ್ ಅನ್ನು ಬಳಸಿಕೊಳ್ಳಲು ನಿವೇಶನದ ಮಾರ್ಗಸೂಚಿಯ ಶೇ 28ರಷ್ಟು ಶುಲ್ಕ ಪಾವತಿಸಬೇಕು.

‘ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ -2015’ರ ಸೆಕ್ಷನ್ 13-ಇಗೆ ರಾಜ್ಯ ಸರ್ಕಾರ ತಿದ್ದುಪಡಿ ತಂದಿತ್ತು. ಪ್ರೀಮಿಯಂ ಎಫ್‌ಎಆರ್‌ಗಾಗಿ ಪರಿಷ್ಕೃತ ಮಾಸ್ಟರ್ ಪ್ಲಾನ್-2015ರ ವಲಯ ನಿಯಮಗಳಿಗೆ 11 ಅನ್ನು (ಪಿಎಫ್‌ಎಆರ್ ಅನುಮತಿಸಲು ಶುಲ್ಕಗಳ ವಿವರ) ಸೇರ್ಪಡೆ ಮಾಡಲಾಗಿತ್ತು. 2025ರ ಜನವರಿ 4ರಂದು ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಏಪ್ರಿಲ್ 4ರಂದು ಅಂತಿಮ ಅಧಿಸೂಚನೆಯನ್ನು ನಗರಾಭಿವೃದ್ಧಿ ಇಲಾಖೆ ಹೊರಡಿಸಿತ್ತು. ಆದರೆ, ನ್ಯಾಯಾಲಯದಲ್ಲಿ ಅದಕ್ಕೆ ತಡೆಯಾಗಿತ್ತು. ದಾವೆಯನ್ನು ಹೈಕೋರ್ಟ್ ಡಿ.5ರಂದು ವಜಾಗೊಳಿಸಿತ್ತು.

ಕಟ್ಟಡ ನಿರ್ಮಿಸುವವರು ನಿವೇಶನದ ಎದುರಿನ ರಸ್ತೆಯ ಅಗಲದಲ್ಲಿ ಪಿಎಫ್‌ಎಆರ್ ಪಡೆದುಕೊಳ್ಳಬಹುದು. ಇದರ ಜೊತೆಗೆ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳನ್ನೂ (ಟಿಡಿಆರ್/ಡಿಸಿಆರ್) ಬಳಸಿಕೊಂಡು ಇನ್ನಷ್ಟು ಹೆಚ್ಚಿನ ಅಂತಸ್ತುಗಳನ್ನು ನಿರ್ಮಿಸಬಹುದಾಗಿದೆ. ನಿವೇಶನದ ವಿಸ್ತೀರ್ಣದ ಮೇರೆಗೆ ಟಿಡಿಆರ್, ಪಿಎಫ್‌ಎಆರ್ ನಿಗದಿಯಾಗುತ್ತದೆ.

‘ಹೆಮ್ಮಿಗೆಪುರ ವಾರ್ಡ್ ಹೆಸರು ಬದಲು: ಮಾನದಂಡ, ಪ್ರಕ್ರಿಯೆ ಮಾಹಿತಿ ಒದಗಿಸಿ’

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ವಾರ್ಡ್‌ಗಳ ಹೆಸರು ಬದಲಾವಣೆಗೆ ಅನುಸರಿಸುವ ಮಾನದಂಡ ಮತ್ತು ಪ್ರಕ್ರಿಯೆಗಳ ಬಗ್ಗೆ ಮಾಹಿತಿ ಒದಗಿಸಿ’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಜಿಬಿಎ ವ್ಯಾಪ್ತಿಯ ‘ಹೆಮ್ಮಿಗೆಪುರ ವಾರ್ಡ್’ ಹೆಸರನ್ನು ‘ಕೆಂಗೇರಿ ಕೋಟೆ ವಾರ್ಡ್’ ಎಂದು ಬದಲಾವಣೆ ಮಾಡಿರುವುದನ್ನು ಆಕ್ಷೇಪಿಸಿ ಕೆಂಗೇರಿಯ ಎಚ್.ಸಿ ಬಸವರಾಜಪ್ಪ ಸೇರಿದಂತೆ ಹೆಮ್ಮಿಗೆಪುರ ಹಾಗೂ ಆಜುಬಾಜಿನ 15 ನಿವಾಸಿಗಳು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಯಾವುದೇ ಸಾರ್ವಜನಿಕ ಆಕ್ಷೇಪಣೆ ಆಲಿಸದೇ ಹೆಮ್ಮಿಗೆಪುರ ವಾರ್ಡ್ ಅನ್ನು ಕೆಂಗೇರಿ ಕೋಟೆ ವಾರ್ಡ್ ಎಂದು ಬದಲಿಸಲಾಗಿದೆ. ನಿಯಮಗಳಲ್ಲಿ ಇದಕ್ಕೆ ಅವಕಾಶ ಇಲ್ಲ. ರಾಜಕೀಯ ಕಾರಣಗಳಿಗಾಗಿ ಯಶವಂತಪುರ ಕ್ಷೇತ್ರದ ಹಾಲಿ ಶಾಸಕ ಎಸ್.ಟಿ. ಸೋಮಶೇಖರ್ ಆಣತಿಯಂತೆ ಹೆಸರು ಬದಲಿಸಲಾಗಿದೆ. ಮುಂದಿನ ಚುನಾವಣೆಯಲ್ಲಿ ನಿರ್ದಿಷ್ಟ ಭಾಗ ಮತ್ತು ಸಮುದಾಯದ ಮತಗಳನ್ನು ಸೆಳೆಯಲು ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಆರೋಪಿಸಿದರು.

ಇದಕ್ಕೆ ನ್ಯಾಯಪೀಠ, ‘ಹೆಸರು ಬದಲಾವಣೆಗೆ ಸಂಬಂಧಿಸಿದ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡಿ’ ಎಂದು ರಾಜ್ಯ ಸರ್ಕಾರದ ಪರ ವಕೀಲರಿಗೆ ಸೂಚಿಸಿ ವಿಚಾರಣೆ ಮುಂದೂಡಿತು.

ತ್ಯಾಗರಾಜರ ಆರಾಧನೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದ್ಗುರು ಶ್ರೀ ತ್ಯಾಗಬ್ರಹ್ಮ ಆರಾಧನಾ ಕೈಂಕರ್ಯ ಟ್ರಸ್ಟ್ ವತಿಯಿಂದ ಸಂತ ಕವಿ ತ್ಯಾಗರಾಜರ 179ನೇ ವೈದಿಕ ಆರಾಧನೆಯನ್ನು ಇದೇ 7ರಿಂದ 11ರವರೆಗೆ ಚಾಮರಾಜಪೇಟೆಯ ಶೃಂಗೇರಿ ಶಂಕರ ಮಠದಲ್ಲಿ ಆಯೋಜಿಸಲಾಗಿದೆ.

‘ಆರಾಧನಾ ಮಹೋತ್ಸವದ ಅಂಗವಾಗಿ ಪಂಚರತ್ನ ಕೃತಿ ಗೋಷ್ಠಿ, ಗಾಯನ ನಡೆಯಲಿದ್ದು, ವಾರ್ಷಿಕ ಆರಾಧನೆಯ ಪ್ರಮುಖ ಆಕರ್ಷಣೆಯಾಗಲಿದೆ. ಪ್ರತಿದಿನ ಸಂಜೆ 5 ಗಂಟೆಯಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ’ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

स्पाइसेस बोर्ड भारत SPICES BOARD INDIA
(वाणिज्य एवं उद्योग मंत्रालय, भारत सरकार)
(Ministry of Commerce & Industry, Govt. of India)
पीबी. नं. 2277, पालारिवट्टम, कोच्ची -25, केरल
PB No. 2277, Palarivattom, Kochi-25, Kerala

मसाला विस्तार प्रशिक्षु /SPICES EXTENSION TRAINEES
[अनन्यत: अनुसूचित जाति/अनुसूचित जनजाति उम्मीदवारों के लिए]
[Exclusively for Scheduled Caste/Scheduled Tribe candidates]

स्पाइसेस बोर्ड भारत, वाणिज्य एवं उद्योग मंत्रालय, भारत सरकार विभिन्न राज्यों में स्थित अपने मंडल कार्यालयों/क्षेत्र कार्यालय/विभागीय पौधशालाओं में नियुक्ति हेतु मसाला विस्तार प्रशिक्षुओं के चयन केलिए वॉक इन टेस्ट आयोजित करने का प्रस्ताव करता है।

Spices Board, Ministry of Commerce and Industry, Government of India proposes to conduct Walk in test for selection of Spices Extension Trainees (SETs) for engaging at its Divisional Offices/Field Office/Deptt. Nursery located in various States.

अधिक जानकारी केलिए बोर्ड की वेबसाइट देखें। For more details please visit the Board's website
www.indianspices.com
कोच्ची/Kochi-25
निदेशक(प्रशासन)/Director(Admn.)
स्पाइसेस बोर्ड / Spices Board

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ,ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಜಿಲ್ಲಾ ಸಂಕೀರ್ಣ ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು-562110
Email-ka.bengaluru.rural.dudc.@gmail.com

ಸಂ: ಜಿನಕೋ/ಸಿ(1)/ಪೌ.ನೇ/ಪಿ.ಆರ್/52/2025-26 ದಿನಾಂಕ: 02.01.2026

ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮಂಜೂರಾಗಿರುವ ಹುದ್ದೆಗಳಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳಿಗೆ ವಿಶೇಷ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನಾಂಕ: 07.08.2017 ರ ಪೂರ್ವದಲ್ಲಿ ನೇಮಕಾತಿ ಹೊಂದಿ ಹಾಲಿ ಪೌರಕಾರ್ಮಿಕರಾಗಿ ನೇರ ಪಾವತಿಯ ಆಧಾರದಲ್ಲಿ 2 ವರ್ಷಕ್ಕಿಂತ ಕಡಿಮೆ ಇಲ್ಲದೇ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಅರ್ಜಿ ಸಲ್ಲಿಸುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೇ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಅಭ್ಯರ್ಥಿಗಳಿಂದ ಮಾತ್ರ ಸದರಿ ಪೌರಕಾರ್ಮಿಕರ ವಿಶೇಷ ನೇಮಕಾತಿ ನಿಯಮಾವಳಿಗಳಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ತಿಳಿಸಿರುವ ಎಲ್ಲಾ ಮಾಹಿತಿಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು ಹಾಗೂ ಅದಕ್ಕೆ ಪೂರಕವಾದ ದಾಖಲೆಗಳ ಪ್ರತಿಗಳನ್ನು ಸ್ವಯಂ ದೃಢೀಕರಿಸಿ ನಿಗದಿತ ಅವಧಿಯೊಳಗೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು/ಮುಖ್ಯಾಧಿಕಾರಿಗಳ ಕಛೇರಿಯಲ್ಲಿ ಸಲ್ಲಿಸತಕ್ಕದ್ದು.

- ನೇಮಕಾತಿಯ ಪೂರ್ಣ ಷರತ್ತು ಹಾಗೂ ನಿಯಮಗಳನ್ನು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ನಾಮಫಲಕದಲ್ಲಿ ಪ್ರಚುರ ಪಡಿಸಲಾಗಿರುತ್ತದೆ.
- 18 ರಿಂದ 55 ರ ವಯೋಮಿತಿ ಒಳಗಿರುವವರು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕಾಲಮಿತಿ ಹಾಗೂ ವಿಳಾಸ:

ವಿವರ	ದಿನಾಂಕ	ಅರ್ಜಿ ನಮೂನೆ/ಪಡೆಯುವ ವಿಳಾಸ
ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಪ್ರಾರಂಭಿಕ ದಿನಾಂಕ	05.01.2026	ಮೇಲ್ಕಂಡಂತೆ ಅರ್ಹರು /ಆಸಕ್ತರು ತಾವು ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆ ದೊಡ್ಡಬಳ್ಳಾಪುರ / ಹೊಸಕೋಟೆ / ನೆಲಮಂಗಲ, ಪುರಸಭೆಗಳಾದ ದೇವನಹಳ್ಳಿ / ವಿಜಯಪುರ ಮತ್ತು ಪಟ್ಟಣ ಪಂಚಾಯಿತಿ ಬಾಶೆಟ್ಟಿಹಳ್ಳಿ ಗಳ ಪೌರಾಯುಕ್ತರು / ಮುಖ್ಯಾಧಿಕಾರಿಗಳ ಕಛೇರಿಯಲ್ಲಿ ಅರ್ಜಿ ನಮೂನೆಯನ್ನು ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ನಿಗಧಿತ ಅವಧಿಯಲ್ಲಿ ಸಲ್ಲಿಸುವುದು.
ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ	04.02.2026	

ಕ್ರ ಸಂ.	ನಗರ ಸ್ಥಳೀಯ ಸಂಸ್ಥೆಗಳು ಹೆಸರು	ನೇರ ನೇಮಕಾತಿ ಪೌರ ಕಾರ್ಮಿಕರ ಹುದ್ದೆಗಳ ಸಂಖ್ಯೆ
1	ದೊಡ್ಡಬಳ್ಳಾಪುರ ನಗರಸಭೆ	6
2	ಹೊಸಕೋಟೆನಗರಸಭೆ	6
3	ನೆಲಮಂಗಲನಗರಸಭೆ	5
4	ದೇವನಹಳ್ಳಿಪುರಸಭೆ	3
5	ವಿಜಯಪುರಪುರಸಭೆ	3
6	ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ	3

ಸಹಿ/- ಅಧ್ಯಕ್ಷರು,
ಪೌರಕಾರ್ಮಿಕರ ನೇರ ನೇಮಕಾತಿ (ವಿಶೇಷ)
ಆಯ್ಕೆ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು,
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾ.ಸಾ.ಸಂ.ಇ/ವಾಪ್ರ/4862/ಶಿರಡಿಸಾಯಿ/2025-26

ಫಾರಂ ನಂ. ಐಎನ್‌ಸಿ-26
[ಕಂಪನಿಗಳ (ಸಂಸ್ಥಾಪನಾ) ನಿಯಮಗಳು, 2014ರ ನಿಯಮ 30ರ ಪ್ರಕಾರ]
ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ, ಹೈದರಾಬಾದ್ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಇವರ ಸಮ್ಮುಖದಲ್ಲಿ
ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 13(4) ಮತ್ತು ಕಂಪನಿಗಳ (ಸಂಸ್ಥಾಪನಾ) ನಿಯಮಗಳು, 2014ರ ನಿಯಮ 30(5) (ಎ) ವಿಷಯದಲ್ಲಿ
ಮತ್ತು
ಎವರ್ಟನ್ ಟೀ ಇಂಡಿಯಾ ಪ್ರೈವೇಟ್ ಲಿಮಿಟೆಡ್.
ನೋಂದಾಯಿತ ಕಚೇರಿ ವಿಳಾಸ 102, 2ನೇ ಮಹಡಿ
ಗಂಗಾಧರ ಚೆಟ್ಟಿ ರಸ್ತೆ
ಬೆಂಗಳೂರು - 560 042, ಕರ್ನಾಟಕ, ಭಾರತ
ಇವರ ವಿಷಯದಲ್ಲಿ
... ಅರ್ಜಿದಾರರು

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಗುರುವಾರ 4ನೇ ಡಿಸೆಂಬರ್ 2025 ರಂದು ಏರ್ಪಡಿಸಲಾಗಿದ್ದ ಕಂಪನಿಯ ಅಸಾಧಾರಣ ಮಹಾಸಭೆಯಲ್ಲಿ ಹೊರಡಿಸಲಾಗಿದ್ದ ವಿಶೇಷ ಠರಾವಿಗೆ ಸಂಬಂಧಿತ ಕಂಪನಿಯ ಮೆಮೊರ್‍ಯಾಂಡವ್ ಆಫ್ ಅಸೋಸಿಯೇಶನ್‌ನ ಮಾರ್ಪಾಡು ಖಚಿತಪಡಿಸಿ, ಕಂಪನಿಗಳ ರಿಜಿಸ್ಟ್ರಾರ್, ಬೆಂಗಳೂರು ಇವರ ವ್ಯಾಪ್ತಿಗೊಳಪಡುವ ಕಂಪನಿಯ ನೋಂದಾಯಿತ ಕಚೇರಿಯನ್ನು ಕರ್ನಾಟಕ ರಾಜ್ಯದಿಂದ ಕಂಪನಿಗಳ ರಿಜಿಸ್ಟ್ರಾರ್, ಚೆನ್ನೈ ವ್ಯಾಪ್ತಿಗೊಳಪಡುವ ತಮಿಳುನಾಡು ರಾಜ್ಯಕ್ಕೆ ಬದಲಾಯಿಸುವದಕ್ಕೆ ಕಂಪನಿಯನ್ನು ಸಮರ್ಥಗೊಳಿಸಬೇಕೆಂದು ಕೋರಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 13ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಬೇಕೆಂದು ಕಂಪನಿಯು ಉದ್ದೇಶಿಸಲಾಗಿರುತ್ತದೆ.

ಕಂಪನಿಯ ಉದ್ದೇಶಿತ ನೋಂದಾಯಿತ ಕಚೇರಿ ಬದಲಾವಣೆಯಿಂದಾಗಿ ಯಾವುದೇ ವ್ಯಕ್ತಿಯ ಹಿತಾಸಕ್ತಿಗೆ ಧಕ್ಕೆ ಉಂಟಾಗುವಂತಿದ್ದಲ್ಲಿ, ಅಂತಹವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ, ಎಂಸಿಎ-21 ಪೋರ್ಟಲ್‌ನಲ್ಲಿ (www.mca.gov.in) ಲಭ್ಯವಿರುವ ಹೂಡಿಕೆದಾರರ ದೂರು ನಮೂನೆಯನ್ನು ಭರ್ತಿ ಮಾಡುವ ಮೂಲಕವಾಗಲಿ ಅಥವಾ ಕಾಜ್ ಟು ಬಿ ಡೆಲಿವರ್ಡ್ ಮೂಲಕವಾಗಲಿ, ಅಥವಾ ನೋಂದಾಯಿತ ಅಂಚೆ ಮೂಲಕವಾಗಲಿ ತಮ್ಮ ಹಿತಾಸಕ್ತಿ ಮತ್ತು ವಿರೋಧದ ಹಿನ್ನಲೆಗಳನ್ನು ನಮೂದಿಸಿರುವ ಒಂದು ಅಫಿಡವಿಟ್ ಸಮೇತ ತಮ್ಮ ಆಕ್ಷೇಪಣೆಗಳನ್ನು ಮಾನ್ಯ ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ, ತೆಲಂಗಾಣ ಇವರ 3ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೊಳೆ, ತಟ್ಟಿನ್ನರಂ ಗ್ರಾಮ, ಹಯಾತ್‌ನಗರ ಮಂಡಲ, ರಂಗಾರೆಡ್ಡಿ ಜಿಲ್ಲೆ, ಹೈದರಾಬಾದ್ - 500 068, ತೆಲಂಗಾಣ ವಿಳಾಸಕ್ಕೆ ರವಾನಿಸಬೇಕು, ಜೊತೆಗೆ ಅರ್ಜಿದಾರ ಕಂಪನಿಯ ಕೆಳಕಂಡ ನೋಂದಾಯಿತ ಕಚೇರಿ ವಿಳಾಸಕ್ಕೆ ಕೂಡ ಒಂದು ಪ್ರತಿಯನ್ನು ಸಲ್ಲಿಸತಕ್ಕದ್ದು:

ನೋಂದಾಯಿತ ಕಚೇರಿ:
102, 2ನೇ ಮಹಡಿ, ಗಂಗಾಧರ ಚೆಟ್ಟಿ ರಸ್ತೆ
ಬೆಂಗಳೂರು - 560 042

ಅರ್ಜಿದಾರರ ಪರವಾಗಿ
ಎವರ್ಟನ್ ಟೀ ಇಂಡಿಯಾ ಪ್ರೈವೇಟ್ ಲಿಮಿಟೆಡ್. ಪರವಾಗಿ
ರೋಶನ್ ಆಂಥೋನಿ ಗುಣವರ್ಧನ
ನಿರ್ದೇಶಕರು
ಡಿಐಎನ್: 08118978
ದಿನಾಂಕ: 07/01/2026
ಸ್ಥಳ: ಬೆಂಗಳೂರು

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ - 562123.
ದೂರವಾಣಿ: 9663046622 ಇ-ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/103/2025-26 ದಿನಾಂಕ: 05-01-2026

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13-02-2007 ರನ್ವಯ **ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಹುಸ್ಕೂರು** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಅಶೋಕ್. ಎಂ.ಕೆ ಬಿನ್ ಕಾಡಯ್ಯ	ಬೆಂಗಳೂರು ಉತ್ತರ / ದಾಸನಪುರ / ಹುಸ್ಕೂರು	138/3	00-39 (00-01 ಗುಂಟೆ 'ಎ' ಖರಾಬು)	ವ್ಯವಸಾಯ	ವಸತಿ
		140/5ಬಿ	00-35 (00-01 ಗುಂಟೆ 'ಎ' ಖರಾಬು)		

ಷರಾ:- ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ದ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/4886/ಅಡ್ವರ್ಟೋರ್/2025-26

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560 002
ದೂರವಾಣಿ: 080-22213530/22241325 ಫ್ಯಾಕ್ಸ್: 080-22214379
ಇ-ಮೇಲ್: kanbhavblr@gmail.com ವೆಬ್‌ಸೈಟ್: www.kannadasiri.in

No.: DKC-2025-26/SE0049 ದಿನಾಂಕ: 06.01.2026

ಟೆಂಡರ್ ಆಹ್ವಾನಿಸುವ ಸೂಚನೆ

ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ದೈನಂದಿನ ಕಚೇರಿ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅನುಕೂಲವಾಗುವಂತೆ ಲೇಖನ ಸಾಮಾಗ್ರಿಗಳು ಮತ್ತು ಸ್ವಚ್ಚತಾ ಸಾಮಗ್ರಿಗಳ ಅವಶ್ಯಕತೆಯಿರುತ್ತದೆ. "ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಲೇಖನ ಸಾಮಗ್ರಿಗಳು ಮತ್ತು ಸ್ವಚ್ಚತಾ ಸಾಮಾಗ್ರಿಗಳ ಪೂರೈಕೆಗಾಗಿ ಟೆಂಡರ್ ಆಹ್ವಾನಿಸಿದ್ದು, ಕಾಲಕಾಲಕ್ಕೆ ನೀಡಲಾಗುವ ಆದೇಶದ ಪ್ರಕಾರ ಅವಶ್ಯಕತೆ ಇರುತ್ತದೆ.

ಈ ಸಂಬಂಧ ಉತ್ತಮ ಗುಣಮಟ್ಟದ ಲೇಖನ ಸಾಮಗ್ರಿ ಮತ್ತು ಸ್ವಚ್ಛತಾ ಸಾಮಾಗ್ರಿಗಳು ಸರಬರಾಜು ಮಾಡಲು ಇ-ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.

1) ಟೆಂಡರ್ ಮೊತ್ತ : ರೂ. 20.00 ಲಕ್ಷ. 2) ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವೆಬ್‌ಸೈಟ್ / ದಿನಾಂಕ : http://kppp.karnataka.gov.in ದಿ: 07.01.2026. 3) ಇ.ಎಂ.ಡಿ ಮೊತ್ತ : ರೂ. 40,000/-. 4) ಟೆಂಡರ್ ಡಾಕ್ಯುಮೆಂಟ್ ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ ಮತ್ತು ಸಮಯ: ದಿ: 02.02.2026. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ದಿ: 04.02.2026. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 06.02.2026. 7) ಯಾವುದೇ ವಿಚಾರಣೆ ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಲು ವಿಳಾಸ ಹಾಗೂ ದೂರವಾಣಿ ಸಂಖ್ಯೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560002. ದೂ: 080-22213530.

ಸಹಿ/- ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/4877/ಆಕಾರ್/2025-26

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

VIDYA MANDIR Public School, Amruthahalli, invites applications for the Following Position Pre-Primary coordinator, Receptionist, office admin and experienced teachers in all subjects (Near Hebbal) for Primary, Middle and High school. Contact: 9880822028/ 9448711695.

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage, Bangalore -75
CBSE affiliated school invites applications for the following posts:
PHYSICS & MATHS TEACHER
B.Sc / M.Sc with B.Ed/ M.Ed- Min 3 years of experience
ENGLISH TEACHER
BA/ MA in English with B.Ed/ M.Ed- Min 3 years of experience
HINDI TEACHER
BA/ MA in Hindi with B.Ed/M.Ed- Min 3 years of experience
KANNADA TEACHER
BA/MA in Kannada with B.Ed/ M.Ed- Min 3 years of experience
MATHS TEACHER
B.Sc/ M.Sc with B.Ed/ M.Ed- Min 3 years of experience
PRE PRIMARY MAIN TEACHER
Any Degree with NTT
PRE PRIMARY ASSISTANT TEACHER
PUC with D.Ed/ NTT (preference to Graduates)
SCHOOL COUNSELOR
Graduate or Post Graduate in Psychology or Post Graduate in Child Development or Diploma in Carrier guidance and counseling +1 yr experience
Apply immediately to Hon. Secretary.
Email: contact.indiranagar@ppec.edu.in
by 12th January 2026, Monday.

MOUNT CARMEL PU COLLEGE, #58, Palace Road, Bengaluru-01 mails@mcpuc.edu.in, requires LECTURERS (Post-Graduates with B.Ed will be Preferred) For All SUBJECTS of HUMANITIES, SCIENCE, COMMERCE, ENGLISH, All LANGUAGES and FRENCH, PHYSICAL EDUCATION, LIBRARY and COUNSELING. Apply before 17.01.2026

VIDYA NIKETAN SCHOOL, HEBBAL, Affiliated to I.C.S.E/ ISC/IGCSE Invites applications from well qualified experienced Graduate Lady candidates for:English [Middle School], Hindustani Music, Librarian, Social Studies with Home Science [NIOS] & Accountant Please apply immediately to:E-mail: vidyaniketanresume@gmail.com Vidya Niketan School #30, kempapura, hebbal, Bangalore-24. Ph: 23331531/ 23531340

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Om Sai Ram
NEW BALDWIN GROUP OF INSTITUTIONS
(Head office @ Banaswadi)
OUR BRANCHES
SCHOOLS: *BANASWADI *MANDUR *TC PALYA *ANEKAL *ANEKAL TOWN *CHANDAPURA *ATTIBELE *HSR *KODATHI GATE(SARJAPURA) *KOGILU
COLLEGES: *BANASWADI *MANDUR *TC PALYA *ANEKAL TOWN *CHANDAPURA *ATTIBELE
About us: NBGI having 36 years of Excellence in providing quality education to 25k+ students. Our campuses are well facilitated across various locations at Bangalore with 10 schools, 6 PU Colleges, 2 Degree Colleges & upcoming University. We are collaborated with ICSE, CBSE & Cambridge (IGCSE) Boards. We cater to Day schooling and on campus Boarding facilities.
RECRUITMENT FOR THE YEAR 2026-27
* PRINCIPAL/ VICE-PRINCIPAL/ ACADEMIC COORDINATOR
Post Graduate having 5 to 10 years experience & leadership qualities in reputed institutions with strong communication, decision-making and organizational abilities.
* TEACHERS - KINDERGARTEN/ PRIMARY / HIGH SCHOOL
Post Graduate/ Graduate with B.Ed. Candidates should be commited to holistic student development and academic excellence.
LECTURERS - PUC - SCIENCE & COMMERCE
Post Graduate candidates with B.Ed having experience in teaching Grade 11th & 12th PUC/CBSE
Remuneration: at par with the institutional standard. With additional facilities like food & transport in the gross package.
APPLY IMMEDIATELY
Applying candidates are to mail the updated resume with recent photograph and should clealy specify the Position applied for & Branch opted
Contact : 9886084799 / 7899227591
Mail: hr.centraloffice@newbaldwin.com www.newbaldwininstitutions.org

ST. FRANCIS COLLEGE | BENGALURU
Accredited 'B++' Grade by NAAC
Permanently Affiliated to Dr. Manmohan Singh Bengaluru City University
P.B.No. 3417, 3rd Block, 8th Main, Koramangala, Bengaluru-560034.
Tel: 080-25531037/38, Cell Ph: 9481857854 / 9449260409
Website: www.stfranciscollege.edu.in
FACULTY RECRUITMENT
Applications are invited for the post of Associate / Assistant Professors in the following Departments.
COMMERCE AND MANAGEMENT

Qualification	PG with NET/SLET/Ph.D with minimum 55% marks at PG level.
Specialization	Accounting, Finance, Marketing, Analytics
Experience	Above 3 years
Job Location	Koramangala, Bengaluru

Interested and eligible candidates may send their CV, along with a recent passport-size photograph and copies of qualification and experience certificates to below given
Email-ID:
admin@stfranciscollege.edu.in / director@stfranciscollege.edu.in
by mentioning the post and department applying for in the subject line within 10 days.

Accounts & Finance

REQUIRED
ACCOUNTANTS / ACCOUNTS ASSISTANT
for an Office
Tally & Excel knowledge is preferred
Walk in interview (Monday-Saturday) 11am to 6pm
MANANDI DISTRIBUTORS
#9/2, Manandi Trident, O. V. H. Road, Basavanagudi, Bengaluru - 560004.
080-41611253
080-26624749

Part-Time Jobs

CHANNEL PARTNER with HDFC Bank Subsidiary. Age 40-69, 75K, PF/ MC, Experience Only: 9902072424

Multiple Vacancy

RASHTROTTHANA SAHITYA
Keshava Shilpa, Kempegowda Nagar, Bengaluru-560004.www.sahityabooks.com
ಉದ್ಯೋಗಾವಕಾಶ
ರಾಷ್ಟ್ರೋತ್ಥಾನ ಪರಿವಾರಕ್ಕೆ ಸೇರ್ಪಡೆಯಾಗಲು ಸುವರ್ಣಾವಕಾಶ. ಕರ್ನಾಟಕದ ಪ್ರಮುಖ ಪ್ರಕಾಶನ ಸಂಸ್ಥೆಯಾಗಿರುವ ರಾಷ್ಟ್ರೋತ್ಥಾನ ಸಾಹಿತ್ಯದ ವಿವಿಧ ವಿಭಾಗಗಳ ಈ ಕೆಳಗಿನ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವುದಕ್ಕೆ ಪರಿಣತರು ಹಾಗೂ ಹೊಸಬರಿಗೆ ಅವಕಾಶವಿದೆ.
ಮಾರುಕಟ್ಟೆ ಪ್ರತಿನಿಧಿಗಳು - ಅರ್ಹತೆ- ಮಾರುಕಟ್ಟೆ ಮತ್ತು ಮಾರಾಟ ವಿಭಾಗದಲ್ಲಿ ಕನಿಷ್ಠ 3 ವರ್ಷ ಕೆಲಸ ಮಾಡಿದ ಅನುಭವ ಇರಬೇಕು.
ಪುಸ್ತಕ ಮಳಿಗೆ ಮುಖ್ಯಸ್ಥರು/ಸಹಾಯಕರು - ಅರ್ಹತೆ - ಮಳಿಗೆ ನಡೆಸಿದ ಅನುಭವ ಇರಬೇಕು ಅಥವಾ ಮಳಿಗೆಯಲ್ಲಿ ಸಹಾಯಕರಾಗಿ ಕೆಲಸ ಮಾಡಿದ ಅನುಭವಿಯಾಗಿರಬೇಕು.
ಅಕೌಂಟೆಂಟ್ - ಬಿಕಾಂ ಪದವೀಧರರು. ಕನಿಷ್ಠ 5 ವರ್ಷ ಅಕೌಂಟಿಂಗ್, ಜಿಎಸ್‌ಟಿ, ಟಿಡಿಎಸ್ ಮತ್ತು ಅಗತ್ಯ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವ ಅನುಭವ ಇರಬೇಕು.
ಪುಸ್ತಕ ಉಗ್ರಾಣ ಸಹಾಯಕರು - ಅರ್ಹತೆ - 10ನೇ ತರಗತಿ ಅಥವಾ PUC ಆದವರು ಈ ಹುದ್ದೆಗೆ ಅರ್ಜಿ ಸಲ್ಲಿಸಬಹುದು. ಅನುಭವಿಗಳಿಗೆ ಹಾಗೂ ಹೊಸಬರಿಗೂ ಇಲ್ಲಿ ಉದ್ಯೋಗಾವಕಾಶ ಇದೆ.
ಪುಸ್ತಕ ಮಾರಾಟ ಕ್ಷೇತ್ರದಲ್ಲಿ ಕೆಲಸ ಮಾಡಿದವರಿದ್ದರೆ ಅವರಿಗೆ ಆದ್ಯತೆ ಇದೆ. ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದರೆ ಪ್ಲಸ್ ಪಾಯಿಂಟ್. ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಸಂವಹನ ನಡೆಸಬಲ್ಲವರಾಗಿರಬೇಕು.
ಜನವರಿ 15ರ ಒಳಗೆ ನಿಮ್ಮ ಸ್ವವಿವರ ಅಥವಾ ರೆಸ್ಯೂಮೆಯನ್ನು ಈ ಕೆಳಗಿನ ಇಮೇಲ್ ವಿಳಾಸಕ್ಕೆ ಕಳುಹಿಸಿ. ಅರ್ಹರನ್ನು ಆಯ್ಕೆ ಮಾಡಿ ಸಂದರ್ಶನಕ್ಕೆ ಆಹ್ವಾನಿಸಲಾಗುತ್ತದೆ. ಇಮೇಲ್: hr@rashtrotthana.org
Contact: 9591155622

Engg/ Production Technical

ELECTRICAL TECHNICIANS having experience in hotel background (3 or 5 star), are required for software company maintenance in Bangalore, 35000/- salary along with PF, ESI, bonus and accommodation. Candidates with ITI/Diploma pls Contact: 9886987898, 9900816937, 9845080989

Marketing & Sales

WANTED SALES Managers (Male & Female), Sales Executives and Telecallers. Contact 8867627879

REAL ESTATE SELLING

Flat

Whitefield

ONE BHK first floor Athashri Whitefield elders living facility with all amenities available for immediate sale. Contact sampath.pillai@gmail.com

Sites

Uttarahalli

SALE: KUMARASWAMY layout, ISRO housing society, 3rd B Main road 3630 sq ft, 17.5 K/ sq ft,Serious buyers only Call +17028216450 Whatspp or email animalhouzvet@gmail.com

BUSINESS

Business to Business

Finance

WE ARRANGE Loan against Commerical/ Residential Building/ School Building/ Hospital Building Convention Hall/ Bar & Restaurant, Property and Business loan from Schedule Banks. Call Mrs Jyothi: 8971132289-9380509779

CONNECT

PUBLIC NOTICE

PUBLIC NOTICE
Our client intends to purchase **Site No.4,** BBMP E-Asthi Katha No.82-25-4, **PID No. 3668208354,** measuring East to West 46 feet 3 inches and North to South 60 feet, totally measuring 2778 Sq.Feet, along with building measuring 2999.997 + 1499.999, Sq.feet, situated at **Binnamangala 2nd Stage, Indiranagar, Bangalore,** and bounded on the:
East by : Site No.5
West by : Site No.3;
North by : Road;
South by : Site No.35.
from its Owner **Mrs.Rubab Huq, daughter of Late Syed Munirul Huq.**
Persons having any right over the said property may lodge their objections/claims with documentary evidence within **10 days** from the date of this publication, to the undersigned.
Prashanth Vijayalakshmi & Associates, Advocates,
No.164, 3rd Floor, 2nd Main, Kasturinagar, Bangalore – 043.
Ph: 080-42065536
Email-prashanthviji.adv@gmail.com

PERSONAL

Change of Name

I, DHIRAJ KUMAR. R/a, #.70/1 Surveyor Street Basavanagudi Bengaluru 560004. Have Changed my Name To DHIRAJ KUMAR JAIN Vide Affidavit Dated 06/01/2026 before Notary Mamatha N.K Bangalore.

CHANGE OF NAME
I, **M.Vanilatha** alias **Setty Balija Geethavani** W/o **Settybalija Madhu Babu** aged 40 Years Residing at D.No 46-2-737, Flat No 404, Dheeraj Enclave, Sapathagiri Nagar, near Ayyappa Swamy Temple, Kurnool City Mandal and District the above names pertain to ME only. vide affidavit dated 15.05.2025 before notary J.Shivaramaiah Proddatur - 516360

I, KHADER Raheem Sajeedha Beagm W/o Ismail Khan. K R, aged about 70 Years, Resident of #882,new #157/2, Opp Elahi Masjid, Noor Nagar, Kolar 563101. Have changed my name to Sajida Begum vide affidavit dated 03.01.2026 before Notary H Krishne Gowda Kolar. Henceforth I shall be called as Sajida Begum Only.

CHANGE OF NAME
We, **Sukruth A N** and **Supriya N S,** residing at No. 62/1, 15A Cross, 6th Main, Malleswaram, Bengaluru-560055, have changed our minor daughter's name from **SHREYANVI** to **SHREYANVI IYENGAR** vide affidavit dated 15-11-2025 before notary K.S. Giridhar, Bengaluru. Henceforth she shall be called **SHREYANVI IYENGAR** only

I, M FATHIMA W/o.Rasul Chan Bhasha. R/a #62 Bayapalli Village Thimmasandra Post Srinivasapura Taluk, Kolar`District 563135 have.changed my`Name to FATHIMA vide`affidavit Dated:03.1.2026 before`Notary S.Subashini, Bangalore.

I, SRIVIDYA BHOOPALAM RAMASWAMY. R/a, #.54/1-1,13TH CROSS MALLESHWARAM Bengaluru-560003 Have Changed my Name To SRIVIDYA RAJANAHALLI RAVINDRANATH Vide Affidavit Dated 06/01/2026 before Notary Mamatha N.K Bangalore.

DH Classifieds
More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9845114560 | +91 9886213331 | +91 9731810277

ಮೆಟ್ರೊ: 6,868 ಮರಗಳಿಗೆ ಧಕ್ಕೆ

ಬಿಎಂಆರ್‌ಸಿಎಲ್‌ನಿಂದ ಪರ್ಯಾಯವಾಗಿ ಪ್ರತಿ ಸಸಿಗೆ ಸುಮಾರು ₹2,000 ವೆಚ್ಚ

• ಮುತೀಉರ್‌ರಹ್ಮಾನ್ ಸಿದ್ದಿಕೀ

ಬೆಂಗಳೂರು: ನಮ್ಮ ಮೆಟ್ರೊದ ಮೂರನೇ ಹಂತದಲ್ಲಿ ಈ ಹಿಂದೆ ಉದ್ದೇಶಿಸಿದ್ದ 11,137 ಮರಗಳ ಬದಲು 6,868 ಮರಗಳಿಗೆ ಮಾತ್ರ ಧಕ್ಕೆಯಾಗಲಿದೆ ಎಂದು ಪರಿಸರದ ಮೇಲಾಗುವ ಪರಿಣಾಮದ ಮೌಲ್ಯಮಾಪನ (ಇಐಎ) ವರದಿಯಲ್ಲಿ ತಿಳಿಸಲಾಗಿದೆ.

6,868 ಮರಗಳಲ್ಲಿ ಶೇ 65ರಷ್ಟು ಮರಗಳನ್ನು ಮಾತ್ರ ಕಡಿಯಲಾಗುತ್ತದೆ. ಶೇ 15ರಷ್ಟನ್ನು ಸ್ಥಳಾಂತರಿಸಿದರೆ, ಶೇ 20 ರಷ್ಟು ಮರಗಳ ಕೊಂಬೆ-ರೆಂಬೆಗಳನ್ನು ಕತ್ತರಿಸಲಾಗುತ್ತದೆ. ಪ್ರತಿಯೊಂದು ಮರದ ಕಡಿತಕ್ಕೆ ಪರ್ಯಾಯವಾಗಿ 10 ಸಸಿ ನೆಡಲಾಗುತ್ತದೆ. ಪ್ರತಿ ಸಸಿಗೆ ಸುಮಾರು ₹2,000 ವೆಚ್ಚ ಮಾಡಲಾಗುತ್ತದೆ. ಈ ಸಸಿಗಳ ಮೇಲೆ ಐದು ವರ್ಷ ನಿಗಾವಹಿಸಲಾಗುತ್ತದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಭರವಸೆ ನೀಡಿದೆ.

ಜೆ.ಪಿ ನಗರದಿಂದ ಮೈಸೂರು ರಸ್ತೆ ನಡುವೆ ಮರಗಳ ಕಡಿತಕ್ಕೆ ಕಳೆದ ಸೆಪ್ಟೆಂಬರ್‌ನಲ್ಲಿ ಬಿಎಂಆರ್‌ಸಿಎಲ್‌ಗೆ ಅನುಮತಿ ದೊರೆತಿದೆ. ಈ ಭಾಗದಲ್ಲಿ 686 ಮರಗಳನ್ನು ಉಳಿಸಿಕೊಂಡು, 406 ಮರಗಳನ್ನು ಸ್ಥಳಾಂತರಿಸಲಾಗುತ್ತದೆ. 1,092 ಮರಗಳನ್ನು ಕಡಿಯಲಾಗುತ್ತದೆ. ಇದಲ್ಲದೆ ಒಟ್ಟಾರೆ ಯೋಜನೆ ಜಾರಿಗೆ ಅಡ್ಡಿಯಾಗುವ ಇನ್ನೂ ಹಲವು ಮರಗಳನ್ನು ಕಡಿಯಲು 2026ರ ಮಧ್ಯಭಾಗದಲ್ಲಿ ಅನುಮತಿ ದೊರೆಯಲಿದೆ ಎಂದು ಬಿಎಂಆರ್‌ಸಿಎಲ್ ನಿರೀಕ್ಷಿಸಿದೆ.

'ಮರಗಳನ್ನು ಕಡಿಯುವ ಬಗ್ಗೆ ಬಿಎಂಆರ್‌ಸಿಎಲ್‌ನಲ್ಲಿ ಪಾರದರ್ಶಕವಾದ ಮಾಹಿತಿ ಇಲ್ಲ. ಒಂದು ಚಿಕ್ಕ ಪ್ರಾತ್ಯಕ್ಷಿಕೆಯನ್ನು ಮಾತ್ರ ತೋರಿಸಿದ್ದಾರೆ. ಸ್ಥಳೀಯರ ಸಲಹೆಗಳನ್ನು ಬಿಎಂಆರ್‌ಸಿಎಲ್ ನಿರ್ಲಕ್ಷಿಸಿದೆ' ಎಂದು ಪರಿಸರ ಕಾರ್ಯಕರ್ತ ಟಿ. ದೇವರೆ ಅಭಿಪ್ರಾಯಪಟ್ಟರು.

ಜೆ.ಪಿ. ನಗರ–ಕೆಂಪಾಪುರ (ಕಾರಿಡಾರ್ 1- 32.2 ಕಿ.ಮೀ) ಮತ್ತು ಹೊಸಹಳ್ಳಿ–ಕಡಬಗೆರೆ (ಕಾರಿಡಾರ್–2- 12.45 ಕಿ.ಮೀ) ಕಾರಿಡಾರ್‌ಗಳಿರುವ 3ನೇ ಹಂತವು 44.65 ಕಿ.ಮೀ. ವ್ಯಾಪ್ತಿ ಹೊಂದಿದೆ. 2031ರ ಮೇ ಅಂತ್ಯಕ್ಕೆ ಮೂರನೇ ಹಂತ ಮುಗಿಯುವ ನಿರೀಕ್ಷೆ ಇದ್ದು, ಇದರೊಂದಿಗೆ ಬೆಂಗಳೂರು ಮೆಟ್ರೊ ಸಂಪರ್ಕ ಜಾಲ 222.2 ಕಿ.ಮೀಗೆ ವಿಸ್ತರಿಸಿದಂತಾಗುತ್ತದೆ.

2024ರ ಆಗಸ್ಟ್‌ನಲ್ಲೇ ಕೇಂದ್ರ ಸಚಿವ ಸಂಪುಟ 3ನೇ ಹಂತಕ್ಕೆ ಅನುಮತಿ ನೀಡಿದೆ. ಆದರೆ, 37.12 ಕಿ.ಮೀ ಉದ್ದದ ಡಬಲ್ ಡೆಕರ್ ಅನ್ನು ಈ ಜಾಲದಲ್ಲಿ ಸೇರ್ಪಡೆಗೊಳಿಸಿದ್ದರಿಂದ ನಿರ್ಮಾಣ ಕಾರ್ಯ ವಿಳಂಬವಾಗಿದೆ. ಬಿಎಂಆರ್‌ಸಿಎಲ್ ಈ ತಿಂಗಳಾಂತ್ಯದಲ್ಲಿ ಟೆಂಡರ್ ಆಹ್ವಾನಿಸಲಿದ್ದು ಜೂನ್‌ನಲ್ಲಿ ಕಾಮಗಾರಿ ಆರಂಭವಾಗಲಿದೆ ಎಂದು ಅಂದಾಜಿಸಲಾಗಿದೆ.

ಯೋಜನೆಗೆ ಅಡ್ಡಿಯಾಗುವ ಮರಗಳನ್ನು ಸ್ಥಳಾಂತರಿಸಲಾಗುತ್ತದೆ. ಮರ ತಜ್ಞರ ಸಮಿತಿಯಿಂದ (ಟಿಇಸಿ) ಪರಿಶೀಲನೆ ನಡೆಯಲಿದ್ದು ಜಿಬಿಎ ಸೂಚಿಸುವ ಜಾಗಕ್ಕೆ ಮರಗಳನ್ನು ಸ್ಥಳಾಂತರಿಸಲಾಗುತ್ತದೆ. ಅವರು ಮರಗಳನ್ನು ಐದು ವರ್ಷ ನಿರ್ವಹಣೆ ಮಾಡಲಿದ್ದಾರೆ. ಸ್ಥಳಾಂತರಿಸಿದ ಅಥವಾ ನೆಟ್ಟ ಸಸಿಗಳು ಸತ್ತುಹೋದರೆ, ವಾರ್ಷಿಕವಾಗಿ ಅವುಗಳನ್ನು ಪರಿಶೀಲಿಸಿ ಹೊಸ ಸಸಿಗಳನ್ನು ನೆಡಲಾಗುತ್ತದೆ ಎಂದು ಬಿಎಂಆರ್‌ಸಿಎಲ್ ಹೇಳಿದೆ.

3ನೇ ಹಂತದ ಕಾರಿಡಾರ್–1ರಲ್ಲಿ ಅರಣ್ಯೀಕರಣಕ್ಕಾಗಿ ₹7.18 ಕೋಟಿ ಹಾಗೂ ಕಾರಿಡಾರ್–2ರಲ್ಲಿ ₹169 ಕೋಟಿ ವೆಚ್ಚ ಮಾಡಲಾಗುತ್ತಿದೆ. ಇದಲ್ಲದೆ ಹೆಚ್ಚುವರಿಯಾಗಿ ₹25.96 ಕೋಟಿಯನ್ನು ನಿರ್ಮಾಣ ಸಂದರ್ಭದಲ್ಲಿ ಪರಿಸರ ನಿರ್ವಹಣೆಗಾಗಿ ವೆಚ್ಚ ಮಾಡಲಾಗುತ್ತದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

'ಎಸ್‌ಸಿಎಸ್‌ಪಿ, ಟಿಎಸ್‌ಪಿ ಜಾರಿ ಏಕಿಲ್ಲ'

ಮೈಸೂರು: 'ಮೋದಿ ಪ್ರಧಾನಿಯಾಗಿ 11 ವರ್ಷವಾಗಿದೆ. ಎ.ಬಿ.ವಾಜಪೇಯಿಯವರೂ 6 ವರ್ಷ ಪ್ರಧಾನಿಯಾಗಿದ್ದರು. ಹೀಗಿದ್ದು ಜನಸಂಖ್ಯೆಗೆ ಸರಿಯಾಗಿ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಯೋಜನೆಯನ್ನು ಏಕೆ ಜಾರಿಗೊಳಿಸಿಲ್ಲ' ಎಂದು ಸಿ..ಎಂ ಸಿದ್ದರಾಮಯ್ಯ ಪ್ರಶ್ನಿಸಿದರು.

ವಾರ್ಡ್‌ಗಳಲ್ಲೇ ಹಸಿ ಕಸದಿಂದ ಗೊಬ್ಬರ: ಕೆಸಿಡಿಸಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ 369 ವಾರ್ಡ್‌ಗಳಲ್ಲಿ ಹಸಿ ಕಸದಿಂದ ಗೊಬ್ಬರ ತಯಾರಿಸುವ ಘಟಕಗಳನ್ನು ಸ್ಥಾಪಿಸಲಾಗುತ್ತದೆ ಎಂದು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮದ (ಕೆಸಿಡಿಸಿ) ಅಧ್ಯಕ್ಷ ಎ.ಎನ್. ನಟರಾಜ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

'ಬೆಂಗಳೂರು ನಗರದ ನಾಗರಿಕರು ಹಸಿ ಕಸ, ಒಣಕಸ ವಿಂಗಡಣೆ ಮಾಡುವುದರಿಂದ ನಗರ ಸ್ವಚ್ಛತೆ ಜೊತೆಗೆ ಗೊಬ್ಬರ ತಯಾರಿಕೆಗೆ ಸಹಕಾರಿಯಾಗಲಿದೆ. ಘಟಕಗಳ ಜೊತೆಗೆ ಎಲ್ಲ ವಾರ್ಡ್‌ಗಳಲ್ಲೂ ಹಸಿ ತ್ಯಾಜ್ಯದಿಂದ ಹಸಿ ಕಸ ತಯಾರಿಕೆಗೆ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಹೆಚ್ಚಿನ ಸ್ಥಳದ ಅಗತ್ಯವಿಲ್ಲ. ಲಭ್ಯವಿರುವ ಜಾಗದಲ್ಲೇ ಘಟಕ ಸ್ಥಾಪಿಸಲಾಗುತ್ತದೆ' ಎಂದರು.

ಪ್ರಮುಖ ವಾಣಿಜ್ಯ ಸಂಕೀರ್ಣಗಳು ಹಾಗೂ ವಸತಿ ಸಮುಚ್ಚಯಗಳಲ್ಲಿ (ಅಪಾರ್ಟ್‌ಮೆಂಟ್) ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಅಳವಡಿಸುವ ಮೂಲಕ ತ್ಯಾಜ್ಯ ಸಾಗಾಣಿಕೆ ಹೊರೆಯನ್ನು ತಗ್ಗಿಸಲು ಯೋಜನೆ ರೂಪಿಸಲಾಗುತ್ತಿದೆ. ಮಳೆ ನೀರು ಸಂಗ್ರಹ ಕಡ್ಡಾಯಗೊಳಿಸಿದಂತೆ ಹಸಿ ತ್ಯಾಜ್ಯವನ್ನು ಗೊಬ್ಬರವಾಗಿಸುವ ಘಟಕ ಸ್ಥಾಪಿಸುವುದನ್ನೂ ಕಡ್ಡಾಯಗೊಳಿಸಲು ಚಿಂತಿಸಲಾಗಿದೆ. ಅಲ್ಲಿ ಉತ್ಪಾದನೆಯಾಗುವ ಕಸವನ್ನು ಕೆಸಿಡಿಸಿ ಖರೀದಿ ಮಾಡುತ್ತದೆ ಎಂದು ನಟರಾಜ್ ಹೇಳಿದರು.

ಉದ್ಯಾನಗಳಲ್ಲಿ ಹಸಿರು ಗೊಬ್ಬರ: ನಗರದ ದೊಡ್ಡ ಉದ್ಯಾನಗಳಲ್ಲಿ 'ಕಾಂಪೋಸ್ಟ್ ಘಟಕ'ಗಳನ್ನು ಸ್ಥಾಪಿಸಿ, ಅಲ್ಲಿ ಎಲೆಗಳು ಮತ್ತು ಹಸಿ ತ್ಯಾಜ್ಯವನ್ನು ಗೊಬ್ಬರವನ್ನಾಗಿ ಪರಿವರ್ತಿಸಲಾಗುತ್ತದೆ. ಉದ್ಯಾನಕ್ಕೆ ಅಗತ್ಯವಾದಷ್ಟು ಬಳಸಿಕೊಂಡು, ಉಳಿದಿದ್ದನ್ನು ಮಾರಾಟ ಮಾಡಲಾಗುತ್ತದೆ ಎಂದರು.

ಅಂಕಿ ಅಂಶಗಳು

1,100 ಟನ್
ಪ್ರತಿ ದಿನ ಕೆಸಿಡಿಸಿ ಘಟಕಗಳಿಗೆ ವಿಲೇವಾರಿಯಾಗುವ ಹಸಿ ತ್ಯಾಜ್ಯ

100 ಟನ್
ಪ್ರತಿ ದಿನ ಕೆಸಿಡಿಸಿ ಘಟಕಗಳಿಂದ ಉತ್ಪಾದನೆಯಾಗುವ ಗೊಬ್ಬರ

'ಶೂನ್ಯ ತ್ಯಾಜ್ಯ ನಗರ'



'ಬೆಂಗಳೂರನ್ನು ಶೂನ್ಯ ತ್ಯಾಜ್ಯ ನಗರವನ್ನಾಗಿಸಲು ಹೊಸ ಯೋಜನೆ ರೂಪಿಸಿ ನಗರಾಭಿವೃದ್ಧಿ ಇಲಾಖೆ ಹಾಗೂ ಜಿಬಿಎಗೆ ಸಲ್ಲಿಸಲಾಗಿದೆ. ಅಲ್ಲಿಂದ ಸಮ್ಮತಿ ದೊರೆತ ಕೂಡಲೇ, ನಗರದಲ್ಲಿ ನಿತ್ಯ 1,500 ಟನ್ ಹಸಿ ಕಸವನ್ನು ಗೊಬ್ಬರವನ್ನಾಗಿಸಲಾಗುವುದು' ಎಂದು ನಟರಾಜ್ ತಿಳಿಸಿದರು.

5000 ಟನ್ ಗೊಬ್ಬರ ಮಾರಾಟ

ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಆರು ಘಟಕಗಳಲ್ಲಿ ದಾಸ್ತಾನಿದ್ದ ಐದು ಸಾವಿರ ಟನ್ ಗೊಬ್ಬರವನ್ನು ವಿವಿಧ ಜಿಲ್ಲೆಯ ರೈತರಿಗೆ ಸಬ್ಸಿಡಿ ದರದಲ್ಲಿ ಎರಡು ತಿಂಗಳಲ್ಲಿ ಮಾರಾಟ ಮಾಡಲಾಗಿದೆ ಎಂದು ನಿಗಮದ ಅಧ್ಯಕ್ಷ ಎ.ಎನ್. ನಟರಾಜ್ ತಿಳಿಸಿದರು. 'ಹಸಿ ಕಸದಿಂದ ತಯಾರಿಸಿದ ಗೊಬ್ಬರಕ್ಕೆ ಟನ್‌ವೊಂದಕ್ಕೆ ₹3,600 ನಿಗದಿ ಮಾಡಲಾಗಿತ್ತು. ಸರ್ಕಾರದಿಂದ ಅನುಮತಿ ಪಡೆದು, ರೈತರಿಗೆ ಪ್ರತಿ ಟನ್‌ಗೆ ₹2,000ಕ್ಕೆ ಮಾರಾಟ ಮಾಡಲಾಗಿದೆ' ಎಂದರು.

ಮೇಕೆದಾಟುಗೆ 12,692 ಎಕರೆ ಕಾಡು: ರಾಜ್ಯ ಮತ್ತೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣಕ್ಕೆ 12,692 ಎಕರೆ ಕಾಡು ಬಳಕೆಗೆ ಅನುಮೋದನೆ ಪಡೆಯಲು ಕಾವೇರಿ ನೀರಾವರಿ ನಿಗಮವು ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯಕ್ಕೆ ಸೋಮವಾರ ಮತ್ತೆ ಪ್ರಸ್ತಾವ ಸಲ್ಲಿಸಿದೆ.

ಮೇಕೆದಾಟು ಯೋಜನೆಗೆ ಆಕ್ಷೇಪಿಸಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ನವೆಂಬರ್‌ನಲ್ಲಿ ವಜಾಗೊಳಿಸಿತ್ತು.

ಯೋಜನೆಗೆ ಅರಣ್ಯ ಬಳಕೆಗೆ ಅನುಮೋದನೆ ಕೋರಿ ಈ ಹಿಂದೆ ಸಲ್ಲಿಸಿದ್ದ ಅರ್ಜಿಗಳನ್ನು ಕೇಂದ್ರ ಪರಿಸರ ಸಚಿವಾಲಯವು 2024ರಅಕ್ಟೋಬರ್‌ನಲ್ಲಿ ಡಿ ಲಿಸ್ಟ್ (ಪಟ್ಟಿಯಿಂದ ತೆಗೆದು ಹಾಕು) ಮಾಡಿತ್ತು. 'ಯೋಜನೆ ವಿರೋಧಿಸಿ ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಯೋಜನೆಗೆ ಈವರೆಗೆ ಯಾವುದೇ ಅರಣ್ಯ ಭೂಮಿ ಸ್ವಾಧೀನಪಡಿಸಿಕೊಂಡಿಲ್ಲ' ಎಂದು ನಿಗಮದ ಮುಖ್ಯ ಎಂಜಿನಿಯರ್ ಪ್ರಸ್ತಾವದಲ್ಲಿ ತಿಳಿಸಿದ್ದಾರೆ. ಅದರ ಬೆನ್ನಲ್ಲೇ, ಸಚಿವಾಲಯವು ಪರಿಶೀಲನಾ ಪ್ರಕ್ರಿಯೆ ಆರಂಭಿಸಿದೆ. ಯೋಜನೆ ಕಾರ್ಯಗತಗೊಳಿಸಲು ರಾಜ್ಯ ಸರ್ಕಾರವು ಅರಣ್ಯ ಹಾಗೂ ವನ್ಯಜೀವಿ ಅನುಮೋದನೆಗಳನ್ನು ಪಡೆಯಬೇಕಿದೆ.

ಯಾವುದೇ ಯೋಜನೆಗೆ ಅನುಮೋದನೆ ಪಡೆಯುವ ಮುನ್ನ ಯೋಜನೆಯ ಉದ್ದೇಶ, ವ್ಯಾಪ್ತಿ ಹಾಗೂ ಪಾಲಿಸಬೇಕಾದ ನಿಯಮಗಳನ್ನು (ಟಿಒಆರ್) ದಾಖಲಿಸಿ ಒಪ್ಪಿಗೆ ಪಡೆಯುವುದು ಅತ್ಯಗತ್ಯ ಪ್ರಕ್ರಿಯೆ. ಟಿಒಆರ್‌ಗೆ ಒಪ್ಪಿಗೆ ನೀಡಬೇಕು ಎಂದು ಕೋರಿ ಕರ್ನಾಟಕ ಸರ್ಕಾರವು ಸಚಿವಾಲಯಕ್ಕೆ 2019ರ ಜೂನ್‌ನಲ್ಲಿ ಪ್ರಸ್ತಾವನೆ ಸಲ್ಲಿಸಿತ್ತು. ಸಚಿವಾಲಯವು 2022ರ ಸೆಪ್ಟೆಂಬರ್‌ನಲ್ಲಿ ಪ್ರಸ್ತಾವನೆಯನ್ನು 'ಡಿ ಲಿಸ್ಟ್' ಮಾಡಿತ್ತು. 'ಈ ಯೋಜನೆಯು ಅಂತರ್ ರಾಜ್ಯ ಜಲ ವಿವಾದವನ್ನು ಒಳಗೊಂಡಿದೆ. ಹೀಗಾಗಿ, ಯೋಜನೆಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಒಪ್ಪಿಗೆ ಸಿಕ್ಕ ಬಳಿಕ ಹಾಗೂ ಜಲಶಕ್ತಿ ಸಚಿವಾಲಯವು ಡಿಪಿಆರ್‌ಗೆ ಒಪ್ಪಿಗೆ ನೀಡಿದ ನಂತರವಷ್ಟೇ ಟಿಒಆರ್‌ಗೆ ಒಪ್ಪಿಗೆ ನೀಡಲಾಗುವುದು' ಎಂದು ಪರಿಸರ ಸಚಿವಾಲಯ ಸ್ಪಷ್ಟಪಡಿಸಿತ್ತು.

PUBLIC NOTICE

This is to inform the General Public that we are conducting the title due diligence on behalf of our clients with respect to the property described in the Schedule hereto, situated at Thoranahalli Agrahara and Thoranahalli Village, Kasaba Hobli, Malur Taluk, Kolar District, owned / possessed by M/s. Venus Projects and **M/s. Venus Logy Park Private Limited.** Any person or persons, including an individual, a Hindu Undivided Family, a company, banks, financial institution(s), non- banking financial institution(s), a firm, an association of persons or a body of individuals whether incorporated or not, lenders and/or creditors having any objection, claim, right, title or interest in respect of Schedule Property having any objection, claim, interest or right, title on the property described in the Schedule written hereunder or any part or portion thereof by way of any litigation(s) pending before any court or tribunal or governmental or statutory authority or by way of inheritance, succession, sale, exchange, mortgage, lien, pledge, gift, trust, bequest, possession, lease, charge, easement, grant, tenancy, maintenance, license, share, assignment, attachment, development rights, right of way, lispendens, reservation, agreement, FSI consumption or any liability or commitment or otherwise or encumbrance or demand of any nature whatsoever is hereby required to intimate the same to the undersigned in writing **within Ten (10) days** from the date of publication of this notice of his/her/its claim, if any, with all supporting documents, failing which the due diligence shall be completed without reference to such claim, and the claims, if any, of such person (s) shall be treated as waived and not binding on our client.

THE SCHEDULE REFERRED TO ABOVE

Sl. No.	Sy. No.	Extent		Boundaries
		Acres	Guntas	East by: E West by: W North by: N South by: S
1	30/6	-	08.08	E : Survey No. 30/1 W : Survey No. 30/7 N : Survey No. 48 S : Survey No. 30/3
2	31/3	-	14.08	E : Survey No. 31/4 W : Survey No. 31/1 N : Survey No. 30 S : Survey No. 31/2
3	31/4	-	29	E : Survey No. 31/5 W : Survey No. 31/3 N : Survey No. 30 S : Survey No. 31/2
4	31/5	-	14.08	E : Survey No. 31/6 W : Survey No. 31/4 N : Survey No. 30 S : Survey No. 31/2
5	31/6	-	14.08	E : Survey No. 28 W : Survey No. 31/5 N : Survey No. 30 S : Survey No. 31/2
6	32/1	-	05.08	E : Survey No. 32/3 W : Survey No. 39 N : Survey No. 40 S : Survey No. 32/4
7	32/3	-	05.08	E : Survey No. 31 W : Survey No. 32/1 & 32/4 N : Survey No. 40 S : Survey No. 32/5
8	32/4	-	11	E : Survey No.32/3 & 32/5 W : Survey No. 35 N : Survey No. 32/1 S : Survey No. 32/6
9	32/5	-	05.08	E : Survey No. 31 W : Survey No. 32/4 & 32/6 N : Survey No. 32/3 S : Survey No. 32/2
10	40/1	-	04	E : Survey No. 31 W : Survey No. 40/2 N : Survey No. 41 & 42 S : Survey No. 32
11	40/2	-	04	E : Survey No. 40/1 W : Survey No. 40/3 N : Survey No. 41 & 42 S : Survey No. 32
12	40/3	-	08	E : Survey No. 40/2 W : Survey No. 40/4 N : Survey No. 41 & 42 S : Survey No. 32
13	41/3	-	06.12	E : Survey No. 30/2 W : Survey No. 42 N : Survey No. 41/2 S : Survey No. 41/4
14	49/2	-	15.08	E : Survey No. 51/1 & 50/1 W : Survey No. 48/4 & 48/3 N : Survey No. 49/4 S : Survey No. 29
15	49/7	-	13.08	E : Survey No. 51/1 W : Survey No. 48/4 N : Survey No. 49/2 S : Survey No. 49/8
16	49/8	-	15	E : Survey No. 50/1 W : Survey No. 48/3 N : Survey No. 49/7 S : Survey No. 49/9
17	49/9	-	15	E : Survey No. 50/1 W : Survey No. 48/2 & Sy. No 30 N : Survey No. 49/8 S : Survey No. 29
18	49/5	-	34	E : Survey No. 51/1 W : Survey No. 48/2, 48/3 N : Survey No. 51/3 S : Survey No. 49/6
19	49/6	-	16	E : Survey No. 51/1 W : Survey No. 48/2 N : Survey No. 49/5 S : Survey No. 49/3
20	49/3	-	10	E : Survey No. 51/1 W : Survey No. 48/3 N : Survey No. 49/5 S : Survey No. 49/4
21	49/4	-	10	E : Survey No. 51/1 W : Survey No. 48/3 N : Survey No. 49/3 S : Survey No. 49/2
22	51/4	-	26.12	E : Survey No. 4/2 W : Survey No. 49 N : Survey No. 51/5 S : Survey No. 51/1
23	51/5	-	26.12	E : Survey No. 4/2 W : Survey No.49 N : Survey No. 51/6 S : Survey No. 51/4
24	51/6	-	26.12	E : Survey No. 4/2 W : Survey No. 49 N : Survey No. 51/2 & 51/3 S : Survey No. 51/5
25	23/1	03	20	E : Land belonging to Narayanappa W : Kere Angala N : Land belonging to Venkateshappa & Shivanapura Munishyamappa S : Land belonging to Hoskote Srinivas
26	37/1	-	25.08	E : Survey No. 38 W : Survey No. 197 & Thoranahalli Village Boundary N : Survey No. 37/2 S : Survey No. 37/4
27	28/2	-	10	E : Survey No. 7 W : Survey No. 28/1 N : Survey No. 29 S : Survey No. 28/3 & 23
28	42/1	-	07	E : Survey No. 41 W : Survey No. 38 N : Survey No. 43/2 & 43/3 S : Survey No. 42/2
29	29	04	35	E : Land belonging to Thatappa and Banyan Tree W : Land belonging to Gadheappa N : Land belonging to Poovanna S : Kaluve
30	31/1	-	14.08	E : Survey No. 31/3 W : Survey No. 40 & Sy.No 32 N : Survey No. 30 S : Survey No. 31/2
31	32/6	-	05.08	E : Survey No. 32/2 & 32/5 W : Survey No. 35 N : Survey No. 32/4 S : Survey No. 33
32	37/3	-	04.08	E : Survey No. 37/4 W : Survey No. 197 N : Survey No. 37/1 S : Survey No. 37/6
33	37/7	-	06.08	E : Survey No. 37/6 W : Thoranahali Village Boundary N : Survey No. 37/3 & 37/4 S : Survey No. 36
34	43/3	-	05	E : Survey No. 41 W : Survey No. 46 N : Anjinappa's Land S : Anjinappa's Land
35	43/2	-	05	E : Survey No. 41 W : Survey No. 38 N : Survey No. 4 S : Survey No. 3
36	43/4	-	05	E : Survey No. 41 W : Survey No. 38 N : Survey No. 43/2 S : Survey No. 42
37	42/2	-	07	E : Land belonging to Muniyappa W : Land belonging to Venkateshappa N : Land belonging to V. Anjinappa S : Land belonging to Muniyappa
38	42/3	-	06	E : Land belonging to Venkatashamappa W : Land belonging to Venkateshappa N : Land belonging to Muniyappa S : Karabi Kaluve
39	42/4	-	06	E : Land belonging to Venkatashamappa W : Land belonging to Venkatesha Bhatta N : Land belonging to Krishnappa S : Land belonging to V. Anjinappa
40	42/5	-	06	E : Land belonging to Muniyappa W : Land belonging to Venkateshappa N : Land belonging to Venkateshappa S : Land belonging to Munishamappa
41	50/2	-	09	E : Survey No. 50/3 W : Survey No. 50/1 N : Survey No. 51/1 S : Survey No. 29
42	50/3	-	09	E : Survey No. 50/4 W : Survey No. 50/2 N : Survey No. 50/2 S : Survey No. 29
43	50/4	-	09	E : Survey No. 50/5 W : Survey No. 50/3 N : Survey No. 51/1 S : Survey No. 29
44	50/5	-	05	E : Survey No. 4/2 W : Survey No. 50/4 N : Survey No. 51/1 S : Survey No. 29
45	51/1	-	26.12	E : Survey No. 4/2 W : Survey No. 49 N : Sy No. 51/4 S : Survey No. 50/1, 50/2, 50/3, 50/4, 50/5
46	36/1	-	14	E : Land belonging to Balakrishnappa W : Survey No. 197/P1 N : Survey No. 36/1 S : Land belonging to Doddamuniyappa
47	37/5	-	04.04	E : Survey No. 38 W : Survey No. 37/4 N : Survey No. 37/1 S : Survey No. 37/6
48	37/6	-	06.08	E : Survey No. 38 W : Survey No. 37/7 N : Survey No. 37/5 S : Survey No. 36
49	39	-	14	E : Survey No. 32 W : Survey No. 36 N : Survey No. 38 S : Survey No. 35
50	43/1	-	05	E : Survey No. 41 W : Survey No. 38 N : Survey No. 44 S : Survey No. 43
51	137/1	1	20	E : Survey No. 137/3 W : Survey No. 137/2 & 138 N : Survey No.141 & 138 S : Survey No.137/2 & 136
52	40/4	-	04	E : Survey No 40/3 W : Survey No 38 and 39 N : Survey No 41 and 42 S : Survey No. 32
53	293 (old no 197)	-	18	E : Agrahara Boundary W : PWD Road N : Private Land S : Remaining Land
54	136/2	1	30	E : Toranahalli Agrahara boundary W : Road N : Survey No. 136, block I S : Survey No. 197
55	137/2	-	34	E : Survey No. 137/1 W : Survey No. 138 N : Survey No. 137/1 S : Survey No. 136
56	137/3	2	05	E : Toranahalli Agrahara Village Boundary W : Survey No. 137/1 N : Survey No. 138 & 161 S : Survey No. 293

FoxMandal
Solicitors & Advocates

S. T. Prashantha Kumar, Advocate & Senior Partner
Fox Mandal & Associates
"FM House" , 6/12, Primrose Road, Bangalore 560 025
Phone : +91 80 2559 5911,
e-mail: prashantha.kumar@foxmandal.in



ಒಂದು ಕೀಬೋರ್ಡ್ ಹಾಳಾದರೆ, ಒಂದೆರಡು ಸಾವಿರದಲ್ಲಿ ಹೊಸ ಕೀಬೋರ್ಡ್ ಸಿಗುತ್ತದೆ ಎಂದಾದರೆ, ಆಗ ನಾವು 30-40 ಸಾವಿರ ರೂಪಾಯಿಗಳನ್ನು ಕೊಟ್ಟು ಹೊಸ ಲ್ಯಾಪ್‌ಟಾಪನ್ನು ಖರೀದಿಸುವ ಅನಿವಾರ್ಯಕ್ಕೆ ಬೀಳುವುದಿಲ್ಲ; ಎಲೆಕ್ಟ್ರಾನಿಕ್ಸ್ ತ್ಯಾಜ್ಯವೂ ಹೆಚ್ಚಾಗುವುದಿಲ್ಲ

ಎಲೆಕ್ಟ್ರಾನಿಕ್ ವಸ್ತುಗಳಿಗೆ ರಿಪೇರಿಯ ಟಾನಿಕ್!

• ಕೃಷ್ಣಭಟ್

ದಿನಬಳಕೆಯ ಎಲೆಕ್ಟ್ರಾನಿಕ್ ವಸ್ತುಗಳನ್ನು ಬಳಸಿ ಅದು ಹಾಳಾದಾಗ ಬಿಸಾಡುವ ವ್ಯವಸ್ಥೆಯಿಂದಾಗಿ ನಮ್ಮಲ್ಲಿ ಎಲೆಕ್ಟ್ರಾನಿಕ್ ತ್ಯಾಜ್ಯ ಹೆಚ್ಚುತ್ತಿರುವುದು ಎಲ್ಲರಿಗೂ ಗೊತ್ತೇ ಇದೆ. ಈ ಹಿಂದೆ, ಒಂದು ರೇಡಿಯೊವನ್ನು ಕೊಂಡರೆ ಅದನ್ನು ಜೀವನಪರ್ಯಂತ ಇಟ್ಟುಕೊಂಡು, ಅದರ ಯಾವ ಬಿಡಿಭಾಗ ಹಾಳಾಗಿಹೋದರೂ, ಆ ಬಿಡಿಭಾಗವನ್ನಷ್ಟೇ ಬದಲಿಸುವ ವ್ಯವಸ್ಥೆ ಇತ್ತು. ಕಾಲಕ್ರಮೇಣ ಎಲ್ಲ ಎಲೆಕ್ಟ್ರಾನಿಕ್ಸ್ ಸಲಕರಣೆಗಳೂ ಚಿಕ್ಕದಾಗುತ್ತಾ ಬಂದವು. ಇದರಿಂದ ಈ ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳಿಗೆ ಈ ಹಿಂದೆ ಇದ್ದ ಹೊಂದಿಕೊಳ್ಳುವ ಗುಣ ಕಡಿಮೆಯಾಗುತ್ತಾ ಬಂದವು. ಊರೂರಿನಲ್ಲೂ ಇರುತ್ತಿದ್ದ ಎಲೆಕ್ಟ್ರಾನಿಕ್ಸ್ ರಿಪೇರಿ ಅಂಗಡಿಗಳು ಮಂಕಾಗುತ್ತಾ ಬಂದವು. ಬದಲಿಗೆ, ಎಲೆಕ್ಟ್ರಾನಿಕ್ಸ್ ಮಾರಾಟದ ಅಂಗಡಿಗಳು ಹೊಸ ಹೊಸ ಎಲ್‌ಇಡಿ ಲೈಟ್‌ಗಳನ್ನು ಹಾಕಿಕೊಂಡು ಝಗಮಗಿಸುವುದಕ್ಕೆ ಶುರುವಾದವು. ಈಗ ಒಂದು ಬಿಡಿಭಾಗ ಹಾಳಾದರೆ, ಇಡೀ ಸಲಕರಣೆಯನ್ನೇ ನಾವು ಎಸೆದು ಹೊಸದು ಖರೀದಿಸಬೇಕಾದ ಪರಿಸ್ಥಿತಿ ಬಂದಿದೆ. ಇದರಿಂದ ಮಾರಾಟ ಉದ್ಯಮ ಚಿಗಿತುಕೊಂಡಿತು. ಆದರೆ, ರಿಪೇರಿ ಉದ್ಯಮ ನೆಲಕಚ್ಚಿತು.

ಇತ್ತೀಚೆಗೆ ಮತ್ತೆ ಈ ರಿಪೇರಿ ಮಾಡಬಹುದಾದ ಸಾಧ್ಯತೆಯನ್ನು ಹೆಚ್ಚಿಸುವ ಕುರಿತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಧ್ವನಿ ಎದ್ದಿದೆ. ಡೆಸ್ಕ್‌ಟಾಪ್ ಕಂಪ್ಯೂಟರ್ ವಿಷಯದಲ್ಲಿ ಈವರೆಗೆ ಈ ಅನುಕೂಲಸಿಂಧು ವ್ಯವಸ್ಥೆ ಜಾರಿಯಲ್ಲಿತ್ತು. ನಮಗೆ ಬೇಕಾದ ಮಾನಿಟರ್ ಅನ್ನು ನಾವು ತಂದಿಟ್ಟುಕೊಳ್ಳಬಹುದು. ಸಿಪಿಯು ಒಳಗೆ ಇದ್ದ ಫ್ಯಾನ್ ಹಾಳಾದರೆ, ಅದಷ್ಟನ್ನೇ ತಂದು ಜೋಡಿಸಿಕೊಳ್ಳಬಹುದು. ಹಾರ್ಡ್‌ಡಿಸ್ಕ್ ಹಾಳಾದರೆ, ಹಾರ್ಡ್‌ಡಿಸ್ಕ್, ರ್‍ಯಾಮ್ ಅಪ್‌ಗ್ರೇಡ್ ಮಾಡಬೇಕಾದರೆ ರ್‍ಯಾಮ್, ಹೀಗೆ ಬಹುತೇಕ ಬಿಡಿಭಾಗಗಳನ್ನು ಬದಲಿಸಿಕೊಳ್ಳಬಹುದಾಗಿತ್ತು. ಕೆಲವು ಬಿಡಿಭಾಗಗಳಲ್ಲಿ ಕಂಪ್ಯಾಟಿಬಿಲಿಟಿ ಸಮಸ್ಯೆ ಇದೆ. ಉದಾಹರಣೆಗೆ, ಎಲ್ಲ ಪ್ರೊಸೆಸರ್ ಮತ್ತು ಮದರ್‌ಬೋರ್ಡ್‌ಗಳೂ ಹೊಂದಿಕೆಯಾಗುವುದಿಲ್ಲ. ಸಾಕೆಟ್, ಚಿಪ್‌ಸೆಟ್ ಹಾಗೂ ಬಯೋಸ್ ಆಧರಿಸಿ ಇವು ಬದಲಾಗುತ್ತವೆ.

ಆದರೆ, ಈವರೆಗೆ ಲ್ಯಾಪ್‌ಟಾಪ್‌ನಲ್ಲಿ ಈ ಸಮಸ್ಯೆ ಹಾಗೆಯೇ ಇತ್ತು. ಇಲ್ಲಿ ಅಪ್‌ಗ್ರೇಡ್ ಮಾಡುವುದಕ್ಕೆ ಅವಕಾಶವೇ ಇರಲಿಲ್ಲ. ನೀವು ರ್‍ಯಾಮ್, ಹಾರ್ಡ್‌ಡಿಸ್ಕ್, ಕೀಬೋರ್ಡ್ ಅಪ್‌ಗ್ರೇಡ್ ಹಾಗೂ ಬದಲಾವಣೆ ಮಾಡುವುದಕ್ಕೆ ಸ್ವಲ್ಪ ಮಟ್ಟಿನ ಅವಕಾಶವಿದ್ದರೂ, ಉಳಿದ ಯಾವುದನ್ನೂ ರಿಪ್ಲೇಸ್ ಮಾಡುವ ಸಾಧ್ಯತೆ ಕಡಿಮೆಯೇ. ಒಂದು ವೇಳೆ ರಿಪೇರಿ ಮಾಡಬೇಕಾದರೂ ಅದೇ ಕಂಪನಿಯ ಅದೇ ಮಾಡೆಲ್‌ಗೆಂದೇ ನಿರ್ಮಿಸಿದ್ದಾದ್ದರಿಂದ, ಅವುಗಳನ್ನು ಅದೇ ಕಂಪನಿಯಿಂದಲೇ ತರಿಸಿಕೊಳ್ಳಬೇಕಾಗುತ್ತದೆ. ಅಷ್ಟೇ ಅಲ್ಲ, ಅದು ಬಹುತೇಕ ಸಂದರ್ಭದಲ್ಲಿ ಸುಲಭಕ್ಕೆ ಸಿಗುವುದೂ ಇಲ್ಲ; ಸಿಕ್ಕರೂ, ಅದರ ರೇಟ್ ವಿಪರೀತ ಹೆಚ್ಚೇ ಇರುತ್ತದೆ.

ಹೀಗಾಗಿ, ಹೆಚ್ಚಿನ ಜನರು ಲ್ಯಾಪ್‌ಟಾಪ್ ರಿಪೇರಿ ಅಥವಾ ಅಪ್‌ಗ್ರೇಡ್ ಮಾಡುವುದರ ಬದಲಿಗೆ ಹೊಸದನ್ನೇ ಖರೀದಿ ಮಾಡಿಬಿಡುತ್ತಾರೆ.

ಆದರೆ, ಈಗ ಕೆಲವು ಕಂಪನಿಗಳು ಈ ಸಮಸ್ಯೆಯನ್ನ ನಿವಾರಿಸುವ ಪ್ರಯತ್ನಕ್ಕೆ ಹೊರಟಿವೆ. ಮೊದಲು 'ಫ್ರೇಮ್‌ವರ್ಕ್' ಎಂಬ ಕಂಪನಿ ಇಂತಹ ರಿಪೇರಿ ಮಾಡಬಹುದಾದ ಲ್ಯಾಪ್‌ಟಾಪ್ ತಯಾರಿಕೆ ಮಾಡುವ ಮೂಲಕ ಮಾರುಕಟ್ಟೆಯಲ್ಲಿ ಹೊಸ ಬದಲಾವಣೆಯನ್ನು ಆರಂಭಿಸಿದೆ. ಖುಷಿಯ ಸಂಗತಿಯೇನೆಂದರೆ, ಲೆನೊವೋದಂತಹ ಜನಪ್ರಿಯ ಕಂಪನಿಗಳೂ ಈ ನಿಟ್ಟಿನಲ್ಲಿ ಪ್ರಯತ್ನ ನಡೆಸುತ್ತಿರುವುದು.

ಫ್ರೇಮ್‌ವರ್ಕ್ ಕಂಪನಿಯ ಲ್ಯಾಪ್‌ಟಾಪ್ ಖರೀದಿ ಮಾಡಿದರೆ, ಅದರಲ್ಲಿನ ಯುಎಸ್‌ಬಿಸಿ, ಎಚ್‌ಡಿಎಂಐ ಪೋರ್ಟ್‌ಗಳನ್ನು ಬದಲಿಸುವುದರ ಜೊತೆಗೆ, ರ್‍ಯಾಮ್, ಎಸ್‌ಎಸ್‌ಡಿ, ಕೀಬೋರ್ಡ್, ಟಚ್‌ಪ್ಯಾಡ್, ಬ್ಯಾಟರಿಗಳನ್ನು ಬದಲಾವಣೆ ಮಾಡಿಕೊಳ್ಳಬಹುದು. ಅಷ್ಟೇ ಅಲ್ಲ, ಮದರ್‌ಬೋರ್ಡ್‌ಗಳನ್ನೂ ಅಪ್‌ಗ್ರೇಡ್ ಮಾಡಬಹುದು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಇದರ ಲ್ಯಾಪ್‌ಟಾಪ್ ರಿಪೇರಿ ಮಾಡಿಕೊಳ್ಳುವುದಕ್ಕೆ ಅಂದರೆ, ಒಂದು ಬಿಡಿಭಾಗವನ್ನು ತೆಗೆದು ಇನ್ನೊಂದನ್ನು ಅಳವಡಿಸುವ ವಿಧಾನಗಳನ್ನು ಕಂಪನಿ ವೀಡಿಯೋ ಮೂಲಕ ತಿಳಿಸಿಕೊಡುತ್ತದೆ. ಬಿಡಿಭಾಗಗಳ ಮೇಲೆ ಇರುವ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿದರೆ, ಬಿಡಿಭಾಗವನ್ನು ಖರೀದಿ ಮಾಡುವ ಸೌಲಭ್ಯ, ಅದನ್ನು ತೆಗೆದು ಹೊಸದು ಅಳವಡಿಸುವುದು ಹೇಗೆ ಎಂಬ ಎಲ್ಲ ಮಾಹಿತಿಯೂ ವೀಡಿಯೋ ಸಮೇತ ಇರುತ್ತದೆ.

ಒಂದು ಲ್ಯಾಪ್‌ಟಾಪ್ ಕೊಂಡರೆ, ಹತ್ತಾರು ವರ್ಷಗಳ ಕಾಲ ಇಟ್ಟುಕೊಳ್ಳಬಹುದು. ಅಗತ್ಯಕ್ಕೆ ತಕ್ಕ ಹಾಗೆ ಅಪ್‌ಗ್ರೇಡ್ ಮಾಡಿಕೊಳ್ಳಬಹುದು, ಬಳಸಿ ಹಾಳಾದ ಬಿಡಿಭಾಗಗಳನ್ನು ಬದಲಿಸಿಕೊಳ್ಳುತ್ತಾ ಇರಬಹುದು.

ಇದೇ ದಾರಿಯಲ್ಲಿ ಲೆನೊವೊ ಕೂಡ ಸಾಗಿದೆ. ಕಂಪನಿ ಹೇಳುವ ಪ್ರಕಾರ ಲೆನೊವೊದ ಕೆಲವು ಸರಣಿಯ ಲ್ಯಾಪ್‌ಟಾಪ್‌ಗಳ ಬ್ಯಾಟರಿಗಳು, ರ್‍ಯಾಮ್ ಹಾಗೂ ಎಸ್‌ಎಸ್‌ಡಿಗಳನ್ನು ಬದಲಿಸಬಹುದು. ಆದರೆ, ಸದ್ಯಕ್ಕೆ ಲ್ಯಾಪ್‌ಟಾಪ್ ಬಿಚ್ಚಿ, ಬಿಡಿಭಾಗಗಳನ್ನು ತೆಗೆದು, ಹೊಸದನ್ನು ಅಳವಡಿಸಲು ನಾವು ಪರಿಣಿತರ ಬಳಿಯೇ ಹೋಗಬೇಕಿರುತ್ತದೆ. ಕಂಪನಿ ಬಿಡಿಭಾಗಗಳನ್ನು ಮಾರುವುದಕ್ಕೆಂದೇ ಪ್ರತ್ಯೇಕ ವೆಬ್‌ಸೈಟ್ ರೂಪಿಸಿದ್ದು, ಅದರಲ್ಲಿ ಬಿಡಿಭಾಗಗಳನ್ನು ಖರೀದಿ ಮಾಡಬಹುದು. ಕಂಪನಿ ಹೇಳುವ ಪ್ರಕಾರ, ಒಂದು ಲ್ಯಾಪ್‌ಟಾಪ್‌ನಲ್ಲಿರುವ ಶೇ. 80ರಷ್ಟು ಬಿಡಿಭಾಗಗಳನ್ನು ಬದಲಿಸುವ ಅನುಕೂಲವನ್ನು ಒದಗಿಸುವ ಗುರಿಯನ್ನು ಕಂಪನಿ ಹೊಂದಿದೆಯಂತೆ.

ಇನ್ನು ಖರೀದಿಯಲ್ಲಿ ಕಸ್ಟಮೈಸೇಶನ್ ಸೌಲಭ್ಯವನ್ನೂ ಕೆಲವು ಕಂಪನಿಗಳು ಒದಗಿಸುವುದಕ್ಕೆ ಆರಂಭ ಮಾಡಿವೆ. ಅಂದರೆ, ನಮಗೆ ರ್‍ಯಾಮ್ ಹೆಚ್ಚು ಬೇಕು ಎಂದರೆ, ಅದನ್ನಷ್ಟೇ ಹೆಚ್ಚಿಸಿಕೊಡುವುದು, ಗ್ರಾಫಿಕ್ಸ್ ಕಾರ್ಡ್ ಮಾತ್ರ ಹೆಚ್ಚು ಹಾಕಿಕೊಡುವುದು, ಇತ್ಯಾದಿ ಸೌಲಭ್ಯಗಳು ಕೆಲವು ಕಂಪನಿಗಳಲ್ಲಿವೆಯಾದರೂ, ಇದೇ ಸೌಲಭ್ಯ ರಿಪೇರಿ ಹಾಗೂ ಅಪ್‌ಗ್ರೇಡ್ ವಿಷಯಕ್ಕೆ ಬಂದಾಗ ಕಂಪನಿಗಳು ನಿರ್ಲಕ್ಷ್ಯ ತಾಳುತ್ತವೆ.

ಗ್ರಾಹಕರಾಗಿ ರಿಪೇರಿಯಲ್ಲಿ ಕಂಪ್ಯಾಟಿಬಿಲಿಟಿ ಹೆಚ್ಚು ಮುಖ್ಯವಾಗುತ್ತದೆ. ಒಂದು ಕೀಬೋರ್ಡ್ ಹಾಳಾದರೆ, ಒಂದೆರಡು ಸಾವಿರದಲ್ಲಿ ಹೊಸ ಕೀಬೋರ್ಡ್ ಸಿಗುತ್ತದೆ ಎಂದಾದರೆ, ಆತ 30-40 ಸಾವಿರ ರೂಪಾಯಿಗಳನ್ನು ಕೊಟ್ಟು ಹೊಸ ಲ್ಯಾಪ್‌ಟಾಪನ್ನು ಖರೀದಿ ಮಾಡುವ ಅನಿವಾರ್ಯಕ್ಕೆ ಬೀಳುವುದಿಲ್ಲ. ಇದರಿಂದ, ಗ್ರಾಹಕರಿಗೆ ಎಲೆಕ್ಟ್ರಾನಿಕ್ಸ್ ಹೊರೆಯಾಗುವುದಿಲ್ಲ. ಜೊತೆಗೆ, ಎಲೆಕ್ಟ್ರಾನಿಕ್ಸ್ ತ್ಯಾಜ್ಯವೂ ಹೆಚ್ಚಾಗುವುದಿಲ್ಲ. ಆದರೆ, ಹೀಗೆ ಮಾಡಿದರೆ ಕಂಪನಿಗಳ ಮಾರಾಟ ಹೆಚ್ಚಳವಾಗುವುದಿಲ್ಲವಲ್ಲ! ಒಬ್ಬ ಲ್ಯಾಪ್‌ಟಾಪ್ ಖರೀದಿ ಮಾಡಿದರೆ, ಹತ್ತಾರು ವರ್ಷ ಅದನ್ನು ಇಟ್ಟುಕೊಂಡು ಬಳಸಬಹುದು, ಕೆಲವು ಬಿಡಿಭಾಗಗಳನ್ನಷ್ಟೇ ಬದಲಿಸಿಕೊಂಡರೆ ಸಾಕಾಗುತ್ತದೆ ಎಂದಾದರೆ, ಕಂಪನಿಗಳ ವಹಿವಾಟು ಕುಸಿಯುತ್ತದೆ ಎಂಬ ಕಾರಣಕ್ಕೆ ಕಂಪನಿಗಳು ಈ ಅನುಕೂಲ ಒದಗಿಸುವುದರತ್ತ ಹೆಚ್ಚಿನ ಒತ್ತು ನೀಡುವುದಿಲ್ಲ.

ವಿದ್ಯುತ್ತನ್ನು ಕೊಡುವ ಕೃತಕ ಸೂರ್ಯ

• ನೇಸರ ಕಾಡನಕುಪ್ಪೆ



ಈಗ ಎಲ್ಲೆಡೆ ವಿದ್ಯುಚ್ಚಾಲಿತ ವಾಹನಗಳದೇ ಸದ್ದು, ಅಲ್ಲವೇ? ಆದರೆ, ವಿದ್ಯುತ್ ಉತ್ಪಾದನೆ ಅಗತ್ಯಕ್ಕೆ ತಕ್ಕಷ್ಟು ಆದಲ್ಲಿ ಮಾತ್ರವೇ ಅಲ್ಲವೇ ಈ ವಿದ್ಯುತ್ ವಾಹನಗಳು ಸಂಚರಿಸುವುದು. ನಮ್ಮ ದಿನನಿತ್ಯ ಬಳಕೆಗೆ ವಿದ್ಯುತ್, ಕೈಗಾರಿಕೆಗಳಿಗೆ ವಿದ್ಯುತ್ – ಹೀಗೆ, ವಿದ್ಯುತ್ ನಮಗೆ ಅಪರಿಮಿತವಾಗಿ ಬೇಕಾಗಿದೆ. ಈಗಿರುವ ವಿದ್ಯುತ್ ಉತ್ಪಾದನಾ ತಂತ್ರಜ್ಞಾನ ಅದನ್ನು ಪೂರೈಸುವಷ್ಟು ಸಮರ್ಥವಾಗಿಲ್ಲ. ಈಗೊಂದು ಹೊಸ ಸಂಶೋಧನೆಯಾಗಿದೆ. ಅದುವೇ 'ಕೃತಕ ಸೂರ್ಯ'! 'ಕೃತಕ ಸೂರ್ಯ'! ಇದು ಅಚ್ಚರಿಯಾದರೂ ನಿಜ. ಹೀಗೊಂದು ಸಂಶೋಧನೆ ಚೀನಾದಲ್ಲಿ ನಡೆದಿದೆ. ಈ ಸಂಶೋಧನೆಯು ಸಮರ್ಥವಾಗಿ ಬಳಕೆಗೆ ಬಂದರೆ, ವಿದ್ಯುತ್ ಉತ್ಪಾದನೆಗಾಗಿ ಈಗಿರುವ ಸಾಕಷ್ಟು ವಿಧಾನಗಳು ಪಕ್ಕಕ್ಕೆ ಸರಿದು, ಸಂಪೂರ್ಣ ಹೊಸ ಅಲೆಯೇ ಸೃಷ್ಟಿಯಾಗುತ್ತದೆ.

ಕೃತಕ ಸೂರ್ಯ

ಕೃತಕ ಸೂರ್ಯನ ಬಗ್ಗೆ ಮಾತನಾಡುವ ಮುನ್ನ ನಮ್ಮ ನಿಜವಾದ ಸೂರ್ಯನ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ನಮ್ಮ ಶಕ್ತಿಮೂಲವಾದ ಸೂರ್ಯ ನಿಜವಾಗಿಯೂ ಒಂದು ಅತಿ ದೊಡ್ಡ ಒಲೆ ಇದ್ದಂತೆ. ಅದರಲ್ಲಿರುವ ಅಪಾರ ಪ್ರಮಾಣದ ಜಲಜನಕವು ಅಣುವಿದಳನಗೊಂಡು ಶಕ್ತಿ ಉತ್ಪಾದನೆಯಾಗುತ್ತದೆ. ಸೂರ್ಯನಲ್ಲಿ ಅದೆಷ್ಟು ಪ್ರಮಾಣದ ಜಲಜನಕ ಅನಿಲವಿದೆಯೆಂದರೆ, ಅದು ಖಾಲಿಯಾಗಲು ಇನ್ನೂ ಸಾವಿರಾರು ಕೋಟಿ ವರ್ಷಗಳು ಬೇಕಾಗುವುದು. ಖಾಲಿಯಾದಂತೆ ಸೂರ್ಯನಿಗೆ ವಯಸ್ಸಾಗ ತೊಡಗಿ, ವಿವಿಧ ಹಂತಗಳನ್ನು ದಾಟಿ ಅದು ಅದರ ಅಂತ್ಯಕ್ಕೆ ತಲುಪುವುದು. ಸೂರ್ಯನ ಈ ಜೀವನಶೈಲಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿರುವ ವಿಜ್ಞಾನಿಗಳು ಇದುವರೆಗೂ ಸಾಕಷ್ಟು ಸಂಶೋಧನೆಗಳನ್ನು ನಡೆಸಿದ್ದಾರೆ.

ಚೀನಾದ ಹಾಸ್‌ಹಾಂಗ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಸಹಪ್ರಾಧ್ಯಾಪಕ ಪ್ರೊ. ಪಿಂಗ್ ಝೂ ಅವರು ಈ 'ಕೃತಕ ಸೂರ್ಯ'ನನ್ನು ಸಂಶೋಧಿಸಿದ್ದಾರೆ. ಈ ಸಂಶೋಧನೆಯು ಪ್ರತಿಷ್ಠಿತ 'ನೇಚರ್' ನಿಯತಕಾಲಿಕೆಯಲ್ಲಿ ಪ್ರಕಟಗೊಂಡಿದ್ದು, ವಿಜ್ಞಾನಿಗಳ ಸಮುದಾಯವು ಕುತೂಹಲ–ಅಚ್ಚರಿಗಳ ಜೊತೆಗೆ ಕಳವಳವನ್ನೂ ವ್ಯಕ್ತಪಡಿಸಿದೆ.

ಚೀನಾದಲ್ಲಿರುವ 'ಎಕ್ಸ್‌ಪರಿಮೆಂಟಲ್ ಅಡ್ವಾನ್ಸಡ್ ಸೂಪರ್‌ಕಂಡಕ್ಟಿಂಗ್ ಟಾಕ್‌ಮಾಕ್'(EAST)ನಲ್ಲಿ ಜಲಜನಕ ಅಣುವಿದಳನ ಪ್ರಕ್ರಿಯೆಯನ್ನು ನಡೆಸಿದ್ದು, 'ಒತ್ತಡ ರಹಿತ ದಹನ'ಕ್ರಿಯೆಯನ್ನು ನಡೆಸಿದ್ದಾರೆ.

ಸಾಮಾನ್ಯವಾಗಿ ಯಾವುದೇ ಅಣುವಿದ್ಯುತ್ ಸ್ಥಾವರದಲ್ಲೂ ಅಣುವಿದಳನ ಪ್ರಕ್ರಿಯೆ ನಡೆಯುವಾದ ಒತ್ತಡ ದಹನ ನಡೆದೇ ನಡೆಯುತ್ತದೆ. ಹಾಗಾಗಿ, ಅಪಾರ ಪ್ರಮಾಣದ ಶಾಖ ಉತ್ಪಾದನೆಯಾಗುತ್ತದೆ. ಈ ಶಾಖವನ್ನೇ ವಿದ್ಯುತ್ ಉತ್ಪಾದನೆಗೆ ಬಳಸಿಕೊಂಡು ಟರ್ಬೈನ್‌ಗಳನ್ನು ಚಾಲನೆಗೆ ಒಳಪಡಿಸಿ ವಿದ್ಯುತ್ ಉತ್ಪಾದಿಸುವುದು. ಆದರೆ, ಅಲ್ಲಿ ಉತ್ಪಾದನೆಯಾಗುವ ಒತ್ತಡ ಅಪಾರ ಪ್ರಮಾಣದಲ್ಲಿದ್ದು, ಅದನ್ನು ನಿಯಂತ್ರಿಸಬೇಕಾಗುತ್ತದೆ. ಇಲ್ಲವಾದರೆ, ಚರ್ನೋಬಿಲ್ ಇತ್ಯಾದಿ ಕಡೆಗಳಲ್ಲಿ ನಡೆದಿರುವ ದೊಡ್ಡ ಪ್ರಮಾಣದ ಅವಘಡಗಳಾಗುವ ಸಂಭವ ಇರುತ್ತದೆ. ಆದರೆ, 'ಒತ್ತಡ ರಹಿತ ದಹನ'ಕ್ರಿಯೆಯಲ್ಲಿ ದಹನ ಆಗುವುದಾದರೂ, ವಿಧಾನ ಬೇರೆ. ಇಲ್ಲಿ ಒತ್ತಡವೇ ಇರುವುದಿಲ್ಲ. ಆದರೆ, ಶಕ್ತಿ ಅಪಾರ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತದೆ. ಇದು ಸೂರ್ಯನಲ್ಲಿನ ಶಾಖದ ಮಟ್ಟವನ್ನು ತಲುಪುತ್ತದೆ. ಅದಕ್ಕಾಗಿಯೇ ಇದನ್ನು 'ಕೃತಕಸೂರ್ಯ' ಎಂದು ಕರೆದಿರುವುದು. ಜೊತೆಗೆ, ಈ ಪ್ರಕ್ರಿಯೆಲ್ಲಿ ಉತ್ಪಾದನೆಯಾಗುವ ಪ್ಲಾಸ್ಮಾ ನಿಯಂತ್ರಿಸಬಹುದಾದ ಸ್ಥಿತಿಯಲ್ಲಿ ಇರಲಿದ್ದು, ಅದನ್ನು ಬಳಸಿಕೊಂಡು ವಿದ್ಯುತ್ ಉತ್ಪಾದನೆಯನ್ನು ಸರಳವಾಗಿ ನಡೆಸಬಹುದು. ಜೊತೆಗೆ, ಅಪಾಯವೂ ಕಡಿಮೆ.

ಪ್ರಯೋಜನ

ಇದು 'ಒತ್ತಡ ರಹಿತ ದಹನ'ವಾಗಿರುವ ಕಾರಣ, ಅತಿ ಕಡಿಮೆ ಅಪಾಯವಿರುತ್ತದೆ. ಆದ್ದರಿಂದ, ಒತ್ತಡ ನಿಯಂತ್ರಣಕ್ಕೆ ಬೇಕಾದ ಅಗತ್ಯ ಸೌಲಭ್ಯಗಳ ಬಳಕೆಯೇ ಕಡಿಮೆಯಾಗುತ್ತದೆ. ಸಹಜವಾಗಿ ಇದರಿಂದ ಅಪಾರ ಪ್ರಮಾಣದ ಹಣವೂ ಉಳಿತಾಯವಾಗುತ್ತದೆ. ಜೊತೆಗೆ, ಅಣುವಿದಳನ ಪ್ರಕ್ರಿಯೆಯ ಅತಿ ದೊಡ್ಡ ಅಪಾಯವೆಂದರೆ, ಅದರ ರೇಡಿಯೋ ಆ್ಯಕ್ಟಿವ್ (ವಿಕಿರಣಶೀಲತೆ). ಇದರಿಂದ ಕ್ಯಾನ್ಸರ್ ಇತ್ಯಾದಿ ಕಾಯಿಲೆಗಳು ಬರುತ್ತವೆ. ಈ ಅಪಾಯ ಇಲ್ಲಿ ಬಹುತೇಕ ಕಡಿಮೆ ಇರಲಿದೆ. ಹಾಗಾಗಿ, ವಿದ್ಯುತ್ ಸ್ಥಾವರಗಳಲ್ಲಿ ಕಾರ್ಯನಿರ್ವಹಿಸುವ ನೌಕರರು, ಕಡಿಮೆ ತೂಕದ ಸಮವಸ್ತ್ರಗಳನ್ನು ಧರಿಸಬಹುದು. ಇದರಿಂದ ವೃತ್ತಿಯ ಗುಣಮಟ್ಟ ಸುಧಾರಿಸಲಿದೆ. ಇದರಿಂದಾಗಿ ವ್ಯಕ್ತಿಗಳ ಕಾರ್ಯಕ್ಷಮತೆಯೂ ಸುಧಾರಿಸಲಿದೆ ಎಂದು ವಿಜ್ಞಾನಿ ಪಿಂಗ್ ಝೂ ಅವರ ತಂಡ ಸಮರ್ಥಿಸಿಕೊಂಡಿದೆ. ಇದದಿಂದ ಉಂಟಾಗುವ ಪರಿಸರಹಾನಿಯೂ ಕಡಿಮೆ; ವಿಕಿರಣ ತ್ಯಾಜ್ಯದ ಪ್ರಮಾಣವೂ ಕಡಿಮೆ ಇರಲಿದೆ.

'ಒತ್ತಡ ರಹಿತ ದಹನ' ಪ್ರಕ್ರಿಯೆ ಇರುವುದರಿಂದ ಪ್ಲಾಸ್ಮಾದಲ್ಲಿ ತ್ಯಾಜ್ಯದ ಪ್ರಮಾಣ ಕಡಿಮೆ ಇರಲಿದೆ. ಬಳಕೆಯಾದ ಪ್ಲಾಸ್ಮಾದಲ್ಲಿ ವಿಕಿರಣ ಪ್ರಮಾಣ ಇದ್ದರೂ ಅತಿ ಕಡಿಮೆ. ಹಾಗಾಗಿ, ತ್ಯಾಜ್ಯವನ್ನು ಸಂಸ್ಕರಿಸಿ ವಿಸರ್ಜಿಸುವ ಮಟ್ಟವೂ ಕಡಿಮೆಯಾಗುತ್ತದೆ. ಈಗಿರುವ ಸಾಂಪ್ರದಾಯಿಕ ವಿಧಾನದಲ್ಲಿ ಭೂಮಿಯ ಆಳದಲ್ಲಿ ತ್ಯಾಜ್ಯವನ್ನು ಶೇಖರಿಸಿ ಇಡಲಾಗುತ್ತಿದೆ. ಈ ತ್ಯಾಜ್ಯವು ಕಾಲಾಂತರದಲ್ಲಿ ಸೋರಿಕೆಯಾಗಿ ಭೂಮಿಯ ವಿವಿಧ ಪದರಗಳನ್ನು ಸೇರುವ ಅಪಾಯ ಇರುತ್ತದೆ. ಇಂಥ ಅಪಾಯ ಈ ಹೊಸ ವಿಧಾನದಲ್ಲಿ ಕಡಿಮೆ.

ಅಪಾಯ

ಯಾವುದೇ ತಂತ್ರಜ್ಞಾನಕ್ಕೂ ಅಪಾಯದ ಆಯಾಮವೂ ಇದ್ದೇ ಇರುತ್ತದೆ. ಈ ತಂತ್ರಜ್ಞಾನವು ಬಹುತೇಕ ಕಡಿಮೆ ಮೂಲಸೌಕರ್ಯ, ನೌಕರರನ್ನು ಬಯಸುತ್ತದೆ. ಅಲ್ಲದೇ, ಗಾತ್ರದಲ್ಲಿ ಕಡಿಮೆ ಜಾಗ ಸಾಕು. ಹಾಗಾಗಿ, ಇದು ಬಾಂಬ್ ಉತ್ಪಾದನೆಯನ್ನು ಉತ್ತೇಜಿಸುತ್ತದೆ ಎಂದು ವಿಜ್ಞಾನಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಹಿಂದೊಂದು ಕಾಲದಲ್ಲಿ ಅಣುವಿದಳನ ತಂತ್ರಜ್ಞಾನದ ಸಂಶೋಧನೆಯಾದಾಗ ಇದೇ ರೀತಿಯ ಆತಂಕವನ್ನು ವಿಜ್ಞಾನಿಗಳ ಸಮುದಾಯ ವ್ಯಕ್ತಪಡಿಸಿತ್ತು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ವಿದ್ಯುದಾವೇಶದ ಎಸ್‌ಐ(SI) ಏಕಮಾನವು.....................
ಎ) ಕೂಲಮ್ ಬಿ) ಆಂಪೀರ್
ಸಿ) ಜೂಲ್ ಡಿ) ವೋಲ್ಟ್
ಉತ್ತರ:– (ಎ) ಕೂಲಮ್

2) ಮಸೂರದ ಸಂಗಮದೂರದ ವಿಲೋಮವು
ಎ) ಮಸೂರದ ಸಾಮರ್ಥ್ಯವಾಗಿದೆ
ಬಿ) ಮಸೂರ ವಕ್ರತಾ ತ್ರಿಜ್ಯವಾಗಿದೆ
ಸಿ) ವಸ್ತುದೂರ ಮತ್ತು ಪ್ರತಿಬಿಂಬದೂರಗಳ ಮೊತ್ತಕ್ಕೆ ಸಮ
ಡಿ) ವಸ್ತುದೂರ ಮತ್ತು ಪ್ರತಿಬಿಂಬದೂರಗಳ ನಡುವನ ವ್ಯತ್ಯಾಸಕ್ಕೆ ಸಮ
ಉತ್ತರ:–(ಎ) ಮಸೂರದ ಸಾಮರ್ಥ್ಯವಾಗಿದೆ

3) ಬ್ಯೂಟನೋನ್ ನಾಲ್ಕು ಕಾರ್ಬನ್ ಪರಮಾಣು ಹೊಂದಿರುವ ಸಂಯುಕ್ತವಾಗಿದ್ದು, ಇದರಲ್ಲಿನ ಕ್ರಿಯಾಗುಂಪೆಂದರೆ
ಎ) ಕಾರ್ಬಾಕ್ಸಿಲಿಕ್ ಆಮ್ಲ ಬಿ) ಆಲ್ಡಿಹೈಡ್
ಸಿ) ಕೀಟೋನ್ ಡಿ) ಆಲ್ಕೋಹಾಲ್
ಉತ್ತರ:– (ಸಿ) ಕೀಟೋನ್

4)



ಮೇಲಿನ ಚಿತ್ರದಲ್ಲಿ ವ್ಯಕ್ತಗೊಂಡಿರುವ ಪ್ರಯೋಗವನ್ನು ವಿಶ್ಲೇಷಿಸಿ Y ದ್ರಾವಣವು KI ದ್ರಾವಣದೊಂದಿಗೆ ವರ್ತಿಸಿ ನೀಡುವ ಹಳದಿ ಬಣ್ಣದ ಪ್ರಕ್ಷೇಪ ಮತ್ತು ಇಲ್ಲಿ ಉಂಟಾಗುವ ಮತ್ತೊಂದು ಉತ್ಪನ್ನದ ಅಣುಸೂತ್ರಗಳು ಕ್ರಮವಾಗಿ
(A) $Pb(NO_3)_2$ ಮತ್ತು KNO_3 (B) PbI_2 ಮತ್ತು KNO_3
(C) $Pb(NO_3)_2$ ಮತ್ತು KI (D) $Pb(NO_3)_2$ ಮತ್ತು K_2SO_4
ಉತ್ತರ: (B) PbI_2 ಮತ್ತು KNO_3

5) ಸಮೀಪ ದೃಷ್ಟಿಯನ್ನು ಸರಿಪಡಿಸಲು ಬಳಸುವ ಮಸೂರದ ವಿಧ
ಎ) ಪೀನ ಮಸೂರು ಬಿ) ನಿಮ್ನ ಮಸೂರ
ಸಿ) ದ್ವಿಸಂಗಮ ಮಸೂರ ಡಿ) ನಿಮ್ನ ಪೀನ ಮಸೂರು
ಉತ್ತರ:– (ಸಿ) ದ್ವಿಸಂಗಮ ಮಸೂರ

6) ಸಸ್ಯಗಳು ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರಿನ್ನು ತೆಗೆದುಕೊಂಡು ಸೌರ ಬೆಳಕು ಮತ್ತು ಕ್ಲೋರೋಫಿಲ್ ಉಪಸ್ಥಿತಿಯಲ್ಲಿ .... ಗಳಾಗಿ ಪರಿವರ್ತಿಸಲಾಗುತ್ತದೆ.
.ಎ) ಕಾರ್ಬೋಹೈಡ್ರೇಟ್ ಬಿ) ಹೈಡ್ರೋಕ್ಲೋರಿಕ್ ಆಮ್ಲ
ಸಿ) ಗಂಧಕಾಮ್ಲ ಡಿ) ಆಕ್ಸಿಜನ್
ಉತ್ತರ:– ಎ (ಜೀವ ಕ್ರಿಯೆ)

7). ಪರಾಗಕೋಶವು ಈ ಕೆಳಗಿನವುಗಳನ್ನು ಹೊಂದಿದೆ.
ಎ) ಪುಷ್ಪಪತ್ರಗಳು ಬಿ) ಅಂಡಾಣುಗಳು
ಸಿ) ಶಲಾಕ ಡಿ) ಪರಾಗರೇಣುಗಳು
ಉತ್ತರ:– (ಡಿ) ಪರಾಗರೇಣುಗಳು

8) ಸಮರೂಪಿ ಅಂಗಗಳಿಗೆ ಉದಾಹರಣೆಯೆಂದರೆ, .
ಎ) ನಮ್ಮ ತೋಳು ಮತ್ತು ನಾಯಿಯ ಮುಂಗಾಲು
ಬಿ) ನಮ್ಮ ಹಲ್ಲುಗಳು ಮತ್ತು ಆನೆಯ ದಂತಗಳು
ಸಿ) ಆಲೂಗೆಡ್ಡೆ ಮತ್ತು ಹುಲ್ಲಿನ ಉಪಕಾಂಡಗಳು
ಡಿ) ಮೇಲಿನ ಎಲ್ಲವೂ
ಉತ್ತರ:– (ಡಿ) ಮೇಲಿನ ಎಲ್ಲವೂ

9) . ನಿಮ್ನ ದರ್ಪಣದಿಂದ ಉಂಟಾದ ಪ್ರತಿಬಿಂಬವು ಮಿಥ್ಯ, ನೇರ ಮತ್ತು ವಸ್ತುವಿಗಿಂತ ದೊಡ್ಡದಾಗಿದೆ. ಹಾಗಾದರೆ ವಸ್ತುವಿನ ಸ್ಥಾನ ಎಲ್ಲಿರಬೇಕು ?
ಎ) ಪ್ರಧಾನ ಸಂಗಮ ಮತ್ತು ವಕ್ರತಾ ಕೇಂದ್ರಗಳ ನಡುವೆ.
ಬಿ) ವಕ್ರತಾ ಕೇಂದ್ರದಲ್ಲಿ
ಸಿ) ವಕ್ರತಾ ಕೇಂದ್ರದಿಂದ ದೂರದಲ್ಲಿ
ಡಿ) ಧ್ರುವ ಮತ್ತು ಪ್ರಧಾನ ಸಂಗಮದ ನಡುವೆ
ಉತ್ತರ:– (ಡಿ) ಧ್ರುವ ಮತ್ತು ಪ್ರಧಾನ ಸಂಗಮದ ನಡುವೆ

10) ಮಾನವನ ಕಣ್ಣು ತನ್ನ ಕಣ್ಣಿನ ಮಸೂರದ ಸಂಗಮದೂರವನ್ನು ವಿವಿಧ ದೂರಗಳಲ್ಲಿರುವ ವಸ್ತುಗಳು ಕಾಣುವಂತೆ ಸರಿಹೊಂದಿಸಲು ಕಾರಣ.
ಎ) ಪ್ರಿಸ್‌ಬಯೊಪಿಯಾ ಬಿ) ಕಣ್ಣಿನ ಹೊಂದಾಣಿಕೆ
ಸಿ) ಸಮೀಪದೃಷ್ಟಿ ಡಿ) ದೂರದೃಷ್ಟಿ
ಉತ್ತರ:–(ಬಿ)ಕಣ್ಣಿನ ಹೊಂದಾಣಿಕೆ

11). ಕಬ್ಬಿಣದ ಕಾವಲಿ ತುಕ್ಕು ಹಿಡಿಯದಂತೆ ತಡೆಗಟ್ಟಲು ಈ ಕೆಳಗಿನವುಗಳಲ್ಲಿ ಯಾವ ವಿಧಾನ ಸೂಕ್ತವಾಗಿದೆ?
ಎ) ಗ್ರೀಸ್ ಹಚ್ಚುವುದು ಬಿ) ಬಣ್ಣ ಹಚ್ಚುವುದು
ಸಿ) ಸತುವಿನ ಲೇಪನ ಮಾಡುವುದು
ಡಿ) ಮೇಲಿನ ಎಲ್ಲವೂ
ಉತ್ತರ:– (ಸಿ) ಸತುವಿನ ಲೇಪನ ಮಾಡುವುದು

12) ವಿದ್ಯುತ್ ಕಾಂತೀಯ ಪ್ರೇರಣೆಯ ತತ್ವದ ಆಧಾರದ ಮೇಲೆ ಕಾರ್ಯನಿರ್ವಹಿಸುವ ಸಾಧನ...........................
ಎ) ವಿದ್ಯುತ್ ಜನಕ ಬಿ) ವಿದ್ಯುತ್ ಮೀಟರ್
ಸಿ) ವಿದ್ಯುತ್ ಮೋಟಾರು ಡಿ) ವಿದ್ಯುತ್ ಫ್ಯಾನ್
ಉತ್ತರ:– (ಎ) ವಿದ್ಯುತ್ ಜನಕ

13) ಆಹಾರ ಪದಾರ್ಥಗಳ ಡಬ್ಬಿಗಳನ್ನು ತವರದಿಂದ ಲೇಪನಮಾಡಲಾಗಿರುತ್ತದೆಯೇ ಹೊರತು ಸತುವಿನಿಂದಲ್ಲ ಕಾರಣ.......
ಎ) ಸತು ತವರಕ್ಕಿಂತ ದುಬಾರಿ.
ಬಿ) ಸತುವಿನ ಕರಗುವ ಬಿಂದು ತವರಕ್ಕಿಂತ ಹೆಚ್ಚು.
ಸಿ) ಸತುವು ತವರಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ.
ಡಿ) ಸತುವು ತವರಕ್ಕಿಂತ ಕಡಿಮೆ ಕ್ರಿಯಾಶೀಲವಾಗಿದೆ.
ಉತ್ತರ:– (ಸಿ)ಸತುವು ತವರಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ.

14) ವಿದಳನ ಕ್ರಿಯೆಯಿಂದ ಮಾತ್ರ ಸಂತಾನೋತ್ಪತ್ತಿ ನಡೆಸುವ ಜೀವಿಗಳ ಗುಂಪು ....
ಎ) ಅಮೀಬಾ, ಹೈಡ್ರಾ, ಸಪ್ರೋಗ್ಯೆರಾ
ಬಿ) ಲಿಶ್ಮೇನಿಯಾ, ಅಮೀಬಾ, ಯಿಸ್ಟ್
ಸಿ) ಅಮೀಬಾ, ಪ್ಲಾಸ್ಮೋಡಿಯಂ, ಪ್ಲನೇರಿಯಾ
ಡಿ) ಅಮೀಬಾ, ಪ್ಲಾಸ್ಮೋಡಿಯಂ, ಲಿಶ್ಮೇನಿಯಾ,
ಉತ್ತರ:– (ಡಿ) ಅಮೀಬಾ, ಪ್ಲಾಸ್ಮೋಡಿಯಂ, ಲಿಶ್ಮೇನಿಯಾ,

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ
1) ವಿದ್ಯುತ್ ಮಂಡಲದಲ್ಲಿ ಉಪಯೋಗಿಸುವ ಕೆಳಗಿನ ಘಟಕಗಳ ಚಿನ್ಹೆಗಳನ್ನು ಬರೆಯಿರಿ
1) ಪರಿವರ್ತಿತ ರೋಧ (ರಿಯೀಸ್ಟ್ಯಾಟ್)
2) ತಂತಿಗಳು ಸೇರುವ ಸ್ಥಳ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

REVISION : MODEL QUESTIONS

Multiple Choice Questions

13. Match the following

List-I	List-II
A) Glucocorticoids	i) Responsible for development of secondary female characteristics.
B) Mineralocorticoids	ii) Responsible for preparing the uterus for implantation of fertilised egg
C) Testosterone	iii) Control carbohydrates metabolism
D) Estradiol	iv) Responsible for development of secondary male characteristics.
	v) Control level of excretion of water and salt by kidney.

a) A-(iv), B-(v), C-(ii), D-(i) b) A-(iii), B-(v), C-(iv), D-(i)
c) A-(ii), B-(i), C-(v), D-(iv) d) A-(iii), B-(ii), C-(iv), D-(i)
Ans:-b

14) **Which of the following is not a subdivision of structural isomerism?**
a) Coordination isomerism
b) Linkage isomerism
c) Ionisation isomerism
d) Geometrical isomerism
Ans:-(d) Geometrical isomerism

15) Among the following alkyl benzenes which one will not give the benzoic acid on oxidation with acidic $KMnO_4$ solution.

a) b) c) d)



Ans:-b

16) Cumene hydroperoxide on hydrolysis with dilute acid gives __________.
a) alcohol and phenol b) only phenol
c) phenol and acetone d) alcohol and acetone
Ans:-(c) phenol and acetone

17) An ambidentate ligand is
a) Cl^- b) CN^-
c) OH^- c) NO_2^+
Ans:-b

18) An example for pseudo first-order reaction is,
a) The decomposition of gaseous ammonia on a hot platinum surface
b) Photochemical reaction between hydrogen and chlorine
c) Inversion of cane sugar
d) Hydrogenation of ethane
Ans:-(c) Inversion of cane sugar

19)
The E° of Fe^{2+}/Fe, Zn^{2+}/Zn and Sn^{2+}/Sn are –0.44 V, –0.76 V and –0.14 V respectively. Which metal/s is/are act as sacrificial electrode to protect iron from rusting?
a) Both Zn and Sn b) Zn only
c) Sn Only d) neither Zn nor Sn.
Ans:-b

20) Aquatic species are more comfortable in cold water rather than in warm water. This is due to
a) solubility of oxygen is more in warm water.
b) solubility of oxygen is more in cold water.
c) solubility of gases increases with decrease of temperature.
d) both (b) and (c).
Ans:- d) both (b) and (c).

21) The chemical name of phosgene is
a) chromyl chloride b) triphenylphosphine
c) phosphorusoxychloride d) carbonyl chloride
Ans:-d

22) Which of the following cell was used in Apollo space programme?
a) Mercury cell b) Daniel cell
c) H_2–O_2 Fuel cell d) Dry cell
Ans:-C

23.(a) Fill in the blanks by choosing the appropriate word from those given in the brackets: (aldehydes, phenol, fluorobenzene, decreases, greater, benzene)
1. The melting point of interstitial compound is _________ than the pure metal.
Ans: **greater,**
2. Benzenediazonium fluoroborate on heating decomposes to give__________
Ans:- **fluorobenzene**
3. The simplest hydroxy derivative of benzene is _________
Ans:- **phenol,**
4. When a non-volatile solute is added to the pure solvent, the freezing point of solvent_______
Ans:- **decreases,**
5. Ozonolysis of alkenes followed by reaction with zinc dust and water gives _____
Ans:- **aldehydes,**

b) Fill in the blanks by choosing the appropriate word from those given in the brackets: (phosgene, tin, hydrogen, molecularity, zinc, cellulose acetate)
1. The semi permeable membrane used in the reverse osmosis is _______________.
Ans:- **cellulose acetate**
2. The number of molecules taking part in the elementary reaction is called ________.
Ans;- **molecularity**
3. The non-transitional metal present in brass is ___________.
Ans:- **zinc**

ಸುದೀರ್ಘ ಅವಧಿಯ ಮುಖ್ಯಮಂತ್ರಿ

ಸಿದ್ದರಾಮಯ್ಯ!

ಜನನಾಯಕ ಸಿದ್ದರಾಮಯ್ಯ ಆಡಳಿತದ ದಾಖಲೆ

ಬೆಂಗಳೂರು : 'ನಾನು ಮುಖ್ಯಮಂತ್ರಿಯಾಗುತ್ತೇನೆ ಎಂದುಕೊಂಡವನಲ್ಲ. ಶಾಸಕನಾದರೆ ಸಾಕು ಎಂಬ ಆಸೆಯಿತ್ತು. ಆದರೆ, ಜನರ ಆಶೀರ್ವಾದ ನನ್ನನ್ನು ಇಲ್ಲಿಯವರೆಗೆ ಕರೆತಂದಿದೆ.' ಎನ್ನುತ್ತಾ ರಾಜ್ಯದಲ್ಲಿ ಗ್ಯಾರಂಟಿ ಸರ್ಕಾರವನ್ನು ಮುನ್ನಡೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಐತಿಹಾಸಿಕ ದಾಖಲೆಯನ್ನು ಮುಡಿಗೇರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಡಿ.ದೇವರಾಜ ಅರಸುರವರ 'ಸುದೀರ್ಘ ಮುಖ್ಯಮಂತ್ರಿ' ದಾಖಲೆಯನ್ನು ಜ.7ಕ್ಕೆ ಮುರಿದು, ತಮ್ಮ ಹೆಸರನ್ನು ಸೇರ್ಪಡೆ ಮಾಡಿದ್ದಾರೆ.

ಡಿ.ದೇವರಾಜ ಅರಸುರವರು 1972ರಿಂದ 1977, 1978ರಿಂದ 1980ರ ನಡುವೆ ಒಟ್ಟು 7 ವರ್ಷ 239 ದಿನಗಳ ಕಾಲ ಮುಖ್ಯಮಂತ್ರಿ ಸ್ಥಾನದಲ್ಲಿ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿದ್ದರು. ರಾಜ್ಯ ರಾಜಕಾರಣದಲ್ಲಿ ಈ ಅವಧಿ ದಾಖಲೆಯಾಗಿತ್ತು. ಪ್ರಸ್ತುತ ಸಿದ್ದರಾಮಯ್ಯನವರು ಈ ದಾಖಲೆಯನ್ನು ಮೀರಿಸಿ, ತಮ್ಮ ಆಡಳಿತ ಮುಂದುವರೆಸಿದ್ದಾರೆ.

2013ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಿದ್ದರಾಮಯ್ಯ, 5 ವರ್ಷಗಳ ಪೂರ್ಣಾವಧಿಗೆ ಸಮರ್ಥ ಆಡಳಿತ ನಡೆಸಿದರು. ನಂತರ 2023ರಿಂದ ಪ್ರಸ್ತುತ ರಾಜ್ಯದ ಆಡಳಿತ ಯಂತ್ರವನ್ನು ಯಶಸ್ವಿಯಾಗಿ ಮುಂದುವರೆಸುತ್ತಿದ್ದಾರೆ. ಜ.7ಕ್ಕೆ 7ವರ್ಷ 239 ದಿನಗಳ ಹಿಂದಿನ ಅವಧಿಯನ್ನು ಮೀರಿಸಿ ತಮ್ಮ ದಾಖಲೆಯನ್ನು ಇತಿಹಾಸದ ಪುಟಗಳಿಗೆ ಸೇರ್ಪಡೆಗೊಳಿಸುತ್ತಿದ್ದಾರೆ.

ಮೊದಲ ಅವಧಿಯಲ್ಲಿಯೇ ಅನ್ನಭಾಗ್ಯ, ಕ್ಷೀರಭಾಗ್ಯ ಸೇರಿದಂತೆ ನಾನಾ ಭಾಗ್ಯಗಳ ಹೆಸರಿನ ಜನಪರ ಯೋಜನೆಗಳ ಮೂಲಕ ರಾಜ್ಯಾದ್ಯಂತ 'ಭಾಗ್ಯಗಳ ಸರದಾರ' ಎನ್ನುವ ಕೀರ್ತಿಯನ್ನು ಪಡೆದುಕೊಂಡ ಸಿದ್ದರಾಮಯ್ಯನವರು, ಶಾಸಕರು, ಸಚಿವರು, ಅಧಿಕಾರಿಗಳನ್ನೆಲ್ಲಾ ವಿಶ್ವಾಸಕ್ಕೆ ಪಡೆದುಕೊಂಡು, ಸರ್ಕಾರವನ್ನು ಮುನ್ನಡೆಸುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ತಮ್ಮ ನಾಯಕತ್ವ ಗುಣ, ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಬಜೆಟ್ ರೂಪಿಸುವ ಆರ್ಥಿಕ ಜ್ಞಾನ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿ, ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಅತ್ಯುತ್ತಮ ವಾಕ್ಚಾತುರ್ಯದೊಂದಿಗೆ ಸಿದ್ದರಾಮಯ್ಯ ರಾಜ್ಯಾದ್ಯಂತ 'ಮಾಸ್ ಲೀಡರ್' ಎಂದೇ ಕರೆಸಿಕೊಂಡಿದ್ದಾರೆ.

ರಾಜ್ಯ ರಾಜಕಾರಣದಲ್ಲಿ ಸಿದ್ದರಾಮಯ್ಯನವರಿಗೆ ಇತಿಹಾಸದಲ್ಲಿ 'ಸುದೀರ್ಘ ಮುಖ್ಯಮಂತ್ರಿ' ಎನ್ನುವ ಕೀರ್ತಿ; ಡಿ.ದೇವರಾಜ ಅರಸುರವರ ದಾಖಲೆ ಮುರಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಸ್ಥಾನದಲ್ಲಿ ಅಧಿಕಾರ ನೀಡಿದವರು

- ಸಿದ್ದರಾಮಯ್ಯ : 7 ವರ್ಷ 240ದಿನಗಳು(ಜ.7ಕ್ಕೆ)
- ಡಿ.ದೇವರಾಜ ಅರಸು : 7 ವರ್ಷ 239 ದಿನಗಳು
- ಎಸ್.ನಿಜಲಿಂಗಪ್ಪ : 7 ವರ್ಷ 175 ದಿನಗಳು

ಪ್ರಸ್ತುತಿ
ಪಿ.ವಿ.
ಬ್ರ್ಯಾಂಡ್
ಸ್ಪಾಟ್

ಸಮರ್ಥ ನಾಯಕತ್ವ!

'ಪಕ್ಷ ಅಧಿಕಾರದಲ್ಲಿರಲಿ ಅಥವಾ ವಿರೋಧ ಪಕ್ಷದ ಸ್ಥಾನದಲ್ಲೇ ಇರಲಿ. ಸಿದ್ದರಾಮಯ್ಯನವರು ತಮ್ಮ ಸ್ಥಾನವನ್ನು ಸಮರ್ಥವಾಗಿ ನಿಭಾಯಿಸುತ್ತಾರೆ. ಈ ಹಿಂದೆ 2009 ಮತ್ತು 2019ರಲ್ಲಿ 2 ಬಾರಿ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಸರ್ಕಾರಗಳನ್ನು ಇಕ್ಕಟ್ಟಿಗೆ ಸಿಲುಕಿಸುವಲ್ಲಿ ಸಾಕಷ್ಟು ಬಾರಿ ಯಶಸ್ವಿಯಾಗಿದ್ದಾರೆ. 2010ರಲ್ಲಿ ಬಳ್ಳಾರಿ ಚಲೋ ಮೂಲಕ ಮತ್ತು ಕಳೆದ ಬಾರಿ 40 % ಸರ್ಕಾರ ಎನ್ನುವ ಕ್ಯಾಂಪೇನ್ ಮೂಲಕ ರಾಷ್ಟ್ರ ಮಟ್ಟದಲ್ಲಿ ಬಿಜೆಪಿಗೆ ತೀವ್ರ ಮುಜುಗರವಾಗುವಂತೆ ಮಾಡುವಲ್ಲಿ ಸಿದ್ದರಾಮಯ್ಯನವರ ತಂತ್ರಗಾರಿಕೆ ಕೆಲಸ ಮಾಡಿತ್ತು. ಇದಲ್ಲದೇ, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಸಂಕಷ್ಟ ಎದುರಿಸುವ ಪ್ರತಿಬಾರಿ ಕಾವಲುಗಾರನಂತೆ ಸಿದ್ದರಾಮಯ್ಯ ಹೊಸ ಚೈತನ್ಯ ನೀಡುವಲ್ಲಿ ಗಮನ ಸೆಳೆದಿದ್ದಾರೆ. ಮಾತ್ರವಲ್ಲದೇ, ರಾಜ್ಯದಲ್ಲಿ ಕಾಂಗ್ರೆಸ್‌ನ ಬಹುತೇಕ ಎಲ್ಲಾ ಶಾಸಕರ ನೆಚ್ಚಿನ ನಾಯಕರಾಗಿ, ಯುವ ರಾಜಕಾರಣಿಗಳು ಮಾದರಿಯಾಗಿ ಸ್ವೀಕರಿಸುವಂತೆ ನಡೆ, ನುಡಿಯಲ್ಲೂ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಅನುಭವಿ ರಾಜಕಾರಣಿ!

ರಾಜ್ಯದಲ್ಲಿ ಪ್ರಸ್ತುತ ರಾಜಕಾರಣದಲ್ಲಿ ಕಾಂಗ್ರೆಸ್ ಪಕ್ಷ ಎಂದ ಕೂಡಲೇ ಕಣ್ಣೆದುರಿಗೆ ಬರುವ ಹೆಸರು 'ಸಿದ್ದರಾಮಯ್ಯ' ಎಂಬಂತಾಗಿದೆ. ಇದಕ್ಕೆ ಮುಖ್ಯ ಕಾರಣ ಸಿದ್ದರಾಮಯ್ಯನವರ ಆಡಳಿತ ವೈಖರಿ, ರಾಜ್ಯದ ಜನರ ಬದುಕು ಬದಲಿಸುವಂತಹಾ ಯೋಜನೆಗಳನ್ನು ರೂಪಿಸುವಲ್ಲಿ, ಜಾರಿಗೊಳಿಸುವಲ್ಲಿ ಸಿದ್ದರಾಮಯ್ಯನವರ ಕಾಳಜಿ ಜನಮಾನಸದಲ್ಲಿ ವಿಶೇಷತೆಯನ್ನು ಪಡೆದುಕೊಂಡಿದೆ. ಮೈಸೂರು ವಿವಿಯಲ್ಲಿ ಬಿಎಸ್ಸಿ, ಕಾನೂನು ಪದವಿ ಪಡೆದಿರುವ ಸಿದ್ದರಾಮಯ್ಯನವರು ವಕೀಲರಾಗಿದ್ದ ಮೈಸೂರು ನಂಜುಂಡಸ್ವಾಮಿಯವರಿಂದ ಪ್ರೇರಣೆ ಪಡೆದು, 1983ರಲ್ಲಿ ಮೊದಲ ಚುನಾವಣೆ ಎದುರಿಸಿದ್ದರು. ಚಾಮುಂಡೇಶ್ವರಿ ಕ್ಷೇತ್ರದಿಂದ ಶಾಸಕರಾದ ಸಿದ್ದರಾಮಯ್ಯ, ನಂತರ ಈವರೆಗೆ ಒಟ್ಟು 13 ಚುನಾವಣೆಗಳನ್ನು ಎದುರಿಸಿದ್ದಾರೆ. ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿ, ಹಣಕಾಸು ಸಚಿವರಾಗಿ, 2 ಬಾರಿ ರಾಜ್ಯದ ಉಪ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದ ಸಿದ್ದರಾಮಯ್ಯನವರ ಅನುಭವ ರಾಜ್ಯ ರಾಜಕಾರಣದಲ್ಲಿ ಸಾಕಷ್ಟು ಪರಿಣಾಮ ಬೀರಿದೆ.

ಅಹಿಂದ ನಾಯಕ!

ರಾಜ್ಯದ ನಾನಾ ಕಡೆ ಅಸಂಘಟಿತ, ಶೋಷಿತ, ಬಲಹೀನರ ಧ್ವನಿಯೆಂದೇ ಸಿದ್ದರಾಮಯ್ಯನವರನ್ನು ಕರೆಯುವುದುಂಟು. ಅಧಿಕಾರಕ್ಕೆ ಬಂದ ಮೊದಲ ಘೋಷಣೆಯಾಗಿ ಅನ್ನಭಾಗ್ಯ ಯೋಜನೆ ಜಾರಿ ಸೇರಿದಂತೆ, ಸಮಾಜದಲ್ಲಿ ಜಾತಿವ್ಯವಸ್ಥೆ ಸೇರಿದಂತೆ ಶ್ರೇಣೀಕೃತ ಸ್ತರಗಳನ್ನು ಹೋಗಲಾಡಿಸಬೇಕೆನ್ನುವ ಉದ್ದೇಶ ಹೊಂದಿರುವ ಸಿದ್ದರಾಮಯ್ಯ, ಅನೇಕ ಸಂದರ್ಭಗಳಲ್ಲಿ ತಮ್ಮ ಸಿದ್ಧಾಂತಗಳನ್ನು ಜನರ ಮುಂದಿರಿಸಿದ್ದಾರೆ. ಸದಾ, ದೀನದಲಿತರ ಪರವಾಗಿ ಚಿಂತಿಸುವ ಸಿದ್ದರಾಮಯ್ಯ, ಎಲ್ಲಾ ವರ್ಗಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಮೊದಲ ಬಾರಿಗೆ ಮುಖ್ಯಮಂತ್ರಿ ಸ್ಥಾನಕ್ಕೇರಿದಾಗ ಘೋಷಿಸಿದ್ದ ಅನ್ನಭಾಗ್ಯ, ಕ್ಷೀರಭಾಗ್ಯ, ಇಂದಿರಾಕ್ಯಾಂಟೀನ್ ಯೋಜನೆಗಳು, ಪ್ರಸ್ತುತ ಪಂಚಗ್ಯಾರಂಟಿಗಳು ಸಿದ್ದರಾಮಯ್ಯನವರ ಜನಪರ ಕಾಳಜಿಗೆ ಹಿಡಿದ ಕೈಗನ್ನಡಿಯಾಗಿವೆ.

ಐತಿಹಾಸಿಕ ಬಳ್ಳಾರಿ ಚಲೋ!

ರಾಜ್ಯ ರಾಜಕಾರಣದ ಇತಿಹಾಸ ಮಾತ್ರವಲ್ಲದೇ ಸಿದ್ದರಾಮಯ್ಯನವರ ಬದುಕಿನಲ್ಲೂ 2010ರ 'ಬಳ್ಳಾರಿ ಚಲೋ' ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಏಕೆಂದರೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆ ಮಾತ್ರವಲ್ಲದೇ, ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ ಜನರಲ್ಲಿ ಹೆಚ್ಚಿನ ಮೆಚ್ಚುಗೆ ಗಳಿಸಿಕೊಳ್ಳಲು ಈ ಪಾದಯಾತ್ರೆ ಮುಖ್ಯ ಕಾರಣವಾಗಿದೆ. ವಿಧಾನಸಭೆಯ ಒಳಗೆ ಚರ್ಚೆಯ ವೇಳೆ ಅಂದಿನ ಸಚಿವರಾಗಿದ್ದ ರೆಡ್ಡಿ ಸಹೋದರರು, ಶ್ರೀರಾಮುಲು ಅವರು ಕಾಂಗ್ರೆಸ್ ನಾಯಕರಿಗೆ ಬಳ್ಳಾರಿಗೆ ಕಾಲಿಡಲು ತಾಕತ್ತಿದೆಯೇ? ಎಂದು ಸವಾಲು ಹಾಕಿದ್ದರು. ಈ ಸವಾಲನ್ನು ಸ್ವೀಕರಿಸಿದ್ದ ಸಿದ್ದರಾಮಯ್ಯ ಭುಜತಟ್ಟಿ, 'ನಾವು ಬಳ್ಳಾರಿಗೆ ಬಂದೇ ಬರುತ್ತೇವೆ. ಅದು ನಡಿಗೆಯ ಮೂಲಕವೇ ಬರುತ್ತೇವೆ' ಎಂದು ಘರ್ಜಿಸಿದ್ದರು. 320ಕಿಮೀ ದೂರದ ಈ ಪಾದಯಾತ್ರೆಗೆ ರಾಜ್ಯಾದ್ಯಂತ ಭರಪೂರ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಬಳ್ಳಾರಿಯಲ್ಲಿ ಗಣಿ ಅಕ್ರಮಗಳನ್ನು ಜನರಿಗೆ ತಿಳಿಸುವುದರೊಂದಿಗೆ ಕಾಂಗ್ರೆಸ್ ಸರ್ಕಾರ ತನ್ನ ಜನಪರ ಕಾಳಜಿಯನ್ನು ಈ ಪಾದಯಾತ್ರೆಯ ಮೂಲಕ ಎಲ್ಲೆಡೆ ಮುಟ್ಟಿಸುವಲ್ಲಿ ಯಶಸ್ವಿಯಾಗಿತ್ತು. ಒಟ್ಟು 16 ದಿನಗಳ ಈ ಪಾದಯಾತ್ರೆ ಬೆಂಗಳೂರಿನಲ್ಲಿ ಶುರುವಾಗಿ ನೆಲಮಂಗಲ, ತುಮಕೂರು, ಚಿತ್ರದುರ್ಗದ ಮೂಲಕ ಅಂತಿಮವಾಗಿ ಬಳ್ಳಾರಿ ತಲುಪಿತ್ತು. 60 ವರ್ಷ ದಾಟಿದ್ದರೂ, ಸಿದ್ದರಾಮಯ್ಯನವರು ಉರಿ ಬಿಸಿಲನ್ನೂ ಲೆಕ್ಕಿಸದೇ ಹಿರಿಯ ನಾಯಕರೊಂದಿಗೆ ಹೆಜ್ಜೆ ಹಾಕಿದ್ದರು. ರಾಜ್ಯ ಮಾತ್ರವಲ್ಲದೇ ರಾಷ್ಟ್ರ ಮಟ್ಟದಲ್ಲಿ ಈ ಪಾದಯಾತ್ರೆ ಎಲ್ಲರ ಗಮನ ಸೆಳೆದಿತ್ತು. ಅಂದಿನ ಬಿಜೆಪಿ ಸರ್ಕಾರ ಮತ್ತು ಬಳ್ಳಾರಿಯ ಗಣಿಧಣಿಗಳ ವಿರುದ್ಧ ನಡೆದಿದ್ದ ಈ ಪಾದಯಾತ್ರೆ, ಕಾಂಗ್ರೆಸ್ ಪಕ್ಷಕ್ಕೆ ಹೊಸ ಚೈತನ್ಯ ನೀಡಿದ್ದಲ್ಲದೇ ರಾಜ್ಯದಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಲು ಭದ್ರವಾದ ಬುನಾದಿ ಹಾಕಿಕೊಟ್ಟಿತ್ತು. ಲಕ್ಷಾಂತರ ಜನರ ಪಾಲ್ಗೊಳ್ಳುವಿಕೆಯೊಂದಿಗೆ ಈ ಪಾದಯಾತ್ರೆ ಯಶಸ್ವಿಯಾಗಿತ್ತು. ನಿರೀಕ್ಷೆಯಂತೆ ಆ ನಂತರದ ಚುನಾವಣೆಯಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿತ್ತು. 2013ರಿಂದ ಆರಂಭವಾದ ಸಿದ್ದರಾಮಯ್ಯನವರ ಶಕೆ ಇಂದಿಗೂ ಮುಂದುವರೆದು, ದಾಖಲೆಗಳನ್ನು ಇತಿಹಾಸದ ಪುಟಗಳಿಗೆ ನೀಡುತ್ತಿದೆ.

ಬಳ್ಳಾರಿ ಪಾದಯಾತ್ರೆಯ ಅಂಕಿಅಂಶಗಳು

- ಒಟ್ಟು ದೂರ: 320 ಕಿಲೋಮೀಟರ್.
- ಪ್ರಾರಂಭದ ದಿನಾಂಕ: ಜುಲೈ 25, 2010 (ಬೆಂಗಳೂರಿನಿಂದ).
- ಸಮಾರೋಪ ಸಮಾವೇಶದ ದಿನಾಂಕ: ಆಗಸ್ಟ್ 9, 2010 (ಬಳ್ಳಾರಿಯಲ್ಲಿ).
- ಒಟ್ಟು ದಿನಗಳು: 16 ದಿನಗಳು.
- ದೈನಂದಿನ ಸರಾಸರಿ ನಡಿಗೆ: ದಿನಕ್ಕೆ ಸುಮಾರು 20 ರಿಂದ 25 ಕಿ.ಮೀ.
- ಪಾಲ್ಗೊಂಡ ಜನಸಂಖ್ಯೆ: ಬಳ್ಳಾರಿಯ ಅಂತ್ಯದ ರ್ಯಾಲಿಯಲ್ಲಿ ಸುಮಾರು 2 ರಿಂದ 4 ಲಕ್ಷ ಜನರು ಭಾಗವಹಿಸಿದ್ದರು.

ಸಾಮಾಜಿಕ ಮಾನವತಾವಾದಿಯ ಸುವರ್ಣಯುಗ!

ಆತ್ಮೀಯ ಸಿದ್ದರಾಮಯ್ಯನವರೇ..

ಕರ್ನಾಟಕದ ಸಾಮಾಜಿಕ ನ್ಯಾಯ ಹಾಗೂ ಜನಪರ ಸರ್ವಾಂಗೀಣ ಅಭಿವೃದ್ಧಿ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸುತ್ತಿರುವ ನಿಮ್ಮ ದೂರದೃಷ್ಟಿಯ ನಾಯಕತ್ವಕ್ಕೆ ಅಭಿನಂದನೆಗಳು ಸಲ್ಲಿಸುತ್ತಾ, ಕರ್ನಾಟಕದ ರಾಜಕೀಯ ಇತಿಹಾಸವು ಜನಪರ ಆಡಳಿತ, ಸಾಮಾಜಿಕ ನ್ಯಾಯ ಹಾಗೂ ಸಂವಿಧಾನಾತ್ಮಕ ಸಮಾನತೆಯ ಮೌಲ್ಯಗಳನ್ನು ಪ್ರತಿಪಾದಿಸಿದ ಮಹಾನ್ ನಾಯಕರ ದಿಟ್ಟ ಹೋರಾಟಗಳಿಂದ ರೂಪುಗೊಂಡ ಸುವರ್ಣ ಪರಂಪರೆಯನ್ನು ಹೊಂದಿದೆ. ಶೋಷಿತರು, ಹಿಂದುಳಿದವರು ಮತ್ತು ಸಮಾಜದ ಅಂಚಿನಲ್ಲಿರುವ ಸಮುದಾಯಗಳ ಪರವಾಗಿ ಧೈರ್ಯವಾಗಿ ನಿಂತ ನಾಯಕರಿಂದಲೇ ಈ ನಾಡಿನ ಪ್ರಗತಿಪರ ರಾಜಕೀಯ ಸಂಸ್ಕೃತಿ ಬೆಳೆದಿದೆ. ಆ ಪರಂಪರೆಯಲ್ಲಿ ಅಚ್ಚಳಿಯದ ಗುರುತು ಮೂಡಿಸಿದ ಮಹಾನ್ ನಾಯಕರಲ್ಲಿ ಸನ್ಮಾನ್ಯ ಶ್ರೀ ದಿ.ದೇವರಾಜ ಅರಸು ಅವರು ಅಗ್ರಗಣ್ಯರು. ಅವರು 20-03-1972 ರಿಂದ 31-12-1977 ರವರೆಗೆ ಹಾಗೂ 28-02-1978 ರಿಂದ 07-01-1980 ರವರೆಗೆ ಒಟ್ಟಾರೆ 2792 ದಿನಗಳ ಕಾಲ ಕರ್ನಾಟಕದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ, ಭೂ ಸುಧಾರಣೆ, ಸಾಮಾಜಿಕ ನ್ಯಾಯ, ಹಿಂದುಳಿದ ವರ್ಗಗಳ ಉನ್ನತಿ ಮತ್ತು ಶೋಷಿತರ ಸಬಲೀಕರಣದ ಮೂಲಕ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಅಮರ ಅಧ್ಯಾಯವೊಂದನ್ನು ರಚಿಸಿದರು. ಅದಲ್ಲದೆ ಕರ್ನಾಟಕ ರಾಜ್ಯವನ್ನು ಪ್ರಗತಿಪರ ಚಿಂತನೆಯತ್ತ ತರುವುದರಲ್ಲಿ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀಯುತ ಕೆಂಗಲ್ ಹನುಮಂತಯ್ಯ, ಶ್ರೀಯುತ ನಿಜಲಿಂಗಪ್ಪ, ಶ್ರೀಯುತ ರಾಮಕೃಷ್ಣ ಹೆಗಡೆ ಇವರುಗಳ ವಿಶಾಲ ದೃಷ್ಟಿಕೋನದ ವಿಚಾರಗಳು ಹಾಗೂ ಪ್ರಾಮಾಣಿಕ ಚಿಂತನೆಗಳು ನಮ್ಮ ಮುಂದೆ ಇಂದಿಗೂ ಜೀವಂತವಿದೆ. ಅದೇ ಸಾಮಾಜಿಕ ನ್ಯಾಯ ತಾತ್ವಿಕ ಮತ್ತು ರಾಜಕೀಯ ಪರಂಪರ ಮತ್ತು ಸರ್ವಾಂಗೀಣ ಅಭಿವೃದ್ಧಿ ಚಿಂತನೆಗಳನ್ನು ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಮುಂದುವರೆಸಿಕೊಂಡು, ಕರ್ನಾಟಕದ ಇತಿಹಾಸಕ್ಕೆ ಹೊಸ ಮೈಲಿಗಲ್ಲು ಸ್ಥಾಪಿಸಿದ ನೀವು 13-05-2013 ರಿಂದ 15-05-2018 ರವರೆಗೆ ಹಾಗೂ 20-05-2023 ರಿಂದ 06-01-2026 ರವರೆಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು, ಸುದೀರ್ಘ ಮತ್ತು ಸಾರ್ಥಕ ಆಡಳಿತದ ಮೂಲಕ ಚಾರಿತ್ರಿಕ ದಾಖಲೆ ನಿರ್ಮಿಸುತ್ತಿರುವುದು ರಾಜ್ಯದ ಜನತೆಗೆ ಅಪಾರ ಹೆಮ್ಮೆಯ ವಿಷಯವಾಗಿದೆ. ಹಾಗೂ ಮುಂದಿನ ಎರಡೂವರೆ ವರ್ಷಗಳ ಕಾಲ ಅಂದರೆ ಮೇ.28, 2028 ರವರೆಗೆ ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುತ್ತೀರಿ ಎಂಬುದು ನನ್ನ ನಂಬಿಕೆಯಾಗಿದೆ.

ನಿಮ್ಮ ಪ್ರಾಮಾಣಿಕ ಹಾಗೂ ಪಾರದರ್ಶಕ ಆಡಳಿತವು ಸ್ಪಷ್ಟವಾಗಿ ಜನಪರ, ಸಂವಿಧಾನಬದ್ಧ ಮತ್ತು ಸಾಮಾಜಿಕ ನ್ಯಾಯ ಕೇಂದ್ರಿತವಾಗಿದೆ. ರಾಜ್ಯದಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಜನಾಂಗಕ್ಕೆ ಯಾವುದೇ ಧರ್ಮ ಜಾತಿ ಭೇದವಿಲ್ಲದೆ

ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ, ಇಂದಿರಾ ಕ್ಯಾಂಟೀನ್, ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ ಹಾಗೂ ರೈತ ಸಮುದಾಯಕ್ಕೆ ಮಹತ್ವಾಕಾಂಕ್ಷಿ ಯೋಜನೆಗಳನ್ನು ನೀಡುವ ಮೂಲಕ ಬಡವರು, ಮಹಿಳೆಯರು, ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಯುವಜನತೆಗೆ ಆರ್ಥಿಕ ಭದ್ರತೆ ಮತ್ತು ಸಾಮಾಜಿಕ ಗೌರವವನ್ನು ಒದಗಿಸುವಲ್ಲಿ ನಿಮ್ಮ ಪ್ರಾಮಾಣಿಕ ವಿಚಾರಗಳು ಮಹತ್ವದ ಪಾತ್ರ ವಹಿಸಿದೆ. ಈ ಯೋಜನೆಗಳು ಕರ್ನಾಟಕವನ್ನು ನಿಜಾರ್ಥದಲ್ಲಿ ಕಲ್ಯಾಣರಾಜ್ಯದಂತೆ ಮಾದರಿಯಾಗಿ ರೂಪಿಸುವ ದಿಟ್ಟ ರಾಜಕೀಯ ಸಂಕಲ್ಪದ ಪ್ರತಿಬಿಂಬಗಳಾಗಿವೆ. ನಿಮ್ಮ

ಆಡಳಿತದಲ್ಲಿ ಪಾರದರ್ಶಕತೆ, ಹಣಕಾಸು ಶಿಸ್ತು, ಸಂವಿಧಾನದ ಮೌಲ್ಯಗಳಿಗೆ ಅಚಲ ನಿಷ್ಠೆ ಹಾಗೂ ಜಾತಿ–ಧರ್ಮ–ಭಾಷೆಗಳ ಅತೀತವಾಗಿ ಎಲ್ಲರನ್ನು ಒಟ್ಟಿಗೆ ಕೊಂಡೊಯ್ಯುವ ಸಮನ್ವಯದ ರಾಜಕಾರಣವು ನಿಮ್ಮ ನಾಯಕತ್ವದ ವಿಶಿಷ್ಟ ಗುರುತುಗಳಾಗಿವೆ.

ನಿಮ್ಮ ಸಮಾಜಮುಖಿ ಮತ್ತು ಪ್ರಗತಿಪರ ದೃಷ್ಟಿಕೋನಕ್ಕೆ ಸಮಕಾಲೀನ ರಾಜಕೀಯ ರೂಪ ನೀಡಿದ ನಾಯಕರೆಂದು ನಿಮ್ಮನ್ನು ಗೌರವದಿಂದ ಮುಂದಿನ ಇತಿಹಾಸ ಪುಟಗಳಲ್ಲಿ ಸ್ಮರಿಸುವುದು ನಿಶ್ಚಿತ.

ಈ ಹಿನ್ನೆಲೆಯಲ್ಲಿ, ಕರ್ನಾಟಕದ ಕೋಟ್ಯಂತರ ಜನತೆಯ ಪರವಾಗಿ, ನಿಮ್ಮ ದೂರದೃಷ್ಟಿಯ ನಾಯಕತ್ವಕ್ಕೆ, ಜನಪರ ನೀತಿಗಳಿಗೆ ಹಾಗೂ ರಾಜ್ಯವನ್ನು ಸಮಾನತೆ, ಸೌಹಾರ್ದ ಮತ್ತು ಸಾಮಾಜಿಕ ನ್ಯಾಯದ ದಾರಿಯಲ್ಲಿ ದಿಟ್ಟವಾಗಿ ಮುನ್ನಡೆಸುತ್ತಿರುವ ನಿಮ್ಮ ಅವಿರತ ಸೇವೆಗೆ ಗೌರವಪೂರ್ವಕ ಹಾಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿಮ್ಮ ಆಡಳಿತವು ಮುಂದಿನ ಪೀಳಿಗೆಗಳಿಗೆ ದಾರಿದೀಪವಾಗಲಿ.

ಕರ್ನಾಟಕವು ಸರ್ವಾಂಗೀಣ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮತ್ತು ಸೌಹಾರ್ದದ ಮಾದರಿ ರಾಜ್ಯವಾಗಿ ರಾಷ್ಟ್ರ ಮಟ್ಟದಲ್ಲಿ ತನ್ನ ಸ್ಥಾನವನ್ನು ಇನ್ನಷ್ಟು ದೃಢಪಡಿಸಲಿ ಎಂಬುದು ನನ್ನ ಹಾರೈಕೆ.

ಗೌರವಪೂರ್ವಕ ವಂದನೆಗಳೊಂದಿಗೆ,

ಬಸವರಾಜ ರಾಯರೆಡ್ಡಿ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರು.

ಶೋಷಿತ ವರ್ಗಗಳ ಅಭಿವೃದ್ಧಿ ಪರ್ವ!

ರಾಜ್ಯದ ಬಡವರು, ದೀನದಲಿತರ ಪರವಾದ ಆಡಳಿತ ನಡೆಸುವ ಮೂಲಕವೇ ಮನೆಮಾತಾದವರು ಸಿದ್ದರಾಮಯ್ಯನವರು. ಆರಂಭದಿಂದಲೂ ಅವರ ಯೋಜನೆಗಳು, ಚಿಂತನೆಗಳು ಬಡವರ ಪರ. ಶೋಷಿತ ವರ್ಗದ ಪರ. ಹಿಂದುಳಿದ ವರ್ಗಗಳ ಅಭ್ಯುದಯಕ್ಕೆ ಶ್ರಮಿಸಿದ ನಾಯಕರ ಸಾಲಿನಲ್ಲಿ ಸಿದ್ದರಾಮಯ್ಯನವರ ಪಾತ್ರ ಇತಿಹಾಸ ಪುಟಗಳಲ್ಲಿ ದಾಖಲಾಗುತ್ತದೆ. ಸ್ವಾತಂತ್ರ್ಯ ಬಂದ ಬಳಿಕವೂ ಸ್ವಾತಂತ್ರ್ಯವಿಲ್ಲದೇ ಶೋಷಿತ ವರ್ಗಗಳಾಗಿ ಸೀಮಿತವಿದ್ದ ಅನೇಕರ ಬದುಕಿಗೆ ಸಿದ್ದರಾಮಯ್ಯನವರ ಯೋಜನೆಗಳಿಂದ ನ್ಯಾಯ ಸಿಕ್ಕಿದೆ. ಜೊತೆಗೆ, ರೈತರು, ಮಹಿಳೆಯರು ಸೇರಿದಂತೆ ಎಲ್ಲ ವರ್ಗಕ್ಕೂ ಸಮಾನವಾದ, ನ್ಯಾಯಸಮ್ಮತ ಆಡಳಿತ ನೀಡಿದ್ದಾರೆ. ಬಡವರ ಪರ ಸದಾ ಮಿಡಿಯುವ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ ಪ್ರಮಾಣ ಸ್ವೀಕರಿಸುವ ವೇಳೆಯೇ ಬಡವರ ಹಸಿವು ನೀಗಿಸುವ ಅನ್ನಭಾಗ್ಯ ಯೋಜನೆ ಘೋಷಿಸಿದರು. ಆ ಮೂಲಕ ಜನಸಾಮಾನ್ಯರ ಕಷ್ಟಕ್ಕೆ ಮಿಡಿಯುವ ಮನಸ್ಸುಳ್ಳ ನಾಯಕರಾಗಿ ಗುರುತಿಸಿಕೊಂಡರು. ನಂತರ ಪೂರ್ಣಾವಧಿ ಮುಖ್ಯಮಂತ್ರಿಗಳಾಗಿ ರಾಜ್ಯಕ್ಕೆ ನೀಡಿದ ಭಾಗ್ಯಗಳು ನಿಜಕ್ಕೂ ಬಡವರ ಸಂಕಷ್ಟಗಳಿಗೆ ನೆರವಾಗಿದ್ದವು. ಪುನಃ ಸರ್ಕಾರ ರಚನೆಗೊಂಡು ರಾಜ್ಯದಲ್ಲಿ ಬಹುಮತದೊಂದಿಗೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಪುನಃ ಜನರಿಗೆ ಗ್ಯಾರಂಟಿಗಳ ಉಡುಗೊರೆಯನ್ನೇ ನೀಡಿದ್ದಾರೆ. ಜತೆಗೆ ವಿಶೇಷವಾಗಿ ಅನ್ನಭಾಗ್ಯ ಯೋಜನೆಯ ಮೂಲಕ ಬಡವರ ಹಸಿವು ನೀಗಿಸಿದ್ದಾರೆ. ಕೇಂದ್ರ ಸರ್ಕಾರದ ಅನುದಾನ ಸಮಸ್ಯೆಗಳ ನಡುವೆಯೂ ಸಹ ಬಡವರ ಪರವಾದ ಯೋಜನೆಗಳು ನಿಲ್ಲದಂತೆ ದಿಟ್ಟತನ ತೋರಿದ್ದಾರೆ. ಜತೆಗೆ, ಪ್ರಸ್ತುತ ಇಂದಿರಾ ಕಿಟ್ ಮೂಲಕ ಜನರಿಗೆ ಆಹಾರ ಉತ್ಪನ್ನಗಳನ್ನು ಒದಗಿಸಲು ಮುಂದಾಗುತ್ತಿದ್ದಾರೆ. ಹೀಗೆ, ಸದಾ ಬಡವರು, ಶೋಷಿತ ವರ್ಗ, ಹಿಂದುಳಿದ ವರ್ಗಗಳ ಪರವಾಗಿ ಹೆಚ್ಚಿನ ಚಿಂತನೆಗಳನ್ನು ಹೊಂದಿದ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ಹೀಗಾಗಿಯೇ ಅವರ ನಾಯಕತ್ವವನ್ನು ಎಲ್ಲರೂ ಕೊಂಡಾಡುವುದು. ಸದಾ ಜನರ ಕಾಳಜಿ ವಹಿಸುವ ಮೂಲಕ ಜನಪರ ಆಡಳಿತದೊಂದಿಗೆ ದಿ.ದೇವರಾಜ ಅರಸುರವರ ಸುದೀರ್ಘ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿದ ದಾಖಲೆಯನ್ನು ಮೀರಿಸಿದ್ದಾರೆ. ಸಿದ್ದರಾಮಯ್ಯನವರ ಈ ಸೇವೆ ರಾಜ್ಯಕ್ಕೆ ಮತ್ತಷ್ಟು ಸಿಗುವಂತಾಗಿ, ಬಡವರ ಬದುಕು ಹಸನಾಗುವತ್ತ ಮತ್ತಷ್ಟು ಕ್ರಾಂತಿಕಾರಕ ಹೆಜ್ಜೆಗಳು ಸೃಜಿಸಲಿ ಎಂಬುದೇ ನಮ್ಮ ಹಾರೈಕೆ.

ಕೆ.ಎಚ್.ಮುನಿಯಪ್ಪ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು.

ಪಕ್ಷಕ್ಕೆ ಮತ ಕ್ರೋಢೀಕರಿಸುವ ನಾಯಕತ್ವ!

'ಅಭಿವೃದ್ಧಿಶೀಲ ರಾಜ್ಯಗಳಿಗೆ ಸುಭದ್ರ ಸರ್ಕಾರ ಬೇಕಾಗುತ್ತದೆ. ಈ ಹಾದಿಯಲ್ಲಿ ಸಿದ್ದರಾಮಯ್ಯನವರ ಸ್ವಂತ ಶಕ್ತಿ ಪ್ರಮುಖ ಪಾತ್ರ ವಹಿಸಿದೆ. ಮತಗಳನ್ನು ತನಗೆ ಹಾಕಿಸಿಕೊಳ್ಳುವುದು ಮಾತ್ರವಲ್ಲದೇ ತನ್ನ ಪಕ್ಷಕ್ಕೆ ಕ್ರೋಢೀಕರಿಸಿ, ಅಧಿಕಾರಕ್ಕೇರುವಂತೆ ಮಾಡುವ ಸಾಮರ್ಥ್ಯ ಕೆಲವರಿಂದ ಮಾತ್ರ ಸಾಧ್ಯ. ಈ ವಿಚಾರದಲ್ಲಿ ಸಿದ್ದರಾಮಯ್ಯನವರು ಯಶಸ್ವಿಯಾಗಿದ್ದಾರೆ. ತಮ್ಮ ಸಾಮರ್ಥ್ಯದಿಂದ ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವುದು ಮಾತ್ರವಲ್ಲದೆ ಸುಭದ್ರ ಸರ್ಕಾರ ರಚನೆ ಮಾಡಿದ್ದಾರೆ. ಸುದೀರ್ಘ ಅಧಿಕಾರಾವಧಿ ವಿಚಾರದಲ್ಲಿ ಸಿದ್ದರಾಮಯ್ಯನವರು ಅದೃಷ್ಟವಂತರೂ ಸಹ ಹೌದು. ಏಕೆಂದರೆ, ರಾಜಕಾರಣದಲ್ಲಿ ಸವಾಲುಗಳ ಸರಮಾಲೆ ಕಟ್ಟಿಟ್ಟಬುತ್ತಿ. ರಾಜ್ಯದಲ್ಲಿ ಎಸ್.ಎಂ.ಕೃಷ್ಣರವರು, ಎಚ್.ಡಿ.ದೇವೇಗೌಡರವರು ಸೇರಿದಂತೆ ಎಲ್ಲರ ಅವಧಿಗಳಲ್ಲಿ ಒಂದಲ್ಲಾ ಒಂದು ಸವಾಲುಗಳು ಎದುರಾಗಿದ್ದವು. ಸಿದ್ದರಾಮಯ್ಯನವರ ಅವಧಿಗಳಲ್ಲಿ ಪರಿಸ್ಥಿತಿಗಳು ಭಿನ್ನವಾಗಿದ್ದು, ಸರ್ಕಾರವನ್ನು ಸುಸೂತ್ರವಾಗಿ ನಡೆಸಲು ಎಲ್ಲಾ ವ್ಯವಸ್ಥೆಗಳು ಪೂರಕವಾಗಿ ರೂಪುಗೊಂಡಿದ್ದವು. ಹೀಗಾಗಿ, ಅದೃಷ್ಟ ಸಹ ಸಿದ್ದರಾಮಯ್ಯನವರ ಜತೆಯಲ್ಲಿದೆ. ಇದರೊಂದಿಗೆ ಹೆಚ್ಚಿನ ಬಜೆಟ್ ಕೊಡಲು ಸಹ ಸಾಧ್ಯವಾಗಿದೆ. ರಾಜಕಾರಣದಲ್ಲಿ ಅತ್ಯಂತ ಹತ್ತಿರದಲ್ಲೇ ನಾವು ಅವರನ್ನು ಕಂಡಿದ್ದೇವೆ. 1977ರಿಂದಲೂ ಜತೆಯಲ್ಲಿದ್ದೇವೆ. ಹಿಂದೆ, ಜನತಾಪರಿವಾರದಲ್ಲಿದ್ದೆವು. ಈಗ ಕಾಂಗ್ರೆಸ್‌ನಲ್ಲಿದ್ದೇವೆ. ವಿಶೇಷವಾಗಿ ಆಡಳಿತ ನಡೆಸುವ ವಿಚಾರದಲ್ಲಿ ಅವರಲ್ಲೊಂದು ಸಾಮರ್ಥ್ಯವಿದೆ. ಎಲ್ಲರನ್ನೂ ಒಟ್ಟಾಗಿ ನಡೆಸುವ, ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜನರಿಗೆ ಒಳ್ಳೆಯ ಆಡಳಿತ ನೀಡುವ ಅತ್ಯುತ್ತಮ ಪ್ರಯತ್ನ ಮಾಡಿದ್ದಾರೆ. ಹೀಗಿದ್ದರೂ ಟೀಕೆಗಳು ಕೇಳಿಬರುವುದು ಸಹಜ. ಆದರೆ, ಟೀಕೆಗಳ ಹೊರತಾಗಿಯೂ ಅವರ ಕೆಲಸವನ್ನು ರಾಜ್ಯದ ಜನ ಮೆಚ್ಚಿದ್ದಾರೆ. ರಾಜಕಾರಣದಲ್ಲಿ ಟೀಕೆಗಳು ಸ್ವಾಭಾವಿಕ. ಆದರೆ, ಆ ಟೀಕೆಗಳಿಗೆ ಬಾಯಿಯ ಮೂಲಕ ಉತ್ತರ ನೀಡುವುದಕ್ಕಿಂತ ಕೆಲಸದ ಮೂಲಕ ಉತ್ತರ ನೀಡಬೇಕು.

ಈ ಕೆಲಸವನ್ನು ಸಿದ್ದರಾಮಯ್ಯನವರು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ರಾಜ್ಯದಲ್ಲಿ 1983ರಲ್ಲಿ ಹೆಗ್ಡೆಯವರು, ದೇವೇಗೌಡರು, ಬೊಮ್ಮಾಯಿಯವರು, ಪಟೇಲರು, ಜೆ.ಪಿ. ಪ್ರಕಾಶ್, ನಾವು ಸೇರಿ 2ರೂ.ಗೆ 1ಕೆಜಿ ಅಕ್ಕಿ ಕೊಡುವ ಕೆಲಸ ಆರಂಭಿಸಿದ್ದೆವು. ಅಂದಿನಿಂದಲೂ ಸಿದ್ದರಾಮಯ್ಯನವರು ಬಡವರ ಪರ ಚಿಂತನೆಗಳನ್ನು ಹೊಂದಿದ್ದರು. ಹಿಂದೆ, ಹಣಕಾಸು ಸಚಿವರಾಗಿದ್ದಾಗಲೂ ಅವರ ಈ ಬಡವರ ಪರವಾದ ಧೋರಣೆ ಮುಂದುವರೆಸಿದ್ದರು. ಇಂದಿಗೂ ಬಡವರ ಪರವಾದ ಅವರ ಧ್ವನಿ ಜೀವಂತವಿದೆ. ಹೀಗಾಗಿಯೇ, ಸುದೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸುಭದ್ರ ಆಡಳಿತ ನೀಡುವ ಚತುರತೆಯನ್ನು ಕರಗತ ಮಾಡಿಕೊಂಡಿದ್ದಾರೆ. ರಾಜಾಸ್ಥಾನದಲ್ಲಿ ಮೋಹನ್‌ಲಾಲ್ ಸುಖಾಡಿಯಾ, ಮಹಾರಾಷ್ಟ್ರದಲ್ಲಿ ಶರದ್ ಪವಾರ್, ಬಂಗಾಳದಲ್ಲಿ ಜ್ಯೋತಿ ಬಸುರವರಂತೆ ಸುದೀರ್ಘ ಆಡಳಿತವನ್ನು ರಾಜ್ಯಕ್ಕೆ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಈ ಸುಭದ್ರ ಆಡಳಿತ ನಿಜಕ್ಕೂ ಹೆಮ್ಮೆ ಮೂಡಿಸಿದೆ. ಇದೇ ರೀತಿ ಜನರಿಗೆ ಉತ್ತಮ ಆಡಳಿತ ಮುಂದುವರೆಸಲಿ ಎಂದು ಹಾರೈಸುತ್ತೇನೆ.

ಪಿಜಿಆರ್ ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್.

ಸಾಮಾಜಿಕ ನ್ಯಾಯದ ನವ ಅಧ್ಯಾಯ!

ಕರ್ನಾಟಕದ ರಾಜಕೀಯದಲ್ಲಿ 'ಸಾಮಾಜಿಕ ನ್ಯಾಯ'ಕ್ಕೆ ಸಾಂಸ್ಥಿಕ ರೂಪ ನೀಡಿದ ಮಹಾನ್ ನಾಯಕ ದಿವಂಗತ ಶ್ರೀ ಡಿ.ದೇವರಾಜ ಅರಸು. ದಶಕಗಳ ಬಳಿಕ ಅದೇ ಹಾದಿಯಲ್ಲಿ ದೃಢವಾಗಿ ಮುನ್ನಡೆಯುತ್ತಿರುವವರು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ. ಅರಸು ಅವರ ನಂತರ ಪೂರ್ಣಾವಧಿ ಆಡಳಿತ ನೀಡಿ, ಜನಮತದ ಭರವಸೆಯೊಂದಿಗೆ ಮತ್ತೆ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯನವರ ನಡೆ ರಾಜ್ಯದ ಜನರಲ್ಲಿ ಹೊಸ ವಿಶ್ವಾಸ ಮೂಡಿಸಿದೆ. 'ಉಳುವವನೇ ಭೂಮಿಯ ಒಡೆಯ' ಎಂಬ ಕ್ರಾಂತಿಕಾರಿ ಭೂ ಸುಧಾರಣೆಯ ಮೂಲಕ ಅರಸು ಅವರು ಶೋಷಿತರಿಗೆ ಆತ್ಮಗೌರವ ನೀಡಿದರು. ಸಿದ್ದರಾಮಯ್ಯನವರು 'ಅನ್ನಭಾಗ್ಯ'ದಿಂದ ಆರಂಭಿಸಿ ಇಂದಿನ 'ಪಂಚ ಗ್ಯಾರಂಟಿ'ಗಳ ಮೂಲಕ ಅದೇ ಚಿಂತನೆಯನ್ನು ವಿಸ್ತರಿಸಿದ್ದಾರೆ. ಹಿಂದುಳಿದ ವರ್ಗಗಳು, ದಲಿತರು ಮತ್ತು ಅಲ್ಪಸಂಖ್ಯಾತರನ್ನು ರಾಜಕೀಯ-ಸಾಮಾಜಿಕ ಮುಖ್ಯವಾಹಿನಿಗೆ ತರುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ದಾಖಲೆ ಮಟ್ಟದ ಆಯವ್ಯಯ ಮಂಡಿಸಿರುವ ಸಿದ್ದರಾಮಯ್ಯನವರಿಗೆ ರಾಜ್ಯದ ಆರ್ಥಿಕತೆಯ ಮೇಲೆ ಗಟ್ಟಿಯಾದ ಹಿಡಿತವಿದೆ. ಅಭಿವೃದ್ಧಿ ಮತ್ತು ಕಲ್ಯಾಣದ ನಡುವೆ ಸಮತೋಲನ ಸಾಧಿಸುವುದು ಅವರ ಆಡಳಿತದ ಶಕ್ತಿ. ಗೃಹಲಕ್ಷ್ಮಿ, ಗೃಹಜ್ಯೋತಿಯಂತಹ ಗ್ಯಾರಂಟಿ ಯೋಜನೆಗಳ ಮೂಲಕ 'ಕಲ್ಯಾಣ ರಾಜ್ಯ' ಪರಿಕಲ್ಪನೆಗೆ ಅವರು ಹೊಸ ಅರ್ಥ ನೀಡಿದ್ದಾರೆ.

ಸಿದ್ದರಾಮಯ್ಯನವರು ಕೇವಲ ರಾಜಕಾರಣಿಯಲ್ಲ. ಶೋಷಿತರ ನೋವಿಗೆ ಸ್ಪಂದಿಸುವ ಮಾನವತಾವಾದಿ ನಾಯಕ. ದೇವರಾಜ ಅರಸು ಅವರ ಕಾಲದಲ್ಲಿ ಹೇಗೆ 'ನಮ್ಮ ಸರ್ಕಾರ' ಎಂಬ ಭಾವನೆ ಜನರಲ್ಲಿ ಮೂಡಿತೋ, ಅದೇ ವಿಶ್ವಾಸ ಇಂದಿನ ಆಡಳಿತದಲ್ಲಿಯೂ ಕಾಣುತ್ತಿದೆ. ಸಾಮಾಜಿಕ ನ್ಯಾಯದ ಬುನಾದಿಯ ಮೇಲೆ ಸಮೃದ್ಧ ಕರ್ನಾಟಕವನ್ನು ಕಟ್ಟುವ ಈ ಆಡಳಿತ ರಾಜ್ಯದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಗಲಿದೆ.

ಆರ್. ವಿ. ದೇಶಪಾಂಡೆ, ಹಿರಿಯ ಧುರೀಣರು ಹಾಗೂ ಹಳಿಯಾಳ ಕ್ಷೇತ್ರದ ಶಾಸಕರು

ಮೋದಿ, ಶಾ ವಿರುದ್ಧ ಘೋಷಣೆ: ಆರೋಪ

ಒಂದನೇ ಪುಟದಿಂದ...

'ಜೆಎನ್‌ಯುಎಸ್‌ಯು' ಜತೆಗೆ ಗುರುತಿಸಿಕೊಂಡಿರುವ ಕೆಲವು ವಿದ್ಯಾರ್ಥಿಗಳು ಸೋಮವಾರ ರಾತ್ರಿ 10 ಗಂಟೆ ಸುಮಾರಿಗೆ ಕ್ಯಾಂಪಸ್‌ನಲ್ಲಿ 'ಗೆರಿಲ್ಲಾ ಢಾಬಾ ಜತೆಗೆ ಪ್ರತಿರೋಧದ ರಾತ್ರಿ' ಎಂಬ ಕಾರ್ಯಕ್ರಮ ಆಯೋಜಿಸಿದ್ದರು. 30ರಿಂದ 35ರಷ್ಟು ವಿದ್ಯಾರ್ಥಿಗಳು ಸೇರಿದ್ದರು' ಎಂದು ಪತ್ರದಲ್ಲಿ ತಿಳಿಸಲಾಗಿದೆ.

'ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್‌ಗೆ ಸುಪ್ರೀಂ ಕೋರ್ಟ್ ಜಾಮೀನು ನಿರಾಕರಿಸಿದ ಸುದ್ದಿ ಬಂದ ಬೆನ್ನಲ್ಲೇ, ಈ ಕಾರ್ಯಕ್ರಮದ ಸ್ವರೂಪ ಬದಲಾಯಿತು. ಪ್ರಧಾನಿ ಮತ್ತು ಗೃಹ ಸಚಿವರ ವಿರುದ್ಧ ವಿದ್ಯಾರ್ಥಿಗಳು 'ಆಕ್ಷೇಪಾರ್ಹ, ಪ್ರಚೋದನಕಾರಿ ಮತ್ತು ಕೆರಳಿಸುವ ಘೋಷಣೆಗಳನ್ನು ಕೂಗಿದರು. ಇದು ಸುಪ್ರೀಂ ಕೋರ್ಟ್‌ನ ನೇರ ನಿಂದನೆಯಾಗಿದೆ ಮತ್ತು ಜೆಎನ್‌ಯು ನೀತಿ ಸಂಹಿತೆ ಉಲ್ಲಂಘನೆಯಾಗಿದೆ' ಎಂದು ಆರೋಪಿಸಲಾಗಿದೆ.

ಕ್ಯಾಂಪಸ್‌ನಲ್ಲಿ '2020ರ ಜನವರಿ 5ರ ಹಿಂಸಾಚಾರವನ್ನು ಖಂಡಿಸಿ ಕಾರ್ಯಕ್ರಮ ಆಯೋಜಿಸಲಾಗಿತ್ತು, ಘೋಷಣೆಗಳು ಸೈದ್ಧಾಂತಿಕವಾಗಿದ್ದವು ಮತ್ತು ಯಾರನ್ನೂ ವೈಯಕ್ತಿಕವಾಗಿ ಗುರಿ ಮಾಡಿಲ್ಲ' ಎಂದು ವಿದ್ಯಾರ್ಥಿ ಸಂಘಟನೆ ಹೇಳಿದೆ.

ಆದರೆ, ಆಡಳಿತ ಮಂಡಳಿ ಇದನ್ನು ತಳ್ಳಿಹಾಕಿದ್ದು, 'ವಿದ್ಯಾರ್ಥಿಗಳು ವಿವೇಚನೆಯಿಂದ ಉದ್ದೇಶಪೂರ್ವಕವಾಗಿಯೇ ಈ ಘೋಷಣೆಗಳನ್ನು ಕೂಗಿದ್ದಾರೆ. ಇವು ಪುನರಾವರ್ತಿತವಾಗಿದ್ದವು. ಈ ಘೋಷಣೆಗಳು ಸಾರ್ವಜನಿಕ ಸುವ್ಯವಸ್ಥೆಗೆ ಅಡ್ಡಿಯುಂಟು ಮಾಡಿವೆ. ಇದರಿಂದ ಕ್ಯಾಂಪಸ್‌ನ ಭದ್ರತೆ ಮತ್ತು ಸಾಮರಸ್ಯಕ್ಕೂ ಧಕ್ಕೆ ಉಂಟಾಗಿದೆ' ಎಂದು ಆರೋಪಿಸಿದೆ.

'ಭಾರತೀಯ ನ್ಯಾಯ ಸಂಹಿತೆಯ ಕಲಂಅಡಿ ವಿದ್ಯಾರ್ಥಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಬೇಕು' ಎಂದು ಜೆಎನ್‌ಯು ಮುಖ್ಯ ಭದ್ರತಾ ಅಧಿಕಾರಿ ಆಗ್ರಹಿಸಿದ್ದಾರೆ.

ಜೆಎನ್‌ಯು ಆಡಳಿತ ಮಂಡಳಿ ಪೊಲೀಸರಿಗೆ ಬರೆದಿರುವ ಪತ್ರದಲ್ಲಿ ವಿದ್ಯಾರ್ಥಿ ಸಂಘಟನೆಯ ಈಗಿನ ಅಧ್ಯಕ್ಷೆ ಅದಿತಿ ಮಿಶ್ರಾ ಸೇರಿದಂತೆ ಹಲವರ ಹೆಸರನ್ನು ಉಲ್ಲೇಖಿಸಲಾಗಿದೆ. ಘೋಷಣೆಗೆ ಸಂಬಂಧಿಸಿದ ವಿಡಿಯೊ ತುಣುಕು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ ಎಂದೂ ತಿಳಿಸಲಾಗಿದೆ.

ಸಮೀಪದಿಂದ ಹಾರಿದ ಗುಂಡು

ಬಳ್ಳಾರಿ ಘಟನೆ: ಮರಣೋತ್ತರ ಪರೀಕ್ಷೆ ವರದಿಯಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿಯಲ್ಲಿ ಜನವರಿ 1ರಂದು ನಡೆದಿದ್ದ ದೊಂಬಿಯಲ್ಲಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ ಮರಣೋತ್ತರ ಪರೀಕ್ಷೆ ವರದಿಯ ಬಹಿರಂಗವಾಗಿದ್ದು, ತುಂಬಾ ಸಮೀಪ ದಿಂದಲೇ ಗುಂಡು ಹಾರಿಸಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಗುಂಡು ಎದೆಗೆ ನಾಟಿದ್ದರಿಂದ ಆದ ಗಾಯ, ಆಘಾತ ಮತ್ತು ತೀವ್ರ ರಕ್ತಸ್ರಾವದಿಂದ ಸಾವು ಸಂಭವಿಸಿದೆ. ದೇಹದಲ್ಲಿ 1.8 ಸೆಂ.ಮೀ ಅಗಲ ಮತ್ತು 2.5 ಸೆಂ.ಮೀ ಉದ್ದದ ಬೂದಿ ಬಣ್ಣದ, ವಿರೂಪಗೊಂಡ ಪ್ಲಾಸ್ಟಿಕ್ 'ವ್ಯಾಡ್ ಕಪ್', ಅದರ ಒಂದು ತುಂಡು ಮತ್ತು ರಕ್ತದ ಕಲೆಯುಳ್ಳ ವಿರೂಪಗೊಂಡ 17 ಪೆಲೆಟ್‌ಗಳು (ಸಣ್ಣ ಗುಂಡು) ಪತ್ತೆಯಾಗಿವೆ' ಎಂದು ವರದಿ ಹೇಳಿದೆ.

ನಗರಕ್ಕೆ ಮಂಗಳವಾರ ಭೇಟಿ ನೀಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, 'ಒಮ್ಮೆ ಮಾತ್ರ ಮರಣೋತ್ತರ ಪರೀಕ್ಷೆ ನಡೆದಿದೆ. ಕೆಲ ಮುಖಂಡರು ಸುಳ್ಳು ಹೇಳುವುದನ್ನು ರೂಢಿಸಿಕೊಂಡಿದ್ದಾರೆ' ಎಂದರು.

ಮಾಜಿ ಸಚಿವ ಶ್ರೀರಾಮುಲು ಮಾತನಾಡಿ, 'ರಾಜಶೇಖರ ಅಂತ್ಯಕ್ರಿಯೆ ಪ್ರಕ್ರಿಯೆ ಬಗ್ಗೆ ಅನುಮಾನವಿದೆ. ಕುಟುಂಬ ಸ್ಥರನ್ನು ಬೆದರಿಸಿ, ಈ ಕಾರ್ಯ ನೆರವೇರಿ ಸಲಾಗಿದೆ' ಎಂದು ದೂರಿದ ಅವರು, 'ಎಸ್‌ಪಿ ರವಿಕುಮಾರ್ ಅವರನ್ನು ಅಮಾನತು ಮಾಡಬೇಕು' ಎಂದರು.

'ರಾಜಶೇಖರ ಅವರ ಮನೆತನದಲ್ಲಿ ಮಣ್ಣು ಮಾಡುವ ಪದ್ಧತಿ ಇದೆ. ಅವರ ತಂದೆ ಸುರೇಂದ್ರ ರೆಡ್ಡಿ ಅವರನ್ನು ಮಣ್ಣು ಮಾಡಲಾಗಿತ್ತು. ಆದರೆ, ಸಾಕ್ಷ್ಯ ಸಿಗದಿರಲಿ ಎಂದು ರಾಜಶೇಖರ ಮೃತ ದೇಹವನ್ನು ದಹಿಸಲಾಯಿತು' ಎಂದರು.

ಬಳ್ಳಾರಿಯಲ್ಲಿ ರಾಜಶೇಖರ ಮನೆಗೆ ಭೇಟಿ ನೀಡಿದ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್, ಶಾಸಕ ಬಿ.ಎಂ ನಾಗರಾಜ ಇದ್ದರು

ಮರಣೋತ್ತರ ಪರೀಕ್ಷೆ ಎರಡು ಬಾರಿ ನಡೆಸಿಲ್ಲ: ಗೃಹ ಸಚಿವ ಜಿ. ಪರಮೇಶ್ವರ

ಬೆಂಗಳೂರು: 'ಬಳ್ಳಾರಿ ಘರ್ಷಣೆಯ ವೇಳೆಯಲ್ಲಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ ಅವರ ಮರಣೋತ್ತರ ಪರೀಕ್ಷೆಯನ್ನು ಎರಡು ಬಾರಿ ನಡೆಸಿಲ್ಲವೆಂದು ವೈದ್ಯರು ಸ್ಪಷ್ಟಪಡಿಸಿದ್ದಾರೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

'ರಾಜಶೇಖರ ಅವರ ಮರಣೋತ್ತರ ಪರೀಕ್ಷೆಯನ್ನು ಎರಡು ಬಾರಿ ನಡೆಸಲಾಗಿದೆ' ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಯಾವುದೇ ವಿಚಾರವನ್ನಾಗಲಿ ತಿಳಿದುಕೊಂಡು ಮಾತನಾಡಬೇಕು. ಇಲ್ಲವಾದರೆ ಬೇರೆ ರೀತಿಯ ಪರಿಣಾಮ ಆಗುತ್ತದೆ' ಎಂದರು.

'ಎರಡು ಬಾರಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ ಎಂದು ಹೇಳಿಕೆ ನೀಡಿರುವ ನಾಯಕರು, ಅದನ್ನು ನೋಡಿದ್ದಾರೆಯೇ? ಎರಡು ಬಾರಿ ನಡೆಸಿಲ್ಲ ಎಂದು ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರೇ ಹೇಳಿಕೆ ನೀಡಿದ್ದಾರೆ. ಇನ್ನು ಯಾರ ಮಾತನ್ನು ನಂಬಬೇಕು. ವೈದ್ಯರ ಮಾತನ್ನು ನಾನು ಕೂಡ ಒಪ್ಪುತ್ತೇನೆ' ಎಂದರು.

'38 ವರ್ಷಗಳಿಂದ ರಾಜಕಾರಣ ಮಾಡುತ್ತಿದ್ದೇನೆ. ಪಕ್ಷ, ಸರ್ಕಾರದಲ್ಲಿ ಅನೇಕ ಜವಾಬ್ದಾರಿಗಳನ್ನು ನಿಭಾಯಿಸಿದ್ದೇನೆ. ಮೂರನೇ ಬಾರಿಗೆ ಗೃಹ ಸಚಿವನಾಗಿ ಕೆಲಸ ಮಾಡುತ್ತಿದ್ದೇನೆ. ರಾಜ್ಯದ ಕಾನೂನು ವ್ಯವಸ್ಥೆಯ ದೃಷ್ಟಿಯಿಂದ, ಯಾವ ಸಂದರ್ಭದಲ್ಲಿ ಏನು ತೀರ್ಮಾನ ತೆಗೆದುಕೊಳ್ಳಬೇಕು. ಯಾವಾಗ ಕಠಿಣ ನಿರ್ಧಾರ ತೆಗೆದುಕೊಳ್ಳಬೇಕೆಂಬ ಅರಿವು ನನಗಿದೆ' ಎಂದರು.

'ರಾಜಕೀಯಕ್ಕೆ ಮೃತದೇಹ ಬಳಕೆ'

ಮೃತದೇಹವನ್ನೂ ರಾಜಕೀಯ ಸ್ವಾರ್ಥಕ್ಕೆ ಬಳಸಿಕೊಳ್ಳುವ ಕೀಳು ನಡವಳಿಕೆಯನ್ನು ಕಾಂಗ್ರೆಸ್ ನಾಯಕರು ಮಾಡುತ್ತಿದ್ದಾರೆ. ಬಳ್ಳಾರಿ ಯುವಕನ ಹತ್ಯೆ ಪ್ರಕರಣವನ್ನು ಮುಚ್ಚಿಹಾಕಲು ಹರಸಾಹಸ ಮಾಡುತ್ತಿದ್ದಾರೆ ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ಬಳ್ಳಾರಿಯಲ್ಲಿ ಅಂಗರಕ್ಷಕ ಹಾರಿಸಿದ ಗುಂಡೇಟಿನಿಂದ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತನ ಮೃತದೇಹವನ್ನು ಎರಡು ಬಾರಿ ಮರಣೋತ್ತರ ಪರೀಕ್ಷೆ ನಡೆಸಿದ್ದು ಏಕೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರನ್ನು ಪ್ರಶ್ನಿಸಿರುವ ಅವರು, ಬಳ್ಳಾರಿ ವೈದ್ಯಕೀಯ ಕಾಲೇಜಿನ (ಬಿಮ್ಸ್) ಅಧೀಕ್ಷಕರನ್ನು ತಕ್ಷಣವೇ 'ಬ್ರೈನ್ ಮ್ಯಾಪಿಂಗ್'ಗೆ ಒಳಪಡಿಸಬೇಕು. ಆಗ ಮರಣೋತ್ತರ ಪರೀಕ್ಷೆಯ ಮಾಯಾಜಾಲ ಬಯಲಾಗುತ್ತದೆ ಎಂದಿದ್ದಾರೆ.

'ಪ್ರಕರಣ ಮುಚ್ಚಿ ಹಾಕಲು ರಾಜ್ಯ ಸರ್ಕಾರ ಹರಸಾಹಸ ಮಾಡುತ್ತಿದೆ. ಬಿಮ್ಸ್ ಅಧೀಕ್ಷಕರ ಪ್ರಕಾರ ಮರಣೋತ್ತರ ಪರೀಕ್ಷೆ ವಿಳಂಬವಾಗಿದೆ. ದೇಹದಲ್ಲಿ ಹಲವು ಚೂರುಗಳು ಇದ್ದವು ಎಂದು ಹೇಳಿದ್ದಾರೆ. ಒಬ್ಬ ವೈದ್ಯರು ಮರಣೋತ್ತರ ಪರೀಕ್ಷೆ ಮುಗಿಸುವ ಹಂತದಲ್ಲಿದ್ದರು. ಆದರೂ 'ಇನ್ನೊಬ್ಬ ವೈದ್ಯರನ್ನು ಕರೆಸಿ ಕೊಂಡಿದ್ದಾರೆ. ಮರಣೋತ್ತರ ಪರೀಕ್ಷೆಗೆ ಏಕೆ ಎಪ್ಪು ವೈದ್ಯರು ಬೇಕು? ಮೃತ ದೇಹದ ಚೀಲ ಉಳಿಸ ಬೇಕಿತ್ತು ಅಥವಾ ಸತ್ಯ ಹುದುಕ ಬೇಕಿತ್ತು ಎಂದು ಪ್ರಶ್ನಿಸಿರುವ ಅವರು, ವಿಧಿವಿಜ್ಞಾನ ತಜ್ಞರನ್ನು ಬಳಸಿಕೊಳ್ಳದ ನಡೆಯನ್ನು ಖಂಡಿಸಿದ್ದಾರೆ.

'ಮರಣೋತ್ತರ ಪರೀಕ್ಷೆಯ ವೇಳೆ ಇಬ್ಬರು ವೈದ್ಯರ ನಡುವೆ ತಿಕ್ಕಾಟ ನಡೆದಿದೆ. ಬಿಮ್ಸ್ ಅಧೀಕ್ಷಕರ ಹೇಳಿಕೆಯಲ್ಲೇ ಪ್ರಶ್ನೆ ಹಾಗೂ ಉತ್ತರಗಳಿವೆ. ಮೃತದೇಹವನ್ನು ಮನೆಹಾಳು ರಾಜಕೀಯಕ್ಕೆ ಬಳಸಿಕೊಂಡಿದ್ದನ್ನು ಪ್ರಶ್ನಿಸಿದ್ದೇನೆ. ರಾಜ್ಯದ ಜನರ ಗಮನಕ್ಕೆ ತಂದಿದ್ದೇನೆ' ಎಂದು ಹೇಳಿದ್ದಾರೆ.

ಅಪ್ರಾಪ್ತ ವಯಸ್ಸಿನವರ ಮದುವೆಗೆ ಆಕ್ಷೇಪ

ಒಂದನೇ ಪುಟದಿಂದ...

ಅರ್ಜಿದಾರರ ಪರ ವಕೀಲರು, 'ಸಂತ್ರಸ್ತೆ ಮತ್ತು ಆರೋಪಿ ಇಬ್ಬರೂ ಈಗಾಗಲೇ ಮದುವೆಯಾಗಿದ್ದಾರೆ. ಮದುವೆಯಾದಾಗ ಸಂತ್ರಸ್ತೆ ವಯಸ್ಸು 17 ವರ್ಷ 10 ತಿಂಗಳಾಗಿತ್ತು. ದೂರುದಾರಳೂ ಆದ ಪತ್ನಿ ಈಗ ಗರ್ಭಿಣಿ. ಅಂತಿಮವಾಗಿ ಪರಸ್ಪರ ಒಪ್ಪಂದದ ಮೂಲಕ ಪ್ರಕರಣವನ್ನು ಇತ್ಯರ್ಥಗೊಳಿಸಲು ಆಕೆ ಇಚ್ಛಿಸಿದ್ದು, ಯುವಕನನ್ನು ಪೋಕ್ಸೊ ಪ್ರಕರಣದಿಂದ ಮುಕ್ತಿಗೊಳಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಪ್ರಕರಣದಲ್ಲಿ ಸೆಟಲ್‌ಮೆಂಟ್ ಮಾಡಿಕೊಳ್ಳುತ್ತೇವೆ ಎಂಬ ಅರ್ಜಿದಾರರ ವಾದ ಒಪ್ಪತಕ್ಕದ್ದಲ್ಲ. ಈ ಪ್ರಕರಣದಲ್ಲಿ ಪೋಷಕರೇ ಮುಂದಾಗಿ ಮದುವೆ ಮಾಡಿಸಿದ್ದು, ಅವರ ವಿರುದ್ಧ ಬಾಲ್ಯವಿವಾಹ ನಿಷೇಧ ಕಾಯ್ದೆ-2006ರ ಕಲಂ 9, 10 ಮತ್ತು 11ರ ಅಡಿಯಲ್ಲಿ ಕಠಿಣ ಕ್ರಮಕ್ಕೆ ಆದೇಶಿಸಬೇಕು' ಎಂದು ಕೋರಿದರು.

> ಸಂತ್ರಸ್ತೆಯೇ ಸೆಟಲ್‌ಮೆಂಟ್ ಮಾಡಿಕೊಳ್ಳುತ್ತೇವೆ ಎಂದು ಹೇಳುವುದು ಎಷ್ಟು ಸರಿ? ಈ ರೀತಿಯ ಪ್ರಕರಣಗಳಲ್ಲಿ ಪೋಷಕರನ್ನು ಕಠಿಣ ಶಿಕ್ಷೆಗೆ ಒಳಪಡಿಸಲು ಆಡಳಿತಾಂಗ ಯಾವುದೇ ರಿಯಾಯಿತಿ ತೋರಬಾರದು
> **ಎಂ.ನಾಗಪ್ರಸನ್ನ,** ನ್ಯಾಯಮೂರ್ತಿ

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕಾನೂನಿಗೆ ವಿರುದ್ಧವಾಗಿ ಅಪ್ರಾಪ್ತ ವಯಸ್ಸಿನ ಮಕ್ಕಳ ಮದುವೆ ಮಾಡಿಸುವ ಮತ್ತು ಅದಕ್ಕೆ ಕುಮ್ಮಕ್ಕು ಕೊಡುವ ಯಾವುದೇ ಪೋಷಕರ ನಡೆ ಆತಂಕಕಾರಿ. ಇಂತಹ ಪ್ರಕರಣಗಳಲ್ಲಿ ಸಲುಗೆ ತೋರುವುದು ತರವಲ್ಲ. ಈ ರೀತಿ ಅಪ್ರಾಪ್ತ ವಯಸ್ಸಿನ ಮಕ್ಕಳ ಮದುವೆ ಮಾಡಿಸಿದರೆ ಅಸ್ತಿತ್ವದಲ್ಲಿರುವ ಬಾಲ್ಯ ವಿವಾಹ ನಿಷೇಧದ ವಿಶೇಷ ಕಾಯ್ದೆಗೆ ಬೆಲೆಯೇನು' ಎಂದು ಪ್ರಶ್ನಿಸಿ, 'ಈ ಕುರಿತಂತೆ ವಿಶದವಾದ ತೀರ್ಪು ಪ್ರಕಟಿಸಲಾಗುವುದು' ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ಏನಿದು ಪ್ರಕರಣ?

ಸಂತ್ರಸ್ತ ಬಾಲಕಿ 'ಹೊಟ್ಟೆ ನೋವು' ಎಂದು ಆಸ್ಪತ್ರೆಗೆ ಹೋದಾಗ ಪರೀಕ್ಷಿಸಿದ್ದ ವೈದ್ಯರು ಆಕೆ ಗರ್ಭಿಣಿಯಾಗಿರುವುದನ್ನು ದೃಢಪಡಿಸಿದ್ದರು. ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ-2023ರ ಕಲಂ 64, ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012) ಕಾಯ್ದೆಯ ಕಲಂ 5(ಜೆ) (ii) ಮತ್ತು 6 ಹಾಗೂ ಬಾಲ್ಯ ವಿವಾಹ ನಿಷೇಧ ಕಾಯ್ದೆ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

'ಈ ಕುರಿತಂತೆ ನಗರದ ಶೀಘ್ರ ವಿಲೇವಾರಿ ವಿಶೇಷ ನ್ಯಾಯಾಲಯದಲ್ಲಿನ ನ್ಯಾಯಿಕ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಆರೋಪಿ ಈ ಅರ್ಜಿ ಸಲ್ಲಿಸಿದ್ದಾರೆ.

ಉಡುಪಿ ನಗರಸಭೆ
ಕವಿ ಮುದ್ದಣ್ಣ ಮಾರ್ಗ, ಉಡುಪಿ – 576 101 ದೂರವಾಣಿ ಸಂಖ್ಯೆ : 0820–2520306
E-mail : ka.udupi.cmc@gmail.com Website : www.udupicity.mrc.gov.in
ಸಂಖ್ಯೆ: UCMC/HS/MRF-33TPD/FL/CR-167/2024-25 ದಿನಾಂಕ: 06/01/2026
UCMC/HS/MRF-33TPD/STCK/CR-581/2025-26
ಟೆಂಡರ್ ಪ್ರಕಟಣೆ
ಕೆ.ಟಿ.ಟಿ.ಪಿ.ಕಾಯ್ದೆ 1999 ಮತ್ತು ನಿಯಮಗಳು 2000 ರನ್ವಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಉಡುಪಿ ನಗರಸಭೆಯಲ್ಲಿ ಹೊಸದಾಗಿ ನಿರ್ಮಾಣವಾಗುವ 33TPD ಸಾಮರ್ಥ್ಯದ ಮೆಟಿರಿಯಲ್ ರಿಕವರಿ ಫೆಸಿಲಿಟಿ (ಎಂ.ಆರ್.ಎಫ್.) ಗೆ ಈ ಕೆಳಗಿನ ಯಂತ್ರೋಪಕರಣಗಳನ್ನು ಖರೀದಿಸಿ ಅಳವಡಿಸುವ ಬಗ್ಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 20/01/2026 ಸಮಯ ಸಂಜೆ 05.10 ಗಂಟೆವರೆಗೆ. ಅರ್ಹ ಗುತ್ತಿಗೆದಾರರು/ಏಜನ್ಸಿಯವರು ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in) ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

ಕ್ರ. ಸಂ	ಕೆಲಸದ ಹೆಸರು	ಟೆಂಡರ್ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ	ಇ.ಎಂ.ಡಿ. ಮೊತ್ತ
1	Procurement of 01 number of Semi Electric Stacker.	DMA/2025-26/ IND5856	Rs.30.58 Lakhs.	As per KPP Portal
2	Procurement of 01 number of Fork Lift			

ಸಹಿ/– ಪೌರಾಯುಕ್ತರು, ಉಡುಪಿ ನಗರಸಭೆ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ–ಉತ್ತರ ಕನ್ನಡ
ಉಪನಿರ್ದೇಶಕರ ಕಾರ್ಯಾಲಯ ಶಾಲಾ ಶಿಕ್ಷಣ ಇಲಾಖೆ, ಶಿರಸಿ ಶೈಕ್ಷಣಿಕ ಜಿಲ್ಲೆ ಶಿರಸಿ (ಉ.ಕ)
ಸಂಖ್ಯೆ: ಯೋ2/ಜಿ.ಪಂ/ಲಿಂಕ್.ಡಾ/ಸ್ಮಾರ್ಟ ಕ್ಲಾಸ್/04/2025–26 ದಿನಾಂಕ: 05–01–2026
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
2025–26ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ ಕ್ರೀಯಾಯೋಜನೆಯಲ್ಲಿ ಅನುಮೋದನೆಯಾದ ಶಿರಸಿ ಶೈಕ್ಷಣಿಕ ಜಿಲ್ಲೆಯ 10 ಸರ್ಕಾರಿ ಪ್ರೌಢ ಶಾಲೆಗಳಿಗೆ ಸ್ಮಾರ್ಟ ಕ್ಲಾಸ್, 04 ಆಲ್ ಇನ್‌ಒನ್ ಕಂಪ್ಯೂಟರ್ ಹಾಗೂ 2 KVA ಸಾಮರ್ಥ್ಯದ ಬ್ಯಾಟರಿ ಸಹಿತ ಯು.ಪಿ.ಎಸ್.ಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು ಇ–ಟೆಂಡರ್‌ನ್ನು ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.in ರಲ್ಲಿ ಸಲ್ಲಿಸಬೇಕು. ಇ–ಟೆಂಡರ್ ನ್ನು ದಿನಾಂಕ: 17–01–2026 ರ ಸಂಜೆ 5.00 ಗಂಟೆ ಒಳಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಟೆಂಡರ್ Reference NO. DPI/2025-26/IND0628 ನಲ್ಲಿ ಪರಿಶೀಲಿಸಬಹುದಾಗಿದೆ. ಕಚೇರಿ ವೇಳೆಯಲ್ಲಿ ಮೊಬೈಲ್ ಸಂಖ್ಯೆ: 9113823504 ನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಉಪನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ, ಶೈಕ್ಷಣಿಕ ಜಿಲ್ಲೆ ಶಿರಸಿ(ಉ.ಕ)
DIPR/KWR/KSMCA/916/25-26 dt. 06.01.26

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC)
ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560 010
ದೂರವಾಣಿ: 080–23157189, ಫ್ಯಾಕ್ಸ್: 080–23301683
ಸಂ: GTTC/PROJ/CIVIL-ELE/WORKS/BD-154,155&156/2025-26 ದಿನಾಂಕ: 06.01.2026
ಇ–ಟೆಂಡರ್ ಪ್ರಕಟಣೆ
2025–26ನೇ ಸಾಲಿನಲ್ಲಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ:

ಸಂಖ್ಯೆ	ಬಿಡ್ ನಂ.	ಜಿಟಿಟಿಸಿ ಕೇಂದ್ರ	ಕಾಮಗಾರಿ ವಿವರ
1	154	ರಾಯಚೂರು ಗ್ರಾಮೀಣ	ರಾಯಚೂರು ಗ್ರಾಮೀಣ, ರಾಯಚೂರು ಜಿಲ್ಲೆಯಲ್ಲಿ ನೂತನ ಜಿಟಿಟಿಸಿ ಕೇಂದ್ರ ಸ್ಥಾಪನೆ
2	155	ಕಂಪ್ಲಿ	ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ನೂತನ ಜಿಟಿಟಿಸಿ ಕೇಂದ್ರ ಸ್ಥಾಪನೆ
3	156	ಇಂಡಿ	ವಿಜಯಪುರ ಜಿಲ್ಲೆಯ ಇಂಡಿಯಲ್ಲಿ ನೂತನ ಜಿಟಿಟಿಸಿ ಕೇಂದ್ರ ಸ್ಥಾಪನೆ

ಟೆಂಡರ್ ದಾಖಲಾತಿಗಳು ಇ–ಪೋರ್ಟಲ್‌ನಲ್ಲಿ ದಿನಾಂಕ: 08.01.2026 ರಿಂದ ಲಭ್ಯವಿದ್ದು ಮತ್ತು ಪೂರ್ವ ಸಭೆಯ ದಿನಾಂಕ: 27.01.2026ರಂದು ಹಾಗೂ ದಾಖಲೆಗಳನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 09.02.2026ರ ಸಂಜೆ 5.30 ಗಂಟೆಯವರೆಗೆ. ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ https://kppp.karnataka.gov.in ಮೂಲಕ ಅಥವಾ ಸಹಾಯವಾಣಿ ಸಂಖ್ಯೆ. + 91 9240214000, +91 9240214001ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರ್ಕಾರ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಗದಗ Ph : 08372 - 234375
Fax : 08372-230211 E-Mail : ceozp.gdg@gmail.com
ಕ್ರ.ಸಂ:ಗಜಿಪಂ/ಅಭಿವೃದ್ಧಿ ಶಾಖೆ/2025–26 ದಿನಾಂಕ : 02/01/2026
ಟೆಂಡರ ಪ್ರಕಟಣೆ
2025–26ನೇ ಸಾಲಿನ ಜಿಲ್ಲಾ ಪಂಚಾಯತ ಅನಿರ್ಬಂಧಿತ ಅನುದಾನದಲ್ಲಿ ಅನುಮೋದಿತ ವಿಕಲಚೇತನರಿಗೆ ವಿತರಿಸುವದಕ್ಕಾಗಿ ದ್ವಿ–ಚಕ್ರವಾಹನ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ–2000 ದಡಿಯಲ್ಲಿ ಇ–ಪ್ರಕ್ಯುರಮೆಂಟ್ ಮುಖಾಂತರ ಟೆಂಡರ ಕರೆಯಲಾಗಿದೆ.

ಕ್ರ.ಸಂ	ಇಂಡೆಂಟ್ ನಂ	ಮೀಸಲಿರಿಸಿದ ಮೊತ್ತ	ಇ.ಎಂ.ಡಿ
1	RDPR/2025-26/IND13034	2570000/-	64250/-

ದ್ವಿ–ಚಕ್ರವಾಹನ ಪೂರೈಸಲು ಟೆಂಡರ ವಿವರಣೆಗಾಗಿ ಹಾಗೂ ಡೌನಲೋಡ್ ಮಾಡಿಕೊಳ್ಳಲು ಬಿಡ್ಡು ದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ವೆಬ್‌ಸೈಟ್ ವಿಳಾಸ: KPPP://eproc.karnataka.gov.in ನಲ್ಲಿ ನೋಡಿಕೊಳ್ಳಬಹುದು ಟೆಂಡರ ಸಲ್ಲಿಸಲು ಕೊನೆಯ ದಿನಾಂಕ : 16.01.2026 ವೇಳೆ ಸಾಯಂಕಾಲ 4.00 ಗಂಟೆ ವರೆಗೆ ಇರುತ್ತದೆ.
ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/505/25–26

ನಗರ ಯೋಜನಾ ಪ್ರಾಧಿಕಾರ, ಮುಧೋಳ
ರನ್ನ ಭವನ, ಮೊದಲನೇ ಮಹಡಿ, ತಾಲ್ಲೂಕು: ಮುಧೋಳ, ಜಿಲ್ಲೆ: ಬಾಗಲಕೋಟೆ. ಇ–ಮೇಲ್: msplanningmudhol@gmail.com
ಸಂಖ್ಯೆ: ನಯೋಪ್ರಾಮು/ಸ್ಥ.ಯೋ./ಮಾ.ಯೋ(ಪ–2)25–26 ದಿ: 01–01–2026
ಪ್ರಕಟಣೆ
ನಮೂನೆ–VI ನಿಯಮ–32(ಎ)
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 10 ರನ್ವಯ)
ಮುಧೋಳ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅಮೃತ 2.0 ಯೋಜನೆ ಅಡಿಯಲ್ಲಿ ಮಹಾಯೋಜನೆ (ಪರಿಷ್ಕೃತ–2) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 10 ರನ್ವಯ ಮಹಾಯೋಜನೆಯನ್ನು ತಯಾರಿಸುವ ಉದ್ದೇಶವನ್ನು ಹೊಂದಿದೆ ಎಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ.
ಈ ಬಗ್ಗೆ ಸಾರ್ವಜನಿಕರ ಸಲಹೆಗಳನ್ನು ಮುಧೋಳ ನಗರ ಯೋಜನಾ ಪ್ರಾಧಿಕಾರ, ಮುಧೋಳ ಕಛೇರಿಗೆ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 60 ದಿನಗಳ ಒಳಗಾಗಿ ಖುದ್ದಾಗಿ ಅಥವಾ ನೊಂದಣಿ ಅಂಚೆ ಮೂಲಕ ನೀಡುವಂತೆ ಈ ಮೂಲಕ ಕೋರಲಾಗಿದೆ.
ಸಹಿ/– ಸದಸ್ಯ ಕಾರ್ಯದರ್ಶಿಗಳು, ನಗರ ಯೋಜನಾ ಪ್ರಾಧಿಕಾರ, ಮುಧೋಳ. ಸಹಿ/– ಅಧ್ಯಕ್ಷರು, ನಗರ ಯೋಜನಾ ಪ್ರಾಧಿಕಾರ, ಮುಧೋಳ.
ವಾಸಾಸಂಇ/ಬಾಗಲಕೋಟೆ/494/ಮಣಿಪಾಲ್/2025–26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಾರ್ಯಪಾಲಕ ಅಭಿಯಂತರರವರ ವಿಭಾಗ, ಕಛೇರಿ ಕೋಟೆ, ಬಳ್ಳಾರಿ–583 102.
ದೂರವಾಣಿ: 08392 267762 Email: eekwbbellary@gmail.com
ಟೆಂಡರ್ ಪ್ರಕಟಣೆ
ಬಿಡ್ ದಾಖಲೆಯಲ್ಲಿ ವಿವರಿಸಲಾದ ಅರ್ಹತಾ ಅವಶ್ಯಕತೆಗಳನ್ನು ಪೂರೈಸುವ ಗುತ್ತಿಗೆದಾರರು/ಫರ್ಮ್ಸ್ ರವರಿಂದ ಕೆಳಕಂಡ ಕಾಮಗಾರಿಯ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಮತ್ತು ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://kppp.karnataka.gov.in) ನಲ್ಲಿ ಪಡೆಯಬಹುದಾಗಿರುತ್ತದೆ.
ಕೆ.ಪಿ.ಪಿ. ಪೋರ್ಟಲ್ ಇಂಡೆಂಟ್ ನಂ.: 1.KUWSDB/2025-26/WS/WORK_INDENT406/Call-4. ಟೆಂಡರ್‌ಗಿಟ್ಟ ಮೊತ್ತ ರೂ. (ಜಿಎಸ್‌ಟಿ ಹೊರತುಪಡಿಸಿ): 67,34,051–00. ಇಎಂಡಿ ಮೊತ್ತ ರೂ: 1,35,000–00. ಟೆಂಡರ್ ಅವಧಿ: 06 ತಿಂಗಳು. 2.KUWSDB/2025-26/EL/WORK_ INDENT412//Call-3. ಟೆಂಡರ್‌ಗಿಟ್ಟ ಮೊತ್ತ ರೂ. (ಜಿಎಸ್‌ಟಿ ಹೊರತುಪಡಿಸಿ): 20,08,412–00. ಇಎಂಡಿ ಮೊತ್ತ ರೂ: 50,000–00. ಟೆಂಡರ್ ಅವಧಿ: 03 ತಿಂಗಳು
ಸಹಿ/–ಕಾರ್ಯಪಾಲಕ ಅಭಿಯಂತರರು ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/873/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN (An Autonomous Institute under the Dept of Medical Education, Government of Karnataka) SRI CHAMARAJENDRA HOSPITAL CAMPUS, HASSAN
Website: https://himshassan.karnataka.gov.in/ Phone/Fax No.08172-231699, 231599, Email:directorhims@yahoo.com
ಸಂಖ್ಯೆ:ಹಿಮ್ಸ್ /(1)/15/2024–25 ದಿನಾಂಕ:03.01.2026
ನೇರ ಸಂದರ್ಶನ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರು– 17 ಹುದ್ದೆಗಳು ಹಿರಿಯ ಸ್ಥಾನೀಯ ವೈದ್ಯರು –16 ಹುದ್ದೆಗಳು ಹಾಗೂ ಎಲ್ ಎಂಓ/ಸಿಎಂಓ–03 ಹುದ್ದೆಗಳನ್ನು 06 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಭರ್ತಿ ಮಾಡಲು ದಿನಾಂಕ:16.01.2026 ರ ಶುಕ್ರವಾರ ರಂದು 9.30 AM ರಿಂದ 5.30 PM ರವರೆಗೆ ನೇರ ಸಂದರ್ಶನ ನಿಗದಿಪಡಿಸಿದ್ದು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ದಿನಾಂಕ: 16.01.2026 ರ ಶುಕ್ರವಾರ ರಂದು ನಡೆಯುವ ನೇರ ಸಂದರ್ಶನಕ್ಕೆ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ಸೂಚಿಸಿದೆ. ಅರ್ಜಿ ನಮೂನೆ, ಮೀಸಲಾತಿ, ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಅಂತರ್ಜಾಲ www.himshassan.karnataka.gov.in ಇಲ್ಲಿ ಪರಿಶೀಲಿಸಿ ಕೊಳ್ಳಬಹುದು.
ಸಹಿ/–ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/913/ಕೆಎಸ್‌ಎಂಸಿಎ/2025–26

ಕರ್ನಾಟಕ ಸರಕಾರ
ಗ್ರಾಮ ಪಂಚಾಯತ್ ಕಾರ್ಯಾಲಯ, ಆಹೇರಿ
ಸಂಖ್ಯೆ:ಗ್ರಾಪಂಆ/ಮನರೇಗಾ/ಇ–ಪ್ರೋ.ಟೇಂ,ಪ್ರ/2025–26 ದಿನಾಂಕ:02.01.2026
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಈ ಮೂಲಕ ಪ್ರಚಾರ ಪಡಿಸುವುದೇನೆಂದರೆ, ವಿಜಯಪುರ ಜಿಲ್ಲೆ ವಿಜಯಪುರ ತಾಲೂಕಿನ ಆಹೇರಿ ಗ್ರಾಮಪಂಚಾಯತಿ 2020–21ನೇ ಸಾಲಿನ ಅಂಕಲಗಿ ಗ್ರಾಮದ ಸರಕಾರಿ ಪ್ರೌಢ ಶಾಲೆ ಕಂಪೌಂಡ ನಿರ್ಮಾಣ ಕಾಮಗಾರಿಯ ಸಂಖ್ಯೆ 1507002016/AV/93393042892254245 ಅಂದಾಜು ಮೊತ್ತ 15,00,000/– ರೂಪಾಯಿಗಳು. ಸದರಿ ಕಾಮಗಾರಿಯನ್ನು 2025–26 ಸಾಲಿನಲ್ಲಿ ಮುಂದುವರಿಸಲು ಹಾಗು ಅನುಷ್ಟಾನಗೊಳಿಸಲು ಕಾಮಗಾರಿಗೆ ವಿವಿಧ ರೀತಿಯ ಸಾಮಗ್ರಿ/ಯಂತ್ರೋಪಕರಣ/ಸೇವೆಸಂಗ್ರಹಿಸಲು ಸಂಬಂಧಪಟ್ಟ ಕಾಮಗಾರಿ ಸಾಮಾಗ್ರಿಗಳಿಗಾಗಿ ಟೆಂಡರ್ ಕರೆಯಲಾಗಿದ್ದ, ಟೆಂಡರ್ ಸಂಖ್ಯೆ: RDPR/2025-26/IND12980 ಗಳನ್ನು ಕೆ.ಟಿ.ಟಿ.ಪಿ ನಿಯಮದಂತೆ, ನೊಂದಾಯಿತ ಅರ್ಹ 4ನೇ ದರ್ಜೆ ಸಿವ್ಹಿಲ್ ಮೇಲ್ಪಟ್ಟ ಸರಬರಾಜುದಾರರಿಂದ ಟೆಂಡರ್ ದಿನಾಂಕ: 05.01.2026 ರಿಂದ 14.01.2026 ಸಂಜೆ 5.00 ಗಂಟೆಯೊಳಗೆ ಕಚೇರಿ ಸಮಯದಲ್ಲಿ ಸಲ್ಲಿಸತಕ್ಕದ್ದು.ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ನಲ್ಲಿ ವೀಕ್ಷಿಸಬಹುದು. ಹಾಗೂ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಈ–ಪೋರ್ಟಲ್‌ನಲ್ಲಿ ತಿಳಿಸಲಾಗಿರುತ್ತದೆ.
1. ಕಾಮಗಾರಿಯ ಹೆಸರು: WP4 265194 ಅಂಕಲಗಿ ಗ್ರಾಮದ ಸರಕಾರಿ ಪ್ರೌಢಶಾಲೆಯ ಕಂಪೌಂಡ ನಿರ್ಮಾಣ. ಅಂದಾಜು ಮೊತ್ತ: 15,00,000/–. ಸಾಮಾಗ್ರಿ ಮೊತ್ತ: 10,31,618.36/–
ಸಹಿ/– ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ್, ಆಹೇರಿ
ವಾಸಾಸಂಇ/ವಿಜಯಪುರ/591/ಕೆಎಸ್‌ಎಂಸಿಎ/2025–26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು – 560 027.
ದೂರವಾಣಿ : 080 – 22221321. ಇ–ಮೇಲ್ : trafficcom@ksrtc.org
ಸಂ: ಕರಾಸಾ/ಕೇಕ/ಸಂ/ವಾ–1/1615/2025–26 ದಿನಾಂಕ: 06.01.2026
ಟೆಂಡರ್ ಪ್ರಕಟಣೆ ಸಂಖ್ಯೆ–ಕರಾರಸಾನಿ/ಸಂ/ವಾ/02/2025–26
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕೇಂದ್ರ ಕಛೇರಿ ಆವರಣದಲ್ಲಿನ ಸಿಬ್ಬಂದಿ ಉಪಹಾರ ಗೃಹ ನಿರ್ವಹಣೆಗೆ ನೋಂದಾಯಿತ ಖಾಸಗಿ ಗುತ್ತಿಗೆದಾರರು / ಪರವಾನಗಿದಾರರನ್ನು ಟೆಂಡರ್ ಮೂಲಕ ಆಯ್ಕೆ ಮಾಡಲು ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಸಿಬ್ಬಂದಿ ಕ್ಯಾಂಟೀನ್‌ನ ವಿವರ : 1) ಪರವಾನಗಿ ಅವಧಿ : 02 ವರ್ಷಗಳು, 2) ಪರವಾನಗಿ ಶುಲ್ಕ : ಉಚಿತ, 3) ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ : ರೂ.50,000/–, 4) ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ ಮತ್ತು ಜಿಎಸ್‌ಟಿ ರೂ. 1,180/– (ರೂ.1,000/– + .180/–), 5) ವಿಸ್ತೀರ್ಣ: 316.4 ಚ.ಮೀ.
ಅರ್ಜಿಯನ್ನು CAO/FA, KSRTC, Bengaluru ರವರ ಹೆಸರಿಗೆ ಪಡೆದ ಅರ್ಜಿ ಶುಲ್ಕದ ಡಿ.ಡಿ ಯನ್ನು ಸಲ್ಲಿಸಿ ನಿಗದಿತ ದಿನಾಂಕದೊಳಗೆ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.
1) ಅರ್ಜಿಯನ್ನು ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ : 28.01.2026 ಸಂಜೆ 17.00 ಗಂಟೆಗೆ. 2) ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 29.01.2026 ಸಂಜೆ 17.00 ಗಂಟೆಗೆ. 3) ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 30.01.2026 ಮಧ್ಯಾಹ್ನ 15.00 ಗಂಟೆಗೆ.
ಸಹಿ/– ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು
DIPR/CP/4892/Zen/2025-26

GOVERNMENT OF KARNATAKA
ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ ಬೆಳಗಾವಿ – 590001
OFFICE OF THE DEPUTY COMMISSIONER & DISTRICT MAGISTRATE BELAGAVI - 590001
Telephone: 0831-2406303/2407200 Email: deo.belagavi@gmail.com
ಕ್ರಕಂಶಾ/ಎಜೆಎಸ್ ಕೆ/ವಿವ/19/2025–26 ಬೆಳಗಾವಿ, ದಿನಾಂಕ:06–01–2026
–:: ಟೆಂಡರ್ ಪ್ರಕಟಣೆ ::–
ಬೆಳಗಾವಿ ಜಿಲ್ಲೆಯ ಅಟಲ್ ಜೀ ಜನಸ್ನೇಹಿ ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಡಾಟಾ ಎಂಟ್ರಿ ಆಪರೇಟರ್ ಸೇವೆಯನ್ನು ಒದಗಿಸಲು ಅರ್ಹ ಮತ್ತು ಆಸಕ್ತಿವುಳ್ಳ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ ಮೆಂಟ್ ಟೆಂಡರ್ ಕರೆಯಲಾಗಿದೆ. ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ.

ಇ–ಪ್ರೊಕ್ಯೂರಮೆಂಟ್ ತಾಣದಿಂದ ಟೆಂಡರ್ ಪತ್ರಿಕೆ ಪಡೆಯುವ ದಿನಾಂಕ:	07–01–2026
ಟೆಂಡರ್ ವಿವರಗಳ ಬಗ್ಗೆ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ	20 –01–2026
ಬಿಡ್ ಪೂರ್ವ ಸಭೆ (ಅಗತ್ಯ ವಾದರೆ ಮಾತ್ರ)	20–01–2026 ಬೆಳ್ಳಿಗೆ 11–00 ಗಂಟೆಗೆ
ಇ–ಪ್ರೊಕ್ಯೂರಮೆಂಟ್ ತಾಣದಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	23–01–2026 ಸಾಂಯಕಾಲ 5–30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	27–01–2026
ಹಣಕಾಸು ಬಿಡ್ ತೆರೆಯುವ ದಿನಾಂಕ	30–01–2026
ಟೆಂಡರ್ ತೆರೆಯುವ ಕಚೇರಿಯ ವಿಳಾಸ	ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ ದೂರವಾಣಿ ಸಂಖ್ಯೆ: 0831–2406310 ಇ–ಮೇಲ್: ajskbhoomi@gmail.com
ಇ.ಎಂ.ಡಿ ಮೊತ್ತ	3,89,365/–

ಟೆಂಡರ್ ಕುರಿತು ಹೆಚ್ಚಿನ ವಿವರಗಳು ಹಾಗೂ ಮಾಹಿತಿಗೆ ಅಥವಾ ಜಿಲ್ಲಾಧಿಕಾರಿಗಳ ಕಾರ್ಯಾಲಯವನ್ನು ಸಂಪರ್ಕಿಸಲು ಕೋರಿದೆ.
ಸಹಿ/–(ಮೊಹಮ್ಮದ ರೋಷನ್) ಜಿಲ್ಲಾಧಿಕಾರಿಗಳು ಬೆಳಗಾವಿ
DIPR/BGM/RO-NO-1598/MCA/2025-26

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ:ಲೋಇ/ಬೆವಿ/ದರಪಟ್ಟಿ ಆಹ್ವಾನ/ನೋಟಿಫಿಕೇಶನ್/ತಾಶಾ/2025–26/6432 ದಿನಾಂಕ:.06.01.2026
–:ದರಪಟ್ಟಿ ಆಹ್ವಾನ ಅಧಿಸೂಚನೆ:–
ಬೆಳಗಾವಿ ನಗರದಲ್ಲಿ ಎಲಿವೇಟೆಡ್ ಕಾರಿಡಾರ್/ಗ್ರೇಡ್ ಸೆಪರೇಟರ್ ನಿರ್ಮಾಣ NH–48 ರಿಂದ ಅಶೋಕ ಸರ್ಕಲ್ ಸಂಗೊಳ್ಳಿ ರಾಯಣ್ಣ ವೃತ್ತ ಮತ್ತು ಕಿತ್ತೂರು ರಾಣಿ ಚೆನಮ್ಮ ವೃತ್ತದ ಮೂಲಕ ಧರ್ಮವೀರ ಸಂಭಾಜಿ ವೃತ್ತದವರೆಗೆ ಕಾಮಗಾರಿಯ ದರಗಳ ಅನುಮೋದನೆ ಕುರಿತು" ಸದರಿ ಮೇಲಿನ ಕಾಮಗಾರಿಯನ್ನು ಕೈಕೊಳ್ಳಬೇಕಾಗಿದ್ದು ಸದರಿ ಕಾಮಗಾರಿಗಳ ಅಂದಾಜು ಪತ್ರಿಕೆ ತಯಾರಿಕೆಗಾಗಿ 2023–24 ನೇ ಸಾಲಿನ (2025–26 ನೇ ಸಾಲಿಗೆ ಮುಂದುವರೆದ) ಏಕರೂಪ ದರಪಟ್ಟಿಯಲ್ಲಿ ಆಯ್ದ ಕೆಲವೊಂದು ಐಟಂಗಳಿಗೆ ದರಗಳು ಲಭ್ಯವಿಲ್ಲದ ಕಾರಣ ಕೊಟೇಷನ್‌ಗಳನ್ನು ಕರೆಯುವುದು. ಸದರಿ ಕಾಮಗಾರಿಯನ್ನು ತುರ್ತಾಗಿ ಕೈಕೊಂಡು ಪೂರ್ಣಗೊಳಿಸಬೇಕಾಗಿರುವುದರಿಂದ ತುರ್ತು ಕೋಟೆಶನಗಳನ್ನು ಹೆಸರಾಂತ ಕಂಪನಿ/ಸಂಸ್ಥೆಗಳಿಂದ ಪಡೆದು ಇದರೊಂದಿಗೆ ಲಗತ್ತಿಸಲಾದ ಅನುಬಂದದಲ್ಲಿ ಇರುವ itemಗಳನ್ನು ಈ ಕಛೇರಿಯ ನೋಟಿಸ್ ಬೋರ್ಡ್ ನಲ್ಲಿ ಅಳವಡಿಸಿದ್ದು, ಸದರಿ ಕೊಟೇಷನ್‌ಗಳನ್ನು ಈ ಕೆಳಗಿನ ಷರತ್ತಿಗೊಳಪಟ್ಟು ಕರೆಯಲಾಗಿರುತ್ತದೆ.
As per the enclosed specifications on the terms and conditions as given herein for preparation of estimates.1. The rates should be inclusive of all charges. 2. GST at 18% will be paid separately. 3. The rates should be quoted for the essential material items given and in case if any change in specifications of items this should be clearly stated. 4. Sealed quotations should reach this office on or before 14.01.2026 @ 4.00PM or in person to this office. Delay in postal transit will not be considered.
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-1599/KSMCA/2025-26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ
ಸಂ.ಕಾನಿಅ/ಲೋಇ/ಯಾವಿ/ತಾಶಾ–4/ಇ–ಟೆಂಡರ್ ಪ್ರಕಟಣೆ/2025–26/ 2422, ದಿನಾಂಕ:05.01.2026
ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ
1) **ಕಾಮಗಾರಿ ವಿವರ:** ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–3 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2025–26 ನೇ ಸಾಲಿನ KRDCL Capital Expenditure ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ವರ್ಕ ಇಂಡೆಂಟ್ ಸಂಖ್ಯೆ: 1)30086 (Restoration of CD on NH-150A - SH-127 Sangam upto Raichur Border from ch.at 37.65 & 37.70 and Construction of storm Water Drain Connecting from SH-15 in Naikal Village at Ch.220.00 to 221.50 (In selected reaches) in yadgir Constituency Shahapur Taluka. Under, 5054 Karnataka Road Development Corporation Limited Capital Expenditure For The Year 2025–26)ಕ್ಕೆ ಟೆಂಡರ್ ಆಹ್ವಾನಿಸಲಾಗಿದೆ. 2) **ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.105.00 ಲಕ್ಷಗಳು 3) **ಗುತ್ತಿಗೆದಾರರ ಅರ್ಹತೆ ವಿವರ:** ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು 4) **ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) **ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 12.01.2026 (17.30 ಗಂಟೆವರೆಗೆ) 6) **ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 16.01.2026 (16.00 ಗಂಟೆವರೆಗೆ) 7) **ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 17.01.2026 (16.30 ಗಂಟೆ ನಂತರ) 8) **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 20.01.2026 (11.30 ಗಂಟೆ ನಂತರ) 9) **ಹೆಚ್ಚಿನ ವಿವರಗಳಿಗೆ :** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 10) **ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in
ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/456/ಕೆ.ಎಸ್.ಎಂ.ಸಿ.&ಎ/2025–26

ಖಿನ್ನತೆ: ಅಶ್ಲೀಲ ವಿಡಿಯೊ ವೀಕ್ಷಣೆ ವ್ಯಸನ

ನಿಮ್ಹಾನ್ಸ್ ಸಂಶೋಧಕರಿಂದ ಅಧ್ಯಯನ 'ಜಿಯೋಸೈಕಿಯಾಟ್ರಿ' ಜರ್ನಲ್‌ನಲ್ಲಿ ಪ್ರಕಟ

• ವರುಣ ಹೆಗಡೆ



ಬೆಂಗಳೂರು: 'ಆತಂಕ, ಖಿನ್ನತೆ, ಒತ್ತಡ ಮೊದಲಾದ ಮನೋಯಾತನೆಗಳಿಂದ ಬಳಲುತ್ತಿರುವ ವ್ಯಕ್ತಿಗಳು, ಅನಿಯಂತ್ರಿತವಾಗಿ ಅಶ್ಲೀಲ ವಿಡಿಯೊಗಳನ್ನು ವೀಕ್ಷಿಸುತ್ತಾರೆ' ಎನ್ನುವುದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಸಂಶೋಧಕರು ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

'ಭಾರತೀಯ ವಯಸ್ಕರಲ್ಲಿ ಅಶ್ಲೀಲ ವಿಡಿಯೊ ವೀಕ್ಷಣೆ: ಮಾನಸಿಕ ಸಂಬಂಧಗಳು ಮತ್ತು ಮುನ್ಸೂಚಕಗಳು' ಶೀರ್ಷಿಕೆಯಡಿ ಸಂಶೋಧನಾ ಪ್ರಬಂಧವನ್ನು ಎಂ. ರಾಜಶೇಖರ್, ಮನೋಜ್ ಕುಮಾರ್ ಶರ್ಮಾ ಮತ್ತು ಸೆಂಥಿಲ್ ಅಮುದನ್ ಸಿದ್ಧಪಡಿಸಿದ್ದಾರೆ. ಇದು 'ಜಿಯೋಸೈಕಿಯಾಟ್ರಿ' ಜರ್ನಲ್‌ನಲ್ಲಿ ಪ್ರಕಟವಾಗಿದೆ.

'ಅನಿಯಂತ್ರಿತ ಅಶ್ಲೀಲ ವಿಡಿಯೊಗಳ ವೀಕ್ಷಣೆಗೂ, ಮಾನಸಿಕ ಸಮಸ್ಯೆಗಳಿಗೂ ನಿಕಟ ಸಂಬಂಧವಿದೆ' ಎನ್ನುವುದನ್ನು ಈ ಅಧ್ಯಯನ ಸಾಬೀತು ಮಾಡಿದೆ. ನಿಗದಿತ ವರ್ಗವು ಈ ವ್ಯಸನಕ್ಕೆ ಕಿರಿಯ ವಯಸ್ಸಿನಲ್ಲಿಯೇ ಒಳಪಡುವುದರಿಂದ, ನಿತ್ಯ ಜೀವನದ ಕಾರ್ಯನಿರ್ವಹಣೆಯಲ್ಲಿಯೂ ನಕಾರಾತ್ಮಕ ಪರಿಣಾಮ ಎದುರಿಸುತ್ತಿರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಶೈಕ್ಷಣಿಕ ಅರ್ಹತೆ: 18ರಿಂದ 46 ವರ್ಷದೊಳಗಿನ 112 ಮಂದಿಯನ್ನು ಆನ್‌ಲೈನ್ ವೇದಿಕೆ ಮೂಲಕ ಈ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಸರಾಸರಿ ವಯಸ್ಸು 25 ಆಗಿದ್ದು, ಅಧ್ಯಯನಕ್ಕೆ ಒಳಪಟ್ಟವರಲ್ಲಿ ಬಹುತೇಕರು (ಶೇ 81.3ರಷ್ಟು) ಪುರುಷರಾಗಿದ್ದಾರೆ. ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದಂತೆ, ಸುಮಾರು ಅರ್ಧದಷ್ಟು ಮಂದಿ (ಶೇ 42ರಷ್ಟು) ಪದವೀಧರರಾಗಿದ್ದಾರೆ. ಶೇ 26.8ರಷ್ಟು ಮಂದಿ ಸ್ನಾತಕೋತ್ತರ ಪದವೀಧರರಾಗಿದ್ದಾರೆ. 12ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವವರು ಶೇ 12.5ರಷ್ಟು, ಎಂ.ಫಿಲ್ ಮತ್ತು ಪಿಎಚ್‌.ಡಿ. ಪದವೀಧರರು ಶೇ 8.92ರಷ್ಟು ಮತ್ತು ಇತರೆ ಶೈಕ್ಷಣಿಕ ಅರ್ಹತೆ ಹೊಂದಿರುವವರು ಶೇ 1.8ರಷ್ಟಿದ್ದಾರೆ.

'ಕಳೆದ ಕೆಲ ದಶಕಗಳಿಂದ ಅಶ್ಲೀಲ ವಿಡಿಯೊ ವೀಕ್ಷಿಸುವವರ ಸಂಖ್ಯೆ ಏರಿಕೆಯಾಗುತ್ತಿದೆ. ಸುಲಭವಾಗಿ ವಿಡಿಯೊಗಳು ಲಭ್ಯವಾಗುವಿಕೆ, ಅನಾಮಧೇಯತೆ, ಡಿಜಿಟಲ್ ವೇದಿಕೆಗಳು ಈ ಹೆಚ್ಚಳಕ್ಕೆ ಕಾರಣವಾಗುತ್ತಿವೆ. ಖಿನ್ನತೆ, ಆತಂಕ, ಒತ್ತಡವು ಅಶ್ಲೀಲ ವಿಡಿಯೊ ವೀಕ್ಷಣೆಗೆ ಪ್ರಚೋದಿಸುತ್ತಿವೆ' ಎಂದು ಸಂಶೋಧಕರು ತಿಳಿಸಿದರು.

'ಮಾನಸಿಕ ತೊಂದರೆಗಳನ್ನು ಎದುರಿಸುತ್ತಿರುವವರು, ಒತ್ತಡ, ಖಿನ್ನತೆಯಂತಹ ಸಮಸ್ಯೆಯಿಂದ ಹೊರಬರಲು ಸಹ ಅಶ್ಲೀಲ ವಿಡಿಯೊಗಳ ವೀಕ್ಷಣೆಗೆ ಮೊರೆಹೋಗುವ ಸಾಧ್ಯತೆಯಿದೆ' ಎಂದು ಸಂಶೋಧಕರಲ್ಲಿ ಒಬ್ಬರಾದ ಎಂ. ರಾಜಶೇಖರ್ ಹೇಳಿದರು.

12 ವಾರಗಳ ಸಮೀಕ್ಷೆ

ಈ ಸಮೀಕ್ಷೆಯಲ್ಲಿ ಒಟ್ಟು 236 ಮಂದಿ ಭಾಗವಹಿಸಲು ಆಸಕ್ತಿ ತೋರಿದ್ದರು. ಸಮೀಕ್ಷೆ ಪ್ರಾರಂಭವಾಗುವ ಮೊದಲೇ 74 ಮಂದಿ ಈ ಪ್ರಕ್ರಿಯೆಯಿಂದ ಹೊರನಡೆದರು. 45 ಮಂದಿ ಅಪೂರ್ಣ ಮಾಹಿತಿ ಒದಗಿಸಿದ್ದರು. ಐವರು ಅಪ್ರಾಪ್ತ ವಯಸ್ಕರಾದ ಕಾರಣ ಅವರನ್ನು ಸಮೀಕ್ಷೆಯಿಂದ ಹೊರಗಿಡಲಾಗಿತ್ತು. ಅಂತಿಮವಾಗಿ 112 ಜನರನ್ನು ಸಮೀಕ್ಷೆ ಮಾಡಲಾಗಿದೆ.

12 ವಾರಗಳ ಅವಧಿಯಲ್ಲಿ ದತ್ತಾಂಶ ಸಂಗ್ರಹಿಸಲಾಗಿದೆ. ಮಾರ್ಚ್ 2024ರಿಂದ ಜೂನ್ 2024ರ ಅವಧಿಯಲ್ಲಿ, ವಾಟ್ಸ್‌ಆ್ಯಪ್, ಟೆಲಿಗ್ರಾಂ ಸೇರಿ ವಿವಿಧ ಸಾಮಾಜಿಕ ಮಾಧ್ಯಮ ಆ್ಯಪ್‌ಗಳ ನೆರವಿನಿಂದ ದತ್ತಾಂಶ ಕಲೆಹಾಕಿ, ವಿಶ್ಲೇಷಿಸಲಾಗಿದೆ.

ವಿದ್ಯಾರ್ಥಿಗಳೇ ಅಧಿಕ

ಅಧ್ಯಯನಕ್ಕೆ ಒಳಪಟ್ಟವರಲ್ಲಿ ಶೇ 50.9ರಷ್ಟು ಮಂದಿ ವಿದ್ಯಾರ್ಥಿಗಳಾಗಿದ್ದಾರೆ. ಉದ್ಯೋಗಸ್ಥರು ಶೇ 36.6ರಷ್ಟು, ಸ್ವಯಂ ಉದ್ಯೋಗಿಗಳು ಶೇ 8ರಷ್ಟು, ಗೃಹಿಣಿಯರು ಶೇ 1.8ರಷ್ಟು ಹಾಗೂ ಇತರ ಉದ್ಯೋಗದಲ್ಲಿ ತೊಡಗಿಕೊಂಡವರು ಶೇ 2.7ರಷ್ಟಿದ್ದಾರೆ.

ಮನೋಯಾತನೆಗಳ ಜತೆಗೆ ಕಳೆದ ಆರು ತಿಂಗಳ ಅವಧಿಯಲ್ಲಿ ಅಥವಾ ಸದ್ಯ ಅಶ್ಲೀಲ ವಿಡಿಯೊ ವೀಕ್ಷಿಸುತ್ತಿರುವ, 18 ವರ್ಷ ಮೇಲ್ಪಟ್ಟ ಭಾರತೀಯರನ್ನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿತ್ತು.

---

18 ಬೇಡಿಕೆ: ಪ್ರಣವಾನಂದ ಸ್ವಾಮೀಜಿ ಪಾದಯಾತ್ರೆ

ಹೋರಾಟಕ್ಕಿಳಿದ ಈಡಿಗರು

ಪ್ರಜಾವಾಣಿ ವಾರ್ತೆ

ಚಿತ್ತಾಪುರ: ಬ್ರಹ್ಮಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮಕ್ಕೆ ₹500 ಕೋಟಿ ಬಿಡುಗಡೆ, ಎಸ್ಟಿಗೆ ಸೇರ್ಪಡೆ ಸೇರಿ 18 ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಈಡಿಗ, ಬಿಲ್ಲವ, ನಾಮಧಾರಿ, ಧೀವರ, ತೀಯ ಒಳಗೊಂಡು 26 ಪಂಗಡಗಳು ಮತ್ತೆ ಹೋರಾಟದ ಹಾದಿ ತುಳಿದಿವೆ.

ತಾಲ್ಲೂಕಿನ ಕರದಾಳ ಬ್ರಹ್ಮಶ್ರೀ ನಾರಾಯಣಗುರು ಶಕ್ತಿ ಪೀಠದಿಂದ ಬೆಂಗಳೂರಿನವರೆಗೆ ಪೀಠಾಧಿಪತಿ ಪ್ರಣವಾನಂದ ಸ್ವಾಮೀಜಿ ಮಂಗಳವಾರ ಪಾದಯಾತ್ರೆ ಆರಂಭಿಸಿದರು. ಹಿಂದುಳಿದ ವರ್ಗಗಳ ಮಠಾಧೀಶರು ಪಾದಯಾತ್ರೆಗೆ ಚಾಲನೆ ನೀಡಿದರು.

ನಾರಾಯಣಗುರು ಪ್ರತಿಮೆ ಹೊತ್ತ ಸಾರೋಟ, ಜೊತೆಗೆ ಹಲಗಿ-ಡೊಳ್ಳು ವಾದನದ ನಿನಾದದೊಂದಿಗೆ ಸ್ವಾಮೀಜಿಗಳು, ಮುಖಂಡರು ಹಳದಿ ಬಾವುಟ ಹಿಡಿದು, ಟೊಪ್ಪಿಗೆ, ಶಾಲು ಧರಿಸಿ ಹಾಕಿಕೊಂಡು 9 ಕಿ.ಮೀ ದಾರಿ ಕ್ರಮಿಸಿ ಚಿತ್ತಾಪುರ ತಲುಪಿದರು.

ಚಿತ್ತಾಪುರದ ಪಟ್ಟಣದ ಬಜಾಜ್ ಕಲ್ಯಾಣ ಮಂಟಪದಲ್ಲಿ ಬಹಿರಂಗ ಸಭೆ ನಡೆಯಿತು. ಸಮುದಾಯದ ನೂರಾರು ಮಂದಿ ಪಾಲ್ಗೊಂಡಿದ್ದರು.

ಸಮಾರಂಭ ಉದ್ಘಾಟಿಸಿದ ಬಿಜೆಪಿ ಸಂಸದ ಕೋಟ ಶ್ರೀನಿವಾಸ ಪೂಜಾರಿ, 'ಸಂವಿಧಾನಬದ್ಧ ಹಕ್ಕು, ಸೌಲಭ್ಯ, ಸಾಮಾಜಿಕ ನ್ಯಾಯ ಪಡೆಯಲು ಈಡಿಗ ಸಮುದಾಯವು ಒಗ್ಗಟ್ಟಿನಿಂದ ಹೋರಾಡಬೇಕು' ಎಂದರು.

'ಚಿತ್ತಾಪುರದಲ್ಲಿ ನಾನು ಬೆಳಗಿಸಿದ್ದು ಕೇವಲ ಜ್ಯೋತಿಯಲ್ಲ. ಹೋರಾಟದ ಕಿಚ್ಚು. ಈಡಿಗ ಸಮುದಾಯದ ಏಳಿಗೆಗಾಗಿ ಹಮ್ಮಿಕೊಂಡ ಪಾದಯಾತ್ರೆಗೆ ರಾಜ್ಯ ಸರ್ಕಾರ ತಕ್ಷಣ ಸ್ಪಂದಿಸಬೇಕು. ಇಲ್ಲವಾದರೆ ನಾನೂ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕುತ್ತೇನೆ' ಎಂದು ಅವರು ಗುಡುಗಿದರು.

'ಪಾದಯಾತ್ರೆ 41 ದಿನ ನಡೆಯಲಿದ್ದು, ನಿತ್ಯ 20 ಕಿ.ಮೀ ಕ್ರಮಿಸಿ ಬೆಂಗಳೂರು ತಲುಪಲಿದೆ. ಮಾರ್ಗಮಧ್ಯೆ ಅಲ್ಲಲ್ಲಿ 15 ಬಹಿರಂಗ ಸಭೆಗಳು ಜರುಗಲಿವೆ' ಎಂದು ಮುಖಂಡರು ತಿಳಿಸಿದ್ದಾರೆ.

'ಬೆಂಗಳೂರಿನಲ್ಲೇ ಸತ್ತರೂ ಚಿಂತೆಯಿಲ್ಲ'

ಪಾದಯಾತ್ರೆ ನೇತೃತ್ವ ವಹಿಸಿರುವ ಪ್ರಣವಾನಂದ ಸ್ವಾಮೀಜಿ ಮಾತನಾಡಿ, 'ಈ ಪಾದಯಾತ್ರೆಯಲ್ಲಿ ಈಡಿಗ ಸಮಾಜದ ಯುವ ಪೀಳಿಗೆಯ ಭವಿಷ್ಯ ಅಡಗಿದೆ. ಸಮುದಾಯದ ಅಸ್ತಿತ್ವ ಉಳಿಸಲು ಹೋರಾಟ ಹಮ್ಮಿಕೊಂಡಿದ್ದೇವೆ' ಎಂದರು.

'ಸಮುದಾಯಕ್ಕಾಗಿ ಜೀವನ ತ್ಯಾಗ ಮಾಡಲು ಪಣ ತೊಟ್ಟಿರುವೆ. ಬೆಂಗಳೂರಿನಲ್ಲೇ ಸತ್ತರೂ ಚಿಂತೆಯಿಲ್ಲ. ಬೇಡಿಕೆ ಈಡೇರುವವರೆಗೂ ಹಿಂದಿರುಗುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ನಾರಾಯಣ ಗುರು ನಿಗಮ ನೋಂದಣಿಗೆ ಆದೇಶ

ಬೆಂಗಳೂರು: ಈಡಿಗ–ಬಿಲ್ಲವ ಸೇರಿದಂತೆ 26 ಜಾತಿಗಳ ಸಮಗ್ರ ಅಭಿವೃದ್ಧಿಗಾಗಿ ಸ್ಥಾಪಿಸಲಾಗಿರುವ 'ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮ'ದ ನೋಂದಣಿ ಸೇರಿದಂತೆ ಆರಂಭಿಕ ವೆಚ್ಚವನ್ನು ಕರ್ನಾಟಕ ರಾಜ್ಯ ಕಾಡುಗೊಲ್ಲ ಅಭಿವೃದ್ಧಿ ನಿಗಮದಿಂದ ಭರಿಸಬೇಕು. ನಂತರ ವಾಪಸ್ ಪಡೆಯಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸೂಚಿಸಿದೆ.

ನಿಗಮವನ್ನು ಕಂಪನಿ ಕಾಯ್ದೆಯ ನಿಯಮಗಳಂತೆ ನೋಂದಣಿ ಮಾಡಬೇಕು. ನಿಗಮಕ್ಕೆ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡುವವರೆಗೆ ಕಾಡುಗೊಲ್ಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಹೆಚ್ಚುವರಿ ಕಾರ್ಯಭಾರ ನೀಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರಮುಖ ಬೇಡಿಕೆ

- ಅಭಿವೃದ್ಧಿ ನಿಗಮಕ್ಕೆ ₹500 ಕೋಟಿ
- ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ

ತಾಳೆ ಆಗದ 2.51 ಕೋಟಿ 'ಮತ'

ಒಂದನೇ ಪುಟದಿಂದ...

2002ರ ಮತದಾರರ ಪಟ್ಟಿಯ ಜತೆಗೆ ವಿವರ ತಾಳೆಯಾದವರು, ಎಸ್‌ಐಆರ್ ವೇಳೆ ಯಾವುದೇ ದಾಖಲೆಗಳನ್ನು ಸಲ್ಲಿಸಬೇಕಿಲ್ಲ. ಉಳಿದವರು ತಮ್ಮ ಅರ್ಹತೆಯನ್ನು ಸಾಬೀತುಪಡಿಸಲು ದಾಖಲೆ ಪತ್ರಗಳನ್ನು ಒದಗಿಸಬೇಕಾಗುತ್ತದೆ.

ರಾಜ್ಯದಲ್ಲಿ ಎಸ್‌ಐಆರ್ ಪೂರ್ವಭಾವಿ ಪ್ರಕ್ರಿಯೆಗೆ ಚುನಾವಣಾ ಆಯೋಗವು 2025ರ ಡಿಸೆಂಬರ್‌ನಲ್ಲಿಯೇ ಚಾಲನೆ ನೀಡಿದೆ. ಈ ಪ್ರಕ್ರಿಯೆಯ ಈವರೆಗಿನ ಪ್ರಗತಿಗೆ ಸಂಬಂಧಿಸಿದಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ಸಿದ್ಧಪಡಿಸಿರುವ ವರದಿಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಈ ಪ್ರಕ್ರಿಯೆಯ ಭಾಗವಾಗಿ ಮೊದಲ ಹಂತದಲ್ಲಿ, 40 ವರ್ಷಕ್ಕಿಂತ ಹೆಚ್ಚು ವಯಸ್ಸಿನವರ ವಿವರಗಳನ್ನು ಹೊಂದಿಸಿ ನೋಡಲಾಗಿದೆ. ರಾಜ್ಯದಲ್ಲಿ ಈ ವಯಸ್ಸಿನ 3.12 ಕೋಟಿ ಮತದಾರರು ಇದ್ದು, ಆ ಪೈಕಿ 1.87 ಕೋಟಿ ಜನರ ವಿವರಗಳಷ್ಟೇ ತಾಳೆಯಾಗಿವೆ. ಇಲ್ಲಿ 1.25 ಕೋಟಿ ಮತದಾರರ ವಿವರಗಳು ಒಂದಕ್ಕೊಂದು ಹೊಂದಿಕೆಯಾಗಿಲ್ಲ.

ನಂತರದ ಹಂತದಲ್ಲಿ ಎಲ್ಲ ವಯಸ್ಸಿನ ಮತದಾರರ ವಿವರಗಳನ್ನು ಮತಗಟ್ಟೆ, ವಿಧಾನಸಭಾ ಕ್ಷೇತ್ರ, ಜಿಲ್ಲೆ ಮತ್ತು ಅಂತರ ಜಿಲ್ಲಾ ಮಟ್ಟದಲ್ಲಿ ಹೋಲಿಸಿ ನೋಡಲಾಗಿದೆ. ಇಷ್ಟು ಹಂತಗಳ ಹೋಲಿಕೆಯ ನಂತರವೂ 2.51 ಕೋಟಿ ಮಂದಿಯ ವಿವರ ತಾಳೆಯಾಗಿಲ್ಲ. ಈ ಪೈಕಿ, 40 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರ ಸಂಖ್ಯೆಯೇ 1.25 ಕೋಟಿಯಷ್ಟಿದೆ.

'ಇದು ಎಸ್‌ಐಆರ್‌ಗೆ ಪೂರ್ವಭಾವಿಯಾಗಿ ನಡೆಯುತ್ತಿರುವ ಪ್ರಕ್ರಿಯೆ. ಎಸ್‌ಐಆರ್ ಆರಂಭವಾದ ನಂತರ, ಮತಗಟ್ಟೆ ಅಧಿಕಾರಿಗಳು ಮನೆ–ಮನೆಗೆ ಹೋಗಿ ಮತದಾರರ ಪಟ್ಟಿಯ ಪರಿಶೀಲನೆ ನಡೆಸಲಿದ್ದಾರೆ. ಮೃತಪಟ್ಟವರು, ವಿಳಾಸ ಬದಲಾದವರು, ಒಂದಕ್ಕಿಂತ ಹೆಚ್ಚು ಕಡೆ ಮತದಾರರ ಚೀಟಿ ಹೊಂದಿರುವವರ ವಿವರವನ್ನು ಆ ಹಂತದಲ್ಲಿ ಕಲೆಹಾಕಲಾಗುತ್ತದೆ. ಅರ್ಹ ದಾಖಲೆಗಳನ್ನು ಒದಗಿಸಿದವರು ಮತದಾರರ ಪಟ್ಟಿಯಲ್ಲಿ ಉಳಿಯುತ್ತಾರೆ. ಆನಂತರ ಅರ್ಹ ಮತದಾರರ ಸಂಖ್ಯೆ ಮತ್ತು ಪ್ರಮಾಣದ ನೈಜ ಚಿತ್ರಣ ಸಿಗಲಿದೆ' ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬು-ಕುಮಾರ್ ಅವರ ಕಚೇರಿ ಫೋನ್ ಮತ್ತು ಮೊಬೈಲ್‌ಗೆ ಕರೆ ಮಾಡಲಾಗಿತ್ತು. ಅವರು ಕರೆ ಸ್ವೀಕರಿಸಲಿಲ್ಲ.

ಉತ್ತರಹಳ್ಳಿ: ವಿವರ ಲಭ್ಯವಿಲ್ಲ

ಒಂದನೇ ಪುಟದಿಂದ...

'ಈ ವಿವರಗಳನ್ನು ಒದಗಿಸಿ ಎಂದು ಮುಖ್ಯ ಚುನಾವಣಾಧಿಕಾರಿ ಕಚೇರಿಗೆ ಹಲವು ಬಾರಿ ಪತ್ರ ಬರೆಯಲಾಗಿದೆ. ಆದರೆ ಈವರೆಗೆ ಆ ಲೋಪವನ್ನು ಸರಿಪಡಿಸಿಲ್ಲ. ಪರಿಣಾಮವಾಗಿ ಎರಡೂ ಮತದಾರರ ಪಟ್ಟಿಯನ್ನು ಹೋಲಿಸಿ ನೋಡುವ ಕೆಲಸ ವಿಳಂಬವಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಉತ್ಸವದ 8ನೇ ಆವೃತ್ತಿ ಜ.10, 11ರಂದು

ದಿ. ಎಸ್.ಎಲ್. ಭೈರಪ್ಪ ಅವರಿಗೆ ಗೌರವ ಸಲ್ಲಿಸಲು ವಿಶೇಷ ಗೋಷ್ಠಿ ಆಯೋಜಿಸಲಾಗಿದ್ದು, ಶತಾವಧಾನಿ ಆರ್.ಗಣೇಶ್ ಮತ್ತು ಜಿ.ಬಿ. ಹರೀಶ ಭಾಗವಹಿಸಲಿದ್ದಾರೆ.

ಮೀನಾಕ್ಷಿ ಜೈನ್‌ಗೆ ಮಂಗಳೂರು ಲಿಟ್ ಫೆಸ್ಟ್ ಪ್ರಶಸ್ತಿ

ಮಂಗಳೂರು: ಮಂಗಳೂರು ಲಿಟ್ ಫೆಸ್ಟ್‌ನ ಎಂಟನೇ ಆವೃತ್ತಿಯು ಇಲ್ಲಿನ ಡಾ. ಟಿ.ಎಂ.ಎ. ಪೈ ಅಂತರರಾಷ್ಟ್ರೀಯ ಸಮಾವೇಶ ಸಭಾಂಗಣದಲ್ಲಿ ಇದೇ 10 ಮತ್ತು 11ರಂದು ನಡೆಯಲಿದೆ.

ಈ ಸಾಲಿನ 'ಮಂಗಳೂರು ಲಿಟ್ ಫೆಸ್ಟ್ ಪ್ರಶಸ್ತಿ'ಗೆ ಇತಿಹಾಸ ತಜ್ಞೆ, ರಾಜ್ಯಸಭಾ ಸದಸ್ಯೆ ಮೀನಾಕ್ಷಿ ಜೈನ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಭಾರತ್ ಫೌಂಡೇಷನ್ ತಿಳಿಸಿದೆ.

ಮೀನಾಕ್ಷಿ ಜೈನ್

ಮಂಗಳೂರು ಲಿಟ್ ಫೆಸ್ಟ್ ಉದ್ಘಾಟನಾ ಕಾರ್ಯಕ್ರಮ 10ರಂದು ನಡೆಯಲಿದ್ದು, ಶತಾವಧಾನಿ ಆರ್. ಗಣೇಶ್, ಸಂಸದ ಕ್ಯಾ.ಬ್ರಿಜೇಶ್ ಚೌಟ, ಮಿಥಿಕ್ ಸೊಸೈಟಿಯ ರವಿ ಎಸ್ ಹಾಗೂ ಲೇಖಕ ಅಜಕ್ಕಳ ಗಿರೀಶ್ ಭಟ್ ಭಾಗವಹಿಸಲಿದ್ದಾರೆ. ಅಂದು ಮೀನಾಕ್ಷಿ ಜೈನ್ ಜೊತೆ ವಿಶೇಷ ಸಂವಾದವು ನಡೆಯಲಿದೆ.

ಭಾರತದ ಬಾಹ್ಯ ಗುಪ್ತಚರ ಸಂಸ್ಥೆ 'ರಾ'ದ ಮಾಜಿ ಮುಖ್ಯಸ್ಥ ವಿಕ್ರಂ ಸೂದ್, ವಿಶ್ವಸಂಸ್ಥೆಯಲ್ಲಿ ಭಾರತದ ಮೊದಲ ಮಹಿಳಾ ಕಾಯಂ ಪ್ರತಿನಿಧಿಯಾಗಿದ್ದ ರುಚಿರಾ ಕಾಂಬೋಜ್, ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿಯಾಗಿದ್ದ ಟಿ.ಎಸ್. ತಿರುಮೂರ್ತಿ, ಎಎನ್‌ಐ ಸಂಪಾದಕೀಯ ನಿರ್ದೇಶಕಿ ಸ್ಮಿತಾ ಪ್ರಕಾಶ್, ಪದ್ಮಜಾ ಜೋಶಿ, ಪಿ.ಶೇಷಾದ್ರಿ, ಮಾಳವಿಕಾ ಅವಿನಾಶ್ ಮತ್ತು ಪಲ್ಲವಿ ರಾವ್ ಕಾರಂತ್, ಲೇಖಕಿ, ನಟಿ ರಂಜನಿ ರಾಘವನ್, ನಟಿ ಪೂರ್ಣಿಮಾ ಸುರೇಶ್ ಮತ್ತು ಲೇಖಕಿ ಸೀಮಾ ಬುರುಡೆ ಸೇರಿದಂತೆ 65ಕ್ಕೂ ಹೆಚ್ಚು ಚಿಂತಕರು ಈ ಸಾಹಿತ್ಯ ಉತ್ಸವದಲ್ಲಿ ಭಾಗವಹಿಸಲಿದ್ದಾರೆ.

ಪತ್ರಕರ್ತ ವಿಶ್ವೇಶ್ವರ ಭಟ್ ಅವರ 'ಬದುಕುಳಿದವರು ಕಂಡಂತೆ' ಪುಸ್ತಕ ಸಂವಾದ ನಡೆಯಲಿದೆ. ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮೇಳ, ಉಜ್ವಲಾ ಕೃಷ್ಣರಾಜ್ ಅವರಿಂದ ಬೊಂಬೆಯಾಟ ಪ್ರದರ್ಶನ ನಡೆಯಲಿದೆ. ಕಾರ್ಯಕ್ರಮಕ್ಕೆ ಪ್ರವೇಶ ಉಚಿತ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಬೆಂಗಳೂರು: ಶೇ20ರ ಗಡಿ ಮುಟ್ಟದ ತಾಳೆ ಪ್ರಮಾಣ#

ಜಿಲ್ಲಾ ವಿವರ	ಒಟ್ಟು ಮತದಾರರು	2002–2025ರ ಪಟ್ಟಿಯ ವಿವರ ತಾಳೆಯಾದವರು	ತಾಳೆ ಪ್ರಮಾಣ
ಬಿಬಿಎಂಪಿ (ಕೇಂದ್ರ)	11.56 ಲಕ್ಷ	2.94 ಲಕ್ಷ	15.65%
ಬಿಬಿಎಂಪಿ (ಉತ್ತರ)	14.45 ಲಕ್ಷ	4.11ಲಕ್ಷ	17.79 %
ಬಿಬಿಎಂಪಿ (ದಕ್ಷಿಣ)	13.51 ಲಕ್ಷ	3.01 ಲಕ್ಷ	14.41 %
ಬೆಂಗಳೂರು ನಗರ	22.98 ಲಕ್ಷ	7.72 ಲಕ್ಷ	19.29 %

- ರಾಜ್ಯದ ಒಟ್ಟು ಸರಾಸರಿ ತಾಳೆ ಪ್ರಮಾಣ ಶೇ 54.90ರಷ್ಟಿದೆ
- ತುಮಕೂರಿನಲ್ಲಿ ಗರಿಷ್ಠ ಪ್ರಮಾಣದಲ್ಲಿ ತಾಳೆ (ಶೇ 75.40)
- ಜಿಬಿಎ ಎಂದಾಗಿದ್ದರೂ ಆಯೋಗದ ದಾಖಲೆಯಲ್ಲಿ ಬಿಬಿಎಂಪಿ ಎಂದೇ ಉಲ್ಲೇಖವಾಗಿದೆ
- ಉಳಿದ ಎಲ್ಲ ಜಿಲ್ಲೆಗಳು ಶೇ 50ರ ಗಡಿ ದಾಟಿವೆ

ಎಸ್‌ಐಆರ್: 2.89 ಕೋಟಿ ಜನರಿಗೆ ಕೊಕ್

ಒಂದನೇ ಪುಟದಿಂದ...

ಉತ್ತರ ಪ್ರದೇಶದಲ್ಲೇ ಹೆಚ್ಚು

ರಾಜ್ಯ	ಕರಡು ಪಟ್ಟಿಯಿಂದ ಕೈಬಿಟ್ಟ ಜನರ ಸಂಖ್ಯೆ (ಆವರಣದಲ್ಲಿರುವುದು ಪ್ರಮಾಣ)
ಉತ್ತರ ಪ್ರದೇಶ	2.89 ಕೋಟಿ (19%)
ತಮಿಳುನಾಡು	97.37 ಲಕ್ಷ (15.19%)
ಗುಜರಾತ್	74 ಲಕ್ಷ (14.5%)
ಪಶ್ಚಿಮ ಬಂಗಾಳ	58.21 ಲಕ್ಷ (7.59%)
ಮಧ್ಯ ಪ್ರದೇಶ	43 ಲಕ್ಷ (7.45%)
ರಾಜಸ್ಥಾನ	42 ಲಕ್ಷ (7.65%)
ಛತ್ತೀಸಗಢ	27.34 ಲಕ್ಷ (12.88%)
ಕೇರಳ	24.08 ಲಕ್ಷ (8.65%)
ಗೋವಾ	1 ಲಕ್ಷ (8.44%)

ಕರಡು ಪಟ್ಟಿಯಿಂದ ಕೈಬಿಟ್ಟ ಜನರ ಸಂಖ್ಯೆ (ಆವರಣದಲ್ಲಿರುವುದು ಪ್ರಮಾಣ)

ಉತ್ತರ ಪ್ರದೇಶ ಎಸ್‌ಐಆರ್: ಆಗ್ರಾ ಮತ್ತು ಗಾಜಿಯಾಬಾದ್‌ನಲ್ಲಿ 8 ಲಕ್ಷ ಜನರನ್ನು ಹೊಸದಾಗಿ ಪಟ್ಟಿಗೆ ಸೇರಿಸಲಾಗಿದೆ

ಸಿಗಂದೂರು ಚೌಡೇಶ್ವರಿ ಜಾತ್ರೆ ಮಹೋತ್ಸವ ಜ.14ರಿಂದ

ಪ್ರಜಾವಾಣಿ ವಾರ್ತೆ

ತುಮರಿ (ಶಿವಮೊಗ್ಗ): ಸಾಗರ ತಾಲ್ಲೂಕಿನ ಸಿಗಂದೂರು ಚೌಡೇಶ್ವರಿ ದೇವಸ್ಥಾನದಲ್ಲಿ ಜನವರಿ 14 ಮತ್ತು 15ರಂದು ಮಕರ ಸಂಕ್ರಮಣ ಜಾತ್ರಾ ಮಹೋತ್ಸವ ನಡೆಯಲಿದೆ.

ಕಳೆದ ವರ್ಷ ಸಿಗಂದೂರು ಸೇತುವೆ ಉದ್ಘಾಟನೆಗೊಂಡಿದ್ದು, ಸಂಪರ್ಕ ಸುಲಭವಾಗಿದೆ. ಜಾತ್ರೆ ಪ್ರಯುಕ್ತ ಜ. 14ರಂದು ಮುಂಜಾನೆ 4ರಿಂದ ಮಹಾಪೂಜೆ, ವಿಧಿ ವಿಧಾನಗಳು ನಡೆಯಲಿವೆ. ಕುಂಭ ಲಗ್ನದಲ್ಲಿ ಪಲ್ಲಕ್ಕಿ ಉತ್ಸವ ನಡೆಯಲಿವೆ. ಮೆರವಣಿಗೆ ಮೂಲಕ ಮಧ್ಯಾಹ್ನ 12ಕ್ಕೆ ಅಖಂಡ ಜ್ಯೋತಿ ದೇವಸ್ಥಾನ ಪ್ರವೇಶ ಮಾಡಲಿದೆ. ಮಧ್ಯಾಹ್ನ 1.15ರಿಂದ ಧರ್ಮ ಸಭೆ, ರಾತ್ರಿ 7 ಗಂಟೆಗೆ 'ಶಿವದೂತ ಗುಳಿಗ' ನಾಟಕ, ರಾತ್ರಿ 9.30ಕ್ಕೆ 'ಗಾನ ಮಯೂರ' ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ತಿಳಿಸಿದೆ.

ಜ.15ರಂದು ದೇವಿಗೆ ಆಭರಣ ಅಲಂಕಾರ, ಮಹಾಪೂಜೆ, ಸಂಜೆ ದುರ್ಗಾ ದೀಪ ನಮಸ್ಕಾರ, ರಂಗಪೂಜೆ, ಜಾತ್ರೆಯ ಪ್ರಯುಕ್ತ ಪ್ರತಿ ನಿತ್ಯ ನವಚಂಡಿಕಾ ಹೋಮ ನಡೆಯಲಿದೆ. ಸಂಜೆ 6ಕ್ಕೆ ಪಟ್ಲ ಸತೀಶ್ ಶೆಟ್ಟಿ ಅವರ ಭಾಗವತಿಕೆಯ ಪಾವಂಜೆ ಮೇಳದಿಂದ 'ಶ್ರೀ ದೇವಿ ಲಲಿತೋಪಾಖ್ಯಾನ' ಯಕ್ಷಗಾನ ಪ್ರದರ್ಶನ ನಡೆಯಲಿದೆ.

ಧಾರ್ಮಿಕ ಕಾರ್ಯಕ್ರಮಗಳು ಅನುವಂಶಿಕ ಧರ್ಮಾಧಿಕಾರಿ ಎಸ್. ರಾಮಪ್ಪ ಅವರ ನೇತೃತ್ವದಲ್ಲಿ ನಡೆಯಲಿದೆ ಎಂದು ದೇವಸ್ಥಾನ ಆಡಳಿತ ಮಂಡಳಿ ತಿಳಿಸಿದೆ.

ಸಿಗಂದೂರು ಚೌಡೇಶ್ವರಿ ದೇವಿ

ಬಾಲಕನ ಚಿಕಿತ್ಸೆಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ₹4.91 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಥಲಸ್ಸೇಮಿಯಾ ಕಾಯಿಲೆಯಿಂದ ಬಳಲುತ್ತಿರುವ ಕಲಬುರಗಿಯ ಐದು ವರ್ಷದ ಬಾಲಕ ಮಂಜುನಾಥನ ಚಿಕಿತ್ಸೆಗೆ ಮುಖ್ಯಮಂತ್ರಿ ಅವರ ಪರಿಹಾರ ನಿಧಿಯಿಂದ ₹4.91 ಲಕ್ಷ ನೆರವು ಮಂಜೂರು ಮಾಡಲಾಗಿದೆ.

ಕಲಬುರಗಿಯ ವಿಜಯಕುಮಾರ್ ಪರಮೇಶ್ವರ ಅವರು 2025ರ ಡಿ.1ರಂದು ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದ್ದರು. 'ನಮ್ಮ ಮಗನ ಚಿಕಿತ್ಸೆಗೆ ₹30 ಲಕ್ಷ ವೆಚ್ಚವಾಗುತ್ತದೆ ಎಂದು ಆಸ್ಪತ್ರೆಯವರು ತಿಳಿಸಿದ್ದಾರೆ. ನಾನೂ ಅಂಗವಿಕಲನಾಗಿದ್ದು, ಚಿಕಿತ್ಸೆ ವೆಚ್ಚ ಭರಿಸಲಾಗುತ್ತಿಲ್ಲ. ನೆರವು ಒದಗಿಸಿ' ಎಂದು ಕೋರಿದ್ದರು.

ಅವರ ಮನವಿ ಪರಿಗಣಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ₹5 ಲಕ್ಷ ಪರಿಹಾರ ಒದಗಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಅದರಂತೆ ಮುಖ್ಯಮಂತ್ರಿ ಅವರ ಪರಿಹಾರ ನಿಧಿಯ ಲೆಕ್ಕಾಧಿಕಾರಿಯು, ಬಾಲಕನಿಗೆ ಚಿಕಿತ್ಸೆ ನೀಡಿರುವ ನಗರದ ಎಚ್‌ಸಿಜಿ ಆಸ್ಪತ್ರೆಗೆ ಪತ್ರ ಬರೆದಿದ್ದಾರೆ.

'ಬಾಲಕನ ಚಿಕಿತ್ಸೆಗೆ ಆಗುವ ವೆಚ್ಚದ ಸಂಪೂರ್ಣ ವಿವರ ಒದಗಿಸಿ. ನಮ್ಮ ಕಚೇರಿಗೆ ಮನವಿ ಸಲ್ಲಿಸಿದ ನಂತರದ (2025ರ ಡಿಸೆಂಬರ್ 2) ಬಿಲ್ಲುಗಳಿಗೆ ಮಾತ್ರವೇ ಆರ್ಥಿಕ ನೆರವು ಒದಗಿಸಲಾಗುವುದು. ಚಿಕಿತ್ಸಾ ವೆಚ್ಚದ ಶೇ 50ರಷ್ಟು ಅಥವಾ ₹4,91,750 ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸಲಾಗುತ್ತದೆ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ಅನುಕೂಲವಾಯಿತು'

'ಎಲ್ಲಡೆ ಸಾಲ ಮಾಡಿ, ಮಗನ ಚಿಕಿತ್ಸೆಯ ಈವರೆಗಿನ ವೆಚ್ಚವನ್ನು ಭರಿಸಿದ್ದೇವೆ. ಮುಖ್ಯಮಂತ್ರಿ ಕಚೇರಿಗೆ ಅರ್ಜಿ ಸಲ್ಲಿಸಿದ್ದರೂ, ಯಾವುದೇ ಕೆಲಸ ಆಗಿರಲಿಲ್ಲ. ಸಾರ್ವಜನಿಕರಿಂದ ನೆರವು ಕೋರಿದ್ದ ನಮ್ಮ ಪತ್ರವನ್ನು, 'ಪ್ರಜಾವಾಣಿ'ಯು ತಮ್ಮ 'ವಾಚಕರ ವಾಣಿ' ವಿಭಾಗದಲ್ಲಿ 2025ರ ಡಿಸೆಂಬರ್ 31ರ ಸಂಚಿಕೆಯಲ್ಲಿ ಪ್ರಕಟಿಸಿತ್ತು. ಅದರ ಮರುದಿನವೇ ಮುಖ್ಯಮಂತ್ರಿ ಪರಿಹಾರ ನಿಧಿ ಕಚೇರಿಯಿಂದ ನಮಗೆ ಕರೆ ಬಂತು. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ₹ 5 ಲಕ್ಷ ಪರಿಹಾರ ಘೋಷಿಸಿದ್ದಾರೆ. ಇದರಿಂದ ನಮಗೆ ಅನುಕೂಲವಾಗಿದೆ' ಎಂದು ಬಾಲಕನ ತಂದೆ ವಿಜಯಕುಮಾರ್ ಪರಮೇಶ್ವರ ತಿಳಿಸಿದರು.

ಗ್ರಾಮೀಣ ತಂತ್ರಜ್ಞರಿಂದ 'ಡಿಜಿಟೂರ್' ಆ್ಯಪ್ • ಉಚಿತ, ಸಮಗ್ರ ಮಾಹಿತಿ

ಮೊಬೈಲ್‌ನಲ್ಲೇ ಸ್ಮಾರಕಗಳ ದರ್ಶನ

ಡಿಜಿಟೂರ್‌ನ ಕ್ಯೂಆರ್ ಕೋಡ್

• ಎಂ.ಜಿ.ಬಾಲಕೃಷ್ಣ

ಹೊಸಪೇಟೆ (ವಿಜಯನಗರ): ಹಗರಿಬೊಮ್ಮನಹಳ್ಳಿಯ ಆನಂದ ಬಾಬು ಮತ್ತು ಅವರ ತಂಡ 'ಡಿಜಿಟೂರ್' (DigiTour) ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದೆ. ಇದರಲ್ಲಿ ಹಂಪಿಯ ಸ್ಮಾರಕಗಳು ಸೇರಿದಂತೆ ದೇಶದ 100ಕ್ಕೂ ಹೆಚ್ಚು ಸ್ಮಾರಕಗಳ ಸಮಗ್ರ ಮಾಹಿತಿ ಸಿಗುತ್ತದೆ.

ಆನಂದ ಬಾಬು, ಹರೀಶ್, ಪ್ರದೀಪ್, ಶಶಿಧರ ಮತ್ತು ರಾಜೇಶ್ ಅವರ ತಂಡವು 10 ವರ್ಷಗಳ ಸತತ ಪ್ರಯತ್ನದಿಂದ ರೂಪಿಸಿರುವ ಆ್ಯಪ್‌ನಲ್ಲಿ ಪ್ರವಾಸಿ ತಾಣಗಳನ್ನು ಆಕರ್ಷಕವಾಗಿ ಬಿಂಬಿಸಲು ಡ್ರೋನ್ ಕ್ಯಾಮೆರಾ ಹಾಗೂ ಅಜಂತಾ ಗುಹೆಗಳ ಚಿತ್ರಣವನ್ನು ಕಟ್ಟಿಕೊಡಲು 'ಎ.ಐ' ತಂತ್ರಜ್ಞಾನ ಬಳಸಲಾಗಿದೆ.

'ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ಪ್ರಮುಖ ಸ್ಮಾರಕಗಳ ಮಾಹಿತಿ ಈ ಆ್ಯಪ್‌ನಲ್ಲಿದೆ. ಪ್ಲೇ ಸ್ಟೋರ್ ಮತ್ತು ಆ್ಯಪಲ್ ಸ್ಟೋರ್‌ನಲ್ಲಿ ಲಭ್ಯವಿದೆ. ಕ್ಯುಆರ್ ಕೋಡ್ ಮೂಲಕವೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆಸಕ್ತರಿಗೆ ಉಚಿತವಾಗಿ ವಿವಿಧ ಸ್ಮಾರಕಗಳ ಬಗ್ಗೆ ಮಾಹಿತಿ ಲಭ್ಯವಿದೆ.

ಈ ಆ್ಯಪ್‌ನ ವೆಚ್ಚವನ್ನು ಪ್ರಶಾಂತ್ ಪ್ರಕಾಶ್ ಫ್ಯಾಮಿಲಿ ಫೌಂಡೇಶನ್ ಭರಿಸುತ್ತಿದೆ' ಎಂದು ಆನಂದ ಬಾಬು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡಿದ್ದೇನೆ. ಸ್ಮಾರಕಗಳ ಬಗ್ಗೆ ಮೊದಲಿನಿಂದಲೂ ಕುತೂಹಲ ಇತ್ತು. ಜನರಿಗೆ ಉಪಯೋಗ ಆಗುವ ಕೆಲಸ ಮಾಡಲು 2016ರಲ್ಲಿ ಸ್ಟಾರ್ಟ್‌ಅಪ್ ಕಂಪನಿ ಆರಂಭಿಸಿದ್ದು, ಸರ್ಕಾರದ ನೆರವು ಪಡೆದೆ. ಅದು ಈಗ ಫಲ ಕೊಟ್ಟಿದೆ' ಎಂದರು.

ಈ ಆ್ಯಪ್‌ನಲ್ಲಿ ಸದ್ಯ ಕನ್ನಡ, ಇಂಗ್ಲಿಷ್ ಮತ್ತು ಇತರ ಪ್ರಾದೇಶಿಕ ಭಾಷೆಗಳಲ್ಲಿ ಸ್ಮಾರಕಗಳ ವಿವರಣೆಯನ್ನು ಆಲಿಸಹುದು. ಕೆಲ ವಿದೇಶಿ ಭಾಷೆಗಳ ಅಳವಡಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಮುಖ್ಯಾಂಶಗಳು

- ಪ್ರಾದೇಶಿಕ ಭಾಷೆಗಳಲ್ಲಿ ಸ್ಮಾರಕಗಳ ವಿವರಣೆ
- 10 ವರ್ಷಗಳ ನಿರಂತರ ಪ್ರಯತ್ನದ ಫಲ
- ಆನಂದ ಬಾಬು ಹೆಸರಲ್ಲಿ ಹಲವು ಪೇಟೆಂಟ್

100 ಸ್ಮಾರಕಗಳ ಮಾಹಿತಿ ಸಿದ್ಧವಿದ್ದು, ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಅನುಮತಿ ಪಡೆದ ಬಳಿಕ ಆ್ಯಪ್‌ನಲ್ಲಿ ಸೇರಿಸಲಾಗುವುದು

ಆನಂದ ಬಾಬು, 'ಡಿಜಿಟೂರ್' ಆ್ಯಪ್ ನಿರ್ಮಾತೃ



ಡಿಜಿಟೂರ್ ಆ್ಯಪ್‌ನಲ್ಲಿ ಸ್ಮಾರಕಗಳ ನಿರ್ದಿಷ್ಟ ಜಾಗವನ್ನೇ ಗುರುತಿಸಿ ಅದರ ಮಹತ್ವ ವಿವರಿಸುವ ಬಗೆ

ಚಿಟಿಕೆ ಸುದ್ದಿ

ಶೀತಗಾಳಿ: ಮೈಕೊರೆಯುವ ಚಳಿ

ಬೆಂಗಳೂರು: ರಾಜ್ಯದ ವಿವಿಧೆಡೆ ಬೀಸುತ್ತಿರುವ ಶೀತಗಾಳಿ ಹಾಗೂ ಮೋಡ ಕವಿದ ವಾತಾವರಣದಿಂದಾಗಿ ತಾಪಮಾನದಲ್ಲಿ ಕುಸಿತವಾಗುತ್ತಿದ್ದು, ಚಳಿ ಹೆಚ್ಚಾಗುತ್ತಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂದಿನ ಐದು ದಿನಗಳಲ್ಲಿ ಉತ್ತರ ಒಳನಾಡಿನಲ್ಲಿ ಕನಿಷ್ಠ ತಾಪಮಾನದಲ್ಲಿ 2ರಿಂದ 3 ಡಿಗ್ರಿ ಸೆಲ್ಸಿಯಸ್ ಇಳಿಕೆಯಾಗಿದೆ. ಕರಾವಳಿ ಮತ್ತು ದಕ್ಷಿಣ ಒಳನಾಡಿನಲ್ಲಿ ಕನಿಷ್ಠ ತಾಪಮಾನದಲ್ಲಿ ದೊಡ್ಡ ಬದಲಾವಣೆ ಇಲ್ಲ. ಉತ್ತರ ಒಳನಾಡಿನ ಎಲ್ಲಾ ಜಿಲ್ಲೆಗಳಲ್ಲಿ ಒಣಹವೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಇಲಾಖೆ ಹೇಳಿದೆ.

ಪ್ರೊ.ಹನೂರು ಕೃಷ್ಣಮೂರ್ತಿ, ನೀಲಗಂಗಾಗೆ ಪ್ರಶಸ್ತಿ



ಕೃಷ್ಣಮೂರ್ತಿ ಹನೂರು

ನೀಲಗಂಗಾ ಚರಂತಿಮಠ

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘವು ಬಿ.ಎಸ್. ಗದ್ದಗಿಮಠ ದತ್ತಿಯಡಿ ನೀಡುವ ಬಿ.ಎಸ್.ಗದ್ದಗಿಮಠ ಕನ್ನಡ ಜಾನಪದ ತಜ್ಞ ಪ್ರಶಸ್ತಿಗೆ ಮೈಸೂರಿನ ನಿವೃತ್ತ ಪ್ರಾಧ್ಯಾಪಕ ಕೃಷ್ಣಮೂರ್ತಿ ಹನೂರು, ಅನಸೂಯಾ ದೇವಿ ಗದ್ದಗಿಮಠ ಜಾನಪದ ಕಲಾವಿದೆ ಪ್ರಶಸ್ತಿಗೆ ಬೆಳಗಾವಿಯ ನೀಲಗಂಗಾ ಚರಂತಿಮಠ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹ 20 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಜನವರಿ 9ರಂದು ನಗರದ ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

'ಮರ್ಯಾದೆಗೇಡು ಹತ್ಯೆ: ಮಾನವ ಹಕ್ಕು ಉಲ್ಲಂಘನೆ'



ಶ್ಯಾಮ್ ಭಟ್

ಹುಬ್ಬಳ್ಳಿ: 'ತಾಲ್ಲೂಕಿನಲ್ಲಿ ನಡೆದ ಮರ್ಯಾದೆಗೇಡು ಹತ್ಯೆ ಪ್ರಕರಣದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆಗಿದೆ. ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು' ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶ್ಯಾಮ್ ಭಟ್ ಇಲ್ಲಿ ಮಂಗಳವಾರ ತಿಳಿಸಿದರು.

ಇನಾಂ ವೀರಾಪುರ ಗ್ರಾಮಕ್ಕೆ ಭೇಟಿ ನೀಡಿ ಅವರು ಮಾತನಾಡಿ, ಘಟನೆ ಕುರಿತು ಮಾನ್ಯಾ ಅವರ ಪತಿ ವಿವೇಕಾನಂದ, ಜಿಲ್ಲಾಧಿಕಾರಿ ದಿವ್ಯಪ್ರಭು, ಎಸ್‌ಪಿ ಗುಂಜನ್ ಆರ್ಯ ಅವರಿಂದ ಪ್ರಕರಣದ ವಿವರಣೆ ಪಡೆದರು.

ಜಾನಪದ ಅಕಾಡೆಮಿ: ಫೆಲೋಶಿಪ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯು ಸಾಮಾನ್ಯ, ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಫೆಲೋಶಿಪ್‌ಗೆ ಅರ್ಜಿ ಆಹ್ವಾನಿಸಿದೆ.

ಆಯ್ಕೆಯಾದವರು ಐದು ತಿಂಗಳ ಒಳಗೆ ಅಧ್ಯಯನ ಪೂರ್ಣಗೊಳಿಸಬೇಕು. ಅಧ್ಯಯನಕಾರರಿಗೆ ₹70 ಸಾವಿರ, ಮಾರ್ಗದರ್ಶಕರಿಗೆ ₹5 ಸಾವಿರ ನೀಡಲಾಗುತ್ತದೆ.

ಅರ್ಹ ಅಭ್ಯರ್ಥಿಗಳು ಇದೇ 23ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಎರಡನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560002ಕ್ಕೆ ಕಳುಹಿಸಬೇಕು. ಸಂದರ್ಶನದ ಮುಖೇನ ಆಯ್ಕೆ ನಡೆಯಲಿದೆ' ಎಂದು ಅಕಾಡೆಮಿ ರಿಜಿಸ್ಟ್ರಾರ್ ಎನ್. ನಮ್ರತಾ ತಿಳಿಸಿದ್ದಾರೆ.

ವಿವರ: https://janapada.karnataka.gov.in/

ಪ್ರಚೋದನಕಾರಿ ಪೋಸ್ಟ್: ಬಂಧನ

ಉಡುಪಿ: ಶೀರೂರು ಪರ್ಯಾಯ ಮಹೋತ್ಸವಕ್ಕೆ ಹೊರೆಕಾಣಿಕೆ ಸಲ್ಲಿಸಲು ರಚಿಸಿರುವ 'ಉಡುಪಿ ಜಿಲ್ಲಾ ಮುಸ್ಲಿಂ ಸೌಹಾರ್ದ ಪರ್ಯಾಯ ಸಮಿತಿ'ಯ ಬಗ್ಗೆ ಪ್ರಚೋದನಕಾರಿ ಪೋಸ್ಟ್ ಹಾಕಿದ್ದ ಆರೋಪದಲ್ಲಿ ಕಾರ್ಕಳದ ನಿಟ್ಟೆ ಗ್ರಾಮದ ಸುಧಾಕರ (37) ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ನ್ಯಾಯಾಲಯವು 15 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಚೋದನಕಾರಿ ಪೋಸ್ಟ್ ಹಾಕಿದ್ದ ಆರೋಪದಲ್ಲಿ ನಿಟ್ಟೆಯ ಸುದೀಪ್ ಶೆಟ್ಟಿ ಎಂಬವರ ವಿರುದ್ಧವೂ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಉದ್ಯೋಗ ವಾಣಿ

AHLUWALIA CONTRACTS (INDIA) LTD.

WE ARE HIRING FOR SOUTHERN REGION

Welcoming all High Performing Construction Professionals to join the Dream Team.

We have urgent openings for qualified, experienced, energetic and result oriented civil professionals.

TECHNICAL: (Execution / Planning / Billing & QS / P&M / MEP / QA-QC / Reinforcement / Formwork):
GM / DGM / AGM / Sr. Manager / Manager / Dy. Manager / Asst. Manager / Sr. Engineer / BBS Engineer
Foreman- (Reinforcement, Formwork, Finishing, P&M, Electrical)
Supervisor- (Civil, Safety, Surveyor, Lab-Technician)

NON-TECHNICAL: (Administration / Time Office / Accounts / Purchase / Store / Safety):
Manager / Senior Officer / Officer / Time Keeper / Steward / Document Controller.

Walk-In Interview: (Bangalore) • Date: 10th & 11th Jan, 2026

Venue: AHLUWALIA CONTRACTS (INDIA) LTD, SRL Connect, First Floor, Jakkur Plantation Village, Yelahanka Hobli, Bangalore-560064

Candidates from building construction background with experience in high-rise residential and commercial projects. (Preferred)

Email CVs to hr.blr@acilnet.com & recruitment.blr@acilnet.com
Please mention the post applied for in the subject line.

Immediate joiner will be preferred.

Contact : +91 80 2991 0301, 86681 17596, 90747 98337

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಕೇಂದ್ರ, ಮುಂಬೈ
ದೂರವಾಣಿ: 022-22820427

ಅರ್ಜಿ ಸಲ್ಲಿಸಲು QR ಸ್ಕ್ಯಾನ್ ಮಾಡಿರಿ

ಗುತ್ತಿಗೆ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ

ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಜಾಹೀರಾತು ನಂ. CRPD/SCO/2025-26/19 (ಗುತ್ತಿಗೆ ಆಧಾರದ ಹುದ್ದೆ)

ಹುದ್ದೆಯ ಹೆಸರು	ಖಾಲಿ ಹುದ್ದೆ	ಗರಿಷ್ಠ ವಯಸ್ಸು (ಗರಿಷ್ಠ ಮಿತಿ 31.12.2025)
ವೈಸ್ ಪ್ರೆಸಿಡೆಂಟ್ (ಹೂಡಿಕೆದಾರರ ಸಂಬಂಧಗಳು)	1	50 ವರ್ಷಗಳು

ಅರ್ಹತೆಯ ಮಾನದಂಡಗಳು (ವಯಸ್ಸು, ಅನುಭವ, ಕೆಲಸದ ವಿವರಣೆ ಇತ್ಯಾದಿ), ಖಾಲಿ ಹುದ್ದೆಯ ವಿವರಗಳು, ಅವಶ್ಯಕ ಶುಲ್ಕಗಳು ಮತ್ತು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಲು ಲಿಂಕ್ ನೊಂದಿಗೆ ಇತರ ವಿವರಗಳಿಗಾಗಿ ಹಾಗೂ ಅರ್ಜಿ ಶುಲ್ಕದ ಆನ್‌ಲೈನ್ ಪಾವತಿಗಾಗಿ ಬ್ಯಾಂಕ್‌ನ ವೆಬ್ ಸೈಟ್ https://sbi.bank.in/web/careers/current-openingsಗೆ ಲಾಗಿನ್ ಮಾಡಿರಿ. ಅರ್ಜಿ ಸಲ್ಲಿಸುವ ಮತ್ತು ಶುಲ್ಕಗಳನ್ನು ಪಾವತಿಸುವ ಮೊದಲು ಅರ್ಹತೆಯನ್ನು ಖಾತ್ರಿಮಾಡಿಕೊಳ್ಳಲು ಮತ್ತು ಇತರ ವಿವರಗಳಿಗಾಗಿ ವಿವರವಾದ ಜಾಹೀರಾತನ್ನು ಉಲ್ಲೇಖಿಸಿರಿ. ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: "CONTACT US" —> "Post Your Query" ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (https://sbi.bank.in/web/careers/post-your-query).

- ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ: 03.01.2026 ರಿಂದ 23.01.2026

ಸ್ಥಳ: ಮುಂಬೈ
ದಿನಾಂಕ: 03.01.2026
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಮ್)

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಯುದ್ಧವೇ ಪಾಪದ ತವರುಮನೆ.

-ತರಾಸು

ಸಂಪಾದಕೀಯ

ಕ್ರೂರ 'ಯುಎಪಿಎ'ಗೆ 'ಸುಪ್ರೀಂ' ಬಲ ನ್ಯಾಯಶಾಸ್ತ್ರದ ಸ್ವಾತಂತ್ರ್ಯಕ್ಕೆ ಹಿನ್ನಡೆ

ದೆಹಲಿಯಲ್ಲಿ 2020ರಲ್ಲಿ ನಡೆದ ಗಲಭೆಯ ಆರೋಪಿಗಳಾದ ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನಿರಾಕರಿಸಿರುವುದು ನ್ಯಾಯದಾನ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಪಾಲನೆಗೆ ಸಂಬಂಧಿಸಿದಂತೆ ಗಂಭೀರ ಪ್ರಶ್ನೆಗಳು ಏಳುವಂತೆ ಮಾಡಿದೆ. ಈ ಇಬ್ಬರು ಐದು ವರ್ಷಗಳಿಂದ ಸೆರೆಮನೆಯಲ್ಲಿ ಇದ್ದಾರೆ. ಇವರ ಜೊತೆಗೆ ಬಂಧಿಸಲಾಗಿದ್ದ ಇತರ ಐವರಿಗೆ ನ್ಯಾಯಾಲಯ ಜಾಮೀನು ನೀಡಿದೆ. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ಈ ಇಬ್ಬರನ್ನು ಬಂಧಿಸಲಾಗಿದೆ. ದೇಶದಲ್ಲಿ ಜಾರಿಯಲ್ಲಿರುವ ಅತ್ಯಂತ ಕ್ರೂರ ಕಾಯ್ದೆ ಇದು. ಪ್ರಜಾಪ್ರಭುತ್ವದ ಸ್ಫೂರ್ತಿ ಮತ್ತು ಅತ್ಯುತ್ತಮ ರೂಢಿಗಳನ್ನು ಇದು ಉಲ್ಲಂಘಿಸುತ್ತದೆ. ಸಲ್ಲಿಕೆಯಾಗಿರುವ ದಾಖಲೆಗಳನ್ನು ಗಮನಿಸಿದರೆ ಪ್ರಾಸಿಕ್ಯೂಷನ್ ವಾದದಲ್ಲಿ ಹುರುಳಿದೆ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತದೆ; ಹಾಗಾಗಿ, ಜಾಮೀನು ನೀಡಿಕೆಗೆ ಕಾಯ್ದೆಯಲ್ಲಿ ಇರುವ ನಿರ್ಬಂಧವನ್ನು ಪಾಲಿಸಬೇಕಾಗುತ್ತದೆ ಎಂದು ಯುಎಪಿಎಯ ಸೆಕ್ಷನ್ 43(5)ಡಿಯನ್ನು ಉಲ್ಲೇಖಿಸಿ ನ್ಯಾಯಾಲಯ ಹೇಳಿದೆ. ನ್ಯಾಯಾಲಯದ ಈ ಅಭಿಪ್ರಾಯವು ನಿರಾಶಾದಾಯಕ; ಏಕೆಂದರೆ, ಸರ್ಕಾರವೊಂದರ ಪೂರ್ವಗ್ರಹ ಮತ್ತು ಸೇಡಿನ ಕ್ರಮಕ್ಕೆ ಒಳಗಾದ ಸಂತ್ರಸ್ತರಿಗೆ ಸುಪ್ರೀಂ ಕೋರ್ಟ್ ಇಲ್ಲಿಯವರೆಗೂ ಸದಾ ರಕ್ಷಣೆ ನೀಡಿದೆ ಹಾಗೂ ಸಂವಿಧಾನವು ನೀಡಿದ ಮೂಲಭೂತ ಸ್ವಾತಂತ್ರ್ಯವನ್ನು ಸಂರಕ್ಷಿಸಿದೆ.

ಇದೇ ನ್ಯಾಯಾಲಯವು ಈ ಹಿಂದೆ ಹಾಕಿಕೊಟ್ಟು ಪಾಲಿಸಿದ ತತ್ತ್ವಗಳು ಮತ್ತು ಇತರ ನ್ಯಾಯಾಲಯಗಳಿಗಾಗಿ ರೂಪಿಸಿದ ಹಲವು ಮಾರ್ಗಸೂಚಿಗಳನ್ನು ಈಗಿನ ತೀರ್ಪು ನಿರ್ಲಕ್ಷಿಸಿದೆ. ಕಾನೂನಿನಲ್ಲಿರುವ ಅವಕಾಶಗಳ ನೇರವಲ್ಲದ ವ್ಯಾಖ್ಯಾನದ ಮೂಲಕ ಅಪಾಯಕಾರಿ ಪೂರ್ವ ನಿದರ್ಶನವನ್ನು ಇದು ಸೃಷ್ಟಿಸಿದೆ; ನಿರಂಕುಶ ಕ್ರಮವನ್ನು ಕಾನೂನುಬದ್ಧಗೊಳಿಸುವ ಮೂಲಕ ಪ್ರತಿಭಟನಕಾರ, ಭಿನ್ನಮತೀಯ ಅಥವಾ ಹೋರಾಟಗಾರನೊಬ್ಬನನ್ನು ಸರ್ಕಾರವು ಬಂಧಿಸಿಟ್ಟಿರುವ ಕ್ರಮವನ್ನು ಸಹಜಗೊಳಿಸಿದೆ. ಯುಎಪಿಎ ಅಡಿಯಲ್ಲಿ ಬಂಧಿತರಾದವರು ಜಾಮೀನು ಪಡೆಯುವುದು ಬಹಳ ಕಷ್ಟಕರ. ಈಗಿನ ತೀರ್ಪು ಅದನ್ನು ಇನ್ನಷ್ಟು ಕ್ಲಿಷ್ಟಗೊಳಿಸಿದೆ. ಐವರಿಗೆ ಜಾಮೀನು ನೀಡಿದ ನ್ಯಾಯಾಲಯವು ಇತರ ಇಬ್ಬರಿಗೆ ಜಾಮೀನು ನಿರಾಕರಿಸುವುದಕ್ಕಾಗಿ 'ಪಾಲ್ಗೊಳ್ಳುವಿಕೆಯ ಪ್ರಮಾಣ'ದಲ್ಲಿ ವ್ಯತ್ಯಾಸವಿದೆ ಎಂದು ಹೇಳಿದೆ. ಈ ವ್ಯತ್ಯಾಸದ ಉಲ್ಲೇಖವು ಪ್ರಶ್ನಾರ್ಹ ಮತ್ತು ಮುಂದಿನ ದಿನಗಳಲ್ಲಿ ಜಾಮೀನು ನಿರಾಕರಣೆಗೆ ಕಾರಣವೂ ಆಗಬಹುದು. ವಿಚಾರಣೆಯು ಬೇಗನೆ ಮುಗಿಯುವ ಸಾಧ್ಯತೆ ಇಲ್ಲ ಎಂದಾದರೆ, ಭಯೋತ್ಪಾದನೆ ಪ್ರಕರಣಗಳಲ್ಲಿಯೂ ಆರೋಪಿಗೆ ಜಾಮೀನು ಪಡೆದುಕೊಳ್ಳುವ ಹಕ್ಕು ಇದೆ ಎಂದು ನ್ಯಾಯಾಲಯ ಈ ಹಿಂದೆ ಹೇಳಿದ್ದಿದೆ. ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್ ವಿರುದ್ಧ ಇನ್ನೂ ಆರೋಪ ನಿಗದಿ ಮಾಡಿಲ್ಲ, ಪ್ರಕರಣದಲ್ಲಿ 700 ಸಾಕ್ಷಿಗಳಿದ್ದಾರೆ. ಹೀಗಾಗಿ ವಿಚಾರಣೆ ಸುದೀರ್ಘವಾಗಿ ನಡೆಯಲಿದೆ. ಈ ಇಬ್ಬರ ವಿಚಾರಣಾಪೂರ್ವ ಸೆರೆವಾಸವು 'ಸಾಂವಿಧಾನಿಕವಾಗಿ ಅನುಮತಿಸಬಾರದ ಹಂತ'ಕ್ಕೆ ಇನ್ನೂ ತಲುಪಿಲ್ಲ ಎಂದು ನ್ಯಾಯಾಲಯ ಹೇಳಿದೆ. 'ಈ ತೀರ್ಪು ಬಂದ ದಿನಾಂಕದಿಂದ ಒಂದು ವರ್ಷ ಕಳೆದು ಜಾಮೀನಿಗೆ ಅರ್ಜಿ ಹಾಕಬಹುದು' ಎಂದು ಹೇಳಲಾಗಿದೆ. ಇದೊಂದು ಕ್ರೂರ ಔದಾರ್ಯ; ಆದರೆ ಒಂದು ವರ್ಷದ ಗಡುವು ಏಕೆ? ಒಂದು ವರ್ಷದ ಗಡುವಿಗೆ ಇರುವ ಕಾನೂನು ಅಥವಾ ಸಾಂವಿಧಾನಿಕ ನೆಲಗಟ್ಟು ಏನು? ವಿಚಾರಣೆಯ ವಿಳಂಬವು ಆರೋಪಿ ಜಾಮೀನು ಪಡೆಯಲು 'ಮುಖ್ಯ ಕಾರಣ' ಆಗಲಾರದು ಎಂಬ ನಿಲುವು ಕೂಡ ಸರ್ಕಾರಕ್ಕೇ ನೆರವಾಗುತ್ತದೆ. ಸರ್ಕಾರವು ವಿಚಾರಣೆಯನ್ನು ವಿಳಂಬಗೊಳಿಸಿದಾಗ ಕಾನೂನಿನಲ್ಲಿ ಇರುವ ಪ್ರಯೋಜನವನ್ನು ಆರೋಪಿಗೆ ನಿರಾಕರಿಸಿದಂತಾಗಿದೆ.

ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್ ಅವರಿಗೆ ಜಾಮೀನು ನಿರಾಕರಿಸಿರುವ ಸುಪ್ರೀಂ ಕೋರ್ಟ್ ತೀರ್ಪು, ಸರ್ಕಾರವೊಂದರ ಸೇಡಿನ ಕ್ರಮಕ್ಕೆ ನೀಡಿರುವ ರಕ್ಷಣೆಯಂತಿದೆ.

ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್ ಅವರು 'ಮುಖ್ಯ ಪಾತ್ರ' ವಹಿಸಿದ್ದರೆ ಇತರರು 'ಸಂಚಿನಲ್ಲಿ ಭಾಗಿ ಮಾತ್ರ ಆಗಿದ್ದರು' ಎಂಬ ಪ್ರಾಸಿಕ್ಯೂಷನ್‌ನ ವಾದವನ್ನು ನ್ಯಾಯಾಲಯವು ಒಪ್ಪಿಕೊಂಡಿದೆ. ಸಾಕ್ಷ್ಯಗಳ ಪರಿಶೀಲನೆಯ ಬಳಿಕ ಈ ನಿರ್ಧಾರಕ್ಕೆ ಬರಲಾಗಿಲ್ಲ; ಬದಲಿಗೆ ಪ್ರಾಸಿಕ್ಯೂಷನ್‌ನ ವಾದದ ಆಧಾರದಲ್ಲಿ ಈ ನಿಲುವು ತೆಗೆದುಕೊಳ್ಳಲಾಗಿದೆ. ಇಂತಹ ಸಾಕ್ಷ್ಯಗಳು ದುರ್ಬಲ ಮತ್ತು ನ್ಯಾಯಾಂಗದ ತೀರ್ಮಾನಗಳಿಗೆ ಆಧಾರ ಆಗಬಾರದು. ಜಾಮೀನು ಅರ್ಜಿಯು ಕಿರು ವಿಚಾರಣೆಗೆ ವೇದಿಕೆ ಆಗಬಾರದು ಎಂದು ನ್ಯಾಯಾಲಯವು ಹೇಳಿದ್ದರೂ ಅದನ್ನೇ ಮಾಡಿದಂತೆ ಕಾಣಿಸುತ್ತಿದೆ.

ಭಯೋತ್ಪಾದನೆಯ ವ್ಯಾಖ್ಯೆಯ ವಿಸ್ತರಣೆಯು ತೀರ್ಪಿನ ಅತ್ಯಂತ ಕಳವಳಕಾರಿ ಅಂಶ. ಕಾಯ್ದೆಯ ಸೆಕ್ಷನ್ 15 ಅನ್ನು 'ಹಿಂಸಾತ್ಮಕ ಕೃತ್ಯಗಳಿಗೆ ಮಾತ್ರ ಅನ್ವಯ ಎಂದು ಸಂಕುಚಿತ'ವಾಗಿ ವ್ಯಾಖ್ಯಾನಿಸಬಾರದು. 'ಸೇವೆಗಳಿಗೆ ಅಡ್ಡಿ ಮತ್ತು ಆರ್ಥಿಕತೆಗೆ ಬೆದರಿಕೆ' ಎಂಬುದನ್ನೂ ಈ ವ್ಯಾಪ್ತಿಗೆ ಸೇರಿಸಿಕೊಳ್ಳಬೇಕು. ಭಯೋತ್ಪಾದಕ ಕೃತ್ಯ ಎಂಬುದು ಬಾಂಬ್ ಸ್ಫೋಟ, ಗುಂಡು ಹಾರಾಟ ಅಥವಾ ಇತರ ಹಿಂಸಾತ್ಮಕ ಚಟುವಟಿಕೆಗಳಷ್ಟೇ ಅಲ್ಲ ಎಂದು ಕೋರ್ಟ್ ಹೇಳಿದೆ. ಇದೊಂದು ಅಪಾಯಕಾರಿ ವ್ಯಾಖ್ಯಾನ. ಇದು ಕಾಯ್ದೆಯ ಪಠ್ಯ ಮತ್ತು ಅದರ ಸಹಜ ಓದಿನ ವ್ಯಾಪ್ತಿ ಮೀರಿ ಸಾಗುತ್ತದೆ. ಯಾವುದೇ ಚಳವಳಿ ಅಥವಾ ಯಾವುದೇ ವ್ಯಕ್ತಿಯ ವಿರುದ್ಧ ಈ ಕಾಯ್ದೆಯನ್ನು ಅನ್ವಯಿಸುವುದಕ್ಕೂ ಸರ್ಕಾರಕ್ಕೆ ಈ ವ್ಯಾಖ್ಯೆ ನೆರವಾಗಬಹುದು. ಸೆಕ್ಷನ್ 15ರಲ್ಲಿ ವ್ಯಾಖ್ಯಾನಿಸಿದಂತೆ, ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್ ಅವರು ತಮ್ಮ ಭಾಷಣಗಳು, ಧರಣಿಗಳು ಇತ್ಯಾದಿ ಮೂಲಕ ಭಯೋತ್ಪಾದಕ ಕೃತ್ಯದ ಜೊತೆಗೆ ನೇರ ಸಂಬಂಧ ಹೊಂದಿದ್ದಾರೆ ಎಂದು ನಂಬಲು ಬೇಕಾದಷ್ಟು ಕಾರಣಗಳು ಇವೆ ಎಂದು ಕೋರ್ಟ್ ಹೇಳಿದೆ. ಪುರಾವೆ ಸಲ್ಲಿಸುವ ಹೊರೆಯನ್ನು ಆರೋಪಿಯ ಮೇಲೆಯೇ ಹೊರಿಸುವ ಕಾಯ್ದೆಗಳ ಬಗ್ಗೆ ನ್ಯಾಯಾಲಯಗಳು ಸಾಮಾನ್ಯವಾಗಿ ತೃಪ್ತಿ ಹೊಂದಿರುವುದಿಲ್ಲ. ಸಾಮಾನ್ಯ ಪ್ರಜಾಸತ್ತಾತ್ಮಕ ಚಟುವಟಿಕೆಗಳನ್ನು ಕೂಡ ಭಯೋತ್ಪಾದನೆ ತಡೆ ಕಾಯ್ದೆಯ ಅಡಿಯಲ್ಲಿ ಸೇರಿಸಿ ನಿರಪರಾಧಿತ್ವವನ್ನು ಸಾಬೀತುಪಡಿಸುವ ಸಾಕ್ಷ್ಯಗಳನ್ನು ಆರೋಪಿಯೇ ಒದಗಿಸುವಂತಹ ಸ್ಥಿತಿಯನ್ನು ಈ ತೀರ್ಪು ನಿರ್ಮಿಸುತ್ತದೆ. ದೇಶದಲ್ಲಿ ಅತಿ ಹೆಚ್ಚು ದುರ್ಬಳಕೆಯಾದ ಕಾಯ್ದೆ ಇದು ಎಂಬುದನ್ನು ಗಮನದಲ್ಲಿ ಇರಿಸಿಕೊಂಡರೆ ಯುಎಪಿಎಯ ಇಂತಹ ವ್ಯಾಖ್ಯೆಯ ಅಪಾಯದ ಅರಿವಾಗುತ್ತದೆ.

ಪೌರರ ಹಕ್ಕುಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ನ್ಯಾಯಾಲಯಗಳು ಪೌರರ ಪರ ನಿಲ್ಲಬೇಕೇ ವಿನಾ ಸರ್ಕಾರದ ಪರ ಅಲ್ಲ. ಪೌರರ ವಿರುದ್ಧ ಅತಿರೇಕ ಎಸಗಿದ ಪ್ರಕರಣಗಳಲ್ಲಿ ನ್ಯಾಯಾಲಯಗಳೂ ಸರ್ಕಾರವನ್ನು ಬೆಂಬಲಿಸಿದರೆ, ಹಕ್ಕುಗಳ ದಮನದ ವಿಚಾರದಲ್ಲಿ ಇನ್ನಷ್ಟು ಅವಕಾಶಗಳನ್ನು ಕೊಟ್ಟಂತಾಗುತ್ತದೆ. ವೈಯಕ್ತಿಕ ಸ್ವಾತಂತ್ರ್ಯವು ಅತ್ಯಂತ ಮಹತ್ವಪೂರ್ಣವಾದುದು ಮತ್ತು ಸುದೀರ್ಘವಾದ ಜೈಲುವಾಸವು ಬಹಳ ಕಳವಳಕಾರಿ ಎಂದು ಕೋರ್ಟ್ ಹೇಳಿದೆ. ಆದರೆ, ತೀರ್ಪಿನ ಅನುಷ್ಠಾನ ಭಾಗದಲ್ಲಿ ಈ ಕಳವಳವು ವ್ಯಕ್ತವಾಗಿಲ್ಲ. ಸುಪ್ರೀಂ ಕೋರ್ಟ್‌ನ ತೀರ್ಪುಗಳು ಕಾನೂನು ಆಗುತ್ತವೆ. ಈಗಿನ ತೀರ್ಪು ಕ್ರೂರ ಕಾನೂನನ್ನು ಇನ್ನಷ್ಟು ಕ್ರೂರವಾಗಿಸಿದೆ. ಹಾಗೆಯೇ ನ್ಯಾಯಶಾಸ್ತ್ರದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಹಿಂದಕ್ಕೆ ಒಯ್ದಿದೆ. ಇದು ಮರುಪರಿಶೀಲನೆಗೆ ಒಳಪಡಲಿ ಎಂಬ ಭರವಸೆಯನ್ನು ಇರಿಸಿಕೊಳ್ಳೋಣ.

25 ವರ್ಷಗಳ ಹಿಂದೆ

ಭಾನುವಾರ, 7-1-2001

• 'ವಿವಿ ಕಾಯ್ದೆ ತಿದ್ದುಪಡಿ ತಂದರೆ ಅನುದಾನವಿಲ್ಲ'

ಮೈಸೂರು, ಜ. 7– ರಾಜ್ಯ ಸರ್ಕಾರವು ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆಗೆ ತಿದ್ದುಪಡಿ ತಂದು ವಿಶ್ವವಿದ್ಯಾಲಯಗಳ ಮೇಲೆ ಹತೋಟಿ ಸಾಧಿಸಲು ಪ್ರಯತ್ನಿಸಿದಲ್ಲಿ, ಅವುಗಳಿಗೆ ನೀಡುತ್ತಿರುವ ಧನಸಹಾಯವನ್ನು ಹಿಂತೆಗೆದುಕೊಳ್ಳುವುದಾಗಿ ವಿಶ್ವವಿದ್ಯಾಲಯ ಅನುದಾನ ಆಯೋಗದ ಅಧ್ಯಕ್ಷ ಡಾ. ಹರಿಗೌತಮ್ ಇಂದು ಇಲ್ಲಿ ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಹರಿಗೌತಮ್ ಅವರು, ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆಗೆ ತಿದ್ದುಪಡಿ ತರುವ ನಿರ್ಣಯದ ಬಗ್ಗೆ ಮರುವಿಮರ್ಶೆ ನಡೆಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

• ಅವಧಿ ಮುಗಿದ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳ ನೇಮಕ

ಬೆಂಗಳೂರು, ಜ. 6– ನಗರಪಾಲಿಕೆ, ನಗರಸಭೆ ಮತ್ತು ಪುರಸಭೆಗಳಿಗೆ ಜ. 28ರಂದು ನಡೆಯಬೇಕಾಗಿದ್ದ ಚುನಾವಣೆಗಳು ಹೈಕೋರ್ಟ್ ಆದೇಶದ ಪ್ರಕಾರ ಮುಂದಕ್ಕೆ ಹೋಗಿರುವ ಹಿನ್ನೆಲೆಯಲ್ಲಿ ಅವಧಿ ಮುಗಿದ ಈ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲಾಗುತ್ತದೆ ಎಂದು ನಗರಾಭಿವೃದ್ಧಿ ಸಚಿವ ಬಿ.ಬಿ. ಚಿಮ್ಮನಕಟ್ಟಿ ಅವರು ಇಂದು ಇಲ್ಲಿ ಹೇಳಿದರು.

ಚುನಾವಣಾ ದಿನಾಂಕವನ್ನು ಆರು ವಾರಗಳೊಳಗೆ ಸರ್ಕಾರ ಪ್ರಕಟಿಸುತ್ತದೆ ಎಂದು ಚಿಮ್ಮನಕಟ್ಟಿ ಅವರು ಸುದ್ದಿಗಾರರಿಗೆ ತಿಳಿಸಿದರು.

75 ವರ್ಷಗಳ ಹಿಂದೆ

ಭಾನುವಾರ, 7-1-1951

• ದಲಾಯ್ ಲಾಮಾರು ಗಾಂಗ್‌ಟೋಕ್‌ನಲ್ಲಿ

ಗಾಂಗ್‌ಟೋಕ್, ಜ. 6– ದಲಾಯ್ ಲಾಮಾರು ಪರಿವಾರ ಸಮೇತ ಇಂದು ಇಲ್ಲಿಗೆ ಆಗಮಿಸಿದರು. ಇವರು ಇಲ್ಲಿಂದ ಮುಂದಕ್ಕೆ ಕಾಲಿಂಪಾಂಗ್‌ಗೋ ಡಾರ್ಜಿಲಿಂಗ್‌ಗೋ ತೆರಳಲಿದ್ದಾರೆ. ಇವರೊಡನೆ ಪ್ರಮುಖರಲ್ಲಿ ಇವರ ದೊಡ್ಡ ಅಣ್ಣ ಮತ್ತು ಭಾವಮೈದುನ, ಇವರ ಇಬ್ಬರು ಅಕ್ಕ-ತಂಗಿಯರು ಇದ್ದಾರೆ.

ಒಟ್ಟು ಇವರ ಪರಿವಾರದಲ್ಲಿ 300 ಮಂದಿ ಪುರುಷರು ಮತ್ತು ಸಾವಿರ ತಟ್ಟುಗಳೂ, ಹೇಸರಕತ್ತೆಗಳೂ ಇವರ ಸಾಮಾನು ಸರಂಜಾಮುಗಳನ್ನು ಹೊತ್ತಿವೆ.

ಸಹಬಾಳ್ವೆ, ಪ್ರಜಾಪ್ರಭುತ್ವಕ್ಕಾಗಿ...

ವಿಶ್ಲೇಷಣೆ

ದೇವನೂರ ಮಹಾದೇವ

ಭೌತಿಕವಾಗಿ ನೆರೆಹೊರೆಯವರಾಗಿದ್ದರೂ ಮಾನಸಿಕವಾಗಿ ಮೈಲಿ ದೂರ ಇರುವ ಭಾರತೀಯ ಸಮಾಜದಲ್ಲಿ ಸಹಬಾಳ್ವೆ ತೋರಿಕೆಯ ಪ್ರದರ್ಶನವಾಗಿ ಉಳಿದಿದೆ. ಶಿಕ್ಷಣದಲ್ಲಿ ಸಮಾನತೆ ತರುವುದು ಹಾಗೂ ಧರ್ಮವನ್ನು ಮಾನವೀಯಗೊಳಿಸುವುದು 'ಸಹಜ ಸಹಬಾಳ್ವೆ'ಗೆ ಪೂರಕ.

ಭಾರತದಲ್ಲಿ ಜಾತಿಭೇದದ ಕಾರಣವಾಗಿ ಸಹಬಾಳ್ವೆ ಅನ್ನುವುದು ಸಹಜವಾಗಿಲ್ಲ; ಇಲ್ಲಿ ತಾರತಮ್ಯವೇ ಸಹಜವಾಗಿದೆ! ಇದು 'ವಿಕಲಾಂಗ ಸಹಬಾಳ್ವೆ'. ಒಂದು ಗ್ರಾಮದಲ್ಲಿ ಬೇರೆ ಬೇರೆ ಜಾತಿಯವರು ಭೌತಿಕವಾಗಿ ಕೂಗಳತೆಯ ದೂರದಲ್ಲಿ ವಾಸಿಸುತ್ತಿದ್ದರೂ, ಅಕ್ಕಪಕ್ಕದಲ್ಲಿದ್ದರೂ, ಅವರ ನಡುವೆ ಮಾನಸಿಕ ದೂರ ಮೈಲಿಗಟ್ಟಲೆ ಇರುತ್ತದೆ, ಸಹಜ ಸಹಬಾಳ್ವೆಯ ಒಡನಾಟ ಇಲ್ಲದ ಕಾರಣವಾಗಿ.

ಯಾವುದೇ ಒಂದು ಊರಲ್ಲಿ ತಳ ಸಮುದಾಯಕ್ಕೆ ಸೇರಿದವರು ಯಾರಾದರೂ ಆ ಊರಿನ ದೇವಸ್ಥಾನಕ್ಕೆ ಪ್ರವೇಶ ಮಾಡಿದರು ಅಂದರೆ, ಅದು ಜಾತಿ ಗಲಭೆಗೆ ತಿರುಗುತ್ತದೆ. ಪ್ರವೇಶ ತಡೆದು ದೌರ್ಜನ್ಯ ಎಸಗಿದವರನ್ನು 'ಯಾಕೆ ಹೀಗೆ ಮಾಡಿದಿರಿ' ಎಂದು ಕೇಳಿದರೆ, 'ಈ ಹಿಂದೆ ಈ ರೀತಿ ಇರಲಿಲ್ಲ. ಅವರೂ ನಾವೂ ಅಣ್ಣತಮ್ಮಂದಿರಂತೆ ಇದ್ದೆವು. ಅವರಷ್ಟಕ್ಕೆ ಅವರಿದ್ದರು, ನಮ್ಮಷ್ಟಕ್ಕೆ ನಾವಿದ್ದೆವು. ಈಗ ಅವರಲ್ಲಿ ಓದಿದ ಹುಡುಗರ ದೆಸೆಯಿಂದ ಹೀಗೆಲ್ಲಾ ಆಗುತ್ತಿದೆ' ಎನ್ನುವುದು ದೇವಸ್ಥಾನ ಪ್ರವೇಶಕ್ಕೆ ತಡೆಯೊಡ್ಡಿ ದೌರ್ಜನ್ಯ ಎಸಗಿದವರ ಸಾಮಾನ್ಯವಾದ ಮಾತು. ಎಲ್ಲಾ ಜಾತಿ ಜಗಳಗಳಲ್ಲೂ ಇಂಥವೇ ಮಾತುಗಳು.

ಇದು ಸಹಬಾಳ್ವೆಯೆ? ಹೌದಾದರೆ, ಯಾವ ರೀತಿಯ ಸಹಬಾಳ್ವೆ ಇದು? ಇದು, ಮನುಷ್ಯ ಮತ್ತು ಸಾಕುಪ್ರಾಣಿಗಳೊಡನೆ ಇರಬಹುದಾದ ಸಹಬಾಳ್ವೆ ಅಥವಾ ಮಾಲೀಕ-ಗುಲಾಮನ ನಡುವೆ ಇರಬಹುದಾದ ಸಹಬಾಳ್ವೆ. ಈ ವಿಕಲಾಂಗ ಸಹಬಾಳ್ವೆ ಹೇಗೆ ಸಹಬಾಳ್ವೆಯಾಗುತ್ತದೆ?

ನಮಗೆ ಸಹಜ ಮಾನವೀಯ ಸಹಬಾಳ್ವೆ ಬೇಕು. ಅಸ್ಪೃಶ್ಯರಾದಿಯಾಗಿ ಬ್ರಾಹ್ಮಣರವರೆಗೆ ಇರುವ ಸಕಲ ಜಾತಿ, ಮತ, ಪಂಗಡಗಳು ತಾನು ಬೇರೆ, ತಾನು ಮೇಲು ಎಂಬ ಜಾತಿ ಮನೋವಿಕಲತೆಯನ್ನು ತಮ್ಮ ಮನದೊಳಗೆ ಬಚ್ಚಿಟ್ಟುಕೊಂಡಿವೆ. ಇದನ್ನು ಸ್ವಲ್ಪ ಮೀರಿದರೆ ಸಾಕು, ಎಲ್ಲರೊಳಗೂ ಸಹನೆ-ಪ್ರೀತಿ-ಸಹಬಾಳ್ವೆ ಚಿಗುರುತ್ತವೆ.

ಇದಾಗಲು ಏನು ಮಾಡಬೇಕು? ನಮ್ಮ ಸಮಾಜದಲ್ಲಿ ಜಾತಿ ತಾರತಮ್ಯಗಳು, ರೂಢಿಗಳು ಬೂದಿ ಮುಚ್ಚಿದ ಕೆಂಡದಂತೆ ಬಚ್ಚಿಟ್ಟುಕೊಂಡಿವೆ. ಜಾತಿಯ ರೂಢಿಗಳು ತಪ್ಪಿದಾಗ, ಜಾತ್ಯಸ್ಥರು ಇದು ತಮ್ಮ ಮೇಲಾದ ದಾಳಿ ಎಂದೇ ಪರಿಗಣಿಸುವ ಮನಃಸ್ಥಿತಿ ಇದೆ. ಇಂತಹ ಪರಿಸ್ಥಿತಿಯಲ್ಲಿ ತಳಸಮುದಾಯಗಳು ತಮ್ಮ ಸಾಂವಿಧಾನಿಕ ಹಕ್ಕುಗಳಿಗಾಗಿ ಕ್ರಿಯಾಶೀಲರಾಗಬೇಡವೆ?

ಜೊತೆಗೆ, ಎಲ್ಲಾ ಜಾತಿ-ಮತಗಳಲ್ಲಿರುವ ಪ್ರಜ್ಞಾವಂತರು ಇದು ತಳ ಸಮುದಾಯದ ಸಾಂವಿಧಾನಿಕ ಹಕ್ಕು ಮಾತ್ರವಲ್ಲ; ಜಾತಿಯನ್ನು ದಾಟುವುದು ತಮ್ಮ ಬಿಡುಗಡೆಗಾಗಿಯೇ ಅನಿವಾರ್ಯ ಕ್ರಿಯೆ ಎಂಬ ಅರಿವಿನೊಡನೆ ಸಂಘಟಿತರಾಗಿ ತಂತಮ್ಮ ಜಾತಿಗಳಲ್ಲಿನ ಜಾತೀಯತೆಯ ಕೊಳಕಿಗೆ ಸ್ನಾನ ಮಾಡಿಸಲು ಕ್ರಿಯಾಶೀಲರಾಗುವುದಾದರೆ ಸಮಾಜದೊಳಗೆ ಘರ್ಷಣೆಯೂ ಕಮ್ಮಿಯಾಗುತ್ತದೆ, ಭಾರತದ ಸಮಾಜವೂ ಸಹ್ಯವಾಗುತ್ತದೆ.

ಮೂಲನಿವಾಸಿಗಳು ಬಾಯಿಲ್ಲದವರಾಗಿದ್ದಾರೆ; ಅವರನ್ನು ಕೆಲವರು ಒಂದು ಜೀವ ಎಂದು ನೋಡದೆ ಅಸ್ತ್ರ ಎಂಬಂತೆ ಬಳಸಿಕೊಳ್ಳುತ್ತಿದ್ದಾರೆ. ಉಳಿದವರು ಅವರನ್ನು ತುಳಿದುಕೊಂಡು ಓಡಾಡುತ್ತಿದ್ದಾರೆ. ಇಂದಿನ ಅವರ ಜೀವನ ಸ್ಥಿತಿ ಕಾಡಿನ ಒಳಗೂ ಇಲ್ಲ, ಹೊರಗೂ ಇಲ್ಲ ಎಂಬಂತಾಗಿಬಿಟ್ಟಿದೆ. ಅಲೆಮಾರಿಗಳು ಅಲೆಯುತ್ತಲೇ ಇದ್ದಾರೆ. ಅಲ್ಪಸಂಖ್ಯಾತರಲ್ಲಿ ಕ್ರಿಶ್ಚಿಯನ್ನರು, ಅದರಲ್ಲೂ ಮುಸ್ಲಿಮರಂತೂ ರಾಜಕಾರಣ ಹಾಗೂ ಆಡಳಿತದ ಭಾಗವಹಿಸುವಿಕೆಯಲ್ಲಿ ಕಾಣಿಸದಿರುವಂತೆ ವ್ಯವಸ್ಥಿತವಾಗಿ ಸಂಚು ರೂಪಿಸಲಾಗುತ್ತಿದೆ. ಕೋಮುವಾದಿ ಪಕ್ಷದ ಆಳ್ವಿಕೆಯಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯ ಇಲ್ಲವೇ ಇಲ್ಲ ಎನ್ನಬಹುದು. ಜಾತಿಪದ್ಧತಿಯಿಂದ ಹೊರಗಿಟ್ಟಿದ್ದ ದಲಿತ ಸಮುದಾಯವನ್ನು ಶಕ್ತ್ಯಾನುಸಾರ ಒಳಗೊಳ್ಳದಿರುವ ಹುನ್ನಾರವೂ ಜರುಗುತ್ತಿದೆ. ಮಹಿಳೆಯರು ಒಳಗಿದ್ದೂ ಹೊರಗಿನವರಾಗಿದ್ದಾರೆ. ಬಹುಸಂಖ್ಯಾತ ಸಮುದಾಯದ ಭಾಗವಹಿಸುವಿಕೆ ಇಲ್ಲದ ಪ್ರಜಾಪ್ರಭುತ್ವ ಇದು. ಇಂಥದ್ದನ್ನು ಪ್ರಜಾಪ್ರಭುತ್ವ ಅನ್ನದೆ, ಲಕ್ವಕ್ಕೆ ತುತ್ತಾದ ಪ್ರಜಾಪ್ರಭುತ್ವ ಎನ್ನಬೇಕಾಗುತ್ತದೆ.

ಈಗಲಾದರೂ ಆರೋಗ್ಯಕರ ಪ್ರಜಾಪ್ರಭುತ್ವದ ದಿಕ್ಕಿಗೆ ಹೆಜ್ಜೆಗಳನ್ನಿಡಬೇಕಾಗಿದೆ. ಮೊದಲ ಹೆಜ್ಜೆಯಾಗಿ, ಕೆಳಮನೆಯಲ್ಲಿ ಯಾರಿಗೆ ಪ್ರಾತಿನಿಧ್ಯ ಇಲ್ಲವೋ ಆ ಸಮುದಾಯಗಳಿಗೆ ಮೇಲ್ಮನೆಯಲ್ಲಿ ಪ್ರಾತಿನಿಧ್ಯದ ಅವಕಾಶ ಕಲ್ಪಿಸಿ ಪ್ರಜಾಪ್ರಭುತ್ವವನ್ನು ಸ್ವಲ್ಪವಾದರೂ ಗುಣಮುಖವಾಗಿಸಬೇಕಾಗಿದೆ. ಅವಕಾಶವಂಚಿತ ಸಮುದಾಯಗಳಿಗೆ ವಿಧಾನಸಭೆ, ಲೋಕಸಭೆ ಇತ್ಯಾದಿ ಜನಪ್ರತಿನಿಧಿಗಳ ವ್ಯವಸ್ಥೆಗಳಲ್ಲಿ ಮೀಸಲು ನೀಡಿ ಸಹಭಾಗಿಗಳನ್ನಾಗಿ ಮಾಡಿಕೊಳ್ಳಬೇಕಾಗಿದೆ. ಶಿಕ್ಷಣ, ಉದ್ಯೋಗಾವಕಾಶ, ರಾಜಕೀಯ ಪ್ರಾತಿನಿಧ್ಯ ಎಲ್ಲಾ ಕ್ಷೇತ್ರಗಳಲ್ಲೂ ಅವಕಾಶವಂಚಿತರು ಪ್ರಾತಿನಿಧ್ಯ ಪಡೆಯುವಂತಾಗುವುದು ಪ್ರಜಾಪ್ರಭುತ್ವದ ಉಳಿವಿಗಾಗಿ ಅಗತ್ಯವಿದೆ.

ಹಳ್ಳಿ ದಿಲ್ಲಿ ಎನ್ನದೆ ಭೌತಿಕ ತ್ಯಾಜ್ಯವು ಭಾರತದ ಸಹಜ ವಾತಾವರಣವಾಗಿಬಿಟ್ಟಿದೆ. ತ್ಯಾಜ್ಯವನ್ನು ಒಳಗೇ ಇಟ್ಟುಕೊಂಡಿದ್ದೇವೆ. ತ್ಯಾಜ್ಯ ನಿರ್ವಹಣೆಯನ್ನು ಆದ್ಯತಾ ಕೆಲಸವಾಗಿಸಿ ವಿದ್ಯುತ್ ಹಾಗೂ ಗೊಬ್ಬರವಾಗಿ ಪರಿವರ್ತಿಸುವ ವ್ಯವಸ್ಥೆಯಾಗಬೇಕು. ಹಾಗೇ ಭಾರತೀಯರು ತಮ್ಮ ಮನಸಿನೊಳಗೆ ಜಾತಿಭೇದ ತಾರತಮ್ಯದ ಮನೋಮಲ ತ್ಯಾಜ್ಯವನ್ನು ವಿಸರ್ಜಿಸದೆ ತಮ್ಮೊಳಗೆ ಇಟ್ಟುಕೊಂಡಿದ್ದಾರೆ. ಇದನ್ನೂ ವಿಸರ್ಜಿಸಬೇಕಾಗಿದೆ. ತನ್ನ ಜಾತಿ ಶ್ರೇಷ್ಠ ಅಂದುಕೊಂಡವರ ಮಾನವತೆ ನೆಗೆದುಬಿದ್ದು ಪ್ರಾಣ ಕಳೆದುಕೊಳ್ಳುತ್ತದೆ. ತನ್ನ ಧರ್ಮ ಶ್ರೇಷ್ಠ ಅಂದುಕೊಂಡವರ ಧರ್ಮವೇ ನೆಗೆದುಬಿದ್ದು ಪ್ರಾಣ ಕಳೆದುಕೊಳ್ಳುತ್ತದೆ.

ಭಾರತೀಯರು ಜಾತಿಯ ತಾರತಮ್ಯದ ಮನೋಮಲವನ್ನು ವಿಸರ್ಜಿಸಿ ಶುಚಿಗೊಂಡರೆ ಆಗ ಅಲ್ಲಿ ಶ್ರೇಣಿ ಇರುವುದಿಲ್ಲ. ಶ್ರೇಣೀಕೃತವಾಗಿ ಒಬ್ಬರ ಮೇಲೆ ಒಬ್ಬರು ನಿಲ್ಲುವ ಭಾರವೂ ಇರುವುದಿಲ್ಲ. ಬದಲಾಗಿ ಒಂದೇ ನೆಲದಲ್ಲಿ ಅಕ್ಕಪಕ್ಕ ನಿಲ್ಲುವಂತಾಗುತ್ತದೆ. ಆಗ ನಮ್ಮ ವೈವಿಧ್ಯಕ್ಕೆ ಸಾಂಸ್ಕೃತಿಕ ಸ್ವರೂಪ ಪ್ರಾಪ್ತಿಯಾಗಿ ಅದೇ ಆಕರ್ಷಣೆ ಆಗಿಬಿಡಲೂಬಹುದು. ಈ ದಿಕ್ಕಲ್ಲಿ ಒಂದು ಸಣ್ಣ ಹೆಜ್ಜೆ: ಖಾಸಗಿಯಾಗಲಿ, ಸರ್ಕಾರವೇ ಆಗಲಿ ನಿವೇಶನ, ವಸತಿ, ಮನೆ ಹಂಚುವಾಗ ಜಾತಿಮತಗಳು ಮಿಳಿತವಾಗುವಂತೆ ರೋಸ್ಟರ್ ಪದ್ಧತಿ ಜಾರಿಗೆ ತರಬೇಕು. ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ ಮಾಧ್ಯಮದ ಹಾಗೂ ಎಲ್ಲಾ ಜಾತಿ, ಮತ, ವರ್ಗಗಳ ಎಳೆಯ ಮಕ್ಕಳು ಬೆರೆತು ಕಲಿಯುವ ಅಕ್ಕಪಕ್ಕದ ಅಂದರೆ ನೆರೆಹೊರೆಯ ಶಾಲೆಗಳ ಶಿಕ್ಷಣ ಪದ್ಧತಿ ಜಾರಿಗೆ ಬರಬೇಕು. ಎಲ್ಲಾ ಜಾತಿ, ಮತ, ವರ್ಗಗಳ ಮಕ್ಕಳು ಬೆರೆಯುವುದೇ ಭಾರತಕ್ಕೆ ಬಲುದೊಡ್ಡ ಶಿಕ್ಷಣ. ಹೀಗೆ ಇಂಥವು.

ಭಾರತದ ಪುರಾತನ ಸಂತ ಪರಂಪರೆಯ ಒಳಗಣ್ಣಿನ ನೋಟದಲ್ಲಿ ಸಂಸ್ಕೃತಿಯನ್ನು ನೋಡಿದಾಗ, ಆ ನೋಟಕ್ಕೆ ಛಿದ್ರತೆ, ತಾರತಮ್ಯಗಳೇ ದೆವ್ವವಾಗಿ ಕಾಣಿಸುತ್ತದೆ; ಐಕ್ಯತೆ, ಕೂಡಿಸುವುದೇ ದೈವವಾಗಿ ಕಾಣಿಸುತ್ತದೆ. ದೈವವನ್ನು, ಹಣ-ಅಧಿಕಾರಕ್ಕಾಗಿ ಬಳಸಿಕೊಂಡರೆ ಅದು 'ಅಧಮ ಧರ್ಮ' ಆಗುತ್ತದೆ. ಇದನ್ನು ಅನುಸರಿಸುವವರನ್ನು 'ವ್ಯಭಿಚಾರಿ ಧರ್ಮಿಗಳು' ಎಂದೂ ಕರೆಯಬಹುದು. ಹಾಗೇ ತಮ್ಮಷ್ಟಕ್ಕೆ ತಾವೇ ಆಚರಣೆ ಮಾಡಿಕೊಂಡರೆ ಅದು 'ಮಧ್ಯಮ ಧರ್ಮ' ಆಗುತ್ತದೆ. ಇದನ್ನು ಅನುಸರಿಸುವವರನ್ನು 'ಕುಟುಂಬ ಧರ್ಮಿಗಳು' ಎಂದೂ ಕರೆಯಬಹುದು. ತನ್ನೊಳಗೆ ದೈವ ಕಂಡುಕೊಳ್ಳುವ ಪ್ರಕ್ರಿಯೆಯು 'ಉನ್ನತ ಧರ್ಮ' ಆಗುತ್ತದೆ, ಇದೇ ಧಾರ್ಮಿಕತೆ. ಈ ದಿಕ್ಕಲ್ಲಿ ನಾವು ಚಲಿಸಬೇಕಾಗಿದೆ. ಸಾಂಪ್ರದಾಯಿಕ ಧರ್ಮಗಳಿಗೂ ದಯೆ ಮತ್ತು ಕಾರುಣ್ಯದ ಚುಚ್ಚುಮದ್ದು ನೀಡಬೇಕಾಗಿದೆ. ಸಹನೆ-ಪ್ರೀತಿ-ಸಹಬಾಳ್ವೆಯನ್ನು ತನ್ನ ನಡಿಗೆ ಮಾಡಿಕೊಂಡು ಧರ್ಮವೂ ಉಳಿಯಬೇಕಾಗಿದೆ.

ಯೋಗ ಅಂದರೆ ಕೂಡಿಕೊಂಡದ್ದು ಎಂದು ಅರ್ಥ. ಆದರೆ, ಭಾರತದಲ್ಲಿ ಯೋಗವೂ ಮೂರಾಗಿ ವಿಂಗಡಿಸಿಕೊಂಡಿದೆ: ಜ್ಞಾನಯೋಗ, ಭಕ್ತಿಯೋಗ, ಕರ್ಮಯೋಗ. ಇವು ಮೂರಾದರೂ ಅಂತಿಮವಾಗಿ 'ಪರಮ'(Absolute)ವನ್ನೇ ಸೇರುತ್ತವೆ ಎಂದು ವಾದ ಮಾಡಬಹುದಾದರೂ, ಮನುಷ್ಯರನ್ನೇ ಮೂರು ಆಗಿ ವಿಂಗಡಿಸುವ ಈ ಮೂರು ಬೇಕೆ? ಕೂಡಿಕೆ ಯೋಗಕ್ಕೂ ಈ ಮೂರು ಬೇಕೆ?

ಇದನ್ನು ಸ್ಪಷ್ಟಪಡಿಸುವುದಕ್ಕೆ ಒಂದು ಉದಾಹರಣೆ: ಮಾದಾರ ಧೂಳಯ್ಯ ಅಪರೂಪದ ವಚನಕಾರ. ಚಪ್ಪಲಿ ಕಾಯಕದವನು. ಧೂಳಯ್ಯನ ಒಂದು ವಚನದಲ್ಲಿ ಅವನು ಚಪ್ಪಲಿ ರಿಪೇರಿ ಕಾಯಕದಲ್ಲಿದ್ದಾನೆ; ಆಗ ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ ಪ್ರತ್ಯಕ್ಷನಾದ ಪರಮೇಶ್ವರನ ಕಂಡ ಧೂಳಯ್ಯ, 'ಅಯ್ಯಾ, ಇಲ್ಲೇಕೆ ಬಂದು ನನ್ನ ಕೆಲಸಕ್ಕೆ ತೊಂದರೆ ಕೊಡುತ್ತಿದ್ದೀಯಾ. ನಿನ್ನ ಹೊಗಳುವವರು, ಪೂಜಿಸುವವರು ಕಾಯುತ್ತಿದ್ದಾರೆ, ಹೋಗಿ ಅವರಿಗೆ ಮುಕ್ತಿ ಕೊಡು' ಅನ್ನುತ್ತಾನೆ. ಇದು ವಚನದ ಸಾರಾಂಶ.

ಹಾಗಾದರೆ, ಮಾದಾರ ಧೂಳಯ್ಯನಿಗೆ ಭಕ್ತಿ ಇಲ್ಲವೆ? ಆತನ ಭಕ್ತಿಯು ಅವನು ಮಾಡುವ ಕಾಯಕದಲ್ಲಿ ಲೀನವಾಗಿವೆ. ಹಾಗಾದರೆ ಇಲ್ಲಿ ಜ್ಞಾನ ಎಲ್ಲಿದೆ? ಅದು ಉಳಿಯ ಮೊನೆಯಲ್ಲಿ ಪ್ರತ್ಯಕ್ಷನಾಗುವ ಪರಮೇಶ್ವರನಿಗೆ ಧೂಳಯ್ಯ ಹೇಳುವ ಮಾತುಗಳಲ್ಲಿ ಪ್ರಕಾಶಿಸುತ್ತ ಅರಿವಾಗಿ ಮೂಡಿದೆ. ಧೂಳಯ್ಯನಲ್ಲಿ ಕರ್ಮವು ಕಾಯಕವಾಗಿ, ಭಕ್ತಿಯು ಅರ್ಪಿತವಾಗಿ, ಜ್ಞಾನವು ಅರಿವು ಆಗಿ ಒಟ್ಟಾಗಿ ಏಕೀಭವಿಸಿ ಒಡಮೂಡಿದೆ. ಈ ಕಾಣ್ಕೆಯನ್ನು ನಾವು ಬಿತ್ತಿ ಬೆಳೆಯಬೇಕಾಗಿದೆ.

ಇಂದಿನ ಯುಗವು ವ್ಯಾಪಾರಿ ಯುಗ. ಮಧ್ಯವರ್ತಿ, ಜಾಹೀರಾತು, ಥಳಕು, ವಂಚನೆ ಈ ಯುಗದ ಸ್ವಭಾವ. ವ್ಯಾಪಾರಿ ದ್ರೋಹ ಹಾಗೂ ದಲ್ಲಾಳಿಯ ಮೋಡಿ ಮಾತು, ಪ್ರದರ್ಶನ ಎಲ್ಲಾ ಕ್ಷೇತ್ರಗಳಲ್ಲೂ ಆವರಿಸಿಕೊಂಡುಬಿಟ್ಟಿದೆ. ರಾಜಕಾರಣದಲ್ಲೂ ರಾರಾಜಿಸುತ್ತಿದೆ. ಜೊತೆಗೆ ಇದು ದೇವರನ್ನೂ, ಧರ್ಮ ಅಂದುಕೊಂಡಿರುವ ಧರ್ಮಗಳನ್ನೂ ಬಿಟ್ಟಿಲ್ಲ. ಹಾಗಾಗಿ, ನಮಗೀಗ 12ನೇ ಶತಮಾನದ ವಚನಕಾರ ಯುಗದ ಬಸವಣ್ಣ ನಡೆದು ನುಡಿದ ನುಡಿಗಳು ನಮ್ಮ ಕೈ ಹಿಡಿದು ನಡೆಸಬಹುದು.

ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು/ ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?/ ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವ ತಾ ಮಾಡಬೇಕಲ್ಲದೆ/ ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?/ ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ/ ನಿಮ್ಮನೆತ್ತಬಲ್ಲರು ಕೂಡಲಸಂಗಮದೇವಾ?

ಇಂಥವು, ಈ ನೆಲದಲ್ಲಿ ಸಂಭವಿಸಬೇಕು. ವಿಶ್ವಮಾನವನಾಗಿ ಹುಟ್ಟುವ ಶಿಶುವು ಬೆಳೆಯುತ್ತಲೂ ವಿಶ್ವಮಾನವನಾಗೇ ಉಳಿಯುವಂತಾಗಲು ಇಂಥವು ಬೇಕು.

ವಾಚಕರ ವಾಣಿ

ಪರೀಕ್ಷಾ ಪೇ ಚರ್ಚೆ: ಆತ್ಮಸ್ಥೈರ್ಯ ಹೆಚ್ಚಲಿ

ಮಕ್ಕಳ ರಕ್ಷಣೆಗೆ ಕಾನೂನಿನ ಜೊತೆಗೆ ಭಯರಹಿತ ಶೈಕ್ಷಣಿಕ ವಾತಾವರಣವೂ ಅಗತ್ಯ. ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಪ್ಪಂದ ಅಂಗೀಕರಿಸಿರುವ ಭಾರತದಲ್ಲಿ ಪ್ರತಿ ಮಗುವೂ ಪ್ರೀತಿ, ಆರೈಕೆ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಅರ್ಹ. ರ್‍ಯಾಂಕ್‌ಗೆ ಪೈಪೋಟಿ ಮತ್ತು ಓದಿನ ಒತ್ತಡದಿಂದ 6ರಿಂದ 14 ವರ್ಷದ ಮಕ್ಕಳಲ್ಲಿಂದು ಒತ್ತಡ, ಮಾನಸಿಕ ಅಸ್ಥಿರತೆ ಹೆಚ್ಚುತ್ತಿದೆ. 'ಪರೀಕ್ಷಾ ಪೇ ಚರ್ಚೆ' ಶೈಕ್ಷಣಿಕ ಒತ್ತಡದ ಭೀತಿ ಕಡಿಮೆಗೊಳಿಸುವ ದಿಸೆಯಲ್ಲಿ ಮಹತ್ವಪೂರ್ಣ ಹೆಜ್ಜೆ. ಸಂವಿಧಾನದ 21ನೇ ವಿಧಿ ಮತ್ತು 21ಎ ವಿಧಿಯನ್ವಯ ಸರ್ಕಾರ, ಪೋಷಕರು, ಶಿಕ್ಷಕರು ಒಗ್ಗಟ್ಟಾಗಿ ಮಕ್ಕಳ ಹಕ್ಕುಗಳ ರಕ್ಷಣೆಯ ಜೊತೆಗೆ ಸಹಾನುಭೂತಿಯ ಮಾರ್ಗದರ್ಶನ ಬೇಕು.

ಆಶಾಲತಾ ಪಿ., ಸುರತ್ಕಲ್

ಗಾಂಧಿ ಹೆಸರು ಬದಲು: ಹಿರಿಮೆಗೆ ಪೆಟ್ಟು

ಹಳ್ಳಿಗಳು ಅಭಿವೃದ್ಧಿಯಾದರಷ್ಟೇ ದೇಶದ ಅಭಿವೃದ್ಧಿಯೂ ಸಾಧ್ಯವೆಂದು ಮಹಾತ್ಮ ಗಾಂಧೀಜಿ ನಂಬಿದ್ದರು. ಅವರ ಹೆಸರನ್ನು ಉದ್ಯೋಗ ಖಾತರಿ ಯೋಜನೆಗೆ ಇಡಲಾಗಿತ್ತು. ಈಗ ಕೇಂದ್ರ ಸರ್ಕಾರವು ಯೋಜನೆಯ ಹೆಸರನ್ನು ಬದಲಾಯಿಸುವ ಮೂಲಕ ರಾಷ್ಟ್ರಪಿತನ ಆದರ್ಶಗಳಿಗೆ ತಿಲಾಂಜಲಿ ಇಟ್ಟಿದೆ.

ಈ ನಡೆಯು ಗಾಂಧೀಜಿಯ ಅನುಯಾಯಿಗಳಿಗೆ ತೀವ್ರ ಆಘಾತವನ್ನು ಉಂಟು ಮಾಡಿದೆ. ಕೇಂದ್ರದ ನಿರ್ಧಾರ, ಇಡೀ ವಿಶ್ವವೇ ಗೌರವಿಸುವ ಮಹಾತ್ಮನಿಗೆ ಮಾಡಿದ ಅವಮಾನ ಎಂದರೆ ತಪ್ಪಾಗದು. ಇದು ಭಾರತದ ಹಿರಿಮೆಯನ್ನು ಸಂಕುಚಿತಗೊಳಿಸುತ್ತದೆ. ಇಂಥ ವ್ಯರ್ಥ ಕಸರತ್ತಿನಿಂದ ಮಹಾತ್ಮ ಗಾಂಧೀಜಿಯ ಹೆಸರನ್ನಾಗಲಿ, ಅವರ ಆದರ್ಶಗಳನ್ನಾಗಲಿ ಜನಮಾನಸದಿಂದ ಅಳಿಸಿ ಹಾಕಲು ಸಾಧ್ಯವಿಲ್ಲ.

ಎಸ್.ಎಂ. ಸಕ್ರಿ, ರಾಮದುರ್ಗ

ಬಡವರ ಮಕ್ಕಳು ಬೆಳೀಬೇಕು ಕಣ್ರೀ...

ಬಳ್ಳಾರಿಯಲ್ಲಿ ಗಣಿ ಧಣಿಗಳ ಗಲಾಟೆಯಲ್ಲಿ ಅಮಾಯಕನೊಬ್ಬ ಜೀವ ಕಳೆದುಕೊಂಡಿದ್ದಾನೆ. ರಾಜಕೀಯ ಎಷ್ಟೊಂದು ಅಪಾಯಕಾರಿಯಾಗಿದೆ ಎನ್ನುವುದಕ್ಕೆ ಈ ಪ್ರಕರಣ ನಿದರ್ಶನ. ತಮ್ಮ ಮಕ್ಕಳು ಇನ್ನೊಬ್ಬರ ಅಡಿಯಾಳಾಗಿ ಇರದೆ ರಾಜನಂತೆ ಬಾಳಬೇಕೆನ್ನುವುದು ತಂದೆ-ತಾಯಿಯ ಮಹದಾಸೆ. ಇದಕ್ಕಾಗಿ ಸಾಕಷ್ಟು ತ್ಯಾಗ ಮಾಡಿರುತ್ತಾರೆ. ಆದರೆ, ಶಿಕ್ಷಣ ಪಡೆದವರೇ ರಾಜಕೀಯ ನಾಯಕರ ಗುಲಾಮರಂತೆ ವರ್ತಿಸುತ್ತಿದ್ದಾರೆ. ರಾಜಕಾರಣಿಗಳ ಮಕ್ಕಳು ವಿದೇಶಗಳಲ್ಲಿ ಶಿಕ್ಷಣ ಪಡೆದು ಉದ್ಯೋಗ, ವ್ಯಾಪಾರದಲ್ಲಿ ತೊಡಗಿಸಿಕೊಳ್ಳುತ್ತಾರೆ. ಬಡವರ ಮಕ್ಕಳು ಕೇಸರಿ ಶಾಲು, ಬ್ಯಾನರ್ ಕಟ್ಟುವುದರಲ್ಲಿಯೇ ಜೀವ ಕಳೆದುಕೊಳ್ಳುತ್ತಾರೆ. ರಾಜಕೀಯ ಧುರೀಣರ ಧೋರಣೆಯು ಬಡವರ ಮಕ್ಕಳು ಬೆಳೆಯಲು ಅಡ್ಡಿಯಾಗಿದೆ. 'ಒಬ್ಬ ಎಂಎಲ್‌ಎ ಹಿಂದೆ ಹೋಗುವ ಬದಲು ಒಂದು ಎಮ್ಮೆ ಹಿಂದೆ ಹೋಗು, ಅದು ದುಡಿಮೆ ಕಲಿಸುತ್ತದೆ' ಎನ್ನುವ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿಯ ಮಾತು ಯುವಜನರಿಗೆ ಆದರ್ಶವಾಗಬೇಕಿದೆ.

ರಾಜು ಬಿ. ಲಕ್ಕಂಪುರ, ಜಗಳೂರು

ಖಾಲಿ ಹುದ್ದೆ ಭರ್ತಿ: ಅಧಿಸೂಚನೆ ವಿಳಂಬ

ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಮೂರು ಲಕ್ಷ ಹುದ್ದೆಗಳು ಖಾಲಿ ಇವೆ. ಲಕ್ಷಾಂತರ ವಿದ್ಯಾರ್ಥಿಗಳು ಸರ್ಕಾರದ ನೇಮಕಾತಿ ಅಧಿಸೂಚನೆಯನ್ನು ಎದುರು ನೋಡುತ್ತಿದ್ದಾರೆ. ಇದು ಸರ್ಕಾರದ ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಮೇಲೂ ಪರಿಣಾಮ ಬೀರಲಿದೆ. ಕೆಲವು ರಾಜಕಾರಣಿಗಳು ಇಂಗ್ಲಿಷ್ ಬಳಸುವುದು ಪ್ರತಿಷ್ಠೆಯೆಂದು ಭಾವಿಸಿದ್ದಾರೆ. ಈ ಧೋರಣೆಯು ಕನ್ನಡ ಬಾರದ ಹಿರಿಯ ಅಧಿಕಾರಿಗಳಿಗೆ ವರದಾನವಾಗಿದೆ. ಸರ್ಕಾರ ತೆಗೆದುಕೊಂಡ ಹಲವು ತೀರ್ಮಾನಗಳು ಕನ್ನಡದಲ್ಲಿ ಇರುವುದಿಲ್ಲ. ಸರ್ಕಾರ ಈ ಬಗ್ಗೆ ಎಚ್ಚೆತ್ತುಕೊಳ್ಳಬೇಕಿದೆ. ಜೊತೆಗೆ, ಖಾಲಿ ಇರುವ ಹುದ್ದೆಗಳಿಗೆ ಹಂತ ಹಂತವಾಗಿ ನೇಮಕಾತಿ ಮಾಡಬೇಕಿದೆ.

ಸಂತೋಷ ಪೂಜಾರಿ, ವಿಜಯಪುರ

ಅನುಕಂಪದ ಹುದ್ದೆ: ಎಲ್ಲರಿಗೂ ಅನ್ವಯಿಸಿ

ರಸ್ತೆ ಅಪಘಾತದಲ್ಲಿ ಮೃತಪಟ್ಟ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಅವರ ಮಗಳಿಗೆ ಅನುಕಂಪದ ಆಧಾರದ ಮೇಲೆ ಸಚಿವಾಲಯದಲ್ಲಿ ನೌಕರಿ ನೀಡುವ ಕುರಿತು ಸರ್ಕಾರ ತೀರ್ಮಾನಿಸಿರುವುದು ಸ್ವಾಗತಾರ್ಹ. ಹಿಂದೆ ಸುಪ್ರೀಂ ಕೋರ್ಟ್ ಆದೇಶದ ಅನ್ವಯ 'ಅನುಕಂಪದ ಹುದ್ದೆ ನೀಡಲು ಬರುವುದಿಲ್ಲ' ಎಂಬ ಸಬೂಬು ಹೇಳಲಾಗುತ್ತಿತ್ತು.

1996-97ರಲ್ಲಿ ಕೆಎಂಎಫ್‌ನಲ್ಲಿ 'ಡಿ' ದರ್ಜೆ ನೌಕರರೊಬ್ಬರ ಪತ್ನಿ ನರಸಮ್ಮ ಎಂಬುವರು ಅನುಕಂಪದ ಹುದ್ದೆ ಕೋರಿ ವರ್ಷಾನುಗಟ್ಟಲೆ ಕಚೇರಿಗೆ ಅಲೆದರು. ಕೊನೆಗೆ ಸುಪ್ರೀಂ ಕೋರ್ಟ್‌ನ ಅಂತಿಮ ಆದೇಶದ ಷರತ್ತಿಗೆ ಒಳಪಟ್ಟು ಅವರಿಗೆ ಮಾನವೀಯ ದೃಷ್ಟಿಯಿಂದ ತಾತ್ಕಾಲಿಕ ಹುದ್ದೆ ನೀಡಲಾಯಿತು. ಸರ್ಕಾರದ ನಿಗಮ, ಮಂಡಳಿ, ಶಾಸನಬದ್ಧ ಸಂಸ್ಥೆಗಳಲ್ಲಿ ಈ ರೀತಿಯ ಪ್ರಕರಣಗಳು ಈಗಲೂ ಬಾಕಿ ಉಳಿದಿವೆ. ಇಂತಹ ಪ್ರಕರಣಗಳನ್ನು ಮಾನವೀಯ ದೃಷ್ಟಿಯಿಂದ ತ್ವರಿತವಾಗಿ ಬಗೆಹರಿಸಬೇಕಿದೆ.

ಡಿ. ಪ್ರಸನ್ನಕುಮಾರ್, ಬೆಂಗಳೂರು

ಅನಿಶ್ಚಿತ ಬದುಕಿಗೆ 'ಅವಧಿ ವಿಮೆ' ಶ್ರೀರಕ್ಷೆ

ವೈದ್ಯಕೀಯ ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಇಲಾಖೆಯ ಅಧೀನದಲ್ಲಿರುವ ವೈದ್ಯರು, ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಅವಧಿ ವಿಮೆ (ಟರ್ಮ್ ಇನ್ಶೂರೆನ್ಸ್) ಸೌಲಭ್ಯ ಕಡ್ಡಾಯಗೊಳಿಸಿರುವುದು ಒಳ್ಳೆಯ ನಿರ್ಧಾರ. ಅಪಘಾತ ಅಥವಾ ಅನಿರೀಕ್ಷಿತ ಮರಣದ ಸಂದರ್ಭದಲ್ಲಿ ಕುಟುಂಬಗಳಿಗೆ ತಕ್ಷಣದ ಆರ್ಥಿಕ ನೆರವು ಒದಗಿಸಿ, ಅವರ ಜೀವನಕ್ಕೆ ಈ ವಿಮೆ ಭದ್ರತೆ ನೀಡಲಿದೆ. ಮಕ್ಕಳ ಶಿಕ್ಷಣ ಮತ್ತು ಆರೋಗ್ಯಕ್ಕೂ ನೆರವಾಗಲಿದೆ. ಇದರಿಂದ ಕುಟುಂಬಗಳ ಭವಿಷ್ಯ ಹೆಚ್ಚು ಸುರಕ್ಷಿತವಾಗುತ್ತದೆ. ಎಲ್ಲಾ ವರ್ಗದ ಸರ್ಕಾರಿ ಸಿಬ್ಬಂದಿಗೂ ಅವಧಿ ವಿಮಾ ಸೌಲಭ್ಯ ವಿಸ್ತರಿಸಬೇಕಿದೆ.

ಮಂಜುನಾಥ ಜಿ. ಪಾಲವ್ವನಹಳ್ಳಿ, ಚಿತ್ರದುರ್ಗ

ಚುರುಮುರಿ

ಘಾಟಿ ಕೋಳಿ!

• ಮಣ್ಣೆ ರಾಜು

ದೀರ್ಘಾವಧಿ ಸಿಎಂ ಆಗಿ ಸಿದ್ದರಾಮಯ್ಯ ದಾಖಲೆ ಮಾಡಿದ್ದಕ್ಕೆ ಚಟ್ನಿಹಳ್ಳಿ ಜನ ಸಡಗರಪಟ್ಟರು. ಸುತ್ತೂರಿನ ಜನರಿಗೆ ನಾಟಿ ಕೋಳಿ ಔತಣಕೂಟ ಏರ್ಪಡಿಸಿ ಸಂಭ್ರಮಿಸಲು ತೀರ್ಮಾನ ಮಾಡಿದರು. ಔತಣಕ್ಕೆ ನಾವು ನಾಟಿ ಕೋಳಿ ಕೊಡ್ತೀವಿ ಅಂತ ಊರಿನ ಜನ ಮುಂದೆಬಂದರು.

ಅದೇನಾಯ್ತೋ ಏನೋ, ಅಂದು ಮೇಯಲು ಹೋಗಿದ್ದ ಎಲ್ಲರ ಕೋಳಿಗಳು ರಾತ್ರಿಯಾದರೂ ಮನೆಗೆ ಬರಲಿಲ್ಲ. ಔತಣಕೂಟಕ್ಕೆ ಆಹಾರ ಆಗಿಬಿಡ್ತೀವಿ ಅಂತ ಹೆದರಿಕೊಂಡವೆ? ಸಂಭ್ರಮ ಸಹಿಸದ ವಿರೋಧಿಗಳು ಕೋಳಿಗಳನ್ನು ಕದ್ದರೆ? ನಾಯಿ, ನರಿಗಳು ಕಚ್ಚಿಕೊಂಡು ಹೋದವೆ? ಕೊಕ್ಕರೆ ರೋಗ ಬಂದು ಬೇಲಿ ಮರೆಯಲ್ಲಿ ಸತ್ತುಹೋದವೆ? ಚಟ್ನಿಹಳ್ಳಿ ಜನ ಆತಂಕಕ್ಕೀಡಾದರು.

'ಕೋಳಿ ಹುಡುಕಿಕೊಡಿ' ಎಂದು ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟರು. ಜುಜುಬಿ ಕೋಳಿ ಕೇಸು ಎಂದು ಪೊಲೀಸರು ನಿರ್ಲಕ್ಷ್ಯ ಮಾಡಿದರು. ಜನ ಸ್ಟೇಷನ್ ಮುಂದೆ ಪ್ರತಿಭಟನೆ ಮಾಡಿದಾಗ ಪೊಲೀಸರು ಸೀರಿಯಸ್ಸಾದರು. ಕೋಳಿ ಸಂತೆಗಳು, ಚಿಕನ್ ಸ್ಟಾಲ್‌ಗಳನ್ನು ತಪಾಸಣೆ ಮಾಡಿದರು. ಅನುಮಾನಾಸ್ಪದ ಕೋಳಿ ಕಳ್ಳರನ್ನು ಎಳೆದುತಂದು ವಿಚಾರಣೆಗೊಳಪಡಿಸಿದರು. ಕೋಳಿಗಳ ಸುಳಿವು ಸಿಗಲಿಲ್ಲ.

ಕೋಳಿ ಕೇಸನ್ನು ಸವಾಲಾಗಿ ಸ್ವೀಕರಿಸಿದ ಪೊಲೀಸರು, ಕಡೆಗೂ ಪಕ್ಕದೂರಿನ ಬೇಲಿ ಸಂದಿಯಲ್ಲಿ ಚಟ್ನಿಹಳ್ಳಿ ಕೋಳಿಗಳು ಬೀಡುಬಿಟ್ಟಿರುವುದನ್ನು ಪತ್ತೆ ಮಾಡಿ, ವಶಕ್ಕೆ ಪಡೆದುತಂದರು. ಗ್ರಾಮಸ್ಥರ ಸಭೆ ಸೇರಿಸಿ ಕೋಳಿಗಳನ್ನು ವಾರಸುದಾರರಿಗೆ ವಿತರಿಸಿದರು.

'ನಿಮ್ಮೂರಿನಲ್ಲಿ ಒಂದೂ ಹುಂಜ ಇಲ್ಲವೇನ್ರೀ?' ಇನ್‌ಸ್ಪೆಕ್ಟರ್ ಕೇಳಿದರು.

'ಹುಂಜಗಳು ಮೊಟ್ಟೆ ಇಕ್ಕಲ್ಲ, ಮರಿ ಮಾಡಲ್ಲ, ಇಟ್ಟುಕೊಂಡು ಏನು ಮಾಡೋಣ? ಬಾಯಿ ಕೆಟ್ಟಾಗ, ನೆಂಟರಿಷ್ಟರು ಬಂದಾಗ ಕುಯ್ದು ಉಂಡೆವು. ಯಾಕೆ ಸಾರ್?' ತಿಮ್ಮಜ್ಜ ಕೇಳಿದ.

'ನಿಮ್ಮ ಕೋಳಿಗಳು ಪಕ್ಕದೂರಿನ ಹುಂಜಗಳ ಜೊತೆ ಫ್ರೆಂಡ್‌ಶಿಪ್ ಮಾಡಿವೆ. ಹುಂಜಗಳನ್ನು ಉಳಿಸಿಕೊಳ್ಳದಿದ್ದರೆ ನಿಮ್ಮ ಕೋಳಿಗಳು ಮತ್ತೆ ಊರುಬಿಡುತ್ತವೆ ಹುಷಾರ್!' ಎಂದು ಇನ್‌ಸ್ಪೆಕ್ಟರ್ ಎಚ್ಚರಿಸಿದರು.

ಸಂಗತ

ಅಪಘಾತ ನಿಯಂತ್ರಣ: ಸುರಕ್ಷತೆಯೇ ಮದ್ದು

ಸ್ಲೀಪರ್ ಬಸ್‌ಗಳು ಮೃತ್ಯುವಾಹನಗಳಂತೆ ಕಾಣಿಸುತ್ತಿವೆ. ಸುರಕ್ಷತಾ ಕ್ರಮಗಳ ಕೊರತೆ ಹಾಗೂ ನಿರ್ಲಕ್ಷ್ಯ ಬಹುತೇಕ ರಸ್ತೆ ಅಪಘಾತಗಳಿಗೆ, ಜೀವಹಾನಿಗೆ ಕಾರಣ.

• ಪದ್ಮಿನಿ ನಾಗರಾಜು

ದೂರದೂರಿಗೆ ಹೋಗಲು ಬೆಳಗಿನ ಬಸ್‌ಗಳ ಬದಲು, ರಾತ್ರಿಯ ಸ್ಲೀಪರ್ ಬಸ್‌ಗಳನ್ನು ಇಷ್ಟಪಡುವ ಜನರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಮಲಗಿಕೊಂಡು ಪ್ರಯಾಣಿಸಬಹುದು, ರಾತ್ರಿ ಮಲಗಿದರೆ ಬೆಳಗ್ಗೆ ಕಣ್ಣುಬಿಟ್ಟಾಗ ಊರು ಸೇರಬಹುದು ಎಂಬ ಲೆಕ್ಕಾಚಾರ ಸ್ಲೀಪರ್ ಬಸ್‌ಗಳಿಗೆ ಬೇಡಿಕೆ ಸೃಷ್ಟಿಸಿದೆ.

ಕರ್ನಾಟಕದಲ್ಲಿ ಮೊಟ್ಟಮೊದಲ ಸ್ಲೀಪರ್ ಬಸ್ ಕಾರ್ಯಾಚರಣೆ ಪ್ರಾರಂಭವಾಗಿದ್ದು 1966ರಲ್ಲಿ, 'ಮೈಸೂರು ರಾಜ್ಯ ರಸ್ತೆ ಸಾರಿಗೆ ನಿಗಮ'ದಿಂದ. ಆ ಬಸ್, ಎರಡು ಕೋಚ್‌ಗಳನ್ನು ಸೇರಿಸಿದಂತೆ ವಿನ್ಯಾಸ ಮಾಡಲಾಗಿತ್ತು. ಅದಕ್ಕೆ 'ರೋಡ್ ಟ್ರೈನ್' ಎಂದೂ ಹೆಸರಿಸಲಾಗಿತ್ತು. ಪಳಗಿದ ಚಾಲಕ ಹಾಗೂ ಇಬ್ಬರು ಕಂಡಕ್ಟರ್‌ಗಳು ಕರ್ತವ್ಯ ನಿರ್ವಹಿಸುತ್ತಿದ್ದ ಆ ಬಸ್, ಬೆಂಗಳೂರಿನಿಂದ ಹುಬ್ಬಳ್ಳಿಗೆ ಪ್ರಯಾಣಿಸುತ್ತಿತ್ತು. ಅಲ್ಲಿಂದ ಇಲ್ಲಿಯವರೆಗೆ ಸ್ಲೀಪರ್ ಬಸ್‌ಗಳಲ್ಲಿ ಅನೇಕ ಬದಲಾವಣೆಗಳು ಆಗಿವೆ; ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ಅನೇಕ ಸೌಲಭ್ಯಗಳನ್ನು ಈ ಬಸ್‌ಗಳಲ್ಲಿ ತಂದಿವೆ. ಕೆಲವು ಬಸ್‌ಗಳು ಪ್ರಯಾಣಿಕರಿಗೆ ರಗ್ಗು, ದಿಂಬುಗಳನ್ನು ಒದಗಿಸುತ್ತಿವೆ. ನೀರಿನ ಬಾಟಲಿ ಹಾಗೂ 'ನಂದಿನಿ' ತಿನಿಸುಗಳನ್ನು ಸರ್ಕಾರದ ಐಷಾರಾಮಿ ಬಸ್‌ಗಳಲ್ಲಿ ನೀಡಲಾಗುತ್ತಿದೆ. ಹವಾನಿಯಂತ್ರಿತ ಹಾಗೂ ಹವಾನಿಯಂತ್ರಿತವಲ್ಲದ ಬಸ್‌ಗಳು ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಓಡಾಡುತ್ತಿವೆ.

ಸ್ಲೀಪರ್ ಬಸ್‌ಗಳಲ್ಲಿನ ಪ್ರಯಾಣ ಹಿತಕರವಾಗಿರುವುದಕ್ಕಿಂತ ಅಹಿತಕರವಾದ ಸುದ್ದಿಗಳನ್ನೇ ಇತ್ತೀಚೆಗೆ ಹೆಚ್ಚು ಕೇಳುತ್ತಿದ್ದೇವೆ. ಬಸ್‌ಗಳಲ್ಲಿನ ಸುರಕ್ಷತಾ ಮಾರ್ಗಸೂಚಿಯ ಬಗ್ಗೆ ಖಾಸಗಿಯವರಿಗಾಗಲಿ, ಸರ್ಕಾರಕ್ಕಾಗಲಿ ಇರುವ ನಿರ್ಲಕ್ಷ್ಯವನ್ನು ಇಂತಹ ಸಂದರ್ಭಗಳು ಮತ್ತೆ ಮುನ್ನೆಲೆಗೆ ತರುತ್ತವೆ. ಅಪಘಾತ ಅಥವಾ ಅಹಿತಕರ ಸಂದರ್ಭದಲ್ಲಿ ಈ ಬಸ್‌ಗಳಲ್ಲಿ ತುರ್ತು ನಿರ್ಗಮನ ಇರುವುದಿಲ್ಲ. ದೊಡ್ಡ ಗಾಜಿನ ಕಿಟಕಿಗಳನ್ನು ಒಡೆಯಲು ಅಗತ್ಯವಾದ ಸುತ್ತಿಗೆಗಳು ಇರುವುದಿಲ್ಲ. ಮೊಬೈಲ್ ಚಾರ್ಜರ್ ಪಾಯಿಂಟ್‌ಗಳನ್ನು ಬಸ್‌ಗಳು ಹೊಂದಿದ್ದಾಗ, ಬೆಂಕಿ ಹತ್ತಿಕೊಂಡರೆ ಬಸ್ಸಿನಲ್ಲಿ ಅಗ್ನಿಶಮನದ ವ್ಯವಸ್ಥೆ ಇರುವುದಿಲ್ಲ.

ರಾತ್ರಿ ಕಾರ್ಯಾಚರಣೆ ನಡೆಸುವ ಸ್ಲೀಪರ್ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆಯಿದ್ದರೂ, ಲಗೇಜ್ ಬಾಕ್ಸ್‌ಗಳಲ್ಲಿ ತುಂಬುವ ವಸ್ತುಗಳಿಗೆ ನಿರ್ದಿಷ್ಟ ಮಾರ್ಗಸೂಚಿಗಳಿಲ್ಲ. ಕೆಲವು ಖಾಸಗಿ ಬಸ್‌ಗಳಲ್ಲಿ ಬೈಕ್‌ಗಳನ್ನು ತುಂಬುವುದನ್ನು ನೋಡಿರುವೆ. ಹುಬ್ಬಳ್ಳಿಯಿಂದ ಬರುವಾಗ ಒಬ್ಬ ಪ್ರಯಾಣಿಕ ದಿಂಬುಗಳನ್ನು ತಂದು ಲಗೇಜ್ ಬಾಕ್ಸಿಗೆ ಹಾಕಲು ಬಂದಾಗ ಚಾಲಕ ಆಕ್ಷೇಪಿಸಿದ. ಆಗ ಆ ಪ್ರಯಾಣಿಕ, ಅದು ಹೇಗೆ ಬಸ್ ಮುಂದಕ್ಕೆ ತೆಗೆಯುವೆಯೋ ನೋಡುವೆ ಎಂದು ಚಾಲಕನಿಗೆ ಸವಾಲು ಹಾಕಿದ. ಉಳಿದ ಪ್ರಯಾಣಿಕರು ಚಾಲಕನ ಪರವಾಗಿ ನಿಲ್ಲದೆ ಇದ್ದಾಗ, ಚಾಲಕ ಅನಿವಾರ್ಯವಾಗಿ ಸುಮ್ಮನಾಗಬೇಕಾಯಿತು. ಪ್ರಯಾಣಿಕರಿಗೂ ಸುರಕ್ಷತೆಯ ಬಗ್ಗೆ ಮಾರ್ಗದರ್ಶನದ ಅವಶ್ಯಕತೆಯಿದೆ.

ಚಾಲಕರೂ ನಮ್ಮಂತೆಯೇ ಮನುಷ್ಯರೇ ಆಗಿರುವುದರಿಂದ ಅವರಿಗೆ ಆರೇಳು ಗಂಟೆಗಳ ಕರ್ತವ್ಯದ ನಂತರ ವಿಶ್ರಾಂತಿ ಅತ್ಯಗತ್ಯ. ನಿದ್ದೆಗೆಟ್ಟು ವಾಹನ ಚಾಲನೆ ಮಾಡುವ ಒತ್ತಡದಲ್ಲಿ ನಸುಕಿನಲ್ಲಿ ಸಿಹಿನಿದ್ದೆಯಲ್ಲಿರುವ ಪ್ರಯಾಣಿಕರನ್ನು ಚಾಲಕರು ಚಿರನಿದ್ದೆಗೆ ಕಳಿಸಿಬಿಟ್ಟಿರುವ ಉದಾಹರಣೆಗಳಿವೆ. ಅನೇಕ ಚಾಲಕರು ತಮ್ಮ ನಿದ್ದೆಯನ್ನು ತಡೆಯಲು ಟೀ-ಕಾಫಿ ಕುಡಿಯುವ, ಗುಟ್ಕಾ ಹಾಕುವ, ಇಲ್ಲವೇ ಸಿಗರೇಟು ಸೇದಿ ನಿದ್ದೆ ಓಡಿಸಲು ಪ್ರಯತ್ನಿಸುವ ಕಸರತ್ತನ್ನು ನೋಡಿದ್ದೇನೆ. ಅತಿವೇಗ, ರಾತ್ರಿಯ ಮಬ್ಬು, ಕುಳಿರ್ಗಾಳಿ, ಏಕಾಂತದ ನೀರವತೆ, ಇವೆಲ್ಲವೂ ಚಾಲಕ ಎಡವಟ್ಟು ಮಾಡಲು ಹಾಗೂ ಅಪಘಾತ ಸಂಭವಿಸಲು ಕಾರಣಗಳಾಗಿವೆ.

ನೇತ್ರತಜ್ಞರೊಬ್ಬರು ಹಂಚಿಕೊಂಡ ವಿಷಯ ಗಾಬರಿ ಹುಟ್ಟಿಸುವಂತಿದೆ. ಅವರ ಬಳಿ ಪರೀಕ್ಷೆಗೆ ಬಂದ ವ್ಯಕ್ತಿಯೊಬ್ಬರಿಗೆ ಒಂದು ಕಣ್ಣೇ ಕಾಣಿಸುತ್ತಿರಲಿಲ್ಲ. ಮಾತಿನ ನಡುವೆ ಆ ವ್ಯಕ್ತಿ, 'ನಾನು ಖಾಸಗಿ ಬಸ್ ಚಾಲಕನಾಗಿದ್ದು, ಪ್ರತಿದಿನ ಬೆಂಗಳೂರಿನಿಂದ ಮಂಗಳೂರಿಗೆ ಬಸ್ ಚಲಾಯಿಸುವೆ' ಎಂದನಂತೆ. ಹೌಹಾರಿದ ವೈದ್ಯರು, 'ಅಲ್ಲಯ್ಯ, ನಿನ್ನ ಕಣ್ಣಿನ ದೃಷ್ಟಿಯೇ ಸರಿಯಾಗಿಲ್ಲ. ಆ ಪ್ರಯಾಣಿಕರ ಗತಿ ಏನು?' ಎಂದಾಗ, ಆತ ನೀಡಿದ ಉತ್ತರ: 'ಸರ್, ನಾನು ಬೆಳಗ್ಗೆ ಬಸ್ಸು ಓಡಿಸುವುದಿಲ್ಲ, ಬರೀ ರಾತ್ರಿ ಮಾತ್ರ'. ಇಂತಹ ಪ್ರಕರಣಗಳಿಗೆ ಏನು ಹೇಳುವುದು?

ಚಾಲಕರ ಆರೋಗ್ಯ ತಪಾಸಣೆ, ಚಾಲಕರಿಗೆ ಹಾಗೂ ಬಸ್ಸುಗಳಿಗೆ ಸೂಕ್ತ ಮಾರ್ಗಸೂಚಿ, ಇವೆಲ್ಲವನ್ನೂ ಸರ್ಕಾರ ಬಿಗಿಗೊಳಿಸಬೇಕಿದೆ. ಪ್ರತಿ ದಿನ ಸರಾಸರಿ 485 ಜನ ದೇಶದ ವಿವಿಧ ಭಾಗಗಳಲ್ಲಿ ಅಪಘಾತಗಳಿಂದ ಸಾವನ್ನಪ್ಪುತ್ತಿದ್ದಾರೆ. ರಸ್ತೆ ಅಪಘಾತದಲ್ಲಿ ಭಾರತಕ್ಕೆ ವಿಶ್ವದಲ್ಲೇ ಮೊದಲ ಸ್ಥಾನ. ಈ ಕುಖ್ಯಾತಿಗೆ ಸಂಚಾರ ಪ್ರಜ್ಞೆಯ ಕೊರತೆ ಹಾಗೂ ಅದರ ಬಗೆಗಿನ ನಿರ್ಲಕ್ಷ್ಯವೇ ಕಾರಣ.

ಅತಿಯಾದ ವೇಗ, ಮದ್ಯ ಸೇವನೆ, ಮಾದಕ ವಸ್ತು ಸೇವಿಸಿ ವಾಹನ ಚಲಾಯಿಸುವುದು, ದೃಷ್ಟಿದೋಷ, ನಿದ್ದೆ, ಹವಾಮಾನ, ಚಾಲಕನ ಅಜಾಗರೂಕತೆ, ಇವೆಲ್ಲವೂ ಅಪಘಾತಗಳಿಗೆ ಕಾರಣವಾಗುತ್ತಿವೆ.

ಸರ್ಕಾರ, ಪ್ರಾದೇಶಿಕ ಸಾರಿಗೆ ಕಚೇರಿ, ಪರವಾನಗಿ ನೀಡುವಾಗ ಹಾಗೂ ನವೀಕರಿಸುವಾಗ ಚಾಲಕರನ್ನು ಕಡ್ಡಾಯ ಆರೋಗ್ಯ ತಪಾಸಣೆಗೆ ಒಳಪಡಿಸಬೇಕು. ರಸ್ತೆಯಲ್ಲಿ ಸರಿಯಾದ ಮಾರ್ಗಸೂಚಿಗಳನ್ನು ಹಾಕುವುದು, ಹೆದ್ದಾರಿಗಳಲ್ಲಿ ಆ್ಯಂಬುಲೆನ್ಸ್ ಸೇವೆ, ವಿದೇಶಗಳಲ್ಲಿ ಇರುವಂತೆ ಸುಸಜ್ಜಿತವಾದ ಹೋಟೆಲ್, ಶೌಚಾಲಯಗಳನ್ನು ಒದಗಿಸುವ ಮೂಲಕ ಅಪಘಾತಗಳನ್ನು ನಿಯಂತ್ರಿಸಬಹುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತನ್ನ ಸಾಮ್ರಾಜ್ಯಶಾಹಿ ಮನೋಭಾವ ಮತ್ತು ತೈಲ ಹಾಗೂ ಆರ್ಥಿಕ ಅಗತ್ಯಗಳಿಗಾಗಿ ವಿವಿಧ ನೆಪವೊಡ್ಡಿ ವಿದೇಶಗಳ ಮೇಲೆ ದಾಳಿ ಮಾಡುವುದು, ನಿರ್ಬಂಧ ವಿಧಿಸುವುದು ಅಮೆರಿಕಕ್ಕೆ ಹೊಸದೇನಲ್ಲ. ಅದು 'ದೊಡ್ಡಣ್ಣ'ನ ದರ್ಪವನ್ನು ಮುಂದುವರಿಸುತ್ತಲೇ ಇದೆ. ದಿಢೀರ್ ಕಾರ್ಯಾಚರಣೆ ನಡೆಸಿ, ವೆನೆಜುವೆಲಾದ ಅಧ್ಯಕ್ಷರ ಮನೆಗೆ ನುಗ್ಗಿ ಅವರನ್ನು ಅಪಹರಿಸಿ ತನ್ನ ದೇಶದಲ್ಲಿ ಸೆರೆಯಲ್ಲಿಟ್ಟಿರುವ ಅಮೆರಿಕದ ಅಧ್ಯಕ್ಷ ಟ್ರಂಪ್ ಅವರ ಮುಂದಿನ ಗುರಿ ಯಾರು ಎನ್ನುವುದರ ಬಗ್ಗೆ ಜಾಗತಿಕ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ವಿದೇಶಿ ನಾಯಕರನ್ನು ವಿನಾಕಾರಣ ಕಟಕಟೆಯಲ್ಲಿ ನಿಲ್ಲಿಸುವ ಸ್ವಭಾವ, ಹಠಾತ್ ಕೆರಳುವ ಗುಣ, ಆಕ್ರಮಣಕಾರಿ ವರ್ತನೆ, ಕ್ಷಿಪ್ರ ಕಾರ್ಯಾಚರಣೆಗಳಿಗೆ ಹೆಸರಾದ ಟ್ರಂಪ್ ಅವರು ಪ್ರಸ್ತುತ ಗ್ರೀನ್‌ಲ್ಯಾಂಡ್, ಕೊಲಂಬಿಯಾ, ಇರಾನ್, ಮೆಕ್ಸಿಕೊ ಮತ್ತು ಕ್ಯೂಬಾ ಮೇಲೆ ಕಣ್ಣು ನೆಟ್ಟಿದ್ದಾರೆ. ಸುಭದ್ರ ಸರ್ಕಾರ, ಡ್ರಗ್ಸ್ ವಿರುದ್ಧದ ಹೋರಾಟ ಮುಂತಾದ ಕಾರಣಗಳನ್ನು ಮುಂದು ಮಾಡಿ, ಆ ದೇಶಗಳನ್ನು, ಅಲ್ಲಿನ ನಾಯಕರನ್ನು 'ಮಣಿಸುವ' ಸಾಧ್ಯತೆ ಇದೆ ಎನ್ನಲಾಗುತ್ತಿದೆ

ಟ್ರಂಪ್ ಕಣ್ಣು ಯಾರ ಮೇಲೆ?

ಗ್ರೀನ್‌ಲ್ಯಾಂಡ್

ಉತ್ತರ ಅಮೆರಿಕದಲ್ಲಿ ಆರ್ಕ್‌ಟಿಕ್ ಸಾಗರ ಮತ್ತು ಉತ್ತರ ಅಟ್ಲಾಂಟಿಕ್ ಸಾಗರದ ನಡುವೆ ಇರುವ ದ್ವೀಪ ಗ್ರೀನ್‌ಲ್ಯಾಂಡ್. ಹಿಂದೆ ಡೆನ್ಮಾರ್ಕ್‌ನ ವಸಾಹತು ಆಗಿದ್ದ ಈ ದ್ವೀಪ ಆಡಳಿತದಲ್ಲಿ ಸ್ವಾಯತ್ತೆ ಹೊಂದಿದೆ. ಆದರೆ ಇನ್ನೂ ಸಂಪೂರ್ಣವಾಗಿ ಸ್ವತಂತ್ರ ರಾಷ್ಟ್ರವಲ್ಲ. ಡೆನ್ಮಾರ್ಕ್‌ನ ಅಧೀನದಲ್ಲಿದೆ. ನ್ಯಾಟೊದೊಂದಿಗೆ ಗುರುತಿಸಿಕೊಂಡಿದ್ದರೂ ಅದು ಡೆನ್ಮಾರ್ಕ್ ಸದಸ್ಯತ್ವದ ಭಾಗವಾಗಿದೆ. ಇಲ್ಲಿನ ಜನಸಂಖ್ಯೆ 57 ಸಾವಿರ ಮಾತ್ರ. ಸ್ಥಳೀಯವಾಗಿ ಸರ್ಕಾರ ಅಸ್ತಿತ್ವದಲ್ಲಿದೆ. ಹಾಗಿದ್ದರೂ ಡೆನ್ಮಾರ್ಕ್ ಆಡಳಿತದ ನೆರಳಿನಲ್ಲಿಯೇ ಕಾರ್ಯಾಚರಿಸುತ್ತದೆ. ಅಮೆರಿಕದಿಂದ ಗ್ರೀನ್‌ಲ್ಯಾಂಡ್ 2,700ರಿಂದ 4,900 ಕಿ.ಮೀ ದೂರದಲ್ಲಿದೆ (ನಿರ್ದಿಷ್ಟ ಸ್ಥಳಕ್ಕೆ ಅನುಗುಣವಾಗಿ).

ಎರಡನೇ ಬಾರಿಗೆ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಾಗಿನಿಂದಲೂ ಗ್ರೀನ್‌ಲ್ಯಾಂಡ್ ತನಗೆ ಬೇಕು ಎಂದು ಹೇಳುತ್ತಾ ಬಂದಿದ್ದ ಡೊನಾಲ್ಡ್ ಟ್ರಂಪ್, ವೆನೆಜುವೆಲಾದಲ್ಲಿ ಕಾರ್ಯಾಚರಣೆ ನಡೆಸಿದ ನಂತರ, ತಮ್ಮ ಹೇಳಿಕೆಯನ್ನು ಪುನರುಚ್ಚರಿಸಿದ್ದಾರೆ. 'ನಮಗೆ ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳು ಬೇಡ. ದೇಶದ ಭದ್ರತೆಯ ದೃಷ್ಟಿಯಿಂದ ಆ ದ್ವೀಪ ಬೇಕು' ಎಂದಿದ್ದಾರೆ. ಇದನ್ನು ವಿರೋಧಿಸಿ ಗ್ರೀನ್‌ಲ್ಯಾಂಡ್ ಸರ್ಕಾರದ ಮುಖ್ಯಸ್ಥ ಜೆನ್ಸ್ ಫ್ರೆಡರಿಕ್ ನೀಲ್ಸೆನ್ ಮತ್ತು ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡರಿಕ್ಸನ್ ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಐರೋಪ್ಯ ಒಕ್ಕೂಟದ ನಾಯಕರು ಗ್ರೀನ್‌ಲ್ಯಾಂಡ್, ಡೆನ್ಮಾರ್ಕ್ ಬೆಂಬಲಕ್ಕೆ ನಿಂತಿದ್ದಾರೆ.

ಜೆನ್ಸ್ ಫ್ರೆಡರಿಕ್ ನೀಲ್ಸೆನ್

ಗ್ರೀನ್‌ಲ್ಯಾಂಡ್‌ನ ವಾಯವ್ಯಕ್ಕಿರುವ ಪಿಟಿಫಿಕ್ ನೆಲೆಯಲ್ಲಿ ಅಮೆರಿಕದ ಸೇನೆಯ ಉಪಸ್ಥಿತಿ ಇದೆ. ಅದನ್ನು ಇನ್ನಷ್ಟು ವಿಸ್ತರಿಸಲು ಅದು ಬಯಸಿದೆ. ಈ ಭಾಗದ ಸಾಗರದಲ್ಲಿ ರಷ್ಯಾ ಮತ್ತು ಚೀನಾದ ಉಪಸ್ಥಿತಿ ಹೆಚ್ಚುತ್ತಿದೆ. ಅವುಗಳ ನೌಕೆಗಳು, ಜಲಾಂತರ್ಗಾಮಿ ನೌಕೆಗಳು ಓಡಾಡುತ್ತಿವೆ. ವಿರೋಧಿ ರಾಷ್ಟ್ರಗಳ ಚಲನವಲನಗಳ ಮೇಲೆ ನಿಗಾ ಇಡಲು ಇಲ್ಲಿ ಅತ್ಯಾಧುನಿಕ ರೇಡಾರ್ ತಂತ್ರಜ್ಞಾನ ಅಳವಡಿಸುವುದು ಅದರ ಯೋಚನೆ.

ಇದರೊಂದಿಗೆ, ನೈಸರ್ಗಿಕವಾಗಿಯೂ ಇದು ಸಂಪನ್ಮೂಲ ರಾಷ್ಟ್ರ. ವಿವಿಧ ಉದ್ಯಮಗಳಿಗೆ ಬೇಕಾದ ಅಪರೂಪದ ಖನಿಜ ಲೋಹಗಳು, ಲಿಥಿಯಂ, ತೈಲ, ನೈಸರ್ಗಿಕ ಅನಿಲದ ನಿಕ್ಷೇಪ ಇಲ್ಲಿ ಕಂಡು ಬಂದಿದೆ. ಟ್ರಂಪ್ ಅವರು ಮಾತಿನಲ್ಲಿ ದೇಶದ ಭದ್ರತೆಗಾಗಿ ದ್ವೀಪ ಅಗತ್ಯ ಎಂದು ಹೇಳುತ್ತಿದ್ದರೂ, ಅಲ್ಲಿನ ನೈಸರ್ಗಿಕ ಸಂಪನ್ಮೂಲದ ಮೇಲೂ ಅವರು ಕಣ್ಣು ನೆಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ.

ಕೊಲಂಬಿಯಾ



ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಅವರನ್ನು ಸೆರೆಹಿಡಿದು ಹೊತ್ತೊಯ್ದ ಕೆಲವೇ ಗಂಟೆಗಳ ನಂತರ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬಾಯಲ್ಲಿ ಬಂದ ಹೆಸರು ಕೊಲಂಬಿಯಾ. ಕೊಲಂಬಿಯಾದ ಅಧ್ಯಕ್ಷ ಗುಸ್ತಾವೊ ಪೆಟ್ರೊ ಅವರಿಗೆ ಟ್ರಂಪ್ ಎಚ್ಚರಿಕೆಯ ಸಂದೇಶ ನೀಡಿದ್ದೂ ಅಲ್ಲದೇ, ಅವರ ವಿರುದ್ಧ ಸೇನಾ ಕಾರ್ಯಾಚರಣೆ ಉತ್ತಮ ಆಯ್ಕೆಯಾಗಿದೆ ಎಂದಿದ್ದರು.

ಕೊಲಂಬಿಯಾ, ದಕ್ಷಿಣ ಅಮೆರಿಕದ ನಾಲ್ಕನೇ ಅತ್ಯಂತ ದೊಡ್ಡ ದೇಶವಾಗಿದ್ದು, ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವೂ ಆಗಿದೆ. ಅದು ವೆನೆಜುವೆಲಾದ ಪಶ್ಚಿಮ ಗಡಿಗೆ ಹೊಂದಿಕೊಂಡಿದೆ. ಅಪಾರ ತೈಲ ನಿಕ್ಷೇಪಗಳಿರುವ, ಚಿನ್ನ, ಬೆಳ್ಳಿ, ಪ್ಲಾಟಿನಂ, ಲಿಥಿಯಂ, ಪಚ್ಚೆಯಂಥ ಅಪರೂಪದ ಖನಿಜಗಳಿಗೆ ಹೆಸರಾಗಿದೆ. ಮಾದಕ ವಸ್ತು ಕೊಕೇನ್ ಬಳಕೆ ಮತ್ತು ಮಾರಾಟ ಅಲ್ಲಿ ವ್ಯಾಪಕವಾಗಿದೆ. ಎಡಪಂಥೀಯರಾಗಿದ್ದ ಗುಸ್ತಾವೊ ಪೆಟ್ರೊ ಕೊಲಂಬಿಯಾದಲ್ಲಿ 2022ರ ಚುನಾವಣೆಯಲ್ಲಿ ಜಯಗಳಿಸಿ ಅಧಿಕಾರಕ್ಕೇರಿದ್ದರು. ಅವರು ಮಾದಕ ವಸ್ತು ಮಾಫಿಯಾದೊಂದಿಗೆ ನಂಟು ಹೊಂದಿದ್ದಾರೆ ಎನ್ನುವುದು ಅಮೆರಿಕದ ಆರೋಪ. 'ಕೊಕೇನ್ ತಯಾರಿಸಿ, ಅದನ್ನು ಅಮೆರಿಕಕ್ಕೆ ಮಾರುವ ಒಬ್ಬ ರೋಗಗ್ರಸ್ತ ಮನುಷ್ಯ ಕೊಲಂಬಿಯಾ ಅಧಿಕಾರ ಹಿಡಿದಿದ್ದಾನೆ. ಇದೆಲ್ಲ ಹೆಚ್ಚು ದಿನ ನಡೆಯುವುದಿಲ್ಲ' ಎಂದು ಟ್ರಂಪ್ ಸೂಚ್ಯವಾಗಿ ಹೇಳಿದ್ದಾರೆ. ಡ್ರಗ್ಸ್ ತಡೆಗಾಗಿ ಅಮೆರಿಕವು ಕೊಲಂಬಿಯಾಕ್ಕೆ ಪ್ರತಿವರ್ಷ ಕೋಟ್ಯಂತರ ಡಾಲರ್ ಸೇನಾ ನೆರವು ನೀಡುತ್ತಿದೆ.

ಗುಸ್ತಾವೊ ಪೆಟ್ರೊ

ಕ್ಯೂಬಾ

ಅಮೆರಿಕದ ಸತತ ಪ್ರಯತ್ನಗಳ ನಡುವೆಯೂ, ಸುಮಾರು ಆರು ದಶಕಗಳಿಂದ ಅದಕ್ಕೆ ಸಡ್ಡು ಹೊಡೆಯುತ್ತಲೇ ಬಂದಿರುವ ಪುಟ್ಟ ದೇಶ ಕ್ಯೂಬಾ. ಕಮ್ಯುನಿಸ್ಟ್ ಆಡಳಿತ ಇರುವ, 1.1 ಕೋಟಿ ಜನಸಂಖ್ಯೆಯ ಕ್ಯೂಬಾ, ಸೋವಿಯತ್ ಒಕ್ಕೂಟ ಪತನಗೊಂಡ ನಂತರ ಅಮೆರಿಕಕ್ಕೆ ತಲೆಬಾಗುತ್ತದೆ ಎಂದೇ ನಿರೀಕ್ಷಿಸಲಾಗಿತ್ತು. ಆದರೆ, ಕ್ಯೂಬಾ ಕ್ರಾಂತಿಯ ನಾಯಕ ಮತ್ತು ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೊ ಅದಕ್ಕೆ ಆಸ್ಪದ ನೀಡಲಿಲ್ಲ. ಕ್ಯೂಬಾದ ಮೇಲೆ ಅಮೆರಿಕ 1960ರಿಂದಲೂ ಅನೇಕ ನಿರ್ಬಂಧಗಳನ್ನು ವಿಧಿಸುತ್ತಲೇ ಬಂದಿದೆ. ಫಿಡೆಲ್ ಕ್ಯಾಸ್ಟ್ರೊ ಮತ್ತು ರೌಲ್ ಕ್ಯಾಸ್ಟ್ರೊ ಆಡಳಿತದ ನಂತರ ಹಿರಿಯ ಕಮ್ಯೂನಿಸ್ಟ್ ನಾಯಕ ಮಿಗೆಲ್ ಡಿಯಾಜ್ ಕನ್ವಲ್ ಕ್ಯೂಬಾ ಅಧ್ಯಕ್ಷರಾಗಿದ್ದಾರೆ. ಕ್ಯೂಬಾಕ್ಕೆ ವೆನೆಜುವೆಲಾದಿಂದ ಶೇ 30ರಷ್ಟು ತೈಲ ರಫ್ತಾಗುತ್ತಿತ್ತು. ಪ್ರಸ್ತುತ ಅದು ಆರ್ಥಿಕತೆ ಕುಸಿತ, ವಿದ್ಯುತ್ ಅಭಾವದ ಜತೆಗೆ ತೀವ್ರ ತೈಲ ಅಭಾವ ಎದುರಿಸುತ್ತಿದೆ. ಟ್ರಂಪ್ ಅವರ ನಿಗಾದಲ್ಲಿ ಕ್ಯೂಬಾ ಕೂಡ ಇದೆ. ಆದರೆ, 'ಕ್ಯೂಬಾ ಮೇಲೆ ಸೇನಾ ಕಾರ್ಯಾಚರಣೆ ನಡೆಸುವ ಅಗತ್ಯವೇ ಇಲ್ಲ. ವೆನೆಜುವೆಲಾದ ಬೆಳವಣಿಗೆಗಳಿಂದ ಅದರ ಆದಾಯಕ್ಕೆ ಪೆಟ್ಟು ಬಿದ್ದಿದ್ದು, ಅದೇ ಕುಸಿದು ಬೀಳುವಂತೆ ಕಾಣುತ್ತಿದೆ' ಎಂದು ಟ್ರಂಪ್ ವಿಶ್ವಾಸದಿಂದ ನುಡಿದಿದ್ದಾರೆ.

ಮಿಗೆಲ್ ಡಿಯಾಜ್ ಕನ್ವಲ್

ಮೆಕ್ಸಿಕೊ



ಅಮೆರಿಕದ ದಕ್ಷಿಣಕ್ಕೆ ಇರುವ ನೆರೆ ರಾಷ್ಟ್ರ ಮೆಕ್ಸಿಕೊದೊಂದಿಗೂ ಟ್ರಂಪ್ ಸಂಬಂಧ ಉತ್ತಮವಾಗಿಲ್ಲ. ದಕ್ಷಿಣ ಅಮೆರಿಕದ ರಾಷ್ಟ್ರಗಳಿಂದ ಮೆಕ್ಸಿಕೊ ಮಾರ್ಗವಾಗಿ ಅಕ್ರಮ ವಲಸಿಗರು ಅಮೆರಿಕಕ್ಕೆ ಬರುತ್ತಾರೆ ಎಂಬುದು ಅವರ ಅಸಮಾಧಾನಕ್ಕೆ ಒಂದು ಕಾರಣವಾದರೆ, ಭಾರಿ ಪ್ರಮಾಣದ ಮಾದಕ ವಸ್ತುಗಳು ಅಮೆರಿಕ ಪ್ರವೇಶಿಸಲು ಮೆಕ್ಸಿಕೊ ರಹದಾರಿಯಾಗಿದೆ ಎಂಬುದು ಟ್ರಂಪ್ ಕೋಪಕ್ಕೆ ಮತ್ತೊಂದು ಕಾರಣ. ಅಕ್ರಮ ವಲಸಿಗರನ್ನು ತಡೆಯಲು ತಮ್ಮ ಮೊದಲ ಅವಧಿಯಲ್ಲೇ ಅವರು ಮೆಕ್ಸಿಕೊ ಗಡಿಯಲ್ಲಿ ದೊಡ್ಡ ಗೋಡೆ ನಿರ್ಮಾಣಕ್ಕೆ ಆದ್ಯತೆ ನೀಡಿದ್ದರು. ಕಳೆದ ವರ್ಷ ಮತ್ತೆ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ತಕ್ಷಣವೇ ಮೆಕ್ಸಿಕೊ ಕೊಲ್ಲಿಯನ್ನು ಅಮೆರಿಕ ಕೊಲ್ಲಿ ಎಂದು ಮರುನಾಮಕರಣ ಮಾಡಿದ್ದರು. ಎರಡು ದಿನಗಳ ಹಿಂದೆ ಮಾತನಾಡಿದ್ದ ಟ್ರಂಪ್, 'ಅಮೆರಿಕದ ಒಳಕ್ಕೆ ಬರುತ್ತಿರುವ ಅಕ್ರಮ ವಲಸಿಗರು ಮತ್ತು ಮಾದಕ ದ್ರವ್ಯಗಳ ಹರಿವು ತಡೆಗೆ ಮೆಕ್ಸಿಕೊ ಆಡಳಿತ ಏನೂ ಮಾಡುತ್ತಿಲ್ಲ. ದೇಶಕ್ಕೆ ರವಾನೆಯಾಗುತ್ತಿರುವ ಭಾರಿ ಪ್ರಮಾಣದ ಮಾದಕ ವಸ್ತುಗಳನ್ನು ನಡೆಯಲು ನಾವು ಏನಾದರೂ ಮಾಡುತ್ತೇವೆ' ಎಂದು ಹೇಳಿದ್ದಾರೆ. ಇವುಗಳ ನಿಯಂತ್ರಣಕ್ಕಾಗಿ ತಮ್ಮ ಸೇನಾ ಪಡೆಗಳನ್ನು ಮೆಕ್ಸಿಕೊಕ್ಕೆ ಕಳುಹಿಸಿಕೊಡುತ್ತೇವೆ ಎಂದು ಹೇಳಿದ್ದೆ. ಆದರೆ, ಮೆಕ್ಸಿಕೊ ಅಧ್ಯಕ್ಷೆ ಕ್ಲೌಡಿಯಾ ಶೇನ್‌ಬಾಮ್ ಅವರು ಸಾರ್ವಜನಿಕವಾಗಿ ಇದನ್ನು ತಿರಸ್ಕರಿಸಿದ್ದರು ಎಂದೂ ಹೇಳಿದ್ದಾರೆ.

ಕ್ಲೌಡಿಯಾ ಶೇನ್‌ಬಾಮ್

ಇರಾನ್

ಪಶ್ಚಿಮ ಏಷ್ಯಾದಲ್ಲಿರುವ, ಆಯತೊಲ್ಲಾ ಖಮೇನಿ ನಾಯಕತ್ವದ ಇರಾನ್ ಮೊದಲಿನಿಂದಲೂ ಅಮೆರಿಕವನ್ನು ಕಟುವಾಗಿ ವಿರೋಧಿಸುತ್ತಾ ಬಂದಿರುವ ರಾಷ್ಟ್ರ. ಇರಾನ್ ಅಣ್ವಸ್ತ್ರ ಹೊಂದುವುದು ಅಮೆರಿಕಕ್ಕೆ ಇಷ್ಟವಿಲ್ಲ. ಇರಾನಿನಲ್ಲಿ ಕೆಲವು ದಿನಗಳಿಂದ ಆಡಳಿತ ವಿರೋಧಿ ಪ್ರತಿಭಟನೆ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಪ್ರತಿಭಟನೆಯನ್ನು ಹತ್ತಿಕ್ಕಲು ಇರಾನ್ ಆಯ್ದುಕೊಂಡಿರುವ ಮಾರ್ಗವನ್ನು ಖಂಡಿಸಿ ಟ್ರಂಪ್ ಅವರು ಆರಂಭದಲ್ಲಿ ಹೇಳಿಕೆ ನೀಡಿದ್ದರು. ಪ್ರತಿಭಟನಕಾರರ ಮೇಲೆ ಗುಂಡು ಹಾರಿಸಿ ಹೋರಾಟವನ್ನು ಹತ್ತಿಕ್ಕಲು ಅಲ್ಲಿನ ಆಡಳಿತ ಪ್ರಯತ್ನಿಸುತ್ತಿದೆ. ಇದೇ ಕ್ರಮವನ್ನು ಮುಂದುವರಿಸಿದರೆ ನಾವು ಬಲವಾದ ಏಟು ನೀಡಬೇಕಾಗುತ್ತದೆ ಎಂದು ಟ್ರಂಪ್ ಹೇಳಿದ್ದಾರೆ. 'ಇರಾನ್ ಬೆಳವಣಿಗೆಯನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಈ ಹಿಂದೆ ಮಾಡಿದಂತೆ ಅವರು ಈಗಲೂ ಜನರನ್ನು ಕೊಂದರೆ, ಅವರು ಅಮೆರಿಕದಿಂದ ಬಲವಾದ ಏಟು ತಿನ್ನಲಿದ್ದಾರೆ' ಎಂದು ಹೇಳಿದ್ದಾರೆ. ಕಳೆದ ವರ್ಷ ಇಸ್ರೇಲ್–ಇರಾನ್ ಕದನದ ಕೊನೆಯ ಹಂತದಲ್ಲಿ ಅಮೆರಿಕ ಇರಾನಿನ ಅಣ್ವಸ್ತ್ರ ಅಭಿವೃದ್ಧಿ ಘಟಕಗಳನ್ನು ಗುರಿಯಾಗಿಸಿಕೊಂಡು ಬಾಂಬ್ ದಾಳಿ ನಡೆಸಿತ್ತು. ಈಗ ವೆನೆಜುವೆಲಾದಲ್ಲಿ ಅಮೆರಿಕ ಕೈಗೊಂಡ ಸೇನಾ ಕಾರ್ಯಾಚರಣೆಯನ್ನು ಇರಾನ್ ಬಲವಾಗಿ ಖಂಡಿಸಿದೆ.

ಆಯತೊಲ್ಲಾ ಖಮೇನಿ

ಆಧಾರ: ಬಿಬಿಸಿ, ರಾಯಿಟರ್ಸ್, ಎಪಿ, ಫ್ರಾನ್ಸ್24

ರಾಷ್ಟ್ರೀಯ

'ಪ್ರಕ್ರಿಯೆ ಆರಂಭದ ಬಳಿಕ ಮಾನದಂಡ ಬದಲಿಸುವಂತಿಲ್ಲ'

ಪಂಜಾಬ್ ಸರ್ಕಾರಕ್ಕೆ 'ಸುಪ್ರೀಂ' ತರಾಟೆ

ನವದೆಹಲಿ (ಪಿಟಿಐ): ಎಂಬಿಬಿಎಸ್ ಮತ್ತು ಬಿಡಿಎಸ್ ಕೋರ್ಸ್‌ಗಳ ಪ್ರವೇಶಾತಿ ಪ್ರಕ್ರಿಯೆಯನ್ನು ವಿಳಂಬಗೊಳಿಸಿದ್ದಕ್ಕೆ ಸಂಬಂಧಿಸಿದಂತೆ ಪಂಜಾಬ್ ಸರ್ಕಾರವನ್ನು ಸುಪ್ರೀಂ ಕೋರ್ಟ್ ಮಂಗಳವಾರ ತರಾಟೆಗೆ ತೆಗೆದುಕೊಂಡಿತು. ಶೈಕ್ಷಣಿಕ ಕೋರ್ಸ್‌ಗಳ ಪ್ರವೇಶಾತಿ ಪ್ರಕ್ರಿಯೆ ಆರಂಭಗೊಂಡ ನಂತರ ಅದರ ಮಾನದಂಡವನ್ನು ಬದಲಾಯಿಸುವಂತಿಲ್ಲ ಎಂದು ಹೇಳಿತು.

ಎಂಬಿಬಿಎಸ್ ಬಿಡಿಎಸ್ ಪ್ರವೇಶ

ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಅಲೋಕ್ ಅರಾಧೆ ಅವರ ನೇತೃತ್ವದ ನ್ಯಾಯಪೀಠವು, 'ನೇಮಕಾತಿ ಪ್ರಕ್ರಿಯೆ ಆರಂಭಗೊಂಡ ನಂತರ ನಿಯಮಗಳ ಮಾರ್ಪಾಡು ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಅದೇ ರೀತಿ ಪ್ರವೇಶಾತಿ ಆರಂಭಗೊಂಡ ನಂತರ ಮಾನದಂಡಗಳ ತಿದ್ದುಪಡಿಯೂ ಅಕ್ರಮ' ಎಂದು ತಿಳಿಸಿತು. ನ್ಯಾಯಸಮ್ಮತ ಪ್ರಕ್ರಿಯೆ ನಡೆಸಲು ಪಾರದರ್ಶಕತೆಯು ಬಹಳ ಮುಖ್ಯ ಎಂದು ಹೇಳಿತು.

'ಪಾರದರ್ಶಕತೆಯ ಕೊರತೆಯು ಸ್ವೇಚ್ಛಾಚಾರ ಮತ್ತು ಸ್ವಜನಪಕ್ಷಪಾತಕ್ಕೆ ಹಿಂಬಾಗಿಲ ಮೂಲಕ ದಾರಿ ಮಾಡಿಕೊಡುತ್ತದೆ. ಸಮಾನತಾವಾದದ ಮೂಲಕ ಇಂಥ ಪರಿಸ್ಥಿತಿಯನ್ನು ತೊಲಗಿಸಬೇಕು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಪಂಜಾಬ್ ಸರ್ಕಾರವು 2024ನೇ ಸಾಲಿನ ಎಂಬಿಬಿಎಸ್ ಮತ್ತು ಬಿಡಿಎಸ್ ಕೋರ್ಸ್‌ಗಳ ಪ್ರವೇಶಾತಿಗೆ ಅಳವಡಿಸಿಕೊಂಡಿದ್ದ ಮಾನದಂಡವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಪೀಠವು ವಿಚಾರಣೆ ನಡೆಸಿತು.

ಮುಕ್ತ ಮತ್ತು ನ್ಯಾಯಸಮ್ಮತ ರೀತಿಯಲ್ಲಿ ವರ್ತಿಸಬೇಕಾದುದು ರಾಜ್ಯ ಮತ್ತು ಅದರ ಅಂಗ ಸಂಸ್ಥೆಗಳ ಕರ್ತವ್ಯ ಮತ್ತು ಜವಾಬ್ದಾರಿ. ರಾಜ್ಯ ಕೈಗೊಳ್ಳುವ ಯಾವುದೇ ನಿರ್ಧಾರವು ವಿವೇಕಯುತವಾಗಿರಬೇಕು ಎಂದು ಹೇಳಿತು.

'ಪ್ರತಿಷ್ಠೆ ಸಂಕೇತವಾದ ಕಾರು'

ನವದೆಹಲಿ (ಪಿಟಿಐ): ಕಾರು ಪ್ರತಿಷ್ಠೆಯ ಸಂಕೇತವಾಗಿದೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಮಂಗಳವಾರ ಹೇಳಿದರು.

ದೆಹಲಿ–ಎನ್‌ಸಿಆರ್‌ನಲ್ಲಿನ ವಾಯುಮಾಲಿನ್ಯದ ಕುರಿತಂತೆ ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆ ಆಗಿರುವ ಅರ್ಜಿಗಳ ವಿಚಾರಣೆ ವೇಳೆ, 'ಜನರು ಬೈಸಿಕಲ್‌ನಲ್ಲಿ ಓಡಾಡುವುದನ್ನು ನಿಲ್ಲಿಸಿದ ಬಳಿಕ ನಾಲ್ಕು ಚಕ್ರದ ವಾಹನ ಖರೀದಿಗಾಗಿ ಹಣ ಉಳಿಸುತ್ತಿದ್ದಾರೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಹಲವು ಕಾರುಗಳನ್ನು ಹೊಂದುವುದನ್ನು ಕಡಿತಗೊಳಿಸುವ ಮೂಲಕವೂ ವಾಯು ಮಾಲಿನ್ಯವನ್ನೂ ತಗ್ಗಿಸಬಹುದು ಎಂದು ಹಿರಿಯ ವಕೀಲ ರಾಕೇಶ್ ದ್ವಿವೇದಿ ಅವರು ಸಲಹೆ ನೀಡಿದ ಬಳಿಕ, ಸಿಜೆಐ ಈ ಮೇಲಿನಂತೆ ಪ್ರತಿಕ್ರಿಯಿಸಿದರು.

'ಶ್ರೀಮಂತರೂ ತ್ಯಾಗಕ್ಕೆ ಮುಂದಾಗಬೇಕು. ಹೈಎಂಡ್ ವಾಹನಗಳನ್ನು ಆಯ್ದುಕೊಳ್ಳುವ ಬದಲು ಉತ್ತಮ ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸಬೇಕು' ಎಂದು ಸೂರ್ಯಕಾಂತ್ ಹೇಳಿದರು.

ವಾಯು ಗುಣಮಟ್ಟ ನಿರ್ವಹಣಾ ಆಯೋಗವು (ಸಿಎಕ್ಯೂಎಂ) ತನ್ನ ಕರ್ತವ್ಯ ನಿಭಾಯಿಸುವಲ್ಲಿ ವಿಫಲವಾಗಿದೆ ಎಂಬುದನ್ನು ನ್ಯಾಯಪೀಠ ಗಮನಿಸಿತು.

ಸಿಎಕ್ಯೂಎಂನ ಕಾರ್ಯವಿಧಾನದಲ್ಲಿನ 'ಗಂಭೀರತೆ'ಯ ಕೊರತೆಯನ್ನು ಟೀಕಿಸಿದ ನ್ಯಾಯಾಲಯವು, ಹದಗೆಡುತ್ತಿರುವ ವಾಯು ಗುಣಮಟ್ಟ ಸೂಚ್ಯಂಕದ (ಎಕ್ಯೂಐ) ಕಾರಣಗಳನ್ನು ಪತ್ತೆ ಹಚ್ಚುವಲ್ಲಿ ಅಥವಾ ದೀರ್ಘಕಾಲೀನ ಪರಿಹಾರ ಕಂಡುಕೊಳ್ಳುವಲ್ಲಿ ಯಾವುದೇ ಆತುರವಿಲ್ಲ ಎಂದಿತು.

ಎರಡು ವಾರಗಳಲ್ಲಿ ತಜ್ಞರ ಸಭೆ ಕರೆದು ವಾಯುಮಾಲಿನ್ಯದ ಮಟ್ಟವು ಅತಿಯಾಗಲು ಪ್ರಮುಖ ಕಾರಣಗಳ ಬಗ್ಗೆ ವರದಿ ಸಲ್ಲಿಸುವಂತೆ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠವು ಸಿಎಕ್ಯೂಎಂಗೆ ಸೂಚಿಸಿತು.

ಮಂಡಳಿಗೆ ತರಾಟೆ

ಸಂಚಾರ ದಟ್ಟಣೆಯನ್ನು ತಗ್ಗಿಸಲಿಕ್ಕಾಗಿ ದೆಹಲಿಯ ಗಡಿಯಲ್ಲಿರುವ ಟೋಲ್ ಪ್ಲಾಜಾಗಳನ್ನು ತಾತ್ಕಾಲಿಕವಾಗಿ ಮುಚ್ಚಬೇಕೋ ಅಥವಾ ಸ್ಥಳಾಂತರಿಸಬೇಕೋ ಎಂಬುದರ ಕುರಿತಂತೆ ವರದಿ ನೀಡುವಂತೆ ಸೂಚಿಸಿದ್ದರೂ, ಸೂಕ್ತ ಸ್ಪಂದನ ನೀಡದೆ ಮತ್ತೆ ಎರಡು ತಿಂಗಳು ಸಮಯ ಕೋರಿರುವ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ನ್ಯಾಯಪೀಠ ತರಾಟೆಗೆ ತೆಗೆದುಕೊಂಡಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅಮೆರಿಕದ ಬಂದೂಕುಧಾರಿ ಸೈನಿಕರು ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಅವರ ಮನೆಗೆ ನುಗ್ಗಿ ಅವರನ್ನು ಮತ್ತು ಅವರ ಪತ್ನಿಯನ್ನು ಸೆರೆಹಿಡಿದು, ವಿಮಾನದಲ್ಲಿ ಕರೆದೊಯ್ಯುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಆಪರೇಷನ್ ಆ್ಯಬ್ಸಲ್ಯೂಟ್ ರಿಸಾಲ್ವ್'ನ ನಿಜವಾದ ವಿಡಿಯೊ ಎಂದು ಕೆಲವರು ಅದನ್ನು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ವಾಸ್ತವ ಅಲ್ಲ.



ಇನ್‌ವಿಡ್ ಸಾಧನದ ಮೂಲಕ ವಿಡಿಯೊದ ಕೀಫ್ರೇಮ್‌ಗಳನ್ನು ಪ್ರತ್ಯೇಕಿಸಿ, ಅವುಗಳನ್ನು ಗೂಗಲ್ ಲೆನ್ಸ್ ಮೂಲಕ ವಿಶ್ಲೇಷಣೆಗೊಳಪಡಿಸಿದಾಗ, ಇದೇ ವಿಡಿಯೊ ಅನ್ನು ಹಲವರು ಇಂತಹುದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡಿತು. ಇದನ್ನೇ ಹೋಲುವ ವಿಡಿಯೊ ಅನ್ನು ಹೋರೆ ವಿಯೆರೊ ಎನ್ನುವ ವ್ಯಕ್ತಿಯು ತನ್ನ ಇನ್‌ಸ್ಟಾಗ್ರಾಂ ಖಾತೆಯಲ್ಲಿ 2025ರ ಜ.5ರಂದು ಹಂಚಿಕೊಂಡಿರುವುದು ಕಂಡಿತು. ಇದು ಪುನರ್ ಸೃಷ್ಟಿ ಮಾಡಲಾದ ವಿಡಿಯೊ ಆಗಿದ್ದು, ವಾಸ್ತವಿಕವಾದುದಲ್ಲ ಎಂದು ಅವರು ಉಲ್ಲೇಖಿಸಿದ್ದಾರೆ. ಹೈವ್ ಮಾಡರೇಷನ್ ಎಐ ಪತ್ತೆ ಟೂಲ್ ಮೂಲಕ ಪರಿಶೀಲಿಸಿದಾಗ, ವಿಡಿಯೊ ಎಐ ಸೃಷ್ಟಿ ಆಗಿರುವ ಸಾಧ್ಯತೆ ಶೇ 86ರಷ್ಟು ಎನ್ನುವುದು ತಿಳಿಯಿತು. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಅಲ್ಲಿನ ಮಾಧ್ಯಮಗಳು ಹಂಚಿಕೊಂಡಿರುವ ಮಡೂರೊ ಅವರ ಚಿತ್ರಗಳಿಗಿಂತಲೂ ವಿಡಿಯೊದಲ್ಲಿರುವ ಚಿತ್ರಗಳು ಭಿನ್ನವಾಗಿವೆ. ಎಐ ರೂಪಿತ ವಿಡಿಯೊ ಅನ್ನು ವಾಸ್ತವಿಕವಾದುದು ಎಂದು ಕೆಲವರು ಸುಳ್ಳು ಪ್ರತಿಪಾದನೆಯೊಂದಿಗೆ ಹಂಚಿಕೊಳ್ಳುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6277

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಣಕ್ಕಾಗಿಯೇ ತೀವ್ರ ಹೊಡೆದಾಟ! (4)
3.ಲಂಚಪಡೆಯುವ ಸ್ವಭಾವದ ವ್ಯಕ್ತಿ (4)
5.ಪದ ಹೇಳಿ ಗಳಿಸಿರುವ ಡಿಗ್ರಿ (3)
7.ರೋಗವಿಲ್ಲದಿರುವಿಕೆ ಅಥವಾ ಸ್ವಸ್ಥತೆ (3)
8.ಕೊನೆಗೆ ವೇಗವಿದ್ದರೆ ಈ ಸಂಭ್ರಮ! (3)
10.ಬೇರೆಯ ದೇಹವಿದು (4)
11.ಮಜದಲ್ಲಿರುವ ಕಾಮ ಕಾಣಿಸಿದನೇ? (4)
13.ವ್ಯವಸಾಯಗಾರ ತೋಡಿಕೊಂಡಿರುವ ದುಃಖ (3)
14.ನೆರವಿಗೊಂದು ಪರ್ಯಾಯ ಪದ (3)
16.ಮಾನಿನಿಯ ಮೇಲೇ ಸಂದೇಹ! (3)
18.ಕನ್ನ ಹಾಕಿದವನು ಕದ್ದೊಯ್ದ ಚಾಳೀಸು (4)
19.ಅರಗಿನ ಮನೆಯಿದು (4)

ಮೇಲಿಂದ ಕೆಳಕ್ಕೆ
1.ಕ್ಷೌರಿಕನ ಸಲಕರಣೆಗಳ ಚೀಲ (3)
2.ಕೊಡದಂತಿರುವ ದೊಡ್ಡ ಪಾತ್ರೆ (3)
4.ಪುಳಕವಿಲ್ಲಿ ತಿರುವುಮುರುವಾಗಿದೆ (3)
6.ನಮ್ಮ ನಾಡ ಹಬ್ಬ (3)
7.ಗಮನವಿಟ್ಟು ಬರುವುದು! (4)
8.ಆದಾಯ ಮತ್ತು ಖರ್ಚು (4)
9.ಗಂಡು ಕೋಳಿ ಇಲ್ಲಿದೆ (2)
10.ಜೂಜಿಗೆ ಒಡ್ಡಿದ ವಸ್ತ್ರ (2)
12.ಚಲನ ಚಿತ್ರವನ್ನು ಹೀಗೂ ಹೇಳುತ್ತಾರೆ (3)
15.ಹೊಳೆಯನ್ನು ದಾಟುವ ಸ್ಥಳ (3)
16.ಗುರು ಹೇಳಿದಾಗಲೇ ಈ ಪರಿಚಯ! (3)
17.ತಪ್ಪಿಸಿಕೊಳ್ಳುವ ಮಾರ್ಗ (3)



6276ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಾದ್ವಾರ 3.ಅವನತಿ
5.ನವದಂಪತಿ 7.ನಸರಿ
9.ಕಾಮನೆ 11.ಕದಪು
13.ಮರಣಕಾಲ 15.ಬಂದಿಖಾನೆ
16.ಮಿಲಾಕತ್ತು

ಮೇಲಿಂದ ಕೆಳಕ್ಕೆ:
1.ಮತದಾನ 2.ರಸನ
4.ಗರತಿ 6.ದಂಡನೆ
8.ಸತ್ವ 9.ಕಾರಣ
10.ಕಂದ 12.ಪುರಸತ್ತು
13.ಮಡದಿ 14.ಲಕುಮಿ

ಸುಡೊಕು 6661

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

			4		3		6	
	9				2			5
			5		8	7	2	
		9		3				7
	3				6		5	
8		6		4		2		3
		5		2				4
3						5		
	8	2		5			7	

6660 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಪ್ರಿಯವಾದ ಸುಳ್ಳು

ನುಡಿ ಬೆಳಗು
ವಾಸುದೇವ ನಾಡಿಗ್

ಓ ಹೆನ್ರಿಯ ದಿ ಲಾಸ್ಟ್ ಲೀಫ್ ಸದಾ ಕಾಡುವ ಕಥೆ. ಕಿಟಕಿಯಲ್ಲಿ ಕಾಣುವ ಹಸಿರೆಲೆಯನ್ನು ನೋಡುತ್ತಲೇ ಬಾಳಿನತ್ತ ಮನಸ್ಸು ಮಾಡುವ ಆ ಕಥನ ಅಸಾಧಾರಣವಾದುದು. ಅದೆಷ್ಟೊ ಸಂಗತಿಗಳು ಆಸ್ಪತ್ರೆಗಳ ರುಗ್ಣ ಶಯ್ಯೆಯಲ್ಲಿ ಇದ್ದೇ ಬಾಳಿನತ್ತ ಕೊಂಡೊಯ್ಯುತ್ತದೆ. ಇಲ್ಲಿ ಕೂಡ ಆದದ್ದು ಅದೇ. ಇಬ್ಬರು ಹೆಚ್ಚು ಕಡಿಮೆ ಒಂದೇ ವಯಸ್ಸಿನ ಬೇರೆ ಬೇರೆ ಕಾಯಿಲೆಗಳಿಗೆ ತುತ್ತಾದ ಜೀವಗಳವು. ಅಕ್ಕ ಪಕ್ಕದ ಹಾಸಿಗೆ ಅಷ್ಟೇ. ಒಬ್ಬ ತೀರಾ ಕಿಟಕಿಯ ಹತ್ತಿರದಲ್ಲೇ ಇದ್ದರೆ ಇನ್ನೊಬ್ಬ ಅವನ ಪಕ್ಕದ ತೆಳು ಪರದೆಯ ಆಚೆ. ಎಚ್ಚರ ಆದಾಗೆಲ್ಲ ಇಬ್ಬರೂ ಸಣ್ಣಗೆ ಮಾತಾಡಿಕೊಳ್ಳುತ್ತಿದ್ದರು. ಕಿಟಕಿಯ ಪಕ್ಕದ ವ್ಯಕ್ತಿ ಕಿಟಕಿಯಾಚೆಯ ಕೆಲವು ಚಿತ್ರಗಳನ್ನು ವಿವರಿಸುತ್ತಿದ್ದ. ಹಾಸಿಗೆ ಬಿಟ್ಟು ಏಳೋದು ಇರಲಿ ಮಗ್ಗುಲಾಗಲೂ ಆಗದ ಪಕ್ಕದ ವ್ಯಕ್ತಿ ಎಲ್ಲ ಕೇಳಿಸಿಕೊಂಡು ಹೂಂ ಗುಟ್ಟುತ್ತ ಮಲಗುತ್ತಿದ್ದ.

ಕಿಟಕಿಯ ಪಕ್ಕದ ವ್ಯಕ್ತಿ ಹೊರಗೆ ಕಾಣುತ್ತಿದ್ದ ಆಕಾಶ, ಹಕ್ಕಿ, ಮೋಡ, ಸಾಗುವ ವಿಮಾನಗಳು, ಕಟ್ಟಡಗಳ ಗೋಡೆಗಳ ರಚನೆ, ದೂರದ ಗಿರಿ–ಮರ, ಮನುಷ್ಯರ ಓಡಾಟ... ಎಲ್ಲವನ್ನೂ ಬಹಳ ಸಂಭ್ರಮದಿಂದ ವಿವರಿಸುತ್ತಿದ್ದ. ಇದನ್ನು ಕೇಳುತ್ತಲೇ ಈ ಬದಿಯ ವ್ಯಕ್ತಿಗೆ ಏನೋ ಹುರುಪು. ತಾನೂ ನಾಳೆ ಇಲ್ಲಿಂದ ಎದ್ದು ಹೊರಗೆ ಹೋಗುವ ಲೋಕವನ್ನು ಕಾಣುವ ಭರವಸೆಗಳಲ್ಲೇ ಹಗಲು ಇರುಳು ಸಾಗಾಟ. ಹೊರಗೆ ಹೇಗಿದೆಯೋ ಒತ್ತಟ್ಟಿಗೆ ಇರಲಿ. ಅವುಗಳನ್ನು ವಿವರಿಸುವ ಪಕ್ಕದ ವ್ಯಕ್ತಿಯ ಸಡಗರವೇ ಭಿನ್ನ. ಇವರಿಬ್ಬರನ್ನು ಕಾಯುತ್ತಿದ್ದ ನರ್ಸ್‌ಗೆ ಈ ಘಟನೆ ಒಂದು ವಿಸ್ಮಯವಾದರೂ ಅವಳು ಮೌನಿ. ದೂರದಿಂದಲೇ ಇವರಿಬ್ಬರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದಳು.

ಆ ರಾತ್ರಿ ಹಿತಕರವಾಗಿರಲಿಲ್ಲ. ಕಿಟಕಿಯ ಪಕ್ಕದ ವ್ಯಕ್ತಿ ಅಚಾನಕ್ ಹೃದಯ ಸ್ತಂಭನದಿಂದ ಕಣ್ಣುಮುಚ್ಚಿದ. ಅತೀವ ನೋವಿನ ಸಂಗತಿ ಅದು. ಪಕ್ಕದ ವ್ಯಕ್ತಿ ತನ್ನ ಹಾಸಿಗೆಯನ್ನು ಕಿಟಕಿಯ ಪಕ್ಕಕ್ಕೆ ಸ್ಥಳಾಂತರಿಸಲು ವಿನಂತಿ ಮಾಡಿಕೊಂಡ. ನರ್ಸ್ ಮಾಡಿದ್ದೂ ಅದನ್ನೇ. ಈ ವ್ಯಕ್ತಿ ಕಿಟಕಿಯಾಚೆ ನೋಡಿದರೆ ಕಂಡದ್ದು ಬರೀ ಕಾಂಕ್ರೀಟ್ ಗೋಡೆ. ನಿತ್ರಾಣ ಮರಗಳು. ನಿಸ್ತೇಜ ವಾತಾವರಣ ಮತ್ತು ಖಾಲಿ ಬರೀ ಖಾಲಿ.

ಆದದ್ದು ಹೀಗೆ ಅಂತ ನರ್ಸ್ ವಿವರಣೆ. ಈ ಹೊರಗಿನ ಕಥೆಗಳನ್ನು ಹೇಳುತ್ತಿದ್ದ ವ್ಯಕ್ತಿ ಹುಟ್ಟು ಕುರುಡ. ಎಂದೂ ಯಾವತ್ತೂ ಏನನ್ನೂ ನೋಡದ ಜೀವ. ಆದರೂ ಎಲ್ಲವನ್ನೂ ಕಂಡವನ ಹಾಗೆ ಕನಸುಗಳನ್ನು ಚಿತ್ರಗಳನ್ನು ಕಟ್ಟಿಕೊಡುತ್ತ ಪಕ್ಕದ ವ್ಯಕ್ತಿಗೆ ಲವಲವಿಕೆ ತುಂಬುತ್ತಿದ್ದ. ತನ್ನ ಕತ್ತಲೆಗೂ ಬೆಳಕನ್ನು ಹಚ್ಚುವ ಮೂಲಕ ಬೆಳಕಿದ್ದವನಿಗೆ ಕತ್ತಲನ್ನು ಮರೆಯಲು ಪ್ರೇರಣೆ ನೀಡುತ್ತಿದ್ದ ಈ ಇಂತಹ ಬಾಳಿಗೆ ಹೇಳುವುದಾದರೂ ಏನು? ಸುಮ್ಮನೆ ಕೂತು ಯೋಚಿಸಬೇಕಷ್ಟೇ. ಅಪ್ರಿಯವಾದ ಸತ್ಯ ಅನೇಕ ಸಲ ಪ್ರಾಣವನ್ನೇ ತೆಗೆಯಬಲ್ಲುದಾದರೆ ಸಂದರ್ಭೋಚಿತ ಪ್ರಿಯವಾದ ಸುಳ್ಳು ಇಲ್ಲಿ ಬಾಳನ್ನೇ ಮೇಲೆತ್ತಬಲ್ಲದು. ದಟ್ಟ ನಿರಾಶೆಯನ್ನು ಹೊತ್ತುಕೊಡುವ ಕಟುವಾಸ್ತವದ ವಿವರಣೆಯನ್ನು ಕಿಟಕಿಯ ಪಕ್ಕದ ವ್ಯಕ್ತಿ ಕೊಡುತ್ತ ನಿಟ್ಟುಸಿರು ಬಿಡುತ್ತಿದ್ದರೆ, ಈಗಾಗಲೇ ಹೊರಳಲು ಸಾಧ್ಯವಾಗದಷ್ಟು ಹಾಸಿಗೆ ಹಿಡಿದಿದ್ದ ಆ ವ್ಯಕ್ತಿ ಕುರುಡನಿಗಿಂತ ಮುಂಚೆಯೇ ಮುಗಿದೇ ಹೋಗುತ್ತಿದ್ದನೇನೋ.

ಕಾಣದಿದ್ದರೂ ಕಂಡಂತೆ ಕಲ್ಪಿಸಿ ವರ್ಣಿಸಿದಾಗ ಕಂಡ ಬದುಕಿಗೆ ಹೊಸ ಕಣ್ಣು ಹಚ್ಚಬಲ್ಲದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

07 ಜನವರಿ 2026 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಚತುರ್ಥಿ ಗಂ 6-53 ನಂತರ ಪಂಚಮಿ ಗಂ 30-34 ನಕ್ಷತ್ರ: ಮಘ ಗಂ 11-57 ಯೋಗ: ಆಯುಷ್ಮಾನ್ ಗಂ. 18-34 ಕರಣ: ಬಾಲವ ಗಂ. 6-53 ಧನು ಮಾಸದ 23 ನೇ ದಿನ. ಮಳೆ ನಕ್ಷತ್ರ : ಪೂರ್ವಾಷಾಢ 3 ನೇ ಪಾದ.
ರಾಹುಕಾಲ : ಮಧ್ಯಾಹ್ನ 12-00 - 01-30 ಸೂರ್ಯೋದಯ : 06-59 ಸೂರ್ಯಾಸ್ತ : 06-14 ಮುಸ್ಲಿಂ ದಿನಾಂಕ : 17 ರಜಬ್ ಅದೃಷ್ಟ ಸಂಖ್ಯೆ : 11, 3

ಮೇಷ: ಸತ್ಯದ ಹಾದಿಗೆ ಯಾವಾಗಲೂ ಅಡೆತಡೆಗಳಿರುತ್ತವೆ ಎಂಬುದನ್ನು ಮರೆಯದಿರಿ. ಆದರೆ ಜಯವೂ ಇರುವುದು ಎಂಬುದನ್ನು ಅರಿಯಿರಿ. ನಿಮ್ಮ ನೆಚ್ಚಿನ ಕಲಾವಿದರನ್ನು ಭೇಟಿಯಾಗಲು ಸ್ನೇಹಿತರು ಸಹಾಯ ಮಾಡಲಿದ್ದಾರೆ.

ವೃಷಭ: ಬಹು ದಿನಗಳ ಕಠಿಣ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಅನುಕೂಲ ಮತ್ತು ಮನಸ್ಸಿಗೆ ಸಂತೋಷ ಉಂಟಾಗುವುದು. ಮನೆಯ ಬಗ್ಗೆ ಹೆಚ್ಚು ಗಮನ ನೀಡಬೇಕಾಗುವುದು.

ಮಿಥುನ: ನಿರ್ಮಾಣ ಕಾರ್ಯದಂಥ ಯೋಜನೆಗಳು ನಿರಾತಂಕವಾಗಿ ಮುಂದುವರಿಯಲಿದೆ. ಬದಲಾವಣೆ ಬಯಸಿದಲ್ಲಿ ಕಾಯುವುದು ಆವಶ್ಯ. ವೈದ್ಯ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಪ್ರಗತಿ ಕಂಡು ಬರುವುದು.

ಕರ್ಕಾಟಕ: ಹಣಕಾಸಿನ ವಿಚಾರದಲ್ಲಿ ಭವಿಷ್ಯದ ಕುರಿತು ಯೋಚಿಸಿ ನಿರ್ಧಾರ ಕೈಗೊಳ್ಳುವುದರಿಂದ ಮುಂದಿನ ದಿನಗಳು ನೆಮ್ಮದಿದಾಯಕವಾಗಿ ಇರುವುದು. ಪಾಲುದಾರರಿಂದ ಮೋಸ ಹೋಗುವ ಸಾಧ್ಯತೆಯು ಇರಲಿದೆ.

ಸಿಂಹ: ವಿಶೇಷ ಕಾರಣದಿಂದಾಗಿ ಮನೆಗೆ ಬರುತ್ತಿರುವ ಮಗಳಿಗೆ ಪ್ರಿಯವಾಗುವ ಖಾದ್ಯಗಳನ್ನು ತಯಾರು ಮಾಡುವಿರಿ. ಮಗಳ ಮಾತಿಗೆ ಬೆಲೆ ಕೊಡಿ. ಗುತ್ತಿಗೆ ವ್ಯವಹಾರಗಳಲ್ಲಿ ಎಡವಬಹುದು, ಜಾಗೃತರಾಗಿರಿ.

ಕನ್ಯಾ: ಕೆಲಸದ ಮೇಲೆ ಗಮನ ಕಡಿಮೆಯಾದಲ್ಲಿ ಸಿಗಬೇಕಾದ ಅವಕಾಶಗಳು ಬೇರೆಯವರ ಪಾಲಾಗಲಿವೆ. ಆದ್ದರಿಂದ ಸುತ್ತಲಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ ವ್ಯವಹರಿಸಿ. ಎಲ್ಲಾ ಕಾರ್ಯಗಳು ಶುಭವಾಗುವುದು.

ತುಲಾ: ನೀವು ಅಂದುಕೊಂಡಂತೆ ಪ್ರಯಾಣ ಸುಗಮವಾಗಿರುವುದಿಲ್ಲ. ಆದ್ದರಿಂದ ರಾಹುಕಾಲದ ಬಳಿಕ ಸಂಚಾರ ಮಾಡಿ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿವೆ.

ವೃಶ್ಚಿಕ: ಉಪಾಹಾರ ಮಂದಿರ, ಐಸ್‌ಕ್ರೀಮ್, ತಂಪು ಪಾನೀಯದ ಅಂಗಡಿಯವರಿಗೆ ಈ ದಿನವು ಸುಗ್ಗಿ ಹಬ್ಬದಂತಾಗುವುದು. ಆಯುರ್ವೇದ ಔಷಧಿ ಸೇವನೆಯಿಂದ ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು.

ಧನು: ಈ ದಿನ ಗ್ರಹಗಳು ಪೂರಕವಾಗಿವೆ. ನಿಮ್ಮಿಚ್ಛೆಯಂತೆ ಚಟುವಟಿಕೆಗಳು ನಡೆಯುವುದು. ಈ ಫಲವನ್ನು ಸದುಪಯೋಗಪಡಿಸಿಕೊಳ್ಳಿರಿ. ಮಕ್ಕಳು ಮಳೆಯಲ್ಲಿ ನೆನೆಯದಂತೆ ನೋಡಿಕೊಳ್ಳುವುದೇ ಸವಾಲಾಗುವುದು.

ಮಕರ: ವಿವಾಹ ಸಂಬಂಧ ನಿಮ್ಮ ಮನೋಸಂಕಲ್ಪವನ್ನು ಈಡೇರಿಸಿಕೊಳ್ಳಲು ತಾಯಿಯ ಮತ್ತು ಅಣ್ಣಂದಿರ ಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗುವಿರಿ. ಕುಟುಂಬದಲ್ಲಿ ನಡೆದ ದುರ್ಘಟನೆಗಳಿಂದ ಮನಸ್ಸು ದುರ್ಬಲವಾಗಬಹುದು.

ಕುಂಭ: ಬಹುಜನರಲ್ಲಿ ಮಾಡಿದ ಸಾಲಗಳು ತೀರಿದ್ದರಿಂದ ಮನೆಯಲ್ಲಿ ನೆಮ್ಮದಿಯ ವಾತಾವರಣ ಸೃಷ್ಟಿಯಾಗಲಿದೆ. ವ್ಯವಸಾಯಗಾರರಿಗೆ ಹೆಚ್ಚಿನ ಬೆಳೆ ಕೈ ಸೇರುವ ನಿರೀಕ್ಷೆ ಇರುವುದು. ಗುರುವಿನ ಮಾರ್ಗದರ್ಶನ ಪಡೆಯುವಿರಿ.

ಮೀನ: ಉದ್ಯೋಗ ಬದಲಾವಣೆ ವಿಚಾರದಲ್ಲಿದ್ದ ಗೊಂದಲವನ್ನು ಮಾರ್ಗದರ್ಶಕರ ಸೂಚನೆಯಂತೆ ನಿವಾರಿಸಿಕೊಳ್ಳಿರಿ. ಅಪರಿಚಿತರೊಬ್ಬರ ಅನವಶ್ಯಕವಾದ ಮಾತುಗಳು ನಿಮ್ಮ ತಾಳ್ಮೆಯನ್ನು ಕೆಡಿಸುತ್ತವೆ.

ಗುಂಡಣ್ಣ



ಷೇರುಪೇಟೆ ವಹಿವಾಟು — 85,439 ಹಿಂದಿನ ಅಂತ್ಯ | 376 | 85,063 ಇಂದಿನ ಅಂತ್ಯ



ಎನ್‌ಎಸ್‌ಇ ನಿಫ್ಟಿ — ಹಿಂದಿನ ಅಂತ್ಯ: 26,250; ಇಂದಿನ ಅಂತ್ಯ: 26,178; ದಿನದ ಕನಿಷ್ಠ: 26,124; 71

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು — 100 ಕ್ಕೆ ₹645; 12 ಕ್ಕೆ ₹94; ಮೈಸೂರು: 100 ಕ್ಕೆ ₹645

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ) — ಆರ್‌ಎಸ್‌ಎಸ್-4 ₹182; ಆರ್‌ಎಸ್‌ಎಸ್-5 ₹177; ಗುಡ್ ಲಾಟ್ ₹165

ರಾಮನಗರ ರೇಷ್ಮೆಗೂಡು — ಮಿಶ್ರತಳಿ(ಸಿ.ಬಿ) ₹411-763; ದ್ವಿತಳಿ (ಬಿ.ವಿ) ₹300-905

ಮುದ್ರೆಮನೆ ಕಾಫಿ — ಎಪಿ ₹26700; ಎಸಿ ₹14560; ಆರ್‌ಪಿ ₹16900; ಆರ್‌ಸಿ ₹9700

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ) — ಶೇಂಗಾ (ರಿಫೈನ್ಡ್) ₹1590 (1590); ಸೋಯಾ (ರಿಫೈನ್ಡ್) ₹1295 (1290); ಸೂರ್ಯಕಾಂತಿ (ರಿಫೈನ್ಡ್) ₹1510 (1495); ಪಾಮೋಲಿನ್ ₹1260 (1250)

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ) — ದೊಡ್ಡ ₹1500-2700; ಮಧ್ಯಮ ₹1000-1500; ಸಣ್ಣ ₹200-1000

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ) — ಅರಸೀಕೆರೆ ₹28600-28600; ವಿಜಯಪುರ ₹8400-9000

2025ರಲ್ಲಿ ವಾಹನ ಮಾರಾಟ ಹೆಚ್ಚಳ

ಮಾರಾಟದಲ್ಲಿ ಏರಿಕೆ ಜಿಎಸ್‌ಟಿ ದರ ಪರಿಷ್ಕರಣೆಯ ನೇರ ಪರಿಣಾಮ: ಎಫ್‌ಎಡಿಎ

ನವದೆಹಲಿ (ಪಿಟಿಐ): 2025ರಲ್ಲಿ ದೇಶದಲ್ಲಿ ವಿವಿಧ ಬಗೆಯ ವಾಹನಗಳ ರಿಟೇಲ್ ಮಾರಾಟ ಪ್ರಮಾಣವು ಶೇಕಡ 7.71ರಷ್ಟು ಹೆಚ್ಚಾಗಿದೆ ಎಂದು ಆಟೊಮೊಬೈಲ್ ಡೀಲರ್‌ಗಳ ಸಂಘಗಳ ಒಕ್ಕೂಟ (ಎಫ್‌ಎಡಿಎ) ಮಂಗಳವಾರ ತಿಳಿಸಿದೆ.

ಸೆಪ್ಟೆಂಬರ್ 22ರಿಂದ ಜಾರಿಗೆ ಬಂದ ಜಿಎಸ್‌ಟಿ ದರ ಪರಿಷ್ಕರಣೆಯು ವಾಹನ ಮಾರಾಟ ಹೆಚ್ಚಳ ಕಾಣಲು ನೆರವಾಗಿದೆ ಎಂದು ಎಫ್‌ಎಡಿಎ ಹೇಳಿದೆ.

2025ನೆಯ ಇಸವಿಯು ಎರಡು ಬಗೆಯ ಪರಿಸ್ಥಿತಿಗಳನ್ನು ಹೊಂದಿತ್ತು. ಜನವರಿಯಿಂದ ಆಗಸ್ಟ್‌ವರೆಗೆ ಮಾರುಕಟ್ಟೆಯಲ್ಲಿ ತೇಜಿ ವಾತಾವರಣ ಇರಲಿಲ್ಲ. ಆದಾಯ ತೆರಿಗೆ ಮಿತಿ ಹೆಚ್ಚಳ, ಆರ್‌ಬಿಐನಿಂದ ರೆಪೊ ದರ ಇಳಿಕೆಯ ಉತ್ತೇಜನಾ ಕ್ರಮಗಳು ಇದ್ದರೂ ಮಾರಾಟ ಹೆಚ್ಚಿರಲಿಲ್ಲ ಎಂದು ಎಫ್‌ಎಡಿಎ ಅಧ್ಯಕ್ಷ ಸಿ.ಎಸ್. ವಿಘ್ನೇಶ್ವರ ಹೇಳಿದ್ದಾರೆ.

'ಆದರೆ ಸೆಪ್ಟೆಂಬರ್‌ನಲ್ಲಿ ಜಿಎಸ್‌ಟಿ ದರ ಪರಿಷ್ಕರಣೆ ಜಾರಿಗೆ ಬಂದ ನಂತರದಲ್ಲಿ ಮಾರುಕಟ್ಟೆಯಲ್ಲಿ ಪರಿವರ್ತನೆ ಕಂಡುಬಂತು. ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ಮಾರಾಟ ಹೆಚ್ಚಳವಾಯಿತು' ಎಂದು ಅವರು ತಿಳಿಸಿದ್ದಾರೆ.

2025ರಲ್ಲಿ ದ್ವಿಚಕ್ರ ವಾಹನ, ಪ್ರಯಾಣಿಕ ವಾಹನ, ವಾಣಿಜ್ಯ ಬಳಕೆ ವಾಹನ ವಿಭಾಗಗಳಲ್ಲಿ ಇ.ವಿ. ಮಾರಾಟ ಹೆಚ್ಚಳ ಕಂಡಿದೆ. ಅಲ್ಲದೆ, ಪ್ರಯಾಣಿಕ ವಾಹನ, ವಾಣಿಜ್ಯ ಬಳಕೆ ವಾಹನ ವಿಭಾಗದಲ್ಲಿ ಸಿಎನ್‌ಜಿ ವಾಹನಗಳ ಮಾರಾಟ ಕೂಡ ಜಾಸ್ತಿ ಆಗಿದೆ ಎಂದಿದ್ದಾರೆ.

ಮುಂದಿನ ಮೂರು ತಿಂಗಳ ಅವಧಿಯಲ್ಲಿ ವಾಹನ ಮಾರಾಟವು ಹೆಚ್ಚಳ ಕಾಣಲಿದೆ ಎಂಬುದಾಗಿ ಶೇ 74.91ರಷ್ಟು ಡೀಲರ್‌ಗಳು ಭಾವಿಸಿದ್ದಾರೆ ಎಂಬುದನ್ನು ಎಫ್‌ಎಡಿಎ ನಡೆಸಿದ ಸಮೀಕ್ಷೆಯೊಂದು ತಿಳಿಸಿದೆ.

ಆರ್‌ಬಿಐ ರೆಪೊ ದರವನ್ನು ಶೇ 5.25ರ ಮಟ್ಟದಲ್ಲಿ ಇರಿಸಿರುವುದು ವಾಹನ ಖರೀದಿ ವೆಚ್ಚವನ್ನು ತಗ್ಗಿಸಿದೆ. ಫೆಬ್ರುವರಿಯಲ್ಲಿ ಮಂಡನೆ ಆಗಲಿರುವ ಕೇಂದ್ರ ಬಜೆಟ್, ಖರೀದಿಯನ್ನು ಉತ್ತೇಜಿಸುವ ಹಾಗೂ ತೆರಿಗೆಗಳ ವಿಚಾರದಲ್ಲಿ ಕೆಲವು ವಿನಾಯಿತಿಗಳನ್ನು ನೀಡುವ ರೀತಿಯಲ್ಲಿ ಇರುತ್ತದೆ ಎಂಬ ನಿರೀಕ್ಷೆಯು ಮಾರುಕಟ್ಟೆಯಲ್ಲಿದೆ ಎಂದು ಎಫ್‌ಎಡಿಎ ಪ್ರಕಟಣೆ ಹೇಳಿದೆ.



ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ರಷ್ಯಾದಿಂದ ₹15 ಲಕ್ಷ ಕೋಟಿ ಮೌಲ್ಯದ ಕಚ್ಚಾ ತೈಲ ಖರೀದಿ

ನವದೆಹಲಿ (ಪಿಟಿಐ): ಉಕ್ರೇನ್ ಮತ್ತು ರಷ್ಯಾ ನಡುವೆ ಸಮರ ಆರಂಭವಾದ ನಂತರದಲ್ಲಿ ಭಾರತವು ರಷ್ಯಾದಿಂದ ಅಂದಾಜು 144 ಬಿಲಿಯನ್ ಯೂರೊ (ಸರಿಸುಮಾರು ₹15.19 ಲಕ್ಷ ಕೋಟಿ) ಮೌಲ್ಯದ ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿದೆ ಎಂದು ಯುರೋಪಿನ 'ಇಂಧನ ಮತ್ತು ಶುದ್ಧ ಗಾಳಿ ಕುರಿತ ಸಂಶೋಧನಾ ಕೇಂದ್ರ' (ಸಿಆರ್‌ಇಎ) ಅಂದಾಜು ಮಾಡಿದೆ.

ಇದೇ ಅವಧಿಯಲ್ಲಿ ಚೀನಾ ದೇಶವು ರಷ್ಯಾದಿಂದ ಅಂದಾಜು 210 ಬಿಲಿಯನ್ ಯೂರೊ ಮೌಲ್ಯದ (ಸರಿಸುಮಾರು ₹22.16 ಲಕ್ಷ ಕೋಟಿ) ಕಚ್ಚಾ ತೈಲವನ್ನು ಖರೀದಿಸಿದೆ.

ಭಾರತವು ರಷ್ಯಾದಿಂದ ಕಚ್ಚಾ ತೈಲ ಮಾತ್ರವೇ ಅಲ್ಲದೆ 18.18 ಬಿಲಿಯನ್ ಯೂರೊ (ಸರಿಸುಮಾರು ₹1.91 ಲಕ್ಷ ಕೋಟಿ) ಮೌಲ್ಯದ ಕಲ್ಲಿದ್ದಲನ್ನು ಕೂಡ ಖರೀದಿಸಿದೆ.

ಚೀನಾ ಕೂಡ ರಷ್ಯಾದಿಂದ ಕಲ್ಲಿದ್ದಲು ಹಾಗೂ ಅನಿಲವನ್ನು ಖರೀದಿಸಿದೆ.

ಇದೇ ಅವಧಿಯಲ್ಲಿ ಐರೋಪ್ಯ ಒಕ್ಕೂಟವು ರಷ್ಯಾದಿಂದ ಒಟ್ಟು 218.1 ಬಿಲಿಯನ್ ಯೂರೊ (ಸರಿಸುಮಾರು ₹23.02 ಲಕ್ಷ ಕೋಟಿ) ಮೌಲ್ಯದ ಪಳೆಯುಳಿಕೆ ಇಂಧನವನ್ನು (ಕಲ್ಲಿದ್ದಲು, ತೈಲ ಮತ್ತು ಅನಿಲ) ಖರೀದಿಸಿದೆ.

ಅಡಿಕೆ ಧಾರಣೆ

ಸಾಗರ				ಶಿರಸಿ	
ಬಿಳಿಗೋಟು	30700-36521	ಹೊಸಚಾಲಿ	36289-44809	ಬೆಟ್ಟೆ	30899-53299
ಚಾಲಿ	34099-45550	ಕೆಂಪುಗೋಟು	30119-36599	ಬಿಳಿಗೋಟು	20099-41099
ಕೋಕ	33099-35099	ರಾಶಿ	53699-57499	ಚಾಲಿ	43199-51111
ರಾಶಿ	58789-58789	ತಟ್ಟಿಬೆಟ್ಟೆ	38089-57099	ಕೆಂಪುಗೋಟು	22300-41009
ಸಿಪ್ಪೆಗೋಟು	22099-22099	**ಶಿವಮೊಗ್ಗ**		ರಾಶಿ	53699-59066
ಸಿದ್ದಾಪುರ		ಬೆಟ್ಟೆ	50100-68200	**ಪುತ್ತೂರು**	
ಬಿಳಿಗೋಟು	26899-36909	ಗೊರಬಲು	19001-44444	ಕೋಕ	20000-35500
ಚಾಲಿ	40809-48899	ರಾಶಿ	42009-58909	ಹೊಸತು	26000-44500
ಕೋಕ	22900-31689	ಸರಕು	60919-96696		

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ತಿಳಿಸಿಲ್ಲ, ನೆಲಮಂಗಲ, ಬೆಂಗಳೂರು

- **ಪ್ರಶ್ನೆ: ನಾನು ಈ ಹಿಂದೆ ಖರೀದಿಸಿದ್ದ ಷೇರುಗಳನ್ನು ಇತ್ತೀಚೆಗೆ ಮಾರಾಟ ಮಾಡಿದೆ. ಬಂದ ಹಣವನ್ನು ಆನ್‌ಲೈನ್ ವ್ಯವಹಾರಗಳಲ್ಲಿ ತೊಡಗಿಸಿದೆ. ಆದರೆ ಈಗ ಈ ವ್ಯವಹಾರ ನಷ್ಟದ್ದೆಂದು ಕಂಡುಬರುತ್ತಿದೆ. ಈಗ ನನ್ನ ಸಂಪೂರ್ಣ ಅಸಲು ಸಿಗುವ ವಿಶ್ವಾಸವಿಲ್ಲ. ಆರ್ಥಿಕ ಅಪರಾಧಗಳಿಗೆ ಸಂಬಂಧಿಸಿದ ದೂರು ದಾಖಲಿಸುವ ಬಗ್ಗೆ ಕಾನೂನು ನೆರವು ಕೋರಿದ್ದೇನೆ.**

ಒಂದೆಡೆ ನನ್ನ ಅಸಲು ಅಥವಾ ಉಳಿತಾಯ ಮಾಡಿದ ಮೊತ್ತ ನಷ್ಟವಾಗಿದೆ. ಆದರೆ ಷೇರು ಮಾರಾಟದಿಂದ ಬಂದ ಲಾಭಕ್ಕೆ ತೆರಿಗೆ ಕಟ್ಟಬೇಕಾಗಿದೆ. ನಿಜವಾಗಿ ಇದರ ಅಗತ್ಯ ಇದೆಯೇ? ಯಾವುದಾದರೂ ರೀತಿಯಲ್ಲಿ ಅಸಲು ಮೊತ್ತ ಕಳೆದುಕೊಂಡ ಕಾರಣ, ಬಂದ ಲಾಭವನ್ನು ಅದರೊಡನೆ ವಜಾ ಮಾಡಲು ಹಾಗೂ ಮುಂದಿನ ವರ್ಷಕ್ಕೆ ಮುಂದೂಡಲು ಸಾಧ್ಯ ಇಲ್ಲವೇ?

ಉತ್ತರ: ನಿಮ್ಮ ಪ್ರಶ್ನೆ ಕಾನೂನು ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ನೀವು ಹಿಂದೆ ಷೇರುಗಳಲ್ಲಿ ಹೂಡಿಕೆ ಮಾಡಿ ಬಂದ ಒಟ್ಟು ಮೊತ್ತವನ್ನು ಆನ್‌ಲೈನ್ ವ್ಯವಹಾರಗಳಲ್ಲಿ ಹೂಡಿಕೆ ಮಾಡಿದ್ದೀರಿ ಎಂದು ಸ್ಪಷ್ಟಪಡಿಸಿದ್ದೀರಿ. ಆದರೆ ಪ್ರಸ್ತುತ ಆ ವ್ಯವಹಾರ ನಷ್ಟದಲ್ಲಿದ್ದು, ಅಸಲು ಕೂಡ ಸಂಪೂರ್ಣವಾಗಿ ವಾಪಸ್ಸಾಗುವ ವಿಶ್ವಾಸವಿಲ್ಲ ಎಂದು ತಿಳಿಸಿದ್ದೀರಿ. ಇದು ವಿಷಾದಕರ ಸಂಗತಿ. ಆರ್ಥಿಕ ಅಪರಾಧಗಳ ಬಗ್ಗೆ ಎಲ್ಲರೂ ಜಾಗೃತರಾಗಿ ಇರಬೇಕು. ಆರ್ಥಿಕ ಅಪರಾಧಗಳಿಗೆ ಸಂಬಂಧಿಸಿದಂತೆ ದೂರು ದಾಖಲಿಸುವುದನ್ನು ನೀವು ಪರಿಗಣಿಸಿರುವುದು ಸರಿಯಾದ ಕ್ರಮ. ಆದರೆ ತೆರಿಗೆ ವಿಷಯದಲ್ಲಿ ಕಾನೂನು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಗಮನಿಸಬೇಕು.

ಆದಾಯ ತೆರಿಗೆ ಕಾಯ್ದೆಯ ಪ್ರಕಾರ, ನೀವು ಷೇರುಗಳನ್ನು ಮಾರಾಟ ಮಾಡಿದ ಸಮಯದಲ್ಲಿ ಲಭಿಸಿದ ಲಾಭವು ತೆರಿಗೆಗೆ ಒಳಪಡುವ ಆದಾಯವಾಗುತ್ತದೆ. ನಂತರ ಆ ಹಣವನ್ನು ಬೇರೆ ವ್ಯವಹಾರಗಳಲ್ಲಿ ಹೂಡಿಕೆ ಮಾಡಿ ನಷ್ಟ ಅನುಭವಿಸಿದ್ದೀರಿ ಎಂಬ ಕಾರಣಕ್ಕೆ, ಮೊದಲ ವ್ಯವಹಾರದಲ್ಲಿ ಉಂಟಾದ ಲಾಭದ ಮೇಲಿನ ತೆರಿಗೆ ಬಾಧ್ಯತೆ ಕಾನೂನಿನ ಪರಿಧಿಯಲ್ಲಿ ರದ್ದು ಆಗುವುದಿಲ್ಲ. ಅಂದರೆ, ಷೇರು ಮಾರಾಟದಿಂದ ದೊರೆತ ಬಂಡವಾಳ ವೃದ್ಧಿಯನ್ನು ಅದೇ ವರ್ಷದ ಆದಾಯವಾಗಿ ಪರಿಗಣಿಸಲಾಗುತ್ತದೆ ಮತ್ತು ನಿಯಮಾನುಸಾರ ತೆರಿಗೆ ಪಾವತಿಸಬೇಕಾಗುತ್ತದೆ. ಯಾವುದಾದರೂ ತೆರಿಗೆ ವಿನಾಯಿತಿ ಇದ್ದರೆ (ಉದಾಹರಣೆಗೆ, ದೀರ್ಘಾವಧಿ ಬಂಡವಾಳ ಲಾಭ ₹1.25 ಲಕ್ಷದ ತನಕ ವಿನಾಯಿತಿಗೆ ಒಳಪಡುತ್ತದೆ) ಅದನ್ನು ಪಡೆದುಕೊಳ್ಳಬಹುದು. ನಂತರದ ಹಂತದಲ್ಲಿ ಆಗುವ ಲಾಭ-ನಷ್ಟವನ್ನು, ತೆರಿಗೆ ಕಾಯ್ದೆಯ ವ್ಯಾಪ್ತಿಯ ಅಡಿ ಪರಿಗಣಿಸುವ ಅವಕಾಶ ಇಲ್ಲ. ಅದು ಪ್ರತ್ಯೇಕ ವಿಚಾರವಾಗುತ್ತದೆ. ಅದಕ್ಕೂ ನಿಮ್ಮ ಮೂಲ ಹೂಡಿಕೆಗೂ ಯಾವುದೇ ಸಂಬಂಧವಿಲ್ಲ.

ನೀವು ಅನುಭವಿಸಿದ ನಷ್ಟವು ನಿರ್ದಿಷ್ಟ ವ್ಯಾಪಾರ-ವ್ಯವಹಾರಗಳಿಂದ ಆಗಿದ್ದಿದ್ದರೆ, ಅದನ್ನು ಅದೇ ವರ್ಷದ ಅಥವಾ ಮುಂದಿನ ವರ್ಷಗಳ ಲಾಭದೊಡನೆ ವಜಾ ಮಾಡಿಕೊಳ್ಳಲು ಮತ್ತು ಕೆಲವು ಸಂದರ್ಭಗಳಲ್ಲಿ ಮುಂದೂಡಲು ಅವಕಾಶವಿದೆ. ಆದರೆ ಆನ್‌ಲೈನ್ ವ್ಯವಹಾರಗಳು ವಂಚನೆ, ಅಕ್ರಮ ಹೂಡಿಕೆ ಅಥವಾ ಮಾನ್ಯವಲ್ಲದ ಸ್ಕೀಂಗಳಿಗೆ ಸಂಬಂಧಪಟ್ಟಿದ್ದರೆ, ಆ ನಷ್ಟವನ್ನು ತೆರಿಗೆ ಲೆಕ್ಕದಲ್ಲಿ ಸರಿದೂಗಿಸಲು ಅವಕಾಶ ಇಲ್ಲ. ಮಾರಾಟ ಮಾಡಿದ ಷೇರುಗಳಿಗೆ ಸಮರ್ಪಕವಾಗಿ ತೆರಿಗೆ ಲೆಕ್ಕ ಹಾಕಲು ತೆರಿಗೆ ಸಲಹೆ ಪಡೆದುಕೊಳ್ಳಿ ಹಾಗೂ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ಗಮನಹರಿಸಿ. ಇಂತಹ ವಿಚಾರದಲ್ಲಿ ನಮ್ಮ ಹತ್ತಿರದವರನ್ನು ಇನ್ನಷ್ಟು ಜಾಗರೂಕರನ್ನಾಗಿ ಮಾಡುವುದು ಅತ್ಯಂತ ಅಗತ್ಯ.

ಸಂತೋಷ್ ಕೆ., ಉಡುಪಿ

- **ಪ್ರಶ್ನೆ: ನಾನು ಖಾಸಗಿ ವಲಯದ ನೌಕರ. ಎನ್‌ಪಿಎಸ್‌ನಲ್ಲಿ ತಿಂಗಳಿಗೆ ₹3000 ಹೂಡಿಕೆ ಮಾಡುತ್ತಿದ್ದೇನೆ. ಅದರ ಮೊತ್ತ ಈಗ ಕೆಲವು ಲಕ್ಷಗಳಾಗಿರಬಹುದು. ನನ್ನ ನಿವೃತ್ತಿಗೆ ಇನ್ನೂ ಹದಿನೈದು ವರ್ಷ ಇದೆ. ನಿವೃತ್ತಿಯ ನಂತರ ಎನ್‌ಪಿಎಸ್ ಹಣವನ್ನು ಬಳಸಿ ಆ್ಯನ್ಯುಟಿ ಖರೀದಿಸಬೇಕು, ಆಗ ಮಾತ್ರವೇ ಪಿಂಚಣಿ ಸಿಗುತ್ತದೆ ಎಂದು ಓದಿದ್ದೇನೆ. ವಾಸ್ತವದಲ್ಲಿ ಎನ್‌ಪಿಎಸ್ ಯೋಜನೆಯು ಪಿಂಚಣಿಯನ್ನು ನೀಡುವುದಿಲ್ಲವೇ? ಆ್ಯನ್ಯುಟಿ ಖರೀದಿಸಿದರೆ ಮಾತ್ರವೇ ಪಿಂಚಣಿ ಸಿಗುತ್ತದೆಯೆ? ನನಗೆ ವಿವರ ಕೊಡಿ.**

ಉತ್ತರ: ಎನ್‌ಪಿಎಸ್ ದೀರ್ಘಾವಧಿಯ ಉಳಿತಾಯ ಯೋಜನೆ, ಇದನ್ನು ನೇರವಾಗಿ ಪಿಂಚಣಿ ನೀಡುವ ಯೋಜನೆ ಎಂದು ಪರಿಗಣಿಸಲಾಗದು. ಈ ಯೋಜನೆಯ ಮೂಲ ಉದ್ದೇಶ ವ್ಯಕ್ತಿ ತನ್ನ ಉದ್ಯೋಗದ ಅವಧಿಯಲ್ಲಿ ಕ್ರಮಬದ್ಧವಾಗಿ ಉಳಿತಾಯ ಮಾಡಿ, ನಿವೃತ್ತಿಯ ವೇಳೆಗೆ ಸಾಕಷ್ಟು ದೊಡ್ಡ ಮೊತ್ತವನ್ನು ಸಂಗ್ರಹಿಸಬೇಕು ಎನ್ನುವುದು. ಆ ಮೊತ್ತವನ್ನು ನಿವೃತ್ತಿಯ ನಂತರ ಪಿಂಚಣಿಯಾಗಿ ಪರಿವರ್ತಿಸುವ ವ್ಯವಸ್ಥೆಯನ್ನು ಎನ್‌ಪಿಎಸ್ ಒದಗಿಸುತ್ತದೆ. ಎನ್‌ಪಿಎಸ್ ನಿಧಿ ನಿರ್ವಹಿಸುವ ಸಂಸ್ಥೆಗಳು, ಪಿಂಚಣಿಯನ್ನು ತಾವೇ ಪಾವತಿಸುವುದಿಲ್ಲ. ಪಿಂಚಣಿಗೆ ಆಧಾರವಾಗುವ ನಿಧಿಯನ್ನು ಹೊಂದಲು ನೆರವಾಗುತ್ತವೆ.

ನೀವು ತಿಂಗಳಿಗೆ ₹3,000ವನ್ನು ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡುತ್ತಿದ್ದರೆ, ಆ ಹಣವನ್ನು ಎನ್‌ಪಿಎಸ್ ವ್ಯವಸ್ಥೆಯ ಅಡಿ ವಿವಿಧ ಆಸ್ತಿ ವರ್ಗಗಳಲ್ಲಿ ತೊಡಗಿಸಲಾಗುತ್ತದೆ. ಇದರಲ್ಲಿ ಈಕ್ವಿಟಿ, ಕಾರ್ಪೊರೇಟ್ ಬಾಂಡ್‌ಗಳು ಹಾಗೂ ಸರ್ಕಾರಿ ಬಾಂಡ್‌ಗಳು ಪ್ರಮುಖವಾಗಿವೆ.

ನೀವು 60 ವರ್ಷ ವಯಸ್ಸಿನಲ್ಲಿ ನಿವೃತ್ತಿಗೆ ಬಂದಾಗ, ಎನ್‌ಪಿಎಸ್ ಖಾತೆಯಲ್ಲಿರುವ ಒಟ್ಟು ಮೊತ್ತವನ್ನು ನಿರ್ದಿಷ್ಟ ನಿಯಮಗಳ ಪ್ರಕಾರ ಬಳಸಬೇಕು. ಪ್ರಸ್ತುತ ನಿಯಮಗಳಂತೆ, ಒಟ್ಟು ಮೊತ್ತದ ಗರಿಷ್ಠ ಶೇ 60ರವರೆಗೆ ನಿವೃತ್ತಿಯ ಸಮಯದಲ್ಲಿ ಒಟ್ಟಿಗೇ ಹಿಂಪಡೆಯಲು ಅವಕಾಶವಿದ್ದು, ಈ ಭಾಗ ಸಾಮಾನ್ಯವಾಗಿ ತೆರಿಗೆ ಮುಕ್ತವಾಗಿರುತ್ತದೆ. ಉಳಿದ ಶೇ 40ರಷ್ಟು ಮೊತ್ತವನ್ನು ಕಡ್ಡಾಯವಾಗಿ ಆ್ಯನ್ಯುಟಿ ಯೋಜನೆಗೆ ಬಳಸಬೇಕು.

ನೀವು ಆ್ಯನ್ಯುಟಿ ಯೋಜನೆಯನ್ನು ಪಿಎಫ್‌ಆರ್‌ಡಿಎ ಮಾನ್ಯತೆ ಪಡೆದ ಸಂಸ್ಥೆಗಳಿಂದ ಖರೀದಿಸಿದ ನಂತರವೇ ಪಿಂಚಣಿ ಆರಂಭವಾಗುತ್ತದೆ. ಆ್ಯನ್ಯುಟಿ ಎಂದರೆ, ನೀವು ಒಮ್ಮೆ ಹೂಡಿದ ಮೊತ್ತದ ಆಧಾರದಲ್ಲಿ (ಶೇ 40ರ ಮೊತ್ತ) ನಿಯಮಿತ ಪಿಂಚಣಿ ಆದಾಯ ಪಡೆಯುವ ವ್ಯವಸ್ಥೆ. ನಿಮಗೆ ಸಿಗುವ ಪಿಂಚಣಿಯ ಪ್ರಮಾಣವು ಆ್ಯನ್ಯುಟಿ ದರ, ನಿವೃತ್ತಿಯ ಸಮಯದ ವಯಸ್ಸು ಮತ್ತು ನೀವು ಆಯ್ಕೆ ಮಾಡುವ ಯೋಜನೆಯ ಸ್ವರೂಪದ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ, ಎನ್‌ಪಿಎಸ್ ಅನ್ನು ನೇರ ಪಿಂಚಣಿ ಯೋಜನೆ ಎಂದು ನೋಡುವುದಕ್ಕಿಂತ, ನಿವೃತ್ತಿಯ ನಂತರ ಸ್ಥಿರ ಆದಾಯಕ್ಕೆ ದಾರಿ ಮಾಡಿಕೊಡುವ ಆರ್ಥಿಕ ಭದ್ರತಾ ವ್ಯವಸ್ಥೆ ಎಂದು ಅರ್ಥಮಾಡಿಕೊಳ್ಳುವುದು ಸೂಕ್ತ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ನಿಧನ

ಲೇಟ್ ಕೆ.ಸಿ. ಯಲ್ಲಾರೆಡ್ಡಿ ಅವರ ಧರ್ಮಪತ್ನಿ ಆದ
ರತ್ನಮ್ಮ
ಅವರು ದಿನಾಂಕ: 06-01-2026 ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ, ಇವರ ಅಂತ್ಯಕ್ರಿಯೆಯನ್ನು ದಿನಾಂಕ 07-01-2026 ರಂದು ಮಧ್ಯಾಹ್ನ 2 ಗಂಟೆಗೆ ಕಿತ್ತಗನೂರು ಗ್ರಾಮದಲ್ಲಿ ನೆರವೇರಿಸಲಾಗುವುದು.
: ಇಂತಿ ದುಃಖತಪ್ತರು :
ಲೇಟ್ ಕೆ.ಸಿ. ಯಲ್ಲಾರೆಡ್ಡಿ ಅವರ ಸಹೋದರರು ಹಾಗೂ ಕುಟುಂಬದವರು.
#201, ರೇಣುಕಾ ನಿಲಯ ಕಿತ್ತಗನೂರು, ಬೆಂಗಳೂರು.

ನಿಧನ

ಶ್ರೀ ಎಂ.ಮಾರಪ್ಪನವರು
ಮಾಲೀಕರು, ಕಿರಣ್ ಟ್ರೇಡರ್ಸ್,
ಸಿಂಧ್ಯಾ ಸನ್‌ಶೈನ್ ಅಪಾರ್ಟ್‌ಮೆಂಟ್ಸ್,
ಮಾಗಡಿ ರಸ್ತೆ, ವಿಜಯನಗರ,
ಬೆಂಗಳೂರು-560 040.
ನಿಧನ-05/01/26, 7.14 ಗಂಟೆಗೆ.
ಅಂತಿಮ ದರ್ಶನ-07/01/26
ಬೆಳಿಗ್ಗೆ 9.30 ಗಂಟೆಯಿಂದ
ಸ್ಥಳ: ಸಿಂಧ್ಯಾ ಸನ್‌ಶೈನ್ ಅಪಾರ್ಟ್‌ಮೆಂಟ್ಸ್
ಅಂತ್ಯಸಂಸ್ಕಾರ-07/01/26
ಮಧ್ಯಾಹ್ನ 3.00 ಗಂಟೆಗೆ.
ಸ್ಥಳ: ಹೊಸಹಳ್ಳಿ ರುದ್ರಭೂಮಿ
ವಿಜಯನಗರ, ಬೆಂಗಳೂರು.
* ಕಿರಣ್ – 9448484247
* ಉಮೇಶ್– 9448709222

ಮುಂಬೈ ಧಾರಣೆ (ಶೇಂಗಾ)

06-01-2026	
ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಪಾಮ್ ವಾರದ ಡೆಲಿವರಿ	1258 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1435)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,36,000 (1,35,500)
ಬೆಳ್ಳಿ ಕೆ.ಜಿಗೆ	2,43,200 (2,37,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಇರಾನ್ ಪ್ರತಿಭಟನೆ ಸಾವಿನ ಸಂಖ್ಯೆ 35ಕ್ಕೆ

ದುಬೈ (ಎಪಿ): ಇರಾನ್‌ನಲ್ಲಿ ಸರ್ಕಾರದ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿದ ಪರಿಣಾಮ ಮೃತಪಟ್ಟವರ ಸಂಖ್ಯೆ 35ಕ್ಕೆ ಏರಿಕೆಯಾಗಿದೆ.

ಅಮೆರಿಕ ಮೂಲದ ಮಾನವ ಹಕ್ಕುಗಳ ಸುದ್ದಿಸಂಸ್ಥೆಯೊಂದು ಈ ಬಗ್ಗೆ ಮಾಹಿತಿ ನೀಡಿದೆ.

ಅಮೆರಿಕದ ವಿರುದ್ಧ ಒಟ್ಟಾಗಬೇಕು ಕ್ಯೂಬಾ ರಾಯಭಾರಿ ಯುವಾನ್

ನವದೆಹಲಿ (ಪಿಟಿಐ): ವೆನೆಜುವೆಲಾದಲ್ಲಿ ಅಮೆರಿಕ ನಡೆಸಿದ ಸೇನಾ ಕಾರ್ಯಾಚರಣೆಯನ್ನು ಭಾರತದಲ್ಲಿನ ಕ್ಯೂಬಾದ ರಾಯಭಾರಿ ಯುವಾನ್ ಕಾರ್ಲೋಸ್ ಮಾರ್ಸನ್ ಅಗುಲೆರಾ ಖಂಡಿಸಿದ್ದಾರೆ.

'ಅಮೆರಿಕದ ಹುಚ್ಚುತನವನ್ನು ನಿಲ್ಲಿಸಲು ಇತರ ಪ್ರಮುಖ ಶಕ್ತಿಗಳು ಒಂದಾಗಬೇಕು. ಜಗತ್ತಿನಲ್ಲಿ ಈಗ ಸಮತೋಲನ ಕಾಯ್ದುಕೊಳ್ಳುವ ಕೆಲಸ ನಡೆಯಬೇಕಿದ್ದು, ಭಾರತವು ಆ ಕೆಲಸ ಮಾಡಬೇಕು' ಎಂದು ಅವರು ಮಂಗಳವಾರ ಹೇಳಿದ್ದಾರೆ.

'ಅಮೆರಿಕವನ್ನು ಒಂಟಿಯಾಗಿ ತಡೆಯಲು ಯಾವುದೇ ದೇಶಕ್ಕೆ ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ವಿಶ್ವಸಂಸ್ಥೆ ಆ ಕೆಲಸ ಮಾಡುತ್ತದೆ ಎಂದು ನಾವು ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಎಲ್ಲ ದೇಶಗಳು ಒಗ್ಗಟ್ಟು ತೋರಿಸುವ ಸಮಯ ಬಂದಿದೆ. ಇದಕ್ಕಿರುವ ಏಕೈಕ ಮಾರ್ಗ ಅದಾಗಿದೆ' ಎಂದಿದ್ದಾರೆ.

'ವೆನೆಜುವೆಲಾದಲ್ಲಿ ನಡೆದ ಬೆಳವಣಿಗೆಯು ಜಗತ್ತಿಗೆ ಅಪಾಯಕಾರಿ ಸಂದೇಶವನ್ನು ರವಾನಿಸುತ್ತದೆ. ಒಂದು ದೇಶವು ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸುವ ಮೂಲಕ ಇನ್ನೊಂದು ದೇಶದ ಮೇಲೆ ದಬ್ಬಾಳಿಕೆ ನಡೆಸಲು ಅನುವು ಮಾಡಿಕೊಡುತ್ತದೆ' ಎಂದು ಎಚ್ಚರಿಸಿದರು.

'ಭಯೋತ್ಪಾದಕ ಕೃತ್ಯ': 'ಅಮೆರಿಕದ ಮಿಲಿಟರಿ ಆಕ್ರಮಣವು ನನ್ನ ಅಭಿಪ್ರಾಯದಲ್ಲಿ ಕ್ರಿಮಿನಲ್ ಕೃತ್ಯ. ಮಾತ್ರವಲ್ಲ, ಅದು ಭಯೋತ್ಪಾದಕ ಕೃತ್ಯವೂ ಹೌದು. ಏಕೆಂದರೆ, ಈ ಕಾರ್ಯಾಚರಣೆಯು ವಿಶ್ವಸಂಸ್ಥೆಯ ಸನ್ನದು ಮತ್ತು ಅಂತರರಾಷ್ಟ್ರೀಯ ಕಾನೂನಿನ ಎಲ್ಲಾ ತತ್ವಗಳನ್ನು ಉಲ್ಲಂಘಿಸುತ್ತದೆ. ಸಾರ್ವಭೌಮ ರಾಷ್ಟ್ರದ ವಿರುದ್ಧ ಏಕಪಕ್ಷೀಯವಾಗಿ ಕೈಗೊಂಡ ಕ್ರಮ ಇದು' ಎಂದು ಟೀಕಿಸಿದ್ದಾರೆ.

ರಾಜಕೀಯ ಪ್ರತೀಕಾರಕ್ಕೆ ಹಾದಿ ಹತ್ಯೆ: ಬಾಂಗ್ಲಾ

ಢಾಕಾ/ನವದೆಹಲಿ (ಪಿಟಿಐ): ಅವಾಮಿ ಲೀಗ್‌ನ ಆಣತಿಯಂತೆ ರಾಜಕೀಯ ಪ್ರತೀಕಾರದಿಂದ ವಿದ್ಯಾರ್ಥಿ ನಾಯಕ ಶರೀಫ್ ಉಸ್ಮಾನ್ ಹಾದಿ ಅವರನ್ನು ಹತ್ಯೆ ಮಾಡಲಾಗಿದೆ ಎಂದು ಬಾಂಗ್ಲಾ ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಶರೀಫ್

ಹಾದಿ ಹತ್ಯೆಗೆ ಸಂಬಂಧಿಸಿದಂತೆ 17 ಜನರ ವಿರುದ್ಧ ದೋಷಾರೋಪ ಹೊರಿಸಲಾಗಿದೆ ಎಂದಿದ್ದಾರೆ.

ಸಾರ್ವಜನಿಕ ಸಭೆಗಳು, ಸಾಮಾಜಿಕ ಮಾಧ್ಯಮಗಳ ಮೂಲಕ ಹಾದಿ ಅವರು ಇದೀಗ ನಿಷೇಧಕ್ಕೆ ಒಳಗಾಗಿರುವ ಅವಾಮಿ ಲೀಗ್ ಮತ್ತು ಛಾತ್ರಾ ಲೀಗ್ ವಿರುದ್ಧ ಕಟುಟೀಕೆ ಮಾಡಿದ್ದರು.

ಛಾತ್ರಾ ಲೀಗ್ ವಿದ್ಯಾರ್ಥಿ ಘಟಕವು ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ಅವಾಮಿ ಲೀಗ್ ಪಕ್ಷದ ಸಂಘಟನೆ ಆಗಿದೆ.

ಡೆನ್ಮಾರ್ಕ್ ಪ್ರಧಾನಿ ಮೆಟ್ಟ ಫ್ರೆಡರಿಕ್ಸನ್ ಎಚ್ಚರಿಕೆ

ಗ್ರೀನ್‌ಲ್ಯಾಂಡ್ ವಶಪಡಿಸಿಕೊಂಡರೆ, ನ್ಯಾಟೊ ಅಂತ್ಯ

ಕೋಪನ್‌ಹೇಗನ್ (ಎಪಿ): 'ಗ್ರೀನ್‌ಲ್ಯಾಂಡ್ ವಶಕ್ಕೆ ಪಡೆದರೆ, ಅದು ನ್ಯಾಟೊ ಸೇನಾ ಒಕ್ಕೂಟದ ಅಂತ್ಯಕ್ಕೆ ಸಮವಾಗಿರುತ್ತದೆ' ಎಂದು ಡೆನ್ಮಾರ್ಕ್ ಪ್ರಧಾನಿ ಮೆಟ್ಟ ಫ್ರೆಡರಿಕ್ಸನ್ ಹೇಳಿಕೆ ನೀಡಿದ್ದಾರೆ.

ವೆನೆಜುವೆಲಾದ ಮೇಲೆ ವಾರಾಂತ್ಯದಲ್ಲಿ ಅಮೆರಿಕ ಸೇನಾ ಕಾರ್ಯಾಚರಣೆ ನಡೆಸಿದ ಬಳಿಕ ಖನಿಜ ಸಂಪದ್ಭರಿತ ಆರ್ಕ್‌ಟಿಕ್ ದ್ವೀಪ 'ಗ್ರೀನ್‌ಲ್ಯಾಂಡ್' ಅನ್ನು ವಶಕ್ಕೆ ಪಡೆಯುವ ಕುರಿತಂತೆ ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿಕೆ ನೀಡಿದ ಬೆನ್ನಲ್ಲೇ, ಡೆನ್ಮಾರ್ಕ್ ಈ ಪ್ರತಿಕ್ರಿಯೆ ನೀಡಿದೆ.

ವೆನೆಜುವೆಲಾದ ರಾಜಧಾನಿ ಕರಾಕಸ್ ಮೇಲೆ ಶನಿವಾರ ಭಾರಿ ಪ್ರಮಾಣದಲ್ಲಿ ವಾಯುದಾಳಿ ನಡೆಸಿ, ಅಧ್ಯಕ್ಷ ನಿಕೊಲಸ್ ಮಡೂರೊ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು ಅಮೆರಿಕ ಸೇನೆಯು ಸೆರೆ ಹಿಡಿದ ಬೆಳವಣಿಗೆ ಇಡೀ ಜಗತ್ತಿನಲ್ಲಿ ಅಚ್ಚರಿ ಮೂಡಿಸಿತ್ತು. ಇದರಿಂದ ಡೆನ್ಮಾರ್ಕ್ ಹಾಗೂ ಗ್ರೀನ್‌ಲ್ಯಾಂಡ್‌ನಲ್ಲಿ ಕೂಡ ಕಳವಳ ವ್ಯಕ್ತವಾಗಿದೆ.

ಡೆನ್ಮಾರ್ಕ್‌ನ ರಾಜ್ಯಾಡಳಿತಕ್ಕೆ ಒಳಪಟ್ಟ ಗ್ರೀನ್‌ಲ್ಯಾಂಡ್ ಅರೆ ಸ್ವಾಯತ್ತ ಪ್ರದೇಶವಾಗಿದ್ದು, ನ್ಯಾಟೊದ ಭಾಗವಾಗಿದೆ.

ಫ್ರೆಡರಿಕ್ಸನ್ ಹಾಗೂ ಗ್ರೀನ್‌ಲ್ಯಾಂಡ್‌ನ ಪ್ರಧಾನಿ ಜೆನ್ಸ್ ಫ್ರೆಡರಿಕ್ ನೀಲ್‌ಸೆನ್ ಅವರು ಟ್ರಂಪ್ ಹೇಳಿಕೆಯನ್ನು ಖಂಡಿಸಿದ್ದು, ದುರಂತದ ಪರಿಣಾಮಗಳ ಕುರಿತಂತೆ ಎಚ್ಚರಿಕೆ ನೀಡಿದ್ದಾರೆ. ಯುರೋಪ್ ಒಕ್ಕೂಟದ ಹಲವು ದೇಶಗಳ ಮುಖ್ಯಸ್ಥರು ಎರಡೂ ದೇಶದ ಜೊತೆ ನಿಲ್ಲುವುದಾಗಿ ಒಗ್ಗಟ್ಟು ವ್ಯಕ್ತಪಡಿಸಿದ್ದಾರೆ.

'ಅಮೆರಿಕವು ಮತ್ತೊಂದು ನ್ಯಾಟೊ ದೇಶದ ಮೇಲೆ ದಾಳಿ ನಡೆಸಲು ಮುಂದಾದರೆ, ಎಲ್ಲವೂ ಕೊನೆಯಾಗಲಿದೆ' ಎಂದು ಮೆಟ್ಟ ಫ್ರೆಡರಿಕ್ಸನ್ ಅವರು ಡ್ಯಾನಿಷ್ ಸುದ್ದಿವಾಹಿನಿ 'ಟಿವಿ-2'ಗೆ ಹೇಳಿಕೆ ನೀಡಿದ್ದಾರೆ.

20 ದಿನಗಳ ಗಡುವು–ಆತಂಕ ಹೆಚ್ಚಳ

'ಗ್ರೀನ್‌ಲ್ಯಾಂಡ್ ಅನ್ನು ಅಮೆರಿಕದ ನ್ಯಾಯಾಂಗ ವ್ಯಾಪ್ತಿಗೆ ತರಲಾಗುವುದು, ಅಗತ್ಯಬಿದ್ದರೆ ಸೇನಾ ಕಾರ್ಯಾಚರಣೆಗೂ ಹಿಂಜರಿಯುವುದಿಲ್ಲ' ಎಂದು ಡೊನಾಲ್ಡ್ ಟ್ರಂಪ್ ಅವರು ಎರಡನೇ ಅವಧಿಗೆ ಅಮೆರಿಕ ಅಧ್ಯಕ್ಷರಾದ ಬೆನ್ನಲ್ಲೇ, ಹೇಳಿಕೆ ನೀಡಿದ್ದರು.

ವೆನೆಜುವೆಲಾ ಮೇಲಿನ ದಾಳಿಯ ಬಳಿಕ ಈ ಬಗ್ಗೆ ಪ್ರತಿಕ್ರಿಯಿಸಿದ್ದ ಅವರು, 'ಇನ್ನೂ 20 ದಿನಗಳಲ್ಲಿ ಮತ್ತೆ ಗ್ರೀನ್‌ಲ್ಯಾಂಡ್ ಬಗ್ಗೆ ಮಾತನಾಡುವೆ' ಎಂದು ತಿಳಿಸಿದ್ದರು. ಭವಿಷ್ಯದಲ್ಲಿ ಗ್ರೀನ್‌ಲ್ಯಾಂಡ್ ವಿಚಾರದಲ್ಲಿ ಅಮೆರಿಕವು ಮಧ್ಯಪ್ರವೇಶಿಸುವ ಕುರಿತು ಹೆಚ್ಚಿನ ಕಳವಳ ವ್ಯಕ್ತವಾಗಿದೆ.

'ಅವರು (ಟ್ರಂಪ್) ಗ್ರೀನ್‌ಲ್ಯಾಂಡ್ ಬಯಸುತ್ತಿರುವುದಾಗಿ ತಿಳಿಸಿದ್ದಾರೆ. ಈ ರೀತಿಯಾಗಿ ನಮಗೆ ಹಾಗೂ ಗ್ರೀನ್‌ಲ್ಯಾಂಡ್‌ಗೆ ಬೆದರಿಕೆ ಹಾಕುವುದನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಫ್ರೆಡರಿಕ್ಸನ್ ತಿಳಿಸಿದ್ದಾರೆ.

ಇದರ ಬೆನ್ನಲ್ಲೇ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗ್ರೀನ್‌ಲ್ಯಾಂಡ್‌ನ ಪ್ರಧಾನಿ ಜೆನ್ಸ್ ಫ್ರೆಡರಿಕ್ ನೀಲ್ಸೆನ್, 'ಗ್ರೀನ್‌ಲ್ಯಾಂಡ್ ಅನ್ನು ವೆನೆಜುವೆಲಾ ಜೊತೆಗೆ ಹೋಲಿಕೆ ಮಾಡಲು ಸಾಧ್ಯವಿಲ್ಲ. ಮತದಾರರು ಶಾಂತಿ ಹಾಗೂ ಒಗ್ಗಟ್ಟಿನಿಂದ ಇರಬೇಕು' ಎಂದು ಈ ವೇಳೆ ಒತ್ತಾಯಿಸಿದ್ದಾರೆ.

'ರಾತ್ರೋರಾತ್ರಿ ದೇಶವನ್ನು ಸ್ವಾಧೀನಪಡಿಸಿಕೊಳ್ಳಬಹುದು ಎಂಬ ಸ್ಥಿತಿಯಲ್ಲಿ ನಾವು ಇಲ್ಲ. ಹೀಗಾಗಿಯೇ ನಾವು ಉತ್ತಮ ಸಹಕಾರವನ್ನು ಎದುರು ನೋಡುತ್ತಿದ್ದೇವೆ. ಅಮೆರಿಕವು ಸುಲಭವಾಗಿ ಗ್ರೀನ್‌ಲ್ಯಾಂಡ್ ವಶಕ್ಕೆ ಪಡೆಯುವಂತಹ ಸ್ಥಿತಿಯೂ ನಿರ್ಮಾಣವಾಗಿಲ್ಲ' ಎಂದು ಹೇಳಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಮಾನ್ಯ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.
ಅಸಲು ದಾವೆ ನಂ.149/2017
ವಾದಿ: ಮಂಜುನಾಥ ಎಂ.
-ವಿರುದ್ಧ-
ಪ್ರತಿವಾದಿಯರು: ಜಾಹ್ನವಿ ಮತ್ತು ಇತರರು.
ಪ್ರತಿವಾದಿ ನಂ./ ನೋಟೀಸುದಾರರು: (6) ನಕ್ಷಾ ಬಿನ್ ಡಾ. ನಯನ್ ಕುಮಾರ್, ವಯಾ: ವಯಸ್ಕರು, ಉದ್ಯೋಗ: ವಿದ್ಯಾಭ್ಯಾಸ, ಖಾಯಂ ವಾಸ: ಡೋರ್ ನಂ. 1691/33, 7ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ. ಹಾಲಿ ವಾಸ: #ಕೃಷ್ಣಾ ನಾರ್ತ್ ವುಡ್ಸ್, ಚೊಕ್ಕಹಳ್ಳಿ ಮೇನ್ ರೋಡ್, ಹೆಗ್ಡೆ ನಗರ, ಯಲಹಂಕ, ಬೆಂಗಳೂರು-560064
ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪ್ರತಿವಾದಿಯರ ವಿರುದ್ಧ ನೀಡಲಾದ ಪ್ರಕಟಣಾ ನೋಟೀಸು
ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ಘೋಷಣಾತ್ಮಕ ಹಾಗೂ ಇಂಜಂಕ್ಷನ್ ಪರಿಹಾರ ಆದೇಶ ಕೋರಿ ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವುಗಳು 6ನೇಯ ಪ್ರತಿವಾದಿಗಳಾಗಿದ್ದು, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ್ದರೂ ಸಹ ಅವು ನಿಮಗೆ ಜಾರಿಯಾಗಿರುವುದಿಲ್ಲ, ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ: 19.01.2026 ರಂದು ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನಿಗಧಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.
ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ: 18.12.2025ರಂದು ಕೊಡಲ್ಪಟ್ಟಿದೆ.
ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/- ಶಿರಸ್ತೇದಾರರು, ಮಾನ್ಯ ಹೆಚ್ಚುವರಿ ಸಿವಿಲ್ ಜಡ್ಜ್ (ಹಿ.ವಿ)ರವರ ನ್ಯಾಯಾಲಯ, ದಾವಣಗೆರೆ.
ವಾದಿಯ ಪರ ವಕೀಲರು: ಕೆ. ಪವಿತ್ರ, ದಾವಣಗೆರೆ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಉದ್ಯೋಗಾವಕಾಶ

General

HIRING
VIBEZ
ANANTARA RESORT
Sakaleshpura
REQUIRED
Receptionist
Female: 1-2 yrs Exp.
Accountant
Staff, Bills, Inventory Audit & Basic Excel.
Food & Accommodation
Salary: As per experience
97433 46573

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ.
9035710381

ಬೆಂಗಳೂರಿನ ಮನೆಗಳಲ್ಲಿ ಚಿಕ್ಕಮಕ್ಕಳನ್ನು / ವಯಸ್ಕರನ್ನು ನೋಡಿಕೊಳ್ಳಲು / ಮನೆಕೆಲಸ ಮಾಡಲು ಮಹಿಳೆಯರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 13000-20000 ಉಚಿತ ಆಹಾರ, ವಸತಿ ನೀಡಲಾಗುತ್ತದೆ.
8197566700, 7259450815.

ಕಂಪನಿಗಳಿಗೆ ಬೇಕಾಗಿದ್ದಾರೆ: ಟಯೋಟಾ, ಬ್ರಿಟಾನಿಯಾ, ಟಾಟಾಮೋಟಾರ್ಸ್, TVSಗಳಿಗೆ SSLC,PUC, Degree, Diploma, ITIನವರು 18,500/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ.
9035075571.

CONNECT

SP ಸೆಲೆಬ್ರಿಟಿ ವೆಲ್ನೆಸ್ (ರಿ) ಇವರ ವತಿಯಿಂದ
ಉಚಿತ ಶಿಬಿರ
ಶೇಷಾದ್ರಿಪುರಂ ಬೆಂಗಳೂರಿನಲ್ಲಿ
20 ದಿನಗಳು ಮಾತ್ರ
ದಿನಾಂಕ 08-01-2026 ರಿಂದ 27-01-2026 ರವರಗೆ
ಮಂಡಿ, ಬೆನ್ನು ಕತ್ತುನೋವು, ಕೀಲುನೋವು, ಭುಜದ ನೋವು, ಲಕ್ವ, ಹಿಮ್ಮಡಿ ನೋವು, ಟೆನ್ನಿಸ್ ಎಲಬೋ ಪೇನ್, ತಲೆನೋವು, ಮೈಗ್ರೇನ್, ಮಾನಸಿಕ ಸಮಸ್ಯೆ, ಚಿಕನ್ಗುನ್ಯ ಗಂಟುನೋವು, ರೂಮಟೆಡ್ ಅರ್ಥೈಟಿಸ್, ವೆರಿಕೋಸ್ ವೇಯನ್ಸ್ ಸಮಸ್ಯೆ ಕಾಲುಗಳಲ್ಲಿ ಊತ ಮತ್ತು ರಕ್ತ ಚಲನೆ ಇಲ್ಲದವರಿಗೆ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ, ಸಯಾಟಿಕ್, ಮೂಳೆ ನೋವುಗಳಿಗೆ ಯಾವುದೇ ರೀತಿಯ ಔಷಧಿ ಇಲ್ಲದೆ, ಔಷಧಿ ಇಲ್ಲದೆ, ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ ಇಲ್ಲದೆ ವಿಶೇಷವಾದ A.C.U.... ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿಯಿಂದ ಚಿಕಿತ್ಸೆ ಪಡೆಯಿರಿ.

ವಿಳಾಸ : ಸನ್ಮಾನ್ ಹೋಟೆಲ್ ಹತ್ತಿರ, ಕುಮಾರ ಕೀನ್ಯಾ ಅಪಾರ್ಟ್ಮೆಂಟ್ ಎದುರು, ಶೇಷಾದ್ರಿಪುರಂ, ಬೆಂಗಳೂರು-20
9740142206
ವಿಶೇಷ ಸೂಚನೆ: ಚಿಕಿತ್ಸೆ ಪಡೆದ ನಂತರ 30 ನಿಮಿಷ ಕಾಫಿ, ನೀರು ಮತ್ತು ಆಹಾರವನ್ನು ಸೇವಿಸಬಾರದು.
ಪಾರ್ಶ್ವವಾಯು ಪೀಡಿತರಿಗೆ ದೇಶೀಯ ಚಿಕಿತ್ಸೆ
ಸೂಚನೆ : ಪಾರ್ಶ್ವವಾಯುವಿಗೆ ಗುರಿಯಾಗಿ ಒಂದು ವರ್ಷದಿಂದ ಮೇಲ್ಪಟ್ಟ ವಯೋವೃದ್ಧಿಯಾಗಿ ಬಾಯಿಯ ಮುಖಾಂತರ ಔಷಧಿಯನ್ನು ಸೇವಿಸಲು ಸಾಧ್ಯವಾಗುವಂತಹ ರೋಗಿಗಳಿಗೆ ಮಾತ್ರ ಈ ಚಿಕಿತ್ಸೆ ಮಾಡಲಾಗುವುದು.

Engg/ Production Technical

Electrical Technicians having experience in hotel background (3 or 5 star), are required for software company maintenance in Bangalore, 35000/- salary along with PF, ESI, bonus and accommodation. Candidates with ITI/Diploma pls Contact: 9886987898, 9900816937, 9845080989

Part-Time Jobs

ಮನೆಯಿಂದಲೇ ಕೆಲಸಗಳಿಗೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಕರ್ನಾಟಕದಾದ್ಯಂತ ಕಂಪನಿಗಳಿಗೆ ಅದ್ಯತೆ. 20,000/- 35,000/- ಸಂಪಾದಿಸಿ, ಕೊರಿಯರ್ ಸೌಲಭ್ಯವಿದೆ.
9964311522, 9742133993

ಪ್ರವಾಸ

Travel

09.01.2026 05.03.2026 04.04.2026 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.03.2026 06.04.2026 ದುಬೈ,ಅಬುದಾಬಿ 5 ದಿನಗಳು. 16.02.2026 10.03.2026 ಶ್ರೀಲಂಕಾ 7 ದಿನಗಳು. 06.02.2026 09.03.2026 04.04.2026 ಭೂತಾನ್ 8 ದಿನಗಳು. 18.02.2026 20.03.2026 04.04.2026 ಅಸ್ಸಾಂ,ಮೇಘಾಲಯ 9 ದಿನಗಳು. 13.03.2026 ಕಾಶಿ,ಗಯಾ,ಅಯೋಧ್ಯೆ 7 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು-03.
9448402248 7022547922

11ದಿನಗಳ ಗುಜರಾತ್ ರನ್‌ಆಫ್ ಕಚ್. 12 ದಿನಗಳ ಮಧ್ಯಪ್ರದೇಶ. 4 ದಿನಗಳ ಪುರಿಜಗನ್ನಾಥ್. 4 ದಿನಗಳ ಉಜ್ಜಯಿನಿ ಓಂಕಾರೇಶ್ವರ. 10ದಿನಗಳ ನೇಪಾಳ ಮುಕ್ತಿನಾಥ್. 8 ದಿನಗಳ ಅಸ್ಸಾಂ,ಮೇಘಾಲಯ ಕಾಜಿರಂಗ ಸಂಪರ್ಕಿಸಿ. ನಂದಿ ಹಾಲಿಡೇಸ್ ಬಸವನಗುಡಿ
9740228186 9035513332

ಮಲೇಷಿಯಾ & ಸಿಂಗಾಪುರ ಪ್ರವಾಸ 7 ದಿನಗಳು 22/01/2026 ಶ್ರೀಲಂಕಾ 6 ದಿನಗಳ ಪ್ರವಾಸ 5/3/26 ದುಬೈ ಪ್ರವಾಸ 6 ದಿನಗಳು 12/2/26 ಸಂಪರ್ಕಿಸಿ ಸುವರ್ಣ ಯಾತ್ರಾ
6360146483/ 9019462508

ಶಿಕ್ಷಣಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560

ದೇವನೊಬ್ಬ ಜಾದೂಗಾರ ಟೀಸರ್ ಬಿಡುಗಡೆ

ವರುಣ್ ವಸಿಷ್ಠ ನಿರ್ದೇಶನದ, ಬಾಲಕೃಷ್ಣ ಶೆಟ್ಟಿ ನಿರ್ಮಾಣದ 'ದೇವನೊಬ್ಬ ಜಾದೂಗಾರ' ಸಿನಿಮಾದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ನಟಿ ಶ್ವೇತಾ ಶ್ರೀವಾತ್ಸವ ಹಾಗೂ ನಿರ್ದೇಶಕ ಸಿಂಪಲ್ ಸುನಿ ಟೀಸರ್ ಬಿಡುಗಡೆ ಮಾಡಿದರು.

ಖಟ್ವಾಂಗ ಸ್ಟುಡಿಯೊಸ್ ಬ್ಯಾನರ್‌ನಡಿ ಈ ಸಿನಿಮಾ ನಿರ್ಮಾಣವಾಗಿದೆ. 'ನಿರ್ದೇಶಕ ವರುಣ್ ವಸಿಷ್ಠ 'ಸಿಂಪಲ್ ಆಗಿ ಒಂದ್ ಲವ್ ಸ್ಟೋರಿ' ಸಿನಿಮಾ ದಿನದಿಂದ ಪರಿಚಯ. ಅಂದಿನಿಂದ ಅವರಿಗೆ ಸಿನಿಮಾ ನಿರ್ದೇಶನ ಮಾಡಬೇಕು ಎಂಬ ಕನಸಿತ್ತು. ಇಂದು ಅದು ನಿಜವಾಗಿದೆ' ಎಂದರು ಸಿಂಪಲ್ ಸುನಿ.

'ನನ್ನ ಮಗನಿಗೆ ಚಿತ್ರನಟನಾಗಬೇಕು ಎಂದು ಬಾಲ್ಯದಿಂದಲೇ ಆಸೆ ಇತ್ತು. ಈ ಸಿನಿಮಾ ಮೂಲಕ ಅದು ನನಸಾಗಿದೆ. ಇದು ನಾಲ್ಕು ವರ್ಷಗಳ ಹಿಂದೆ ಪ್ರಾರಂಭವಾದ ಚಿತ್ರ. ಶೀಘ್ರದಲ್ಲೇ ಸಿನಿಮಾ ತೆರೆಗೆ ಬರಲಿದೆ' ಎಂದರು ಬಾಲಕೃಷ್ಣ ಶೆಟ್ಟಿ.

ವರುಣ್ ಮಾತನಾಡಿ, 'ಕಿರುಚಿತ್ರಗಳನ್ನು ಮಾಡಿದ ಅನುಭವ ನನಗಿದೆ. ನಾಯಕ ಸಚಿನ್ ಫೇಸ್‌ಬುಕ್ ಮೂಲಕ ಪರಿಚಿತರಾದವರು. ನಂತರ ಅವರು ಸಿನಿಮಾ ಕನಸನ್ನು ಬಿಚ್ಚಿಟ್ಟರು. ಸುಧಾ ಬೆಳವಾಡಿ ಅವರು ಸಿನಿಮಾದಲ್ಲಿ ಮುಖ್ಯಮಂತ್ರಿ ಪಾತ್ರವನ್ನು ನಿರ್ವಹಿಸಿದ್ದಾರೆ' ಎಂದರು.

ಕಾಶಿಪುರ ಎಂಬ ಕಾಲ್ಪನಿಕ ಊರಿನಲ್ಲಿ ನಡೆಯುವ ಕಥೆ ಇದಾಗಿದ್ದು, 'ದೇವ' ಎನ್ನುವ ಲಾರಿ ಚಾಲಕನ ಜೀವನವನ್ನು ಕೇಂದ್ರವಾಗಿ ಇಟ್ಟುಕೊಂಡು ಸಿನಿಮಾ ಮಾಡಲಾಗಿದೆ. ಇದು ಕ್ರೈಂ ಥ್ರಿಲ್ಲರ್ ಜಾನರ್‌ನಲ್ಲಿದ್ದು, ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಬೆಂಗಳೂರು, ತುಮಕೂರು ಹಾಗೂ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆದಿದೆ. ಚಿತ್ರಕ್ಕೆ ವಿಜೇತ್ ಚಂದ್ರ ಸಂಕಲನ, ಋತ್ವಿಕ್ ಮುರಳೀಧರ್ ಹಿನ್ನೆಲೆ ಸಂಗೀತ, ಶ್ಯಾಮ್ ರಾವ್ ನಗರಗದ್ದೆ ಛಾಯಾಚಿತ್ರಗ್ರಹಣವಿದೆ. ❖

ದೇವನೊಬ್ಬ ಜಾದೂಗಾರ ಚಿತ್ರತಂಡ

ರುಕ್ಮಿಣಿ ವಸಂತ್

'ಟಾಕ್ಸಿಕ್'ನಲ್ಲಿ ಮೆಲಿಸಾಳಾದ ರುಕ್ಮಿಣಿ ವಸಂತ್

'ಕಾಂತಾರ-1' ಚಿತ್ರದಲ್ಲಿ ಕನಕವತಿಯಾಗಿ ಖಳನಾಯಕಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ರುಕ್ಮಿಣಿ ವಸಂತ್ ನಕಾರಾತ್ಮಕ ಪಾತ್ರದಲ್ಲಿಯೂ ಮೆಚ್ಚುಗೆ ಗಳಿಸಿದ್ದರು. ಯಶ್ ನಟನೆಯ 'ಟಾಕ್ಸಿಕ್' ಚಿತ್ರದಲ್ಲಿಯೂ ಇವರು ನಕಾರಾತ್ಮಕ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆಯೇ ಎಂಬ ಅನುಮಾನ ಮೂಡಿಸುತ್ತಿದೆ ಇತ್ತೀಚೆಗಷ್ಟೆ ಬಿಡುಗಡೆಗೊಂಡ ಅವರ ಪಾತ್ರ ಪರಿಚಯದ ಪೋಸ್ಟರ್.

ಚಿತ್ರದಲ್ಲಿ ಮೆಲಿಸಾ ಆಗಿ ರುಕ್ಮಿಣಿ ಕಾಣಿಸಿಕೊಂಡಿದ್ದಾರೆ. ತುಸು ಗ್ಲಾಮರಸ್ ಧಿರಿಸು ಧರಿಸಿರುವ ಇವರು ಗಂಭೀರವಾಗಿ ಕಾಣಿಸಿಕೊಂಡಿದ್ದಾರೆ. ಪಾರ್ಟಿಯೊಂದರ ನಡುವಿನಿಂದ ನಡೆದು ಬರುವ ಭಂಗಿಯಲ್ಲಿನ ಇವರ ಪೋಸ್ಟರ್ ಇಂಗ್ಲಿಷ್ ಸಿನಿಮಾ ನಾಯಕಿಯರನ್ನು ನೆನಪಿಸುತ್ತಿದೆ. ಚಿತ್ರದಲ್ಲಿ ಹಲವು ನಾಯಕಿಯರಿದ್ದು, ಕಿಯಾರಾ ಅಡ್ವಾಣಿ, ನಯನತಾರಾ, ಹುಮಾ ಖುರೇಷಿ, ತಾರಾ ಸುತಾರಿಯಾ ಅವರುಗಳ ಪೋಸ್ಟರ್‌ಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಗೋವಾದಲ್ಲಿನ ಡ್ರಗ್ಸ್ ಮಾಫಿಯಾದ ಕಥೆಯನ್ನು ಚಿತ್ರ ಹೊಂದಿದೆ. ಚಿತ್ರಕ್ಕೆ ಗೀತು ಮೋಹನ್‌ದಾಸ್ ಆ್ಯಕ್ಷನ್ ಕಟ್ ಹೇಳಿದ್ದು, ಕೆವಿಎನ್ ಸಂಸ್ಥೆ ಬಂಡವಾಳ ಹೂಡಿದೆ. ಯಶ್ ಅವರು ತಮ್ಮ ಮಾನ್‌ಸ್ಟರ್ ಮೈಂಡ್ ನಿರ್ಮಾಣ ಸಂಸ್ಥೆಯ ಮೂಲಕ ಸಹ ನಿರ್ಮಾಣ ಮಾಡಿದ್ದಾರೆ. ರವಿ ಬಸ್ರೂರು ಸಂಗೀತ, ರಾಜೀವ್ ರವಿ ಛಾಯಾಚಿತ್ರಗ್ರಹಣವಿದೆ.

ರಾಜಾಸಾಬ್‌ಗೆ ಹೊಂಬಾಳೆ ಸಾಥ್

ಪ್ರಭಾಸ್

ನಟ ಪ್ರಭಾಸ್ ನಟನೆಯ ಹೊಸ ಸಿನಿಮಾ 'ದಿ ರಾಜಾಸಾಬ್' ಜ.9ರಂದು ತೆರೆಕಾಣುತ್ತಿದ್ದು, ಕರ್ನಾಟಕದಲ್ಲಿ ಹೊಂಬಾಳೆ ಫಿಲ್ಮ್ಸ್ ಈ ಸಿನಿಮಾವನ್ನು ವಿತರಣೆ ಮಾಡಲಿದೆ.

ಕರ್ನಾಟಕದಾದ್ಯಂತ 300ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಈ ಚಿತ್ರವನ್ನು ಬಿಡುಗಡೆ ಮಾಡಲು ಚಿತ್ರತಂಡ ಯೋಜಿಸಿದೆ. ಈಗಾಗಲೇ ಪರಭಾಷೆಗಳ ಹಲವು ಸಿನಿಮಾಗಳನ್ನು ವಿತರಣೆ ಮಾಡಿ ಗೆದ್ದಿರುವ ಹೊಂಬಾಳೆ 'ರಾಜಾಸಾಬ್' ಗಳಿಕೆಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಆ್ಯಕ್ಷನ್ ಅವತಾರದಲ್ಲಿಯೇ ತೆರೆಗಳಲ್ಲಿ ಮಿಂಚಿರುವ ಪ್ರಭಾಸ್, ಇದೇ ಮೊದಲ ಬಾರಿಗೆ ಈ ಸಿನಿಮಾ ಮೂಲಕ ಹಾರರ್ ಜಾನರ್ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಸಿನಿಮಾದ ಟ್ರೇಲರ್ ಕಥೆಯ ಬಗ್ಗೆ ಕುತೂಹಲ ಮೂಡಿಸಿದೆ. ಪೀಪಲ್ ಮೀಡಿಯಾ ಫ್ಯಾಕ್ಟರಿ ಬ್ಯಾನರ್ ಅಡಿಯಲ್ಲಿ ಟಿ.ಜಿ. ವಿಶ್ವಪ್ರಸಾದ್ ನಿರ್ಮಾಣದಲ್ಲಿ ಈ ಚಿತ್ರ ಮೂಡಿಬಂದಿದ್ದು, ಮಾರುತಿ ಚಿತ್ರವನ್ನು ನಿರ್ದೇಶಿಸಿದ್ದಾರೆ. ಚಿತ್ರದಲ್ಲಿ ಪ್ರಭಾಸ್‌ಗೆ ನಾಯಕಿಯರಾಗಿ ಮಾಳವಿಕಾ ಮೋಹನನ್, ನಿಧಿ ಅಗರ್ವಾಲ್ ಮತ್ತು ರಿದ್ಧಿ ಕುಮಾರ್ ನಟಿಸಿದ್ದಾರೆ. ದೊಡ್ಡ ಬಜೆಟ್‌ನ ಈ ಚಿತ್ರಕ್ಕೆ ಕಾರ್ತಿಕ್ ಪಲನಿ ಛಾಯಾಚಿತ್ರ ಗ್ರಹಣವಿದೆ. ತೆಲುಗು, ಹಿಂದಿ, ತಮಿಳು, ಕನ್ನಡ ಮತ್ತು ಮಲಯಾಳ ಭಾಷೆಗಳಲ್ಲಿ ಈ ಚಿತ್ರ ರಿಲೀಸ್ ಆಗಲಿದೆ. ❖

ಫೆ.27ಕ್ಕೆ 'ದಿ ಬಿಯಾಂಡ್ ದಿ ಕೇರಳ ಸ್ಟೋರಿ' ಬಿಡುಗಡೆ

'ದಿ ಕೇರಳ ಸ್ಟೋರಿ' ಚಿತ್ರದ ಪೋಸ್ಟರ್

2023ರಲ್ಲಿ ತೆರೆಕಂಡ 'ದಿ ಕೇರಳ ಸ್ಟೋರಿ' ವಿವಾದಗಳ ನಡುವೆಯೂ ಬಾಕ್ಸಾಫೀಸ್‌ನಲ್ಲಿ ಅಬ್ಬರಿಸಿತ್ತು. ಅದರ ಮುಂದುವರಿದ ಕಥೆ 'ದಿ ಬಿಯಾಂಡ್ ದಿ ಕೇರಳ ಸ್ಟೋರಿ' ಚಿತ್ರ ಫೆ.27ರಂದು ತೆರೆಗೆ ಬರಲಿದೆ ಎಂದು ಸನ್‌ಶೈನ್ ಪಿಕ್ಚರ್ಸ್ ಹೇಳಿದೆ.

'ದಿ ಬಿಯಾಂಡ್ ದಿ ಕೇರಳ ಸ್ಟೋರಿ'ಗೆ ರಾಷ್ಟ್ರ-ಪ್ರಶಸ್ತಿ ವಿಜೇತ ನಿರ್ದೇಶಕ ಕಾಮಾಕ್ಯ ನಾರಾಯಣ ಸಿಂಗ್ ನಿರ್ದೇಶನವಿದೆ. ವಿಪುಲ್ ಅಮೃತ್‌ಲಾಲ್ ಹಾಗೂ ಸನ್‌ಶೈನ್ ಪಿಕ್ಚರ್ಸ್ ನಿರ್ಮಾಣವಿದೆ. ಚಿತ್ರದ ಚಿತ್ರೀಕರಣ, ತಾರಾಗಣ ಹಾಗೂ ಇನ್ನಿತರ ಮಾಹಿತಿಯನ್ನು ಗೌಪ್ಯವಾಗಿಡಲಾಗಿದೆ. 'ಇನ್ನಷ್ಟು ನೈಜ ಸಂತ್ರಸ್ತರ ಕಥೆಯನ್ನು ಈ ಭಾಗದಲ್ಲಿ ಹೇಳಿದ್ದೇವೆ. ಇದು ನಮ್ಮದೇ ನೆರೆಹೊರೆಯವರ ಕಥೆ' ಎಂದು ನಿರ್ಮಾಣ ಸಂಸ್ಥೆ ಹೇಳಿದೆ. ಚಿತ್ರ ಬಿಡುಗಡೆ ದಿನಾಂಕ ಘೋಷಿಸುವ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದೆ.

ಸುದಿಪ್ತೊ ಸೇನ್ ನಿರ್ದೇಶನದ 'ದಿ ಕೇರಳ ಸ್ಟೋರಿ'ಯಲ್ಲಿ ಕೇರಳವು ಲವ್ ಜಿಹಾದ್‌ನ ಕೇಂದ್ರವಾಗಿದೆ. ಅವರ ಧರ್ಮಕ್ಕೆ ಮತಾಂತರಗೊಳಿಸಲು ಸಿರಿಯಾಕ್ಕೆ ಕರೆದೊಯ್ಯಲಾಗುತ್ತದೆ ಎಂದು ತೋರಿಸಲಾಗಿತ್ತು. ಇದಕ್ಕೆ ಕೇರಳ ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಕೇರಳಕ್ಕೆ ಕಳಂಕ ತರುವ ವ್ಯವಸ್ಥಿತ ಹುನ್ನಾರವಿದು ಎಂದು ಆರೋಪಿಸಿತ್ತು. ಇವುಗಳೆಲ್ಲದರ ನಡುವೆ ₹300 ಕೋಟಿ ಬಾಚಿದ ಚಿತ್ರ ಎರಡು ರಾಷ್ಟ್ರಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿತ್ತು.

ಚಿಟಿಕೆ ಸುದ್ದಿ

ಸೋನಿಯಾ ಗಾಂಧಿ ಆಸ್ಪತ್ರೆಗೆ ದಾಖಲು

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಇಲ್ಲಿನ ಸರ್ ಗಂಗಾ ರಾಮ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ಮಂಗಳವಾರ ಹೇಳಿವೆ.

ಅವರು ಚೆನ್ನಾಗಿದ್ದಾರೆ ಮತ್ತು ಶ್ವಾಸಕೋಶ ತಜ್ಞರು ಅವರ ಆರೋಗ್ಯದ ಮೇಲ್ವಿಚಾರಣೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸೋನಿಯಾ ಗಾಂಧಿಯವರು ದೀರ್ಘ ಕಾಲದಿಂದ ಕೆಮ್ಮಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಈ ಕಾರಣಕ್ಕಾಗಿ ನಿಯಮಿತ ಆರೋಗ್ಯ ತಪಾಸಣೆಗೆ ಆಸ್ಪತ್ರೆಗೆ ಬರುತ್ತಿದ್ದರು. ಸೋಮವಾರ ಸಂಜೆ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಮೂಲಗಳು ತಿಳಿಸಿದೆ.

'ಮೋದಿಗೆ ನನ್ನ ಬಗ್ಗೆ ಅಸಮಾಧಾನ'

ವಾಷಿಂಗ್ಟನ್ (ಪಿಟಿಐ): 'ರಷ್ಯಾದಿಂದ ತೈಲ ಖರೀದಿಗಾಗಿ ಭಾರತದ ಮೇಲೆ ಅಮೆರಿಕ ವಿಧಿಸಿರುವ ಸುಂಕಗಳಿಂದಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನನ್ನ ಬಗ್ಗೆ ಅಸಮಾಧಾನವಿದೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿದ್ದಾರೆ.

'ನನ್ನ ಮತ್ತು ಅವರ ನಡುವೆ ಉತ್ತಮ ಸಂಬಂಧವಿದೆ. ಆದರೆ, ಅವರು ನನ್ನ ಬಗ್ಗೆ ಅಷ್ಟೊಂದು ಸಂತುಷ್ಟಿ ಹೊಂದಿಲ್ಲ. ಏಕೆಂದರೆ ಅವರು ಈಗ ತೈಲವನ್ನು ಖರೀದಿಸದಿದ್ದರೂ ಬಹಳಷ್ಟು ಸುಂಕಗಳನ್ನು ಪಾವತಿಸುತ್ತಿದ್ದಾರೆ. ಆದರೆ, ಅವರು ಈಗ ರಷ್ಯಾದಿಂದ ತೈಲ ಖರೀದಿಯನ್ನು ಗಣನೀಯವಾಗಿ ಕಡಿಮೆ ಮಾಡಿದ್ದಾರೆ' ಎಂದು ಹೇಳಿದ್ದಾರೆ.

'ಅಪಾಚೆ ಹೆಲಿಕಾಪ್ಟರ್‌ಗಳಿಗಾಗಿ ಕಳೆದ ಐದು ವರ್ಷಗಳಿಂದ ಕಾಯುತ್ತಿರುವುದಾಗಿ ಭಾರತ ತಿಳಿಸಿದೆ. ವಿಳಂಬ ಧೋರಣೆ ಕೈಬಿಟ್ಟು, ಆ ಪ್ರಕ್ರಿಯೆಯನ್ನು ವೇಗಗೊಳಿಸಲಾಗುವುದು. ಭಾರತವು 68 ಅಪಾಚೆ ಹೆಲಿಕಾಪ್ಟರ್‌ಗಳಿಗೆ ಬೇಡಿಕೆ ಇಟ್ಟಿದೆ' ಎಂದು ತಿಳಿಸಿದ್ದಾರೆ.

ಟ್ರಂಪ್ ಅವರು ಭಾರತದ ಮೇಲೆ ಶೇ 50ರಷ್ಟು ಸುಂಕ ವಿಧಿಸಿದ್ದಾರೆ.

ಅಮೆರಿಕ ದಾಳಿ: 55 ಯೋಧರ ಸಾವು

ಕರಾಕಸ್ (ಎಎಫ್‌ಪಿ): ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಅವರನ್ನು ಸೆರೆಹಿಡಿಯಲು ಅಮೆರಿಕ ಪಡೆಗಳು ನಡೆಸಿದ ದಾಳಿಯಲ್ಲಿ ವೆನೆಜುವೆಲಾ ಮತ್ತು ಕ್ಯೂಬಾದ 55 ಯೋಧರನ್ನು ಹತ್ಯೆ ಮಾಡಿವೆ.

ಶನಿವಾರ ಅಮೆರಿಕ ನಡೆಸಿದ ದಾಳಿಯಲ್ಲಿ 23 ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ವೆನೆಜುವೆಲಾದ ಸೇನೆ ತಿಳಿಸಿತ್ತು. ಕರಾಕಸ್‌ನಲ್ಲಿ ಕರ್ತವ್ಯಕ್ಕೆ ನಿಯೋಜಿಸಿದ್ದ ತನ್ನ ಸಶಸ್ತ್ರ ಪಡೆಗಳ 32 ಮಂದಿ ಮೃತಪಟ್ಟಿರುವುದಾಗಿ ಕ್ಯೂಬಾ ತಿಳಿಸಿದೆ.

'ಬಿಜೆಪಿ ಐಟಿ ಸೆಲ್‌ನ ಆ್ಯಪ್ ಬಳಕೆ'

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ: ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪ

ಪ್ರಜಾವಾಣಿ ವಾರ್ತೆ/ಪಿಟಿಐ

ಗಂಗಾಸಾಗರ/ಕೋಲ್ಕತ್ತ: 'ಬಿಜೆಪಿ ಐಟಿ ಸೆಲ್ ರೂಪಿಸಿದ ಮೊಬೈಲ್ ಆ್ಯಪ್ ಬಳಸಿಕೊಂಡು ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸುತ್ತಿದೆ. ಇದು ಅಕ್ರಮ, ಅಸಾಂವಿಧಾನಿಕ ಮತ್ತು ಪ್ರಜಾಪ್ರಭುತ್ವ ವಿರೋಧಿ' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪ ಮಾಡಿದರು.

ಈ ಆರೋಪದ ಮೂಲಕ ಎಸ್‌ಐಆರ್ ಕುರಿತ ವಿವಾದಗಳಿಗೆ ಮಮತಾ ಅವರು ಹೊಸ ಆಯಾಮ ನೀಡಿದಂತಾಗಿದೆ. ಈ ಆರೋಪವನ್ನು ಬಿಜೆಪಿ ತಳ್ಳಿಹಾಕಿದ್ದು, 'ಇಂಥ ಆರೋಪಗಳು ಆಧಾರರಹಿತವಾದವು ಮತ್ತು ರಾಜಕೀಯ ಪ್ರೇರಿತವಾದವು' ಎಂದು ಪ್ರತಿಕ್ರಿಯಿಸಿದೆ.

ಸಾಗರ ದ್ವೀಪಕ್ಕೆ ಕೈಗೊಂಡ 2 ದಿನಗಳ ಪ್ರವಾಸ ಮುಗಿಸಿ ಮಂಗಳವಾರ ಮರಳುವ ವೇಳೆ ಪತ್ರಕರ್ತರ ಪ್ರಶ್ನೆಗೆ ಅವರು ಉತ್ತರಿಸಿದರು. 'ಎಸ್‌ಐಆರ್ ನಡೆಸುವುದಕ್ಕಾಗಿ ಆಯೋಗವು ಯಾವೆಲ್ಲ ತಪ್ಪುಗಳನ್ನು ಮಾಡಬಹುದೋ ಆ ಎಲ್ಲವನ್ನೂ ಮಾಡುತ್ತಿದೆ. ಬದುಕಿರುವ ಅರ್ಹ ಮತದಾರರನ್ನು ಮೃತಪಟ್ಟಿದ್ದಾರೆ ಎಂದು ತೋರಿಸುತ್ತಿದೆ. ವೃದ್ಧರನ್ನು, ಅನಾರೋಗ್ಯ ಪೀಡಿತರನ್ನು ಪೌರತ್ವ ಸಾಬೀತು ಮಾಡುವುದಕ್ಕೆ ವಿಚಾರಣೆಗೆ ಬನ್ನಿ ಎಂದು ಕರೆಯುತ್ತಿದೆ' ಎಂದು ದೂರಿದರು.

ಸೇನ್ ಅವರಿಗೂ ನೋಟಿಸ್: ಅಭಿಷೇಕ್ ಆರೋಪ

ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರಿಗೂ ಎಸ್‌ಐಆರ್ ಸಂಬಂಧಿತ ವಿಚಾರಣೆಗೆ ಹಾಜರಾಗುವಂತೆ ಚುನಾವಣಾ ಆಯೋಗವು ನೋಟಿಸ್ ನೀಡಿದೆ ಎಂದು ಟಿಎಂಸಿ ಸಂಸದ, ಅಭಿಷೇಕ್ ಬ್ಯಾನರ್ಜಿ ಆರೋಪಿಸಿದ್ದಾರೆ. 'ಆಯೋಗದಿಂದ ಯಾವುದೇ ನೋಟಿಸ್ ದೊರೆತಿಲ್ಲ' ಎಂದು ಸೇನ್ ಅವರ ಕುಟುಂಬದ ಸದಸ್ಯರೊಬ್ಬರು ಪ್ರತಿಕ್ರಿಯಿಸಿದ್ದಾರೆ.

ಬೀರ್‌ಭೂಮ್ ಜಿಲ್ಲೆಯಲ್ಲಿ ನಡೆದ ಸಾರ್ವಜನಿಕ ರ್‍ಯಾಲಿಯಲ್ಲಿ ಮಾತನಾಡಿದ ಅವರು, 'ನಾನು ಇಲ್ಲಿಗೆ ಬರುವ ವೇಳೆ ಅಮರ್ತ್ಯ ಸೇನ್ ಅವರಿಗೂ ಆಯೋಗ ನೋಟಿಸ್ ನೀಡಿದ ಬಗ್ಗೆ ಮಾಹಿತಿ ಬಂದಿತು. ಸೇನ್ ಅವರು ವಿಶ್ವದಲ್ಲಿ ದೇಶಕ್ಕೆ ಕೀರ್ತಿ ತಂದುಕೊಟ್ಟವರು. ಕ್ರಿಕೆಟ್‌ನಲ್ಲಿ ಭಾರತಕ್ಕೆ ವಿಶ್ವಕಪ್ ತಂದುಕೊಟ್ಟ ತಂಡದಲ್ಲಿ ಇದ್ದ ಶಮಿ, ನಟ ದೇವ್ ಅವರಿಗೂ ನೋಟಿಸ್ ನೀಡಿದೆ. ಈ ಮೂಲಕ ಬಂಗಾಳದ ಜನರನ್ನು ಅವಮಾನಿಸಲಾಗುತ್ತಿದೆ' ಎಂದರು.

'ಎಸ್‌ಐಆರ್ ನಮೂನೆಯನ್ನು ಸಮಯಕ್ಕೆ ಸರಿಯಾಗಿ ಭರ್ತಿ ಮಾಡಿ, ಸಲ್ಲಿಸಲಾಗಿದೆ. 2002ರಲ್ಲಿ ಎಸ್‌ಐಆರ್ ಪ್ರಕ್ರಿಯೆ ಬಳಿಕ ಬಿಡುಗಡೆ ಮಾಡಲಾದ ಮತದಾರರ ಪಟ್ಟಿಯಲ್ಲಿ ಸೇನ್ ಅವರ ತಾಯಿ ಹೆಸರು ಇತ್ತು. ಕಳೆದ ಚುನಾವಣೆಯಲ್ಲಿ ಅಮರ್ತ್ಯ ಸೇನ್ ಅವರು ಮತ ಚಲಾಯಿಸಿದ್ದರು. ಜಿಲ್ಲೆಯ ಆಯೋಗದ ಅಧಿಕಾರಿಗಳ ಬಳಿ ನೋಟಿಸ್ ವಿಚಾರವಾಗಿ ವಿಚಾರಿಸಲಾಗುವುದು' ಎಂದು ಸೇನ್ ಅವರು ಕುಟುಂಬದ ಸದಸ್ಯರೊಬ್ಬರು 'ಪಿಟಿಐ' ಸುದ್ದಿ ಸಂಸ್ಥೆಗೆ ಪ್ರತಿಕ್ರಿಯಿಸಿದರು.

'ಅಕ್ರಮಕ್ಕೆ ಎಸ್‌ಐಆರ್ ಪ್ರಕ್ರಿಯೆ ಬಳಕೆ'

'ನೋಟಿಸ್ ಅನ್ನೂ ನೀಡದೆ, ಜನರ ಹೇಳಿಕೆಯನ್ನೂ ಪಡೆಯದೆ ಪಶ್ಚಿಮ ಬಂಗಾಳದಲ್ಲಿ 58.21 ಲಕ್ಷ ಜನರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ದೂರಿ ಟಿಎಂಸಿ ಸಂಸದ ಡೆರೆಕ್ ಒಬ್ರಯಾನ್ ಅವರು ಮಂಗಳವಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಎಸ್‌ಐಆರ್ ಪ್ರಕ್ರಿಯೆ ಕುರಿತು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವ ಅವರು, ಕರಡು ಮತದಾರರ ಪಟ್ಟಿಯ ಕುರಿತು ಆಕ್ಷೇಪ ಸಲ್ಲಿಸಲು ನೀಡಲಾಗಿರುವ ಕಾಲಾವಕಾಶವನ್ನು ವಿಸ್ತರಿಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿದ್ದಾರೆ. ಆಕ್ಷೇಪ ಸಲ್ಲಿಸಲು ಜ. 15 ಕೊನೇ ದಿನ. 'ಬೂತ್ ಮಟ್ಟದ ಅಧಿಕಾರಿಗಳಿಗೆ ನೀಡಲಾಗುವ ಕೆಲವು ಸೂಚನೆಗಳನ್ನು ವಾಟ್ಸ್‌ಆ್ಯಪ್ ಅಥವಾ ಇದೇ ರೀತಿ ಆ್ಯಪ್‌ಗಳ ಮೂಲಕ ನೀಡಲಾಗುತ್ತಿದೆ. ಇಂಥ ಸೂಚನೆಗಳನ್ನು ಅಧಿಕೃತ ಎಂದು ಪರಿಗಣಿಸಬಾರದು ಮತ್ತು ಹೀಗೆ ಮಾಡುವುದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಆಯೋಗಕ್ಕೆ ಸೂಚಿಸಿ. ಜೊತೆಗೆ, ಇಂಥ ಜಾಲತಾಣ ವೇದಿಕೆಗಳ ಮೂಲಕ ಈಗಾಗಲೇ ನೀಡಲಾಗಿರುವ ಸೂಚನೆಯನ್ನು ಕಾನೂನು ಬಾಹಿರ ಎಂದು ಘೋಷಿಸಿ' ಎಂದೂ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ಶಮಿಗೆ ಆಯೋಗ ನೋಟಿಸ್

ಎಸ್‌ಐಆರ್ ದೃಢೀಕರಣಕ್ಕಾಗಿ ವಿಚಾರಣೆಗೆ ಹಾಜರಾಗುವಂತೆ ಕ್ರಿಕೆಟಿಗ ಮೊಹಮ್ಮದ್ ಶಮಿ ಮತ್ತು ಅವರು ಸಹೋದರ ಮೊಹಮ್ಮದ್ ಕೈಫ್ ಅವರಿಗೆ ಚುನಾವಣಾ ಆಯೋಗವು ಸೋಮವಾರಕ್ಕೆ ದಿನಾಂಕ ನಿಗದಿ ಮಾಡಿತ್ತು. ಆದರೆ, ಶಮಿ ಅವರು ಪಶ್ಚಿಮ ಬಂಗಾಳದ ಪರವಾಗಿ ವಿಜಯ್ ಹಜಾರೆ ಟ್ರೋಫಿ ಪಂದ್ಯಾವಳಿಯಲ್ಲಿ ಆಡುತ್ತಿರುವುದರಿಂದ ಕಾಲಾವಕಾಶ ಕೋರಿದ್ದಾರೆ. ಇದಕ್ಕೆ ಅನುಗುಣವಾಗಿ ಜ.9ರಿಂದ ಜ.11 ಒಳಗೆ ಒಂದು ದಿನ ವಿಚಾರಣೆಗೆ ಬರುವಂತೆ ಶಮಿ ಅವರಿಗೆ ತಿಳಿಸುವ ಸಾಧ್ಯತೆ ಇದೆ.

'ಶಮಿ ಅವರು ಎಸ್‌ಐಆರ್ ನಮೂನೆಯನ್ನು ತಪ್ಪಾಗಿ ಭರ್ತಿ ಮಾಡಿದ್ದಾರೆ. ಈ ಕಾರಣಕ್ಕೆ ಅವರನ್ನು ವಿಚಾರಣೆಗೆ ಕರೆಯಲಾಗಿದೆ' ಎಂದು ಮುಖ್ಯ ಚುನಾವಣಾ ಅಧಿಕಾರಿ ಕಚೇರಿ ಅಧಿಕಾರಿಗಳು ಮಾಹಿತಿ ನೀಡಿದರು.

ಮಾಜಿ ಸಚಿವ ಕಲ್ಮಾಡಿ ಇನ್ನಿಲ್ಲ

ಪುಣೆ (ಪಿಟಿಐ): ಕಾಂಗ್ರೆಸ್ ಹಿರಿಯ ನಾಯಕ, ಕೇಂದ್ರದ ಮಾಜಿ ಸಚಿವ ಸುರೇಶ್ ಕಲ್ಮಾಡಿ ಮಂಗಳವಾರ ಪುಣೆಯಲ್ಲಿ ನಿಧನರಾದರು.

ಸುರೇಶ್ ಕಲ್ಮಾಡಿ (81) ಅವರು ಕರ್ನಾಟಕದ ಉಡುಪಿ ಜಿಲ್ಲೆಯ ಕಲ್ಮಾಡಿ ಮೂಲದವರು. ದೀರ್ಘಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಮಂಗಳವಾರ ನಿಧನರಾದರು ಎಂದು ಅವರ ಕುಟುಂಬದ ಮೂಲಗಳು ಮಾಹಿತಿ ನೀಡಿವೆ.

ಕಲ್ಮಾಡಿ

ರಾಜಕೀಯ ಜೀವನದಲ್ಲಿ ಹಲವು ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದ್ದ ಸುರೇಶ್ ಅವರು ರೈಲ್ವೆ ರಾಜ್ಯ ಖಾತೆಯ ಸಚಿವರಾಗಿ ಮತ್ತು ಭಾರತೀಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಕಲ್ಮಾಡಿ ಅವರು ರಾಜಕೀಯ ಪ್ರವೇಶಿಸುವ ಮೊದಲು ಹತ್ತು ವರ್ಷ ಭಾರತೀಯ ವಾಯಪಡೆಯಲ್ಲಿ ಪೈಲಟ್ ಆಗಿ ಕಾರ್ಯನಿರ್ವಹಿಸಿದ್ದರು. ನಿವೃತ್ತಿಯ ಬಳಿಕ ಎನ್‌ಸಿಪಿ ನಾಯಕ ಶರದ್ ಪವಾರ್ ಒಡನಾಟದಿಂದಾಗಿ ರಾಜಕೀಯ ಪ್ರವೇಶಿಸಿದರು. ಕಾಂಗ್ರೆಸ್‌ನಿಂದ ನಾಲ್ಕು ಬಾರಿ ರಾಜ್ಯಸಭೆಗೆ ಆಯ್ಕೆಯಾಗಿದ್ದ ಅವರು 1995ರಿಂದ 1996ರವರೆಗೆ ಕೇಂದ್ರದ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಬಳಿಕ ಮೂರು ಬಾರಿ ಲೋಕಸಭೆ ಸದಸ್ಯರಾಗಿದ್ದರು.

ಸುದೀರ್ಘ ಅವಧಿಗೆ ಕ್ರೀಡಾ ಆಡಳಿತಗಾರರಾಗಿ ಕಾರ್ಯನಿರ್ವಹಿಸಿದ ಅವರು ಈ ಮೂಲಕ ಕೀರ್ತಿ ಮತ್ತು ಅಪಕೀರ್ತಿ ಎರಡನ್ನೂ ಗಳಿಸಿದ್ದರು. 1989ರಿಂದ 2013ರವರೆಗೆ ಭಾರತೀಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಹುದ್ದೆಯನ್ನು ನಿರ್ವಹಿಸಿ, ಹಲವಾರು ಸುಧಾರಣೆಗಳನ್ನು ತಂದಿದ್ದರು. 2003ರಲ್ಲಿ ಆಫ್ರೋ ಏಷ್ಯನ್ ಗೇಮ್ಸ್, 2008ರಲ್ಲಿ ಕಾಮನ್‌ವೆಲ್ತ್ ಯೂತ್ ಗೇಮ್ಸ್, 2010ರಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಸೇರಿದಂತೆ ಹಲವು ಕ್ರೀಡಾಕೂಟಗಳು ಭಾರತದಲ್ಲಿ ನಡೆಯುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. 2010ರಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭ್ರಷ್ಟಾಚಾರ ನಡೆಸಿದ ಆರೋಪದಡಿ ಸುರೇಶ್ ಅವರನ್ನು ಬಂಧಿಸಲಾಗಿತ್ತು. ಬಳಿಕ ಜಾರಿ ನಿರ್ದೇಶನಾಲಯವು (ಇ.ಡಿ) ಅವರನ್ನು ದೋಷಮುಕ್ತಗೊಳಿಸಿ ವರದಿ ಸಲ್ಲಿಸಿತ್ತು. ಅಥ್ಲೆಟಿಕ್ಸ್ ಫೆಡರೇಷನ್ ಆಫ್ ಇಂಡಿಯಾ-(ಎಎಫ್‌ಐ), ಏಷ್ಯನ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಸೇರಿದಂತೆ ಪ್ರಮುಖ ಕ್ರೀಡಾ ಸಂಸ್ಥೆಗಳ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. 2001ರಿಂದ 2013ರವರೆಗೆ ಸುರೇಶ್ ಅವರು ವಿಶ್ವ ಅಥ್ಲೆಟಿಕ್ಸ್ ಮಂಡಳಿಯ ಸದಸ್ಯತ್ವ ಪಡೆಯುವ ಮೂಲಕ ಈ ಸದಸ್ಯತ್ವ ಪಡೆದ ಮೊದಲ ಭಾರತೀಯ ಎನಿಸಿಕೊಂಡಿದ್ದರು.

ಅಲಿ ಖಾನ್ ಪ್ರಕರಣ: ತಡೆಯಾಜ್ಞೆ ವಿಸ್ತರಣೆ

ನವದೆಹಲಿ (ಪಿಟಿಐ): ಅಶೋಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅಲಿ ಖಾನ್ ಮಹಮೂದಾಬಾದ್ ವಿರುದ್ಧ ಹರಿಯಾಣ ಎಸ್‌ಐಟಿ ಸಲ್ಲಿಸಿರುವ ಆರೋಪಪಟ್ಟಿಯನ್ನು ಪರಿಗಣಿಸದಂತೆ ವಿಚಾರಣಾ ನ್ಯಾಯಾಲಯಕ್ಕೆ ನೀಡಿರುವ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಿಸ್ತರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ 2025ರ ಆಗಸ್ಟ್‌ನಲ್ಲಿ ಎಸ್‌ಐಟಿ, ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ. ಹರಿಯಾಣ ಸರ್ಕಾರ ಇದುವರೆಗೂ ಅನುಮತಿ ನೀಡಿಲ್ಲ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ ರಾಜು ಅವರು ತಿಳಿಸಿದ ಬಳಿಕ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು ಈ ಆದೇಶ ಹೊರಡಿಸಿತು.

ಆಪರೇಷನ್ ಸಿಂಧೂರ ಕುರಿತು ಅಲಿ ಖಾನ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಮಾಡಿದ್ದ ಪೋಸ್ಟ್‌ಗಳಿಗೆ ಸಂಬಂಧಿಸಿ ಅವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿದೆ.

'ದೀರ್ಘಕಾಲ ಜೈಲಲ್ಲಿಡಬಾರದು'

ನವದೆಹಲಿ (ಪಿಟಿಐ): ಇನ್ನೂ ವಿಚಾರಣೆ ಆರಂಭವಾಗದ ಅಥವಾ ವಿಚಾರಣೆಯಲ್ಲಿ ಸರಿಯಾದ ಪ್ರಗತಿಯಿಲ್ಲದ ಸಂದರ್ಭಗಳಲ್ಲಿ ವಿಚಾರಣಾಧೀನ ವ್ಯಕ್ತಿಯನ್ನು ದೀರ್ಘಕಾಲದವರೆಗೆ ಜೈಲಲ್ಲಿಡುವುದನ್ನು ಒಪ್ಪಲಾಗದು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

₹27 ಸಾವಿರ ಕೋಟಿ ಮೊತ್ತದ ಬ್ಯಾಂಕ್ ವಂಚನೆಗೆ ಸಂಬಂಧಿಸಿದ ಹಣ ವರ್ಗಾವಣೆ ಪ್ರಕರಣದಲ್ಲಿ ಆರೋಪಿಯಾಗಿರುವ ಅಮ್ಟೆಕ್ ಸಮೂಹದ ಮಾಜಿ ಅಧ್ಯಕ್ಷ ಅರವಿಂದ ಧಾಮ್ ಅವರಿಗೆ ಜಾಮೀನು ನೀಡುವಾಗ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಅಲೋಕ್ ಆರಾಧೆ ಅವರ ಪೀಠ ಈ ಹೇಳಿಕೆ ನೀಡಿದೆ.

ಧಾಮ್ ಅವರಿಗೆ ಜಾಮೀನು ನಿರಾಕರಿಸಿ ದೆಹಲಿ ಹೈಕೋರ್ಟ್ 2025ರ ಆಗಸ್ಟ್ 19ರಂದು ನೀಡಿದ್ದ ಆದೇಶವನ್ನು ವಜಾಗೊಳಿಸಿದ ಪೀಠ, ಧಾಮ್ ಅವರನ್ನು 2024ರಲ್ಲಿ ಬಂಧಿಸಲಾಗಿತ್ತು, 'ಪ್ರಕರಣಕ್ಕೆ ಸಂಬಂಧಿಸಿದ ಕೆಲವು ಸಾಕ್ಷ್ಯಗಳು ಈಗಾಗಲೇ ಪ್ರಾಸಿಕ್ಯೂಷನ್ ವಶದಲ್ಲಿವೆ. ಅಂತಹ ಸಂದರ್ಭದಲ್ಲಿ ಸುದೀರ್ಘ ಜೈಲುವಾಸವು ಸಂವಿಧಾನದ 21ನೇ ವಿಧಿಯು ಪ್ರತಿಯೊಬ್ಬರಿಗೂ ನೀಡಿರುವ ತ್ವರಿತ ವಿಚಾರಣೆಯ ಹಕ್ಕನ್ನು ಉಲ್ಲಂಘಿಸುತ್ತದೆ' ಎಂದಿತು.

ಬಾಂಡ್ ಪರಿಶೀಲನೆಗೆ ಆದೇಶ

ನವದೆಹಲಿ (ಪಿಟಿಐ): 2020ರ ದೆಹಲಿ ಗಲಭೆಗೆ ಪಿತೂರಿ ನಡೆಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಜಾಮೀನು ನೀಡಿದ ಐವರು ಆರೋಪಿಗಳ ಪೈಕಿ ನಾಲ್ವರು ಸಲ್ಲಿಸಿದ ದಾಖಲೆಗಳು ಮತ್ತು ಶ್ಯೂರಿಟಿಗಳನ್ನು ಪರಿಶೀಲಿಸಲು ದೆಹಲಿ ನ್ಯಾಯಾಲಯ ಮಂಗಳವಾರ ಆದೇಶಿಸಿದ್ದು, ಅವರ ಬಿಡುಗಡೆ ಒಂದು ದಿನ ವಿಳಂಬವಾಗಿದೆ.

ಗುಲ್‌ಫಿಷಾ ಫಾತಿಮಾ, ಮೀರನ್ ಹೈದರ್, ಶಿಫಾ ಉರ್ ರೆಹಮಾನ್, ಮೊಹಮದ್ ಸಲೀಂ ಖಾನ್ ಮತ್ತು ಶಾದಾಬ್ ಅಹ್ಮದ್ ಅವರಿಗೆ ಜಾಮೀನು ನೀಡುವಾಗ ಸುಪ್ರೀಂ ಕೋರ್ಟ್ 11 ಷರತ್ತುಗಳನ್ನು ವಿಧಿಸಿತ್ತು.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಸಮೀರ್ ಬಾಜಪೈ ಅವರು ಗುಲ್‌ಫಿಷಾ ಫಾತಿಮಾ, ಮೀರನ್ ಹೈದರ್, ಶಿಫಾ ಉರ್ ರೆಹಮಾನ್ ಮತ್ತು ಮೊಹಮದ್ ಸಲೀಂ ಖಾನ್ ಸಲ್ಲಿಸಿದ ತಲಾ ₹2 ಲಕ್ಷ ಮೊತ್ತದ ಜಾಮೀನು ಬಾಂಡ್‌ಗಳು ಮತ್ತು ಇಬ್ಬರ ಶ್ಯೂರಿಟಿಗಳನ್ನು ಅಂಗೀಕರಿಸಿದರು.

ಸಿಬಿಐಗೆ ಹೈಕೋರ್ಟ್ ನೋಟಿಸ್

ನವದೆಹಲಿ (ಪಿಟಿಐ): ಐಆರ್‌ಸಿಟಿಸಿ ಹಗರಣದಲ್ಲಿ ತನ್ನ ವಿರುದ್ಧ ಆರೋಪ ಹೊರಿಸುವ ಆದೇಶವನ್ನು ಪ್ರಶ್ನಿಸಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಸಲ್ಲಿಸುವಂತೆ ದೆಹಲಿ ಹೈಕೋರ್ಟ್ ಸಿಬಿಐಗೆ ಮಂಗಳವಾರ ಸೂಚಿಸಿದೆ. ಸಿಬಿಐಗೆ ನ್ಯಾಯಮೂರ್ತಿ ಸ್ವರಣ ಕಾಂತ ಶರ್ಮಾ ಅವರು ನೋಟಿಸ್ ಜಾರಿ ಮಾಡಿದ್ದು, ವಿಚಾರಣೆಯನ್ನು ಜನವರಿ 14ರಂದು ನಿಗದಿಪಡಿಸಿದೆ.

ಪಿಐಎಲ್ ವಜಾಗೊಳಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ದೇಶದಾದ್ಯಂತ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಗೆ ಸಂಬಂಧಿಸಿ ಚೌಕಟ್ಟು ರೂಪಿಸಿದ 2006ರ ಲಿಂಗ್ಡೊ ವರದಿ ಜಾರಿಗೆ ಒತ್ತಾಯಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಅರ್ಜಿಯು ಯಾವುದೇ ಅರ್ಹತೆ ಹೊಂದಿಲ್ಲ ಎಂದು ಪೀಠವು ತಿಳಿಸಿದೆ.

'ನಮ್ಮ ಪ್ರಧಾನಿಯನ್ನೂ ಅಪಹರಿಸುವರೇ?'

ಮಹಾರಾಷ್ಟ್ರ ಮಾಜಿ ಸಿ.ಎಂ. ಪೃಥ್ವಿರಾಜ್ ಚೌಹಾಣ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಮುಂಬೈ: 'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನಮ್ಮ ಪ್ರಧಾನಿಯನ್ನೂ ಅಪಹರಿಸುವರೇ?' ಎಂದು ಕಾಂಗ್ರೆಸ್ ನಾಯಕ, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಪೃಥ್ವಿರಾಜ್ ಚೌಹಾಣ್ ಅವರು ಪ್ರಶ್ನಿಸಿದ್ದು, ಇದೀಗ ವಿವಾದಕ್ಕೀಡಾಗಿದೆ.

ವೆನೆಜುವೆಲಾ –ಅಮೆರಿಕ ಸಂಘರ್ಷದ ಕುರಿತು ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿರುವ ನಡುವೆಯೇ ಭಾರತ ಮತ್ತು ಅಮೆರಿಕದ ನಡುವೆ ಸುಂಕದ ವಿಚಾರವಾಗಿ ನಡೆಯುತ್ತಿರುವ ಸಮರದ ಬಗ್ಗೆ ಪೃಥ್ವಿರಾಜ್ ಮಾತನಾಡಿದ್ದಾರೆ.

'ಶೇಕಡ 50ರ ಸುಂಕ ನೀತಿಯಿಂದಾಗಿ ಭಾರತ-ಅಮೆರಿಕ ನಡುವಿನ ವ್ಯಾಪಾರ ಸಂಬಂಧ ಸ್ಥಗಿತಗೊಳ್ಳಬಹುದು. ನೇರವಾಗಿ ವ್ಯಾಪಾರ-ವಹಿವಾಟು ನಿರ್ಬಂಧಿಸಲಾಗದ ಕಾರಣಕ್ಕೆ ಸುಂಕವನ್ನು ಅಸ್ತ್ರವನ್ನಾಗಿ ಬಳಸಲಾಗುತ್ತಿದೆ' ಎಂದು ಪೃಥ್ವಿರಾಜ್ ಆರೋಪಿಸಿದ್ದಾರೆ.


ಚೌಹಾಣ್

ಇದೇ ವೇಳೆ, 'ನಾವು ಬೇರೆ ಮಾರುಕಟ್ಟೆಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಪ್ರಯತ್ನಗಳು ಈಗಾಗಲೇ ಪ್ರಗತಿಯಲ್ಲಿವೆ. ಈಗ ಉಳಿದಿರುವುದು ಮುಂದೇನು? ಎನ್ನುವ ಪ್ರಶ್ನೆ ಮಾತ್ರ. ಈಗ ವೆನೆಜುವೆಲಾದಲ್ಲಿ ಏನಾಗಿದೆಯೋ? ಅದು ಭಾರತದಲ್ಲೂ ಆಗಲಿದೆಯೇ? ಟ್ರಂಪ್ ಸಾಹೇಬರು ನಮ್ಮ ಪ್ರಧಾನಿಯನ್ನೂ ಅಪಹರಿಸಲಿದ್ದಾರೆಯೇ?' ಎಂದು ಪೃಥ್ವಿರಾಜ್ ಹೇಳಿದ್ದಾರೆ.

ಅವರ ಹೇಳಿಕೆಗೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದ್ದು, ಬಿಜೆಪಿ ನಾಯಕರು ಪೃಥ್ವಿರಾಜ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಬೆಟ್ಟದ ದೀಪ'ಕ್ಕೆ ಕೋರ್ಟ್ ಒಪ್ಪಿಗೆ

ಒಂದನೇ ಪುಟದಿಂದ...

'ಕಾರ್ತಿಕ ಮಾಸದಲ್ಲಿ ಈ ದೀಪಸ್ತಂಭದಲ್ಲಿ ದೇವಸ್ಥಾನದ ವತಿಯಿಂದಲೇ ದೀಪ ಹಚ್ಚಬೇಕು. ದೀಪ ಹಚ್ಚಲು ಸಾರ್ವಜನಿಕರಿಗೆ ಅವಕಾಶ ಇರುವುದಿಲ್ಲ' ಎಂದು ನ್ಯಾಯಮೂರ್ತಿ ಜೆ. ಜಯಚಂದ್ರನ್ ಮತ್ತು ಕೆ.ಕೆ. ರಾಮಕೃಷ್ಣನ್ ಅವರನ್ನು ಒಳಗೊಂಡ ವಿಭಾಗೀಯ ಪೀಠವು ಹೇಳಿತು.

'ಈ ಪ್ರಕರಣದಲ್ಲಿ 'ರಾಜಕೀಯ ಕಾರ್ಯಸೂಚಿ' ಜಾರಿಗಾಗಿ ಈ ಮಟ್ಟಕ್ಕೆ ಇಳಿಯಬಾರದು' ಎಂದೂ ಪೀಠವು ಆಡಳಿತಾರೂಢ ಡಿಎಂಕೆಗೆ ತಾಕೀತು ಮಾಡಿತು.

ಶೈವ ಧರ್ಮದ ಆಗಮ ಶಾಸ್ತ್ರದ ಪ್ರಕಾರ ಈ ಸ್ಥಳದಲ್ಲಿ ದೀಪ ಹಚ್ಚುವುದಕ್ಕೆ ನಿಷೇಧ ಇದೆ ಎನ್ನುವ ವಾದವನ್ನು ಸಾಬೀತುಪಡಿಸಲು ಬಲವಾದ ಸಾಕ್ಷ್ಯಗಳನ್ನು ಹಾಜರುಪಡಿಸಲು ಅರ್ಜಿದಾರರು ವಿಫಲರಾಗಿದ್ದಾರೆ ಎಂದು ನ್ಯಾಯಪೀಠ ಹೇಳಿತು.

'ಮುರುಗನ ಭಕ್ತರ ಜಯ'

ದೇವಸ್ಥಾನದ ವತಿಯಿಂದ ದೀಪಸ್ತಂಭದಲ್ಲಿ, ದೀಪ ಹಚ್ಚಲು ಅನುಮತಿಗಾಗಿ ಅರ್ಜಿ ಸಲ್ಲಿಸಿದ್ದ ವಕೀಲ ರಾಮ ರವಿಕುಮಾರ್ ಕೋರ್ಟ್ ಆದೇಶವನ್ನು ಸ್ವಾಗತಿಸಿದ್ದು, 'ಇದು ಮುರುಗನ ಭಕ್ತರಿಗೆ ಲಭಿಸಿದ ಜಯವಾಗಿದೆ' ಎಂದು ಹೇಳಿದ್ದಾರೆ.

ತೀರ್ಪನ್ನು ಬಿಜೆಪಿ ಸ್ವಾಗತಿಸಿದ್ದು, 'ಕೋರ್ಟ್ ಡಿಎಂಕೆ ಕೆನ್ನೆಗೆ ಬಾರಿಸಿದೆ. ಡಿಎಂಕೆ ಮತ್ತು ಕಾಂಗ್ರೆಸ್ ಸನಾತನ ಧರ್ಮದ ವಿರೋಧಿ' ಎಂದು ಹೇಳಿದೆ.

'ಸುಪ್ರೀಂಕೋರ್ಟ್‌ಗೆ ಹೋಗುತ್ತೇವೆ': 'ಮದುರೈ ಪೀಠದ ತೀರ್ಪಿನ ವಿರುದ್ಧ, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಹಕ್ಕನ್ನು ರಾಜ್ಯ ಸರ್ಕಾರ ಹೊಂದಿದೆ' ಎಂದು ತಮಿಳುನಾಡಿನ ನೈಸರ್ಗಿಕ ಸಂಪನ್ಮೂಲ ಸಚಿವ ಎಸ್. ರಘುಪತಿ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಎಂಟರ ಘಟ್ಟಕ್ಕೆ ಮಯಂಕ್ ಪಡೆ

ವಿಜಯ್ ಹಜಾರೆ ಟ್ರೋಫಿ: 600 ರನ್ ಗಡಿ ದಾಟಿದ ದೇವದತ್ತ ● ಪ್ರಸಿದ್ಧಗೆ 5 ವಿಕೆಟ್

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ನಾಯಕ ಮಯಂಕ್ ಅಗರವಾಲ್ ಪ್ರಸಕ್ತ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಎರಡನೇ ಶತಕ ದಾಖಲಿಸಿದರು. ಅದರೆ ದೇವದತ್ತ ಪಡಿಕ್ಕಲ್ ಐದನೇ ಶತಕ ಹೊಡೆಯುವ ಅವಕಾಶವನ್ನು ಒಂಬತ್ತು ರನ್‌ಗಳ ಅಂತರದಿಂದ ಕೈತಪ್ಪಿಸಿ ಕೊಂಡರು. ಅವರಿಬ್ಬರ ಜೊತೆಯಾಟದ ಬಲದಿಂದ 'ಹಾಲಿ ಚಾಂಪಿಯನ್' ಕರ್ನಾಟಕವು ರಾಜಸ್ಥಾನ ಎದುರು ಗೆದ್ದು, ಎಂಟರ ಘಟ್ಟ ಪ್ರವೇಶಿಸಿತು.

ಗುಜರಾತ್ ಕಾಲೇಜು ಮೈದಾನದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಕರ್ನಾಟಕವು 150 ರನ್‌ಗಳಿಂದ ಗೆದ್ದಿತು. ಸತತ ಆರನೇ ಪಂದ್ಯ ಜಯಿಸಿ, ಒಟ್ಟು 24 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿ ಉಳಿಯಿತು. ಗುಂಪಿನಲ್ಲಿ ಇನ್ನೊಂದು ಪಂದ್ಯ ಬಾಕಿಯಿದ್ದು, ಮಧ್ಯಪ್ರದೇಶ ತಂಡವನ್ನು ಗುರುವಾರ ಎದುರಿಸಲಿದೆ. ಆದರೆ ರಾಜಸ್ಥಾನ ತಂಡವು ಐದನೇ ಪಂದ್ಯ ಸೋತಿತು.

ಟಾಸ್ ಗೆದ್ದ ರಾಜಸ್ಥಾನವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಯಂಕ್ (100; 107ಎ, 4X9, 6X3) ಮತ್ತು ಪಡಿಕ್ಕಲ್ (91; 82ಎ, 4X12, 6X2) ಮೊದಲ ವಿಕೆಟ್ ಜೊತೆಯಾಟದಲ್ಲಿ 184 ರನ್‌ಗಳಿಂದ ಸೇರಿಸಿದರು. ಈ ಅಡಿಪಾಯದ ಮೇಲೆ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 324 ರನ್ ಗಳಿಸಿತು. ಅದಕ್ಕುತ್ತರವಾಗಿ ರಾಜಸ್ಥಾನ ತಂಡವು ಕೇವಲ 174 ರನ್ ಹೊಡೆಯಿತು. ವೇಗಿ ಪ್ರಸಿದ್ಧ ಕೃಷ್ಣ (8-0-36-5) ಅಮೋಘ ಬೌಲಿಂಗ್ ಮುಂದೆ ರಾಜಸ್ಥಾನ ಕುಸಿಯಿತು.

ದೇವದತ್ತ ದಾಖಲೆ ಓಟ: ಟೂರ್ನಿಯಲ್ಲಿ ಐದನೇ ಶತಕ ಸಾಧನೆಯನ್ನು ದೇವದತ್ತ ತಪ್ಪಿಸಿಕೊಂಡರು. ಆದರೆ ಮೂರನೇ ಬಾರಿ ಟೂರ್ನಿಯಲ್ಲಿ 600ಕ್ಕೂ ಹೆಚ್ಚು ರನ್ ಗಳಿಸಿದ ದಾಖಲೆ ಮಾಡಿದರು. 2019–20ರಲ್ಲಿ ಅವರು 11 ಇನಿಂಗ್ಸ್‌ಗಳಿಂದ 609 ರನ್, 2020–21ರಲ್ಲಿ 8 ಇನಿಂಗ್ಸ್‌ಗಳಲ್ಲಿ 737 ರನ್ ಗಳಿಸಿದ್ದರು. ಅದರಲ್ಲಿ ಅವರು ಸತತ ನಾಲ್ಕು ಶತಕ ಹೊಡೆದಿದ್ದರು. ಈ ಬಾರಿ ಅವರು ಆರು ಇನಿಂಗ್ಸ್‌ಗಳಿಂದ 605 ರನ್ ಪೇರಿಸಿದ್ದಾರೆ. ಅದರಲ್ಲಿ ನಾಲ್ಕು ಶತಕಗಳು ಸೇರಿವೆ.

ಎಡಗೈ ಬ್ಯಾಟರ್ ದೇವದತ್ತ, ಈ ಪಂದ್ಯದಲ್ಲಿ 110.98ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು.

ಇನ್ನೊಂದು ಬದಿಯಲ್ಲಿ ಮಯಂಕ್ ಅವರು ಆಕ್ರಮಣಶೀಲತೆ ಮತ್ತು ತಾಳ್ಮೆ ಮೇಳೈಸಿದ ಆಟವಾಡಿದರು. 29ನೇ ಓವರ್‌ನಲ್ಲಿ ದೇವದತ್ತ ಅವರನ್ನು ಕ್ರೀಸ್‌ಬಿಟ್ಟು ಮಾಡಿದ ಮಾನವ್ ಸುತಾರ್ ಸಂಭ್ರಮಿಸಿದರು. ಜೊತೆಯಾಟವೂ ಮುರಿದು ಬಿತ್ತು. ನಂತರ ಆಟದಲ್ಲಿ ಮಯಂಕ್ ಅವರು ಇನಿಂಗ್ಸ್ ಕಟ್ಟುವ ಹೊಣೆ ನಿಭಾಯಿಸಿದರು. ಅವರು ಕುಕ್ನಾ ಅಜಯ್ ಸಿಂಗ್ ಬೌಲಿಂಗ್‌ನಲ್ಲಿ ಔಟಾದರು.

ಮಧ್ಯಮ ಕ್ರಮಾಂಕದಲ್ಲಿ ಆಡಿದ ಕೆ.ಎಲ್. ರಾಹುಲ್ (25; 28ಎ, 4X4) ಮತ್ತು ಅಭಿನವ್ ಮನೋಹರ್ (35; 27ಎ, 4X3, 6X2) ತಂಡದ ಮೊತ್ತವು 300ರ ಗಡಿ ದಾಟಲು ನೆರವಾದರು.

ರಾಜಸ್ಥಾನ ಇನಿಂಗ್ಸ್‌ನಲ್ಲಿ ಕರಣ್ ಲಾಂಬಾ (55; 66ಎ, 4X1, 6X2) ಅರ್ಧಶತಕ ಹೊಡೆದರು.

ಕರ್ನಾಟಕ ತಂಡದ ದೇವದತ್ತ ಪಡಿಕ್ಕಲ್ (ಎಡ). ಐದು ವಿಕೆಟ್ ಗೊಂಚಲು ಸಾಧಿಸಿದ ಪ್ರಸಿದ್ಧ ಕೃಷ್ಣ

ಪ್ರಿಯಾಂಶ್ ಅರ್ಧಶತಕ; ಕ್ವಾರ್ಟರ್‌ಫೈನಲ್‌ನತ್ತ ದೆಹಲಿ

ಬೆಂಗಳೂರು: ಆರಂಭಿಕ ಆಟಗಾರ ಪ್ರಿಯಾಂಶ್ ಆರ್ಯ ಅವರ ಬಿರುಸಿನ ಅರ್ಧಶತಕದ ಬಲದಿಂದ ದೆಹಲಿ ತಂಡವು ಡಿ ಗುಂಪಿನ ಪಂದ್ಯದಲ್ಲಿ ರೈಲ್ವೇಸ್ ವಿರುದ್ಧ ಗೆಲುವು ಸಾಧಿಸಿತು.

ಬೆಂಗಳೂರು ಹೊರವಲಯದ ಆಲೂರಿನಲ್ಲಿರುವ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ದೆಹಲಿ ತಂಡವು 6 ವಿಕೆಟ್‌ಗಳಿಂದ ಜಯಿಸಿತು. 18 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಉಳಿಯಿತು.

ಹರಿಯಾಣ 18 ಹಾಗೂ ಸೌರಾಷ್ಟ್ರ ತಂಡಗಳು 16 ಅಂಕಗಳೊಂದಿಗೆ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ಉಳಿದಿರುವ ಇನ್ನೊಂದು ಸುತ್ತಿನಲ್ಲಿ ದೆಹಲಿ ತಂಡವು ಹರಿಯಾಣ ಎದುರು ಆಡಬೇಕಿದೆ. ಸೌರಾಷ್ಟ್ರ ತಂಡವು ಗುಜರಾತ್ ಎದುರು ಆಡಲಿದೆ.

ದೆಹಲಿ ತಂಡವು ವಿರಾಟ್ ಕೊಹ್ಲಿ ಅನುಪಸ್ಥಿತಿಯಲ್ಲಿ ಆಡಿತು. ಟಾಸ್ ಗೆದ್ದ ರೈಲ್ವೇಸ್ ಮೊದಲು ಬ್ಯಾಟಿಂಗ್ ಮಾಡಿತು. ಆಯುಷ್ ಬದೋನಿ (30ಕ್ಕೆ3) ಹಾಗೂ ನವದೀಪ್ ಸೈನಿ (30ಕ್ಕೆ3) ಅವರ ಬಿರುಸಾದ ದಾಳಿಗೆ ಕೇವಲ 179 ರನ್‌ಗಳಿಗೆ ಕುಸಿಯಿತು. ಭಾರತ ತಂಡದ ವೇಗಿಯಾಗಿದ್ದ ಇಶಾಂತ್ ಶರ್ಮಾ ಅವರು 4 ಓವರ್ ಬೌಲ್ ಮಾಡಿ 5 ರನ್‌ಗೆ 1 ವಿಕೆಟ್ ಪಡೆದರು. ಕುಶ್ ಮರಾಠೆ (51; 66ಎ) ಅರ್ಧಶತಕ ಹೊಡೆದರು. ಗುರಿ ಬೆನ್ನಟ್ಟಿದ ದೆಹಲಿ ತಂಡವು 21.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 182 ರನ್ ಗಳಿಸಿತು. ಪ್ರಿಯಾಂಶ್ ಆರ್ಯ 41 ಎಸೆತಗಳಲ್ಲಿ 80 ರನ್ ಗಳಿಸಿದರು. ರಿಷಭ್ ಪಂತ್ 9 ಎಸೆತಗಳಲ್ಲಿ 3 ಸಿಕ್ಸರ್ ಸೇರಿದಂತೆ 24 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರ್‌ಗಳಲ್ಲಿ 7ಕ್ಕೆ324 (ಮಯಂಕ್ ಅಗರವಾಲ್ 100, ದೇವದತ್ತ ಪಡಿಕ್ಕಲ್ 91, ಕೆ.ಎಲ್. ರಾಹುಲ್ 25, ಅಭಿನವ್ ಮನೋಹರ್ 35, ಶ್ರೇಯಸ್ ಗೋಪಾಲ್ ಔಟಾಗದೆ 19, ಕುಕ್ನಾ ಅಜಯ್ ಸಿಂಗ್ 66ಕ್ಕೆ2, ಮಾನವ್ ಸುತಾರ್ 51ಕ್ಕೆ2) ರಾಜಸ್ಥಾನ: 38 ಓವರ್‌ಗಳಲ್ಲಿ 174 (ದೀಪಕ್ ಹೂಡಾ 29, ಕರಣ್ ಲಾಂಬಾ 55, ಕುಕ್ನಾ ಅಜಯ್ ಸಿಂಗ್ 25, ಪ್ರಸಿದ್ಧ ಕೃಷ್ಣ 36ಕ್ಕೆ5, ಶ್ರೀಜಾ ಆಚಾರ್ 35ಕ್ಕೆ2, ಶ್ರೇಯಸ್ ಗೋಪಾಲ್ 45ಕ್ಕೆ2) ಫಲಿತಾಂಶ: ಕರ್ನಾಟಕ ತಂಡಕ್ಕೆ 150 ರನ್ ಜಯ. ಪಂದ್ಯದ ಆಟಗಾರ: ಮಯಂಕ್ ಅಗರವಾಲ್.

ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಹೇಳಿಕೆ

ಫೆ.14ರಿಂದ ಐಎಸ್‌ಎಲ್

ನವದೆಹಲಿ (ಪಿಟಿಐ): ಈಗಾಗಲೇ ವಿಳಂಬವಾಗಿರುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯು ಫೆಬ್ರುವರಿ 14ರಂದು ಆರಂಭವಾಗಲಿದೆ ಎಂದು ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಮಂಗಳವಾರ ಘೋಷಿಸಿದ್ದಾರೆ.



ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ವಾಣಿಜ್ಯ ಪಾಲುದಾರ ಸಿಗದ ಕಾರಣ 2025–26ನೇ ಸಾಲಿನ ಐಎಸ್‌ಎಲ್ ಟೂರ್ನಿ ನಡೆಯುವ ಬಗ್ಗೆ ಅನುಮಾನಗಳು ಮೂಡಿದ್ದವು.

ಐಎಸ್‌ಎಲ್‌ನಲ್ಲಿ ಮಾಮೂಲಿನಂತೆ 14 ತಂಡಗಳು ಭಾಗವಹಿಸಲಿವೆ. ತ್ರಿಶಂಕು ಸ್ಥಿತಿಯಲ್ಲಿದ್ದ ಐ ಲೀಗ್ ಸಹ 'ಇದೇ ಸಮಯ'ಕ್ಕೆ ಆರಂಭವಾಗಲಿದೆ. ಇದರಲ್ಲಿ 11 ಕ್ಲಬ್‌ಗಳು ಭಾಗಿಯಾಗಲಿವೆ ಎಂದರು.

'ಐಎಸ್‌ಎಲ್ ಬಗ್ಗೆ ಸಾಕಷ್ಟು ಅನುಮಾನಗಳು ಮೂಡಿದ್ದವು. ಆದರೆ ಸರ್ಕಾರ, ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಮತ್ತು 14 ಕ್ಲಬ್‌ಗಳು ಮಂಗಳವಾರ ಸಭೆ ನಡೆಸಿದ್ದವು. ಫೆಬ್ರುವರಿ 14ರಂದು ಐಎಸ್‌ಎಲ್ ಆರಂಭಿಸಲು ನಿರ್ಧರಿಸಲಾಗಿದೆ. ಎಲ್ಲ ಕ್ಲಬ್‌ಗಳು ಭಾಗಿಯಾಗಲಿವೆ' ಎಂದು ಮಾಂಡವೀಯ ಪ್ರಕಟಿಸಿದರು.

ಸಚಿವರ ಘೋಷಣೆಯ ನಂತರ ಐಎಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಅವರು ಟೂರ್ನಿಯ ವಿವರಗಳನ್ನು ನೀಡಿದರು. 'ಐಎಸ್‌ಎಲ್ ನಲ್ಲಿ 'ಹೋಮ್ ಆ್ಯಂಡ್ ಅವೇ' (ತವರು ಮತ್ತು ಹೊರಗೆ) ಆಧಾರದಲ್ಲಿ 91 ಪಂದ್ಯಗಳು ನಡೆಯಲಿವೆ. ಕಾರ್ಯಕ್ರಮ ಪಟ್ಟಿಯ ರೂಪುರೇಷೆ ಸಿದ್ಧಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಐ–ಲೀಗ್ ವ್ಯಾಪ್ತಿ ಸ್ವಲ್ಪ ಕಡಿತಗೊಳ್ಳಲಿದ್ದು, 55 ಪಂದ್ಯಗಳು ಇರಲಿವೆ.

'ವಾಣಿಜ್ಯ ಪಾಲುದಾರ ಸಿಗುವವರೆಗೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್, ಐಎಸ್‌ಎಲ್ ಆಯೋಜನೆಗೆ ₹14 ಕೋಟಿ ನೀಡಲಿದೆ. ಐ ಲೀಗ್ ನಡೆಸಲು ಸುಮಾರು ₹3.2 ಕೋಟಿ ನೀಡಲಿದೆ' ಎಂದು ಚೌಬೆ ಹೇಳಿದರು.

ಲೀಗ್‌ಗಳ ನಿರ್ವಹಣೆಗೆ ಆಡಳಿತ ಮಂಡಳಿ ಸ್ಥಾಪಿಸಲಾಗುವುದು. ವಾಣಿಜ್ಯ ಸಂಬಂಧಿ ನಿರ್ಧಾರ ಕೈಗೊಳ್ಳುವ ಅಧಿಕಾರ ಈ ಮಂಡಳಿಗೆ ಇರಲಿದೆ ಎಂದರು.

ಒಲಿಂಪಿಕ್ಸ್ ಕಂಚು ವಿಜೇತಗೆ ಆಯುಷ್ ಆಘಾತ

ಕ್ವಾಲಾಲಂಪುರ (ಪಿಟಿಐ): ಕರ್ನಾಟಕದ ಯುವತಾರೆ ಆಯುಷ್ ಶೆಟ್ಟಿ ಅವರು ಪ್ಯಾರಿಸ್ ಒಲಿಂಪಿಕ್ಸ್ ಕಂಚು ವಿಜೇತ ಆಟಗಾರ ಲೀ ಝೀ ಜಿಯಾ ಅವರನ್ನು ನೇರ ಗೇಮ್‌ಗಳಲ್ಲಿ ಮಣಿಸಿ, ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.

ಭಾರತದ ಅನುಭವಿ ಆಟಗಾರ ಲಕ್ಷ್ಯ ಸೇನ್ ಅವರೂ ಮಂಗಳವಾರ ಪ್ರಿಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು.

20 ವರ್ಷ ವಯಸ್ಸಿನ ಆಯುಷ್ ಅವರು 39 ನಿಮಿಷ ನಡೆದ ಹಣಾಹಣಿಯಲ್ಲಿ 21-12, 21-17ರಿಂದ ಆತಿಥೇಯ ಆಟಗಾರನಿಗೆ ಆಘಾತ ನೀಡಿದರು. ಜಿಯಾ ಅವರು 2025ರ ಸೆಪ್ಟೆಂಬರ್‌ನಲ್ಲಿ ನಡೆದ ಚೀನಾ ಮಾಸ್ಟರ್ಸ್ ಟೂರ್ನಿಯಲ್ಲಿ ಗಾಯಗೊಂಡ ಬಳಿಕ ಈ ಟೂರ್ನಿಯಲ್ಲಿ ಸ್ಪರ್ಧಾಕಣಕ್ಕೆ ಮರಳಿದ್ದರು.

ಆಯುಷ್ ಅವರು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಆಟಗಾರ, ಚೀನಾದ ಶಿ ಯು ಕೀ ವಿರುದ್ಧ ಸೆಣಸಲಿದ್ದಾರೆ.

24 ವರ್ಷದ ಲಕ್ಷ್ಯ 21-16, 15-21, 21-14ರಿಂದ ಸಿಂಗಪುರದ ಜಿಯಾ ಹೆಂಗ್ ಜೇಸನ್ ತೆಹ ವಿರುದ್ಧ ಜಯಭೇರಿ ಬಾರಿಸಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಮಾಳವಿಕಾ ಬನ್ಸೋದ್ ಅವರು ಥಾಯ್ಲೆಂಡ್‌ನ ರಚಾನಾಕ್ ಇಂಟನಾನ್ ಎದುರು ಪರಾಭವಗೊಂಡರು.

ಸಂಕ್ಷಿಪ್ತ ಸುದ್ದಿ

ಜಮ್ಮು–ಕಾಶ್ಮೀರ ತಂಡಕ್ಕೆ ವಿಜಯ್ ಮರ್ಚಂಟ್ ಟ್ರೋಫಿ

ಸೂರತ್ (ಪಿಟಿಐ): ಜಮ್ಮು ಮತ್ತು ಕಾಶ್ಮೀರ 16 ವರ್ಷದೊಳಗಿನವರ ಕ್ರಿಕೆಟ್ ತಂಡವು ಪ್ಲೇಟ್ ವಿಭಾಗದ ವಿಜಯ್ ಮರ್ಚಂಟ್ ಟ್ರೋಫಿ ಜಯಿಸಿತು. ಇದರೊಂದಿಗೆ ಕಣಿವೆ ರಾಜ್ಯಕ್ಕೆ ಮೊದಲ ಬಾರಿಗೆ ಬಿಸಿಸಿಐ ಟ್ರೋಫಿ ಒಲಿಯಿತು.

ಫೈನಲ್ ಪಂದ್ಯದ ಮೂರನೇ ದಿನವಾದ ಮಂಗಳವಾರ ಕಾಶ್ಮೀರ ತಂಡವು 182 ರನ್‌ಗಳಿಂದ ಮಿಜೋರಾಂ ವಿರುದ್ಧ ಜಯಿಸಿತು. ಪಂದ್ಯದಲ್ಲಿ ಇನ್ನೂ ಒಂದು ದಿನ ಬಾಕಿಯಿರುವಂತೆಯೇ ಗೆದ್ದಿತು.

ಮೊದಲ ಇನಿಂಗ್ಸ್‌ನಲ್ಲಿ ಮಿಜೋರಾಂ 100 ರನ್ ಗಳಿಸಿ ಕುಸಿದಿತ್ತು. ಅದಕ್ಕುತ್ತರವಾಗಿ ಕಾಶ್ಮೀರ ತಂಡವು 95.1 ಓವರ್‌ಗಳಲ್ಲಿ 400 ರನ್ ಗಳಿಸಿತ್ತು. 300 ರನ್ ಮುನ್ನಡೆ ಸಾಧಿಸಿತ್ತು. ತಂಡದ ಸಮಾಗೆ ಖಜುರಿಯಾ 174 ಎಸೆತಗಳಲ್ಲಿ 102 ರನ್ ಗಳಿಸಿದರು. ಅವರು 15 ಬೌಂಡರಿ ಮತ್ತು ಆರು ಸಿಕ್ಸರ್ ಹೊಡೆದರು.

ಮಿಜೋರಾಂ ತಂಡವು ಎರಡನೇ ಇನಿಂಗ್ಸ್‌ನಲ್ಲಿ 42.4 ಓವರ್‌ಗಳಲ್ಲಿ 118 ರನ್‌ಗಳಿಗೆ ಹೋರಾಟ ಮುಗಿಸಿತು. ಸನಿಲ್ ಸಿಂಗ್ (15ಕ್ಕೆ3), ಜಸ್ಕರಣ್ ಸಿಂಗ್ (8ಕ್ಕೆ2) ಮತ್ತು ಹಮ್ಮದ್ ಫಿರ್ದೋಸ್ (22ಕ್ಕೆ2) ಉತ್ತಮ ಬೌಲಿಂಗ್ ಮಾಡಿದರು.

ವಿಎಫ್‌ಐ ಮುಖ್ಯ ಪೋಷಕರಾಗಿ ಅಚ್ಯುತ ಸಾಮಂತ್

ಪ್ರಜಾವಾಣಿ ವಾರ್ತೆ

ಭುವನೇಶ್ವರ: ಕೆಐಐಟಿ ಮತ್ತು ಕೆಐಎಸ್‌ಎಸ್‌ನ ಸಂಸ್ಥಾಪಕ ಡಾ. ಅಚ್ಯುತ ಸಾಮಂತ್ ಅವರು ಭಾರತೀಯ ವಾಲಿಬಾಲ್ ಫೆಡರೇಶನ್‌ನ (ವಿಎಫ್‌ಐ) ಮುಖ್ಯ ಪೋಷಕರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ವಾರಾಣಸಿಯಲ್ಲಿ ಸೋಮವಾರ 72ನೇ ಸೀನಿಯರ್ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್‌ಷಿಪ್ ಉದ್ಘಾಟನೆಗೆ ಮೊದಲು ನಡೆದ ಫೆಡರೇಷನ್‌ನ ವಾರ್ಷಿಕ ಮಂಡಳಿ ಸಭೆಯಲ್ಲಿ ಸಾಮಂತ್ ಅವರ ಆಯ್ಕೆ ನಡೆದಿದೆ. ಅವರು ನಾಲ್ಕು ವರ್ಷಗಳ ಅವಧಿಗೆ ಈ ಸ್ಥಾನದಲ್ಲಿರುತ್ತಾರೆ.

ಭುವನೇಶ್ವರದ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ(ಕೆಐಐಟಿ)ಯಲ್ಲಿ ರಾಷ್ಟ್ರೀಯ ಯುವ ವಾಲಿಬಾಲ್ ಚಾಂಪಿಯನ್‌ಷಿಪ್ ಆಯೋಜಿಸಲು ಇದೇ ವೇಳೆ ಅನುಮೋದನೆ ನೀಡಲಾಯಿತು.

ಬೆಂಗಳೂರು ಓಪನ್ ಟೆನಿಸ್: ಕರಣ್ ಸಿಂಗ್, ಆರ್ಯನ್ ಶಾ ನಿರ್ಗಮನ

ದಕ್ಷಿಣೇಶ್ವರ್‌ಗೆ ಅಮೋಘ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಲ್ಡ್‌ಕಾರ್ಡ್ ಗಿಟ್ಟಿಸಿ ಪ್ರವೇಶ ಗಳಿಸಿದ್ದ ದಕ್ಷಿಣೇಶ್ವರ್ ಸುರೇಶ್ ಅವರು ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಎರಡನೇ ದಿನ ಬಿರುಸಿನ ಆಟದ ಮೂಲಕ ಗಮನ ಸೆಳೆದರು. ಅವರು ತಮಗಿಂತ ಮೇಲಿನ ಕ್ರಮಾಂಕದ ಆಟಗಾರ, ಕ್ರೊವೇಷ್ಯಾದ ಡೂಯೆ ಅಡುಕೊವಿಚ್ ಅವರನ್ನು ಮಂಗಳವಾರ 6-4, 6-4 ರಲ್ಲಿ ನೇರ ಸೆಟ್‌ಗಳಿಂದ ಸೋಲಿಸಿ ಎರಡನೇ ಸುತ್ತನ್ನು ತಲುಪಿದರು.

ಇದೇ ವೇಳೆ ಮೊದಲ ಸುತ್ತಿನಲ್ಲಿ ಕಣದಲ್ಲಿದ್ದ ಭಾರತದ ಇನ್ನಿಬ್ಬರು ಆಟಗಾರರು– ಕರಣ್ ಸಿಂಗ್ ಮತ್ತು ಆರ್ಯನ್ ಶಾ ಅವರು ತಮಗಿಂತ ಮೇಲಿನ ಕ್ರಮಾಂಕದ ಆಟಗಾರರ ಎದುರು ಸೋಲನುಭವಿಸಿದರು. ಆ ಮೂಲಕ ಈ ಟೂರ್ನಿಯಲ್ಲಿ ಆಡುತ್ತಿರುವ ಭಾರತದ ಆರು ಮಂದಿ ಆಟಗಾರರಲ್ಲಿ ಮೂವರು ಹೊರಬಿದ್ದಂತಾಯಿತು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಎಸ್.ಎಂ. ಕೃಷ್ಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಕ್ರೊವೇಷ್ಯಾದ ಅಜಾನುಬಾಹು ಆಟಗಾರ ಬೊರ್ನಾ ಗೊಯೊ ಅವರು ಹೆಚ್ಚು ಕಷ್ಟವಿಲ್ಲದೇ 6-3, 6-4 ರಿಂದ ಕರಣ್ ಅವರನ್ನು ಸೋಲಿಸಿದರು.

ದಕ್ಷಿಣೇಶ್ವರ್ ಸುರೇಶ್ ಅವರು ಡೂಯೆ ಅಡುಕೊವಿಚ್ ವಿರುದ್ಧದ ಪಂದ್ಯದಲ್ಲಿ ಚೆಂಡನ್ನು ಹಿಂತಿರುಗಿಸಲು ಮುಂದಾಗಿದ್ದು ಹೀಗೆ ಚಿತ್ರ: ಕೃಷ್ಣಕುಮಾರ್ ಪಿ.ಎಸ್.

398ನೇ ಸ್ಥಾನದಲ್ಲಿರುವ ಆರ್ಯನ್ ಅವರೂ ಹೆಚ್ಚು ಹೋರಾಟ ತೋರದೇ 1-6, 2-6 ರಲ್ಲಿ ಕಜಾಕಸ್ತಾನದ ಬೀಬಿಟ್ ಝುಕಾಯೇವ್ ಅವರಿಗೆ ಮಣಿದರು.

ಮಿಂಚಿದ ದಕ್ಷಿಣೇಶ್ವರ್: ಇದರ ನಡುವೆಯೇ, ವಿಶ್ವ ಕ್ರಮಾಂಕದಲ್ಲಿ 521ನೇ ಸ್ಥಾನದಲ್ಲಿರುವ ದಕ್ಷಿಣೇಶ್ವರ್ ಸುರೇಶ್ ಅವರು ಗೆಲುವಿನೊಡನೆ ಗಮನಸೆಳೆದರು. ಇತ್ತೀಚೆಗಷ್ಟೇ ಇದೇ ಕ್ರೀಡಾಂಗಣದಲ್ಲಿ ವಿಶ್ವ ಟೆನಿಸ್ ಲೀಗ್ ಆಡಿದ್ದ 6.5 ಅಡಿ ಎತ್ತರದ ದಕ್ಷಿಣೇಶ್ವರ್ ಪಂದ್ಯದ ಮೊದಲ ಗೇಮ್‌ನಲ್ಲೇ 329ನೇ ಕ್ರಮಾಂಕದ ಎದುರಾಳಿಯ ಸರ್ವ್ ಬ್ರೇಕ್ ಮಾಡಿ ಉತ್ತಮ ಆರಂಭ ಪಡೆದರು.

25 ವರ್ಷ ವಯಸ್ಸಿನ ಆಟಗಾರ ಸರ್ವ್‌ನಲ್ಲಿ ತಾವು ನಡೆಸಿದ ಸಿದ್ಧತೆಯನ್ನೂ ತೆರೆದಿಟ್ಟರು. ಅವರ ಮೊದಲ ಸರ್ವ್‌ಗಳು ಕರಾರುವಾಕ್ ಆಗಿದ್ದವು. ಅಪರೂಪಕ್ಕೆ ಮಾಡಿದ ಎರಡನೇ ಸರ್ವ್‌ಗಳೂ ಭರ್ಜರಿಯಾಗಿದ್ದವು. ಎರಡು ಸೆಟ್‌ಗಳಲ್ಲಿ ಒಟ್ಟು 20 ಏಸ್‌ಗಳನ್ನು ಹಾಕಿ, ಎದುರಾಳಿಯನ್ನು ಕಂಗೆಡಿಸಿದರು.

ಎದುರಾಳಿಯ ಹೊಡೆತಗಳನ್ನು ಅಂದಾಜಿಸುವಲ್ಲೂ ಅವರು ಎಡವಲಿಲ್ಲ. ಬಿರುಸಿನ ರಿಟರ್ನ್‌ಗಳ ಮೂಲಕ ಮಧುರೈನ ಆಟಗಾರ ಮಿಂಚಿದರು.

ಮೊದಲ ಸುತ್ತಿನ ಇತರ ಪಂದ್ಯಗಳಲ್ಲಿ ಎರಿಕ್ ವನ್ಶೆಲ್‌ಬೊಯಿಮ್ (ಉಕ್ರೇನ್) ಅವರು 3-6, 6-2, 6-4 ರಿಂದ ನೆದರ್ಲೆಂಡ್ಸ್‌ನ ನೀಲ್ಸ್ ವಿಸ್ಕರ್ ಅವರನ್ನು, ಜರ್ಮನಿಯ ಸೆಡ್ರಿಕ್–ಮಾರ್ಸೆಲ್ ಸ್ಟೆಬ್ 4-6, 6-3, 6-1 ರಿಂದ ಏಳನೇ ಶ್ರೇಯಾಂಕದ ಮ್ಯಾಕ್ಸ್ ಹೌಕ್ಸ್ (ನೆದರ್ಲೆಂಡ್ಸ್) ಅವರನ್ನು ಸೋಲಿಸಿದರು.

ಜಿದ್ದಾಜಿದ್ದಿ...

ಪ್ರಜಾವಾಣಿ ಚಿತ್ರ

ಕೊಪ್ಪಳದ ಗವಿಸಿದ್ದೇಶ್ವರ ಮಠದ ಜಾತ್ರಾ ಮಹೋತ್ಸವ ಅಂಗವಾಗಿ ಮಂಗಳವಾರ ನಡೆದ ಕುಸ್ತಿ ಸ್ಪರ್ಧೆಯಲ್ಲಿ ಮಹಿಳಾ ಪೈಲ್ವಾನರು ಗೆಲುವಿಗಾಗಿ ಜಿದ್ದಾಜಿದ್ದಿ ನಡೆಸಿದರು

ಆ್ಯಷಸ್ ಟೆಸ್ಟ್: ಹೆಡ್, ಸ್ಮಿತ್ ಶತಕ

ಸಿಡ್ನಿ (ಎಪಿ): ಆರಂಭ ಆಟಗಾರ ಟ್ರಾವಿಸ್ ಹೆಡ್ ಅವರ ಭರ್ಜರಿ ಶತಕ ಮತ್ತು ಸ್ಟೀವ್ ಸ್ಮಿತ್ ಅವರ ಅಜೇಯ ಶತಕದ ನೆರವಿನಿಂದ ಆಸ್ಟ್ರೇಲಿಯಾ ತಂಡ ಆ್ಯಷಸ್ ಸರಣಿಯ ಐದನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದ ಮೂರನೇ ದಿನವಾದ ಮಂಗಳವಾರ ಇಂಗ್ಲೆಂಡ್ ತಂಡದ ವಿರುದ್ಧ ಹಿಡಿತ ಸಾಧಿಸಿತು.

ಇಂಗ್ಲೆಂಡ್‌ನ 384 ರನ್‌ಗಳಿಗೆ ಉತ್ತರವಾಗಿ ಆಸ್ಟ್ರೇಲಿಯಾ (ಸೋಮವಾರ: 2 ವಿಕೆಟ್‌ಗೆ 166) ದಿನದಾಟ ಮುಗಿದಾಗ ಮೊದಲ ಇನಿಂಗ್ಸ್‌ನಲ್ಲಿ 7 ವಿಕೆಟ್‌ಗೆ 518 ರನ್ ಕಲೆಹಾಕಿದೆ. ಆ ಮೂಲಕ 134 ರನ್ ಮುನ್ನಡೆ ಗಳಿಸಿದೆ.

91 ರನ್‌ಗಳೊಡನೆ ಮಂಗಳವಾರ ಆಟ ಮುಂದುವರಿಸಿದ ಹೆಡ್ 166 ಎಸೆತಗಳಲ್ಲಿ 163 ರನ್ (4x24, 6x1) ಬಾರಿಸಿದರು. ಒಂದೆಡೆ ಹೆಡ್ ಅಬ್ಬರ ಮುಂದುವರಿದರೆ, ಇನ್ನೊಂದೆಡೆ ಅನುಭವಿ ಸ್ಟೀವ್ ಸ್ಮಿತ್ ಸರಣಿಯಲ್ಲಿ ಮೊದಲ ಶತಕ ದಾಖಲಿಸಿದರು. ಅವರು 129 ರನ್ (205 ಎ, 4x15, 6x1) ಗಳಿಸಿ ಔಟಾಗದೇ ಉಳಿದಿದ್ದಾರೆ. ಇದು ಅವರಿಗೆ ಟೆಸ್ಟ್‌ಗಳಲ್ಲಿ 37ನೇ ಶತಕ.

ಟ್ರಾವಿಸ್ ಹೆಡ್

ಸ್ಟೀವ್ ಸ್ಮಿತ್

ಆಲ್‌ರೌಂಡರ್ ಬ್ಯೂ ವೆಬ್‌ಸ್ಟರ್ 42 ರನ್ ಗಳಿಸಿ ಅಜೇಯರಾಗುಳಿದಿದ್ದಾರೆ. ಸ್ಮಿತ್ ಜೊತೆ ಮುರಿಯದ ಎಂಟನೇ ವಿಕೆಟ್‌ಗೆ 81 ರನ್ ಸೇರಿಸಿದ್ದಾರೆ.

ಪ್ರೇಕ್ಷಕರಿಂದ ಗೌರವ: ಹೆಡ್ ನಿರ್ಗಮಿಸಿದ ಮೇಲೆ ಉಸ್ಮಾನ್ ಖ್ವಾಜಾ ಬ್ಯಾಟಿಂಗಿಗೆ ಇಳಿದಾಗ ಹರ್ಷೋದ್ಗಾರಗಳು ಮೊಳಗಿದವು. ವಿದಾಯದ ಟೆಸ್ಟ್ ಪಂದ್ಯ ಆಡುತ್ತಿರುವ ಅವರಿಗೆ ಪ್ರೇಕ್ಷಕರು ಎದ್ದುನಿಂತು ಗೌರವ ಸಲ್ಲಿಸಿದರು.

ಖ್ವಾಜಾ ಅವರಿಗೆ ಇದು 88ನೇ ಟೆಸ್ಟ್ ಪಂದ್ಯ. ಅವರು 15 ವರ್ಷಗಳ ಹಿಂದೆ ಇದೇ ಮೈದಾನದಲ್ಲಿ ಆ್ಯಷಸ್ ಸರಣಿಯಲ್ಲೇ ಪದಾರ್ಪಣೆ ಮಾಡಿದ್ದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 384; ಆಸ್ಟ್ರೇಲಿಯಾ: 124 ಓವರುಗಳಲ್ಲಿ 7ಕ್ಕೆ 518 (ಟ್ರಾವಿಸ್ ಹೆಡ್ 163, ಸ್ಟೀವ್ ಸ್ಮಿತ್ ಬ್ಯಾಟಿಂಗ್ 129, ಕ್ಯಾಮರಾನ್ ಗ್ರೀನ್ 37, ಬ್ಯೂ ವೆಬ್‌ಸ್ಟರ್ ಬ್ಯಾಟಿಂಗ್ 42; ಬ್ರೈಡನ್ ಕಾರ್ಸ್ 108ಕ್ಕೆ3).

ಚುಟುಕು ಸುದ್ದಿ

ಮುಸ್ತಫಿಝುರ್‌ಗೆ ಪರಿಹಾರ ಸಾಧ್ಯತೆ ಕಡಿಮೆ

ಕೋಲ್ಕತ್ತ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಕೋಲ್ಕತ್ತ ನೈಟ್ ರೈಡರ್ಸ್ ತಂಡದಿಂದ ಹೊರಬಿದ್ದ ಬಾಂಗ್ಲಾದೇಶದ ಆಟಗಾರ ಮುಸ್ತಫಿಝುರ್ ರೆಹಮಾನ್ ಅವರಿಗೆ ಯಾವುದೇ ಪರಿಹಾರದ ಮೊತ್ತ ನೀಡುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

ಈಚೆಗೆ ನಡೆದಿದ್ದ ಮಿನಿ ಹರಾಜಿನಲ್ಲಿ ಕೋಲ್ಕತ್ತ ತಂಡವು ವೇಗದ ಬೌಲರ್ ಮುಸ್ತಫಿಝುರ್ ಅವರನ್ನು ₹9.20 ಕೋಟಿಗೆ ಖರೀದಿಸಿತ್ತು.

ಆದರೆ ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಜನಾಂಗೀಯ ಸಂಘರ್ಷದಲ್ಲಿ ಹಿಂದೂ ಸಮುದಾಯದ ವ್ಯಕ್ತಿಗಳ ಹತ್ಯೆಯನ್ನು ಖಂಡಿಸಿದ್ದ ಭಾರತದ ಕೆಲವು ರಾಜಕಾರಣಿಗಳು ಐಪಿಎಲ್‌ನಿಂದ ಮುಸ್ತಫಿಝುರ್ ಅವರನ್ನು ಕೈಬಿಡುವಂತೆ ಒತ್ತಾಯಿಸಿದ್ದರು. ಅದರಂತೆ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ನೀಡಿದ ಸೂಚನೆಯನ್ನು ಕೆಕೆಆರ್ ಪಾಲಿಸಿತ್ತು.

ಮೊದಲ ದಿನ ಕರ್ನಾಟಕದ ಕ್ರೀಡಾಪಟುಗಳಿಗೆ ನಿರಾಸೆ

ಘೋಘ್ಲಾ ಬೀಚ್‌ನಲ್ಲಿ ಕ್ರೀಡೋತ್ಸವ

● ಪ್ರದೀಶ್ ಎಚ್. ಮರೋಡಿ

ದಿಯು: ಕೇಂದ್ರಾಡಳಿತ ಪ್ರದೇಶ ದಿಯುವಿನ ಘೋಘ್ಲಾ ಕಡಲ ಕಿನಾರೆ ಪ್ರವಾಸಿಗಳ ಆಕರ್ಷಣೆಯ ಕೇಂದ್ರ. ಬ್ಲ್ಯೂಫ್ಲ್ಯಾಗ್ ಮಾನ್ಯತೆಯ ಈ ಕಡಲ ಕಿನಾರೆಯಲ್ಲಿ 2ನೇ ಆವೃತ್ತಿಯ 'ಖೇಲೊ ಇಂಡಿಯಾ' ಬೀಚ್ ಗೇಮ್ಸ್‌ನ ಸ್ಪರ್ಧೆಗಳಿಗೆ ಮಂಗಳವಾರ ಬೆಳಗಿನ ಜಾವ ಕೊರೆಯುವ ಚಳಿಯ ನಡುವೆ ಚಾಲನೆ ದೊರೆಯಿತು.

ದೇಶದಾದ್ಯಂತ 1,400ಕ್ಕೂ ಹೆಚ್ಚು ಕ್ರೀಡಾಪಟುಗಳು ಈ ಕೂಟದಲ್ಲಿ ಪಾಲ್ಗೊಂಡಿದ್ದಾರೆ. 2025ರ ಆವೃತ್ತಿಯಲ್ಲಿ ಪಾರಮ್ಯ ಮೆರೆದಿದ್ದ ಈಶಾನ್ಯ ರಾಜ್ಯಗಳ ಕ್ರೀಡಾಪಟುಗಳು ಈ ಬಾರಿಯೂ ಮೇಲುಗೈ ಸಾಧಿಸುವ ಸಂಕೇತಗಳು ಕಾಣಿಸಿದವು. ಆದರೆ, ಮೊದಲ ದಿನ ಕರ್ನಾಟಕದ ಕ್ರೀಡಾಪಟುಗಳು ನಿರಾಸೆ ಮೂಡಿಸಿದರು.

ಬಿಸಿಲೇರುತ್ತಿದ್ದಂತೆ ಸ್ಪರ್ಧೆಗೆ ಎರಡು ಗಂಟೆ ವಿರಾಮ ನೀಡಲಾಯಿತು. ಉಳಿದಂತೆ ದಿನವಿಡೀ ನಡೆದ ಬೀಚ್ ಸಾಕರ್, ಬೀಚ್ ವಾಲಿಬಾಲ್, ಬೀಚ್ ಸೆಪಕ್ ಟಕ್ರಾ, ಬೀಚ್ ಕಬಡ್ಡಿ, ಪೆಂಕಾಕ್ ಸಿಲಾಟ್ ಸ್ಪರ್ಧೆಗಳ ಜೊತೆಗೆ, ಪ್ರದರ್ಶನ ಕ್ರೀಡೆ ಮಲ್ಲಕಂಬ ಪ್ರೇಕ್ಷಕರಿಗೆ ರಸದೌತಣ ನೀಡಿದವು.

ಕೂಟದಲ್ಲಿ ಪಾಲ್ಗೊಂಡಿರುವ ಕರ್ನಾಟಕ ತಂಡದ ಆಟಗಾರರು

ಚೊಚ್ಚಲ ಆವೃತ್ತಿಯಲ್ಲಿ ಎರಡು ಚಿನ್ನ ಸೇರಿ ಒಟ್ಟು ನಾಲ್ಕು ಪದಕಗಳನ್ನು ಗೆದ್ದಿದ್ದ ಕರ್ನಾಟಕ ತಂಡವು ಈ ಬಾರಿ ಹೆಚ್ಚಿನ ಪದಕಗಳ ನಿರೀಕ್ಷೆಯೊಂದಿಗೆ ಕಣಕ್ಕಿಳಿದಿದೆ. ಒಟ್ಟು 27 ಕ್ರೀಡಾಪಟುಗಳು ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದಾರೆ.

ಬೀಚ್ ಸಾಕರ್ (ಇದನ್ನು ಬೀಚ್ ಫುಟ್‌ಬಾಲ್ ಎಂದೂ ಕರೆಯುತ್ತಾರೆ) ಗುಂಪು ಹಂತದ ಪಂದ್ಯದಲ್ಲಿ ರಾಜ್ಯದ ಪುರುಷರ ತಂಡವು 2-15 ಗೋಲುಗಳಿಂದ ಕೇರಳಕ್ಕೆ ಮಣಿಯಿತು. ಕರ್ನಾಟಕದ ಪರ ಮೊಹಮ್ಮದ್ ಸುಫೀನ್ (26ನೇ) ಮತ್ತು ನಾಯಕ ಮೊಹಮ್ಮದ್ ಖಾಸೀಫ್ (27ನೇ ನಿಮಿಷ) ತಲಾ ಒಂದು ಗೋಲು ಗಳಿಸಲಷ್ಟೇ ಶಕ್ತವಾದರು. ಕರ್ನಾಟಕ ತಂಡವು ಬುಧವಾರ ಹಿಮಾಚಲ ಪ್ರದೇಶವನ್ನು ಎದುರಿಸಲಿದೆ.

ಪೆಂಕಾಟ್ ಸಿಲಾಟ್‌ನ ತುಂಗಲ್ ವೈಯಕ್ತಿಕ ಸ್ಪರ್ಧೆಯಲ್ಲಿ ಕರ್ನಾಟಕದ ಅನುಭವಿ ಆಟಗಾರ ಆಕಾಶ್ ದೊಡ್ಡವಾಡ ಕೂದಲೆಳೆ ಅಂತರದಲ್ಲಿ ಪದಕದ ಅವಕಾಶ ತಪ್ಪಿಸಿಕೊಂಡರು.

ಕ್ವಾರ್ಟರ್‌ಫೈನಲ್‌ಗೆ ಕರ್ನಾಟಕ ಪುರುಷರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ಅರವಿಂದ್ ಆರ್ಮುಗಂ ಹಾಗೂ ಪ್ರತ್ಯಾಂಶು ತೋಮರ್ ಅವರ ಆಟದ ನೆರವಿನಿಂದ ಕರ್ನಾಟಕ ತಂಡವು, ಚೆನ್ನೈನಲ್ಲಿ ನಡೆಯುತ್ತಿರುವ 75ನೇ ಸೀನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ 100-79ರಿಂದ ರಾಜಸ್ಥಾನ ತಂಡವನ್ನು ಮಣಿಸಿತು. ಸತತ ಮೂರನೇ ಗೆಲುವಿನೊಂದಿಗೆ ಎ ಗುಂಪಿನಿಂದ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆದುಕೊಂಡಿತು.

ನಾಯಕತ್ವಕ್ಕೆ ತಕ್ಕಂತೆ ಆಡಿದ ಅರವಿಂದ್ 27 ಪಾಯಿಂಟ್ಸ್ ಗಳಿಸಿದರು. ಅವರಿಗೆ, ಪ್ರತ್ಯಾಂಶು (22) ಬೆಂಬಲ ನೀಡಿದರು. ರಾಜಸ್ಥಾನ ತಂಡದ ಆಶಿಶ್ ತ್ರಿವೇದಿ (25) ಹಾಗೂ ಅಕ್ಷಿತ್ ಹೂಡ (22) ಹೋರಾಟ ತೋರಿದರು.

ಮಹಿಳೆಯರ ವಿಭಾಗದಲ್ಲಿ ಸಂಘಟಿತ ಆಟ ಆಡಿದ ಕರ್ನಾಟಕ ತಂಡವು 103-50ರಿಂದ ಛತ್ತೀಸಗಢ ವಿರುದ್ಧ ನಿರಾಯಾಸ ಗೆಲುವು ಸಾಧಿಸಿತು.

ದೆಹಲಿ ವಿರುದ್ಧ ನಡೆಯಲಿರುವ ಪಂದ್ಯವು ಕರ್ನಾಟಕ ವನಿತೆಯರ ತಂಡಕ್ಕೆ ನಿರ್ಣಾಯಕವಾಗಿದೆ.